ಮಂಗಳವಾರ, ಮೇ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 138 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**
ಕೋವಿಡ್-19 ಗುಣವಾದ ನಂತರವೂ ಶರೀರ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಸ್ವಲ್ಪ ಕಾಲ ಹಿಡಿಯುತ್ತದೆ. ಇಂತಹ ಸಂದರ್ಭದಲ್ಲಿ ಏನು ಮಾಡಬೇಕು?



ಆಳ-ಅಗಲ
ಲಸಿಕೆ ಡೋಸ್‌ಗಳ ನಡುವೆ ಅಂತರ ಹೆಚ್ಚಳ 'ಗಿಮಿಕ್' ಅಲ್ಲ ತಜ್ಞರ ಶಿಫಾರಸು

ಮೆಕ್ಸಿಕೊದ ಆ್ಯಂಡ್ರಿಯಾ 'ಭುವನ ಸುಂದರಿ', ಉಡುಪಿಯ ಆ್ಯಡ್ಲಿನ್ ಮೂರನೇ ರನ್ನರ್‌ಅಪ್ 9

ಚಿಕಿತ್ಸೆ ನಿರ್ಧಾರಕ್ಕೆ ಮೂರು ಹಂತಗಳ ವ್ಯವಸ್ಥೆ 3A

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 49,581 ▲ | 14,923 ▲ | 73.22 ▲ |


ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿದ ಸೋಂಕು • ಅತಿ ಕಡಿಮೆ ಪ್ರಮಾಣದ ಪರೀಕ್ಷೆ: ತಜ್ಞರ ಕಳವಳ

# ಅಂಕೆ ತಪ್ಪಿದ ಸೋಂಕು ಇಳಿಕೆ ಲೆಕ್ಕ!

**ನವದೆಹಲಿ (ರಾಯಿಟರ್ಸ್):** ಗ್ರಾಮೀಣ ಪ್ರದೇಶದಲ್ಲಿ ಕೋವಿಡ್-19 ಪರೀಕ್ಷೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ, ದೇಶದಲ್ಲಿನ ಸೋಂಕು ಪ್ರಕರಣಗಳ ಕುರಿತು ನೀಡಿರುವ ಅಧಿಕೃತ ಸಂಖ್ಯೆಗಳು ವಿಶ್ವಾಸಾರ್ಹವಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೊರೊನಾ ವೈರಸ್ ಈಗ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿ ವೇಗವಾಗಿ ಹಬ್ಬುತ್ತಿದೆ. ಆದರೆ, ಈ ಪ್ರದೇಶಗಳಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ, ದೇಶದಲ್ಲಿ ಇನ್ನೂ ಕೆಟ್ಟ ಪರಿಸ್ಥಿತಿ ಸೃಷ್ಟಿಯಾಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಸೋಮವಾರ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದ್ದರೂ, ದೈನಂದಿನ ಸಾವಿನ ಪ್ರಕರಣಗಳ ಸಂಖ್ಯೆ ಈಗಲೂ 4,000ಕ್ಕಿಂತ ಹೆಚ್ಚೇ ಇದೆ. ನಿಯಂತ್ರಣ ಕ್ರಮಗಳಿಂದಾಗಿ ಪ್ರತಿ ದಿನ ಮೂರು ಲಕ್ಷಕ್ಕಿಂತ ಕಡಿಮೆ ಪ್ರಕರಣಗಳು ಪತ್ತೆಯಾಗುತ್ತಿವೆ ಎಂದು ಸರ್ಕಾರ ಪ್ರತಿಪಾದಿಸಿದೆ. ಆದರೆ, ಈ ಸಂಖ್ಯೆಗೂ ವಾಸ್ತವ ಸ್ಥಿತಿಗೂ ಅಪಾರ ವ್ಯತ್ಯಾಸವಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.



**ಮುಖ್ಯಾಂಶಗಳು**
- ಸೋಮವಾರ 2.60 ಲಕ್ಷ ಹೊಸ ಪ್ರಕರಣಗಳು ಪತ್ತೆ
- ಏಪ್ರಿಲ್ 21ರ ಬಳಿಕ ಪ್ರಕರಣಗಳ ಸಂಖ್ಯೆಯಲ್ಲಿ ಇದೇ ಮೊದಲ ಬಾರಿ ಇಳಿಕೆ

ಕೊರೊನಾ ವೈರಸ್ ಎರಡನೇ ಅಲೆ ತೀವ್ರವಾಗಿ ವ್ಯಾಪಿಸಿದ ಪರಿಣಾಮ ದೇಶದಲ್ಲಿ ದೈನಂದಿನ ಪ್ರಕರಣಗಳ ಸಂಖ್ಯೆ ನಾಲ್ಕು ಲಕ್ಷ ಮೀರಿತ್ತು. ಕೆಲವು ದಿನಗಳಿಂದ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಮುಖವಾಗಿದೆ. ಆದರೆ, ವಾಸ್ತವ ಪರಿಸ್ಥಿತಿ ಬಗ್ಗೆ ಅಧ್ಯಯನ ಮಾಡಿದರೆ ದೇಶದಲ್ಲಿ ಸೋಂಕು ಇನ್ನೂ ಹೆಚ್ಚು ವ್ಯಾಪಿಸಿರುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದ್ದಾರೆ.

'ಬಹುತೇಕ ರಾಜ್ಯಗಳಲ್ಲಿ ಪರೀಕ್ಷೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಳ್ಳುತ್ತಿಲ್ಲ. ಪಾಸಿಟಿವಿಟಿ ದರ ಹೆಚ್ಚಾಗುತ್ತಿರುವುದನ್ನು ನೋಡಿದಾಗ ಈ ಅಂಶ ಸ್ಪಷ್ಟವಾಗುತ್ತದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ಅಭಿಪ್ರಾಯಪಟ್ಟಿದ್ದಾರೆ.

'ರಾಷ್ಟ್ರೀಯ ಪಾಸಿಟಿವ್ ದರ (ಶೇಕಡ 20ರಷ್ಟು) ಗರಿಷ್ಠ ಮಟ್ಟದಲ್ಲಿದೆ. ಹೀಗಾಗಿ, ಇದಕ್ಕಿಂತಲೂ ಕೆಟ್ಟ ಸಮಯ ಎದುರಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ' ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

'ಭಾರತದಲ್ಲಿ ಮೊದಲ ಬಾರಿಗೆ ಪತ್ತೆಯಾಗಿರುವ ಬಿ.1.617 ರೂಪಾಂತರ ತಳಿ ದೇಶ ಹಾಗೂ ವಿದೇಶದಲ್ಲೂ ಕಳವಳಕ್ಕೆ ಕಾರಣವಾಗಿದೆ. ದೇಶದಲ್ಲಿ ಸೋಂಕು ಗರಿಷ್ಠ ಮಟ್ಟ ತಲುಪದ ಇನ್ನೂ ಅನೇಕ ಪ್ರದೇಶಗಳಿವೆ. ಹೀಗಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ' ಎಂದು ತಿಳಿಸಿದ್ದಾರೆ.

### 'ಪ್ರಕರಣಗಳ ಇಳಿಕೆ ಕೇವಲ ಭ್ರಮೆ'

'ಭಾರತದಲ್ಲಿ ಕೋವಿಡ್ ಸೋಂಕು ಪ್ರಕರಣಗಳು ಕಡಿಮೆಯಾಗಿವೆ ಎನ್ನುವುದು ಕೇವಲ ಭ್ರಮೆ' ಎಂದು ಅಮೆರಿಕದ ಮೆಯೊ ಕ್ಲಿನಿಕ್‌ನ ಹಿರಿಯ ಪ್ರಾಧ್ಯಾಪಕ ಎಸ್. ವಿನ್ಸೆಂಟ್ ರಾಜಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

'ಮೊದಲನೆಯದಾಗಿ, ಸೀಮಿತ ಸಂಖ್ಯೆಯ ಪರೀಕ್ಷೆಯಿಂದ ಪ್ರಕರಣಗಳ ಸಂಖ್ಯೆ ಕಡಿಮೆ ಎಂದು ತೋರಿಸಲಾಗಿದೆ. ಎರಡನೇಯದಾಗಿ ಗ್ರಾಮೀಣ ಪ್ರದೇಶದಲ್ಲಿನ ಪ್ರಕರಣಗಳ ಸಂಖ್ಯೆಯನ್ನು ಪರಿಗಣಿಸುತ್ತಿಲ್ಲ. ಅಲ್ಲಿ ಪರೀಕ್ಷೆಗಳೇ ಸರಿಯಾಗಿ ನಡೆಯುತ್ತಿಲ್ಲ. ನಗರ ಪ್ರದೇಶಗಳನ್ನು ಹೆಚ್ಚಾಗಿ ಕೇಂದ್ರೀಕರಿಸಿ ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ' ಎಂದು ಅವರು ಹೇಳಿದ್ದಾರೆ.



**ಸೋಂಕಿಗೆ ಸಂಬಂಧಿಸಿದಂತೆ ಎಷ್ಟು ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು ಎಷ್ಟು ಪ್ರಕರಣಗಳು ದೃಢಪಟ್ಟಿವೆ ಎನ್ನುವುದನ್ನು ಪ್ರಮುಖವಾಗಿ ಪರಿಗಣಿಸಬೇಕು**

**ಸೌಮ್ಯಾ ಸ್ವಾಮಿನಾಥನ್**
ಡಬ್ಲ್ಯುಎಚ್‌ಒ ಪ್ರಧಾನ ವಿಜ್ಞಾನಿ



**ಕಡಲಬ್ಬರ** 'ತೌತೆ' ಚಂಡಮಾರುತ ಪರಿಣಾಮ ಮುಂಬೈನ ಗೇಟ್ ವೇ ಆಫ್ ಇಂಡಿಯಾದ ಬಳಿ ಸಮುದ್ರದ ದೈತ್ಯ ಅಲೆಗಳು ಸೋಮವಾರ ದಡಕ್ಕೆ ಅಪ್ಪಳಿಸಿದವು –ಎಎಫ್‌ಪಿ ಚಿತ್ರ

ರಾಜ್ಯದಲ್ಲಿ ತಗ್ಗಿದ 'ತೌತೆ' ಚಂಡಮಾರುತ ಪ್ರಭಾವ

# 121 ಗ್ರಾಮಗಳಲ್ಲಿ ಹಾನಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ತೌತೆ' ಚಂಡಮಾರುತದ ಪ್ರಭಾವ ರಾಜ್ಯದಲ್ಲಿ ಸೋಮವಾರ ತಗ್ಗಿದ್ದು, ಎರಡು ದಿನಗಳ ಮಳೆ, ಗಾಳಿಯ ಆರ್ಭಟಕ್ಕೆ ಏಳು ಜಿಲ್ಲೆಗಳ 121 ಗ್ರಾಮಗಳಲ್ಲಿ ಹಾನಿ ಸಂಭವಿಸಿದೆ.

ಶನಿವಾರ ಮತ್ತು ಭಾನುವಾರ ಕರಾವಳಿ ಹಾಗೂ ಮಲೆನಾಡಿನ ಜಿಲ್ಲೆಗಳಲ್ಲಿ ಗಾಳಿ, ಮಳೆಯ ಅಬ್ಬರ ಜೋರಾಗಿತ್ತು. ಇದರಿಂದ ಎಂಟು ಮಂದಿ ಸಾವಿಗೀಡಾಗಿದ್ದರು. ಭಾನುವಾರ ಸಂಜೆಯಿಂದ ಮಳೆಯ ಪ್ರಮಾಣ ತಗ್ಗಿದೆ. ಸೋಮವಾರ ಎಲ್ಲ ಕಡೆ ಮಳೆ ಕಡಿಮೆಯಾಗಿದೆ.

ಕಂದಾಯ ಇಲಾಖೆ ಸೋಮವಾರ ನೀಡಿರುವ ಪರಿಷ್ಕೃತ ವರದಿ ಪ್ರಕಾರ, ಉತ್ತರ ಕನ್ನಡ ಜಿಲ್ಲೆಯ 48, ಉಡುಪಿಯ 32, ದಕ್ಷಿಣ ಕನ್ನಡದ 28, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ತಲಾ ಐದು, ಬೆಳಗಾವಿಯ ಎರಡು ಮತ್ತು ಹಾಸನದ ಒಂದು ಗ್ರಾಮಗಳಲ್ಲಿ ಮಳೆಯಿಂದ ಹಾನಿ ಸಂಭವಿಸಿದೆ.

ಚಂಡಮಾರುತದಿಂದ ಈವರೆಗೆ ರಾಜ್ಯದ ವಿವಿಧೆಡೆ ಎಂಟು ಮಂದಿ ಮೃತಪಟ್ಟಿದ್ದಾರೆ. ಮಂಗಳೂರಿನಲ್ಲಿ ಶನಿವಾರ ಮುಳಗಿದ್ದ ಟಗ್‌ನಲ್ಲಿದ್ದ ಮೂವರ ಸುಳಿವು ಇನ್ನೂ ಸಿಕ್ಕಿಲ್ಲ. ಮೂಲ್ಕಿ ಬಳಿ ಸಮುದ್ರದಲ್ಲಿ ಬಂಡೆಗಳ ನಡುವೆ ಸಿಲುಕಿರುವ ಕೋರಮಂಡಲ್ ಸಪ್ಪೋರ್ಟರ್-9 ಟಗ್‌ನಲ್ಲಿದ್ದ ಎಲ್ಲ ಒಂಬತ್ತು ಜನರನ್ನು ನೌಕಾಪಡೆಯ ಹೆಲಿಕಾಪ್ಟರ್ ನೆರವಿನಿಂದ ರಕ್ಷಿಸಲಾಗಿದೆ.

**387 ಮನೆಗಳಿಗೆ ಹಾನಿ:** 'ಒಟ್ಟು 387 ಮನೆಗಳಿಗೆ ಹಾನಿಯಾಗಿದೆ. 57 ಮನೆಗಳು ಸಂಪೂರ್ಣ, 330 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲೇ 300ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ' ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ಮಳೆ, ಗಾಳಿಯಿಂದ 30 ಹೆಕ್ಟೇರ್ ಕೃಷಿ ಜಮೀನು ಮತ್ತು 2.87 ಹೆಕ್ಟೇರ್ ವಿಸ್ತೀರ್ಣದ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. 56.2 ಕಿ.ಮೀ. ಉದ್ದದ ರಸ್ತೆಗಳು ಮಳೆಯಿಂದ ಕೊಚ್ಚಿಹೋಗಿವೆ ಎಂದು ಕಂದಾಯ ಇಲಾಖೆಯ ವರದಿ ತಿಳಿಸಿದೆ.

711 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. 153 ವಿದ್ಯುತ್ ಪರಿವರ್ತಕಗಳು ಹಾಳಾಗಿವೆ. 9,203 ಮೀಟರ್ ಉದ್ದದ ವಿದ್ಯುತ್ ಮಾರ್ಗಗಳು ತುಂಡಾಗಿವೆ.

ಇನ್ನಷ್ಟು ಸುದ್ದಿಗಳು 4

### ಮೀನುಗಾರರಿಗೆ ಭಾರಿ ನಷ್ಟ

ಚಂಡಮಾರುತದಿಂದ ಕರಾವಳಿಯ ಮೀನುಗಾರರಿಗೆ ಭಾರಿ ನಷ್ಟವಾಗಿದೆ. ಮೂರೂ ಜಿಲ್ಲೆಗಳಲ್ಲಿ ಒಟ್ಟು 116 ಮೀನುಗಾರಿಕಾ ದೋಣಿಗಳು ಮತ್ತು 57 ಬಲೆಗಳು ಕಡಲಿನ ಅಬ್ಬರದಿಂದ ಧ್ವಂಸಗೊಂಡಿವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ 97, ಉಡುಪಿಯಲ್ಲಿ 18 ಮತ್ತು ದಕ್ಷಿಣ ಕನ್ನಡದಲ್ಲಿ ಒಂದು ಮೀನುಗಾರಿಕಾ ದೋಣಿಗಳಿಗೆ ಹಾನಿಯಾಗಿದೆ ಎಂಬ ಅಂಶ ನಷ್ಟದ ಪ್ರಾಥಮಿಕ ಅಂದಾಜು ವರದಿಯಲ್ಲಿದೆ.

### ರಾಜ್ಯ ಕೋವಿಡ್ ಅಂಕಿ-ಅಂಶ

| | |
|---|---|
| 22,42,065 ▲ | ಒಟ್ಟು ಸೋಂಕಿತರು (22,03,462 ನಿನ್ನೆಯ ವಿವರ) |
| 6,03,639 ▲ | ಸಕ್ರಿಯ ಪ್ರಕರಣಗಳು |
| 16,16,092 ▲ | ಗುಣಮುಖರಾದವರು |
| 22,313 ▲ | ಒಟ್ಟು ಸಾವು |

**ದಿನದ ಏರಿಕೆ**

| | | |
|---|---|---|
| ಹೊಸ ಪ್ರಕರಣ | 38,603 | ▲ |
| ಗುಣಮುಖ | 34,635 | ▼ |
| ಸಾವು | 476 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

# ಕೋವಿಡ್: 2-ಡಿಜಿ ಔಷಧ ಬಿಡುಗಡೆ

**ನವದೆಹಲಿ (ಪಿಟಿಐ):** ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ಕೋವಿಡ್ ತಡೆ ಔಷಧಿ 2-ಡಿಜಿ ಅನ್ನು (2-deoxy-D--glucose) ಸೋಮವಾರ ಬಿಡುಗಡೆ ಮಾಡಲಾಗಿದೆ.

ಔಷಧ ಬಿಡುಗಡೆ ಮಾಡಿದ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 'ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ಹೊಸ ಭರವಸೆಯೊಂದು ಸಿಕ್ಕಿದೆ' ಎಂದರು. ಔಷಧವು ಪರಿಣಾಮಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭಾರತೀಯ ಔಷಧ ನಿಯಂತ್ರಣ ನಿರ್ದೇಶನಾಲಯವು (ಡಿಜಿಸಿಐ) ಈ ತಿಂಗಳ ಆರಂಭದಲ್ಲಿ 2-ಡಿಜಿ ತುರ್ತು ಬಳಕೆಗೆ ಅನುಮೋದನೆ ನೀಡಿತ್ತು.



ಕೋವಿಡ್ ತಡೆ ಔಷಧಿ 2–ಡಿಜಿ ಅನ್ನು ಸಚಿವರಾದ ರಾಜನಾಥ ಸಿಂಗ್ ಹಾಗೂ ಹರ್ಷವರ್ಧನ್ ಅವರು ದೆಹಲಿಯಲ್ಲಿ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

'ಇದು ನಮ್ಮ ದೇಶದ ವೈಜ್ಞಾನಿಕ ಪರಾಕ್ರಮಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ' ಎಂದು ರಾಜನಾಥ್ ಸಿಂಗ್ ತಿಳಿಸಿದ್ದಾರೆ.

ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ಸಹಯೋಗದೊಂದಿಗೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಪ್ರಮುಖ ಪ್ರಯೋಗಾಲಯವಾದ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಮತ್ತು ಅಲೈಡ್ ಸೈನ್ಸಸ್ (ಐಎನ್‌ಎಂಎಎಸ್) ಔಷಧ ಅಭಿವೃದ್ಧಿಪಡಿಸಿದೆ.

2-ಡಿಜಿಯ ಕ್ಲಿನಿಕಲ್ ಪ್ರಯೋಗಗಳು ಆಸ್ಪತ್ರೆಗೆ ದಾಖಲಾದ ರೋಗಿಗಳನ್ನು ವೇಗವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಪೂರಕ ಆಮ್ಲಜನಕದ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಎಂದು ರಕ್ಷಣಾ ಸಚಿವಾಲಯವು ಮೇ 8ರಂದು ತಿಳಿಸಿತ್ತು.

**ವಿಶೇಷತೆ**
- ಈ ಔಷಧವು ಪುಡಿ ರೂಪದಲ್ಲಿದ್ದು, ಒಆರ್‌ಎಸ್ ದ್ರಾವಣದಂತೆ ಸುಲಭವಾಗಿ ಬಳಸಬಹುದು
- ಈ ಔಷಧ ಪಡೆದವರು ಸಾಮಾನ್ಯ ಚಿಕಿತ್ಸೆಗೆ ಹೋಲಿಸಿದರೆ, ಎರಡೂವರೆ ದಿನ ಮೊದಲೇ ಚೇತರಿಸಿಕೊಳ್ಳುತ್ತಾರೆ
- ರೋಗಿಗಳಿಗೆ ಆಮ್ಲಜನಕದ ಮೇಲಿನ ಅವಲಂಬನೆಯನ್ನು ಶೇ 40ರಷ್ಟು ಕಡಿಮೆ ಮಾಡುತ್ತದೆ

## ತೌತೆ ಚಂಡಮಾರುತ ಮಹಾರಾಷ್ಟ್ರದಲ್ಲಿ 6 ಸಾವು

**ಮುಂಬೈ (ಪಿಟಿಐ):** ತೌತೆ ಚಂಡಮಾರುತದಿಂದ ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಸಂಭವಿಸಿದ ಪ್ರತ್ಯೇಕ ದುರಂತಗಳಲ್ಲಿ ಆರು ಮಂದಿ ಮೃತಪಟ್ಟಿದ್ದು, ಎರಡು ದೋಣಿಗಳು ಮುಳುಗಿರುವುದರಿಂದ 3 ಮಂದಿ ನಾಪತ್ತೆಯಾಗಿದ್ದಾರೆ.

ಗುಜರಾತ್‌ನ ಕಡಲ ತೀರದಲ್ಲಿ ಎರಡು ಬಾರ್ಜ್‌ಗಳು ದಿಕ್ಕಾಪಾಲಾಗಿ ಸಂಚರಿಸುತ್ತಿದ್ದು, ಅದರಲ್ಲಿರುವ 410 ಮಂದಿ ಆತಂಕದಲ್ಲಿದ್ದಾರೆ.

# 'ವಿಶೇಷ ಪ್ಯಾಕೇಜ್ ಚರ್ಚಿಸಿ ತೀರ್ಮಾನ'

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಮೇ 24 ರ ಬಳಿಕ ಲಾಕ್‌ಡೌನ್ ವಿಸ್ತರಿಸುವ ಮತ್ತು ವಿಶೇಷ ಆರ್ಥಿಕ ಪ್ಯಾಕೇಜ್ ನೀಡುವ ಸಂಬಂಧ ಸಚಿವರ ಜತೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳ ಜತೆ ಕೋವಿಡ್ ಕುರಿತಂತೆ ಸೋಮವಾರ ನಡೆದ ವರ್ಚುವಲ್ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಪರೀಕ್ಷಾ ವರದಿಗಳನ್ನು 24 ಗಂಟೆಯೊಳಗೆ ನೀಡಲು ಕ್ರಮ ತೆಗೆದುಕೊಳ್ಳಬೇಕು. ಹೋಂ ಐಸೋಲೇಷನ್ ಮಾರ್ಗಸೂಚಿಯನ್ನು ಚಾಚೂತಪ್ಪದೇ ಪಾಲಿಸಬೇಕು ಎಂದು ಅವರು ಹೇಳಿದರು.

ಗ್ರಾಮಗಳಲ್ಲಿ ಮನೆ ಮನೆ ಭೇಟಿ ನೀಡಿ, ಟ್ರಯಾಜ್ ಕೇಂದ್ರಗಳ ಮೂಲಕ ಸೋಂಕಿತರ ವರ್ಗೀಕರಣವನ್ನು ತ್ವರಿತವಾಗಿ ಮಾಡಬೇಕು. ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ಕೋವಿಡ್ ನಿರ್ವಹಣೆಗೆ ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಅನುಸರಿಸಬೇಕು ಎಂದು ಯಡಿಯೂರಪ್ಪ ತಿಳಿಸಿದರು.

**ಅಧಿಕಾರಿಗಳಿಗೆ ತಾಕೀತು:** 'ನಿಮ್ಮ ಜಿಲ್ಲೆಗಳಲ್ಲಿ ಏನೆಲ್ಲ ಇದೆ, ಏನೆಲ್ಲ ಇಲ್ಲ ಎಂಬುದನ್ನು ಹೇಳಬೇಕು. ನೀವೇ ಸಮಸ್ಯೆಗಳನ್ನು ಹೇಳಿಕೊಳ್ಳದಿದ್ದರೆ ನಮಗೆ ಹೇಗೆ ಗೊತ್ತಾಗಬೇಕು' ಎಂದು ಯಡಿಯೂರಪ್ಪ ಅವರು ಜಿಲ್ಲಾಧಿಕಾರಿಗಳನ್ನು ಪ್ರಶ್ನಿಸಿದರು. 'ಎಲ್ಲ ಜಿಲ್ಲೆಗಳಿಗೆ ಅಗತ್ಯವಿರುವ ಆಮ್ಲಜನಕ ಸಾಂದ್ರಕಗಳನ್ನು ಒದಗಿಸಲಾಗುತ್ತಿದೆ. ಜಿಲ್ಲೆಗೆ ಎಷ್ಟು ಪ್ರಮಾಣದ ಆಮ್ಲಜನಕ ಬೇಕು ಎಂಬುದನ್ನು ಮೊದಲೇ ಅಂದಾಜು ಮಾಡಿ ಹೇಳಬೇಕು' ಎಂದರು.

9ನೇ ಪುಟ ನೋಡಿ

## 'ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆ ರದ್ದು ತೀರ್ಮಾನ ಆಗಿಲ್ಲ'

ಪ್ರಜಾವಾಣಿ ವಾರ್ತೆ



**ಬೆಂಗಳೂರು:** 'ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ರದ್ದುಪಡಿಸುವ ಬಗ್ಗೆ ಸದ್ಯಕ್ಕೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಸೋಮವಾರ ಸ್ಪಷ್ಟಪಡಿಸಿದ್ದಾರೆ.

ಕೋವಿಡ್ ತೀವ್ರವಾಗಿ ಹರಡುತ್ತಿರುವ ಕಾರಣ ಈ ಪರೀಕ್ಷೆಗಳನ್ನು ರಾಜ್ಯ ಸರ್ಕಾರ ಈಗಾಗಲೇ ಮುಂದೂಡಿದೆ. 'ಪರೀಕ್ಷೆ ಕುರಿತಂತೆ ಕೆಲವು ಮಾಧ್ಯಮಗಳ ಸುದ್ದಿ ಊಹಾಪೋಹವಷ್ಟೇ. ವಿದ್ಯಾರ್ಥಿಗಳ ಭವಿಷ್ಯ ಹಾಗೂ ಆರೋಗ್ಯ ಗಮನದಲ್ಲಿರಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು' ಎಂದೂ ಸಚಿವರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

### ಚಿನಕುರಳಿ
ಪ್ರಕಾಶ್ ಶೆಟ್ಟಿ




ನಾರದ ಹಗರಣ: ಸಿಬಿಐ ಅಧಿಕಾರಿಗಳ ಜೊತೆ ಮಮತಾ ವಾಗ್ವಾದ

# ಟಿಎಂಸಿ ಮುಖಂಡರ ಬಂಧನ

**ಕೋಲ್ಕತ್ತ/ನವದೆಹಲಿ (ಪಿಟಿಐ):** 'ನಾರದ ಹಗರಣ'ಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಇಬ್ಬರು ಸಚಿವರು, ಒಬ್ಬ ಶಾಸಕ ಮತ್ತು ಒಬ್ಬ ಮಾಜಿ ಸಚಿವರನ್ನು ಸಿಬಿಐ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ಕೋಲ್ಕತ್ತದಲ್ಲಿ ನಾಟಕೀಯ ಬೆಳವಣಿಗೆಗಳು ನಡೆದಿವೆ.

ಬಂಧನಕ್ಕೆ ಆಕ್ರೋಶ ವ್ಯಕ್ತಪಡಿಸಿ ಸಿಬಿಐ ಕಚೇರಿಗೆ ಧಾವಿಸಿ ಬಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತನ್ನನ್ನೂ ಬಂಧಿಸುವಂತೆ ಅಧಿಕಾರಿಗಳ ಜತೆ ವಾಗ್ವಾದ ನಡೆಸಿದ್ದಾರೆ. ಇನ್ನೊಂದೆಡೆ, ಮುಖಂಡರ ಬಂಧನವನ್ನು ವಿರೋಧಿಸಿ ಟಿಎಂಸಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಸಚಿವರಾದ ಫಿರ್ಹಾದ್ ಹಕೀಮ್, ಸುಬ್ರತ ಮುಖರ್ಜಿ, ಟಿಎಂಸಿ ಶಾಸಕ ಮದನ್ ಮಿತ್ರ ಹಾಗೂ ಮಾಜಿ ಸಚಿವ ಸೋವನ್ ಚಟರ್ಜಿ ಅವರನ್ನು ಸಿಬಿಐ ಅಧಿಕಾರಿಗಳು ಸೋಮವಾರ ಬೆಳಿಗ್ಗೆ ಬಂಧಿಸಿದ್ದಾರೆ.

9ನೇ ಪುಟ ನೋಡಿ

### ಸುವೇಂದು ಬಂಧನ ಯಾಕಿಲ್ಲ?

'ನಾರದ ಪ್ರಕರಣದ ಇನ್ನೊಬ್ಬ ಆರೋಪಿ ಸುವೇಂದು ಅಧಿಕಾರಿ ಅವರನ್ನೇಕೆ ಬಂಧಿಸಿಲ್ಲ' ಎಂದು ಮಾರುವೇಷದ ಕಾರ್ಯಾಚರಣೆ ನಡೆಸಿದ್ದ ಪತ್ರಕರ್ತ ಮ್ಯಾಥ್ಯು ಸ್ಯಾಮುಯಲ್ ಪ್ರಶ್ನಿಸಿದ್ದಾರೆ.

'ಟಿಎಂಸಿಯ ನಾಲ್ವರು ಮುಖಂಡರನ್ನು ಸಿಬಿಐ ಅಧಿಕಾರಿಗಳು ಬಂಧಿಸಿರುವುದು ಸಮಾಧಾನಕೊಡುವ ವಿಚಾರ. ಮೂರು ವರ್ಷಗಳ ಹಿಂದೆಯೇ ಇವರ ವಿರುದ್ಧ ಆರೋಪಪಟ್ಟಿ ಸಿದ್ಧವಾಗಿದ್ದರೂ ಕ್ರಮ ಕೈಗೊಳ್ಳಲು ಸಿಬಿಐಗೆ ಸಾಧ್ಯವಾಗಿರಲಿಲ್ಲ. ಆದರೆ, ಬಂಧಿತರ ಪಟ್ಟಿಯಲ್ಲಿ ಸುವೇಂದು ಅವರ ಹೆಸರು ಇಲ್ಲದಿರುವುದಕ್ಕೆ ಬೇಸರವೆನಿಸಿದೆ' ಎಂದು ಸ್ಯಾಮ್ಯುಯಲ್ ಹೇಳಿದ್ದಾರೆ.

### ಅನುಮತಿ ಪಡೆದಿಲ್ಲ: ಸ್ಪೀಕರ್

'ರಾಜ್ಯದ ಸಚಿವರು ಮತ್ತು ಶಾಸಕರನ್ನು ಬಂಧಿಸಿರುವುದು ಕಾನೂನುಬಾಹಿರ ಕ್ರಮ' ಎಂದು ಪಶ್ಚಿಮ ಬಂಗಾಳ ವಿಧಾನಸಭೆಯ ಸ್ಪೀಕರ್ ಬಿಮನ್‌ಬ್ಯಾನರ್ಜಿ ಹೇಳಿದ್ದಾರೆ. 'ಸಚಿವರು ಮತ್ತು ಶಾಸಕರ ಬಂಧನಕ್ಕೆ ಅನುಮತಿ ಕೋರಿ ಸಿಬಿಐಯಿಂದ ನನಗೆ ಈವರೆಗೆ ಯಾವುದೇ ಪತ್ರ ಬಂದಿಲ್ಲ. ಅಲ್ಲದೆ, ಯಾರೊಬ್ಬರೂ ಆ ಬಗ್ಗೆ ನನ್ನ ಅನುಮತಿಯನ್ನು ಕೇಳಿಲ್ಲ' ಎಂದು ಅವರು ಹೇಳಿದ್ದಾರೆ.

'ನಾಲ್ವರು ಆರೋಪಿಗಳ ವಿರುದ್ಧ ವಿಚಾರಣೆ ನಡೆಸಲು ಅನುಮತಿ ನೀಡಬೇಕೆಂದು ಪಶ್ಚಿಮ ಬಂಗಾಳ ರಾಜ್ಯಪಾಲರಿಗೆ ಸಿಬಿಐ ಮನವಿ ಸಲ್ಲಿಸಿತ್ತು. ಅದರಂತೆ ಮೇ 7ರಂದೇ ರಾಜ್ಯಪಾಲರು ಸಮ್ಮತಿ ನೀಡಿದ್ದರು' ಎಂದು ಸಿಬಿಐ ವಕ್ತಾರ ಆರ್. ಸಿ. ಜೋಶಿ ತಿಳಿಸಿದ್ದಾರೆ.

ಆದರೆ, ರಾಜ್ಯಪಾಲರ ಅನುಮತಿಯ ಮೇಲೆ ಆರೋಪಿಗಳನ್ನು ಬಂಧಿಸಿರುವುದು ಕಾನೂನುಬಾಹಿರ ಕ್ರಮ ಎಂದು ಸ್ಪೀಕರ್ ಬಿಮನ್ ಅವರು ಹೇಳಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

## CSB BANK LIMITED
BRANCH YELAHANKA

### GOLD LOAN AUCTION NOTICE

The gold articles pledged under the following account numbers in the Bank's Branch which are not cleared and the payment of Bank's dues even after serving Ordinary/ Registered Notice will be **SOLD IN PUBLIC AUCTION** at Yelahanka Branch Premises as under or any other convenient date and without further notice at the risk and responsibility of the Pawners, if they are not released from Yelahanka Branch on or before **25th May 2021 before 11.00 A.M.** the gold ornaments will be disposed off by Public auction/Private sale in case the amount in the public auction does not fetch the amount required for the closure of the account and if there is further default, legal action will be initiated against them for the balance amount due to the bank.
AUCTION AT: Yelahanka Branch Premises on **25th May 2021 at 11.00 A.M**
Details of gold ornaments pledged under gold loan at Yelahanka Branch for Auction.

| S. No. | Name of Customer | Ac No | Open Date | Amount | Net Weight | Gross Weight |
|---|---|---|---|---|---|---|
| 1 | BHARATH | 0245-03665397-000030 | 15-06-20 | 78000 | 28.8 | 29 |
| 2 | BHARATH | 0245-03665397-000031 | 18-11-20 | 125000 | 38 | 38 |
| 3 | BHARATH | 0245-03665397-000033 | 28-11-20 | 272673 | 150 | 150 |
| 4 | BHARATH GOWDA | 0245-07310336-000024 | 18-01-21 | 395000 | 106.8 | 109.5 |
| 5 | BHAVANI N | 0245-04197885-000011 | 16-12-20 | 30000 | 8.5 | 13 |
| 6 | BHAVANI N | 0245-04197885-000014 | 06-01-21 | 255000 | 70.5 | 80.4 |
| 7 | BHAVANI N | 0245-04197885-000016 | 12-02-21 | 542000 | 155 | 169.7 |
| 8 | CHANDRAPPA M | 0245-00675098-000049 | 08-02-21 | 108000 | 31 | 31.2 |
| 9 | CHANDRAPPA M | 0245-00675098-000050 | 22-02-21 | 135000 | 39 | 40.1 |
| 10 | CHANDRAPPA M | 0245-00675098-000051 | 01-03-21 | 405000 | 118.2 | 134.7 |
| 11 | DEEPAK KOLAR RAMACHANDRA | 0245-03969190-000007 | 19-11-20 | 25000 | 7 | 7 |
| 12 | GHASI RAM | 0245-04064771-000179 | 29-06-20 | 100000 | 34 | 35 |
| 13 | GHASI RAM | 0245-04064771-000257 | 28-11-20 | 28999 | 14 | 14 |
| 14 | GHASI RAM | 0245-04064771-000259 | 28-11-20 | 32022 | 12 | 12 |
| 15 | GHASI RAM | 0245-04064771-000256 | 28-11-20 | 19910 | 8 | 8 |
| 16 | GHASI RAM | 0245-04064771-000260 | 05-12-20 | 28132 | 22 | 22 |
| 17 | GHASI RAM | 0245-04064771-000261 | 05-12-20 | 11055 | 5 | 5 |
| 18 | HITESH | 0245-03819663-000816 | 30-06-20 | 14000 | 5.5 | 5.8 |
| 19 | HITESH | 0245-03819663-000828 | 08-09-20 | 48000 | 16 | 17 |
| 20 | HITESH | 0245-03819663-000830 | 08-09-20 | 30000 | 10 | 10.5 |
| 21 | HITESH | 0245-03819663-000831 | 08-09-20 | 20000 | 6.9 | 6.9 |
| 22 | HITESH | 0245-03819663-000832 | 08-09-20 | 30000 | 10 | 10 |
| 23 | HITESH | 0245-03819663-000840 | 09-09-20 | 28000 | 9.5 | 10.5 |
| 24 | HITESH | 0245-03819663-000843 | 10-09-20 | 24000 | 8 | 8.6 |
| 25 | HITESH | 0245-03819663-000848 | 10-09-20 | 37000 | 12.7 | 13.7 |
| 26 | HITESH | 0245-03819663-000850 | 10-09-20 | 26000 | 8.8 | 9 |
| 27 | HITESH | 0245-03819663-000852 | 21-09-20 | 19000 | 6.4 | 6.4 |
| 28 | HITESH | 0245-03819663-000858 | 22-09-20 | 24000 | 8 | 8.3 |
| 29 | HITESH | 0245-03819663-000861 | 23-09-20 | 20000 | 6.8 | 6.8 |
| 30 | HITESH | 0245-03819663-000863 | 24-09-20 | 40000 | 13.2 | 13.6 |
| 31 | HITESH | 0245-03819663-000864 | 07-10-20 | 24000 | 7.5 | 8.1 |
| 32 | HITESH | 0245-03819663-000865 | 07-10-20 | 115000 | 35 | 35 |
| 33 | HITESH | 0245-03819663-000872 | 28-10-20 | 40000 | 12 | 12.5 |
| 34 | HITESH | 0245-03819663-000874 | 28-10-20 | 18500 | 5.8 | 6.4 |
| 35 | HITESH | 0245-03819663-000876 | 28-10-20 | 18500 | 5.8 | 6.2 |
| 36 | HITESH | 0245-03819663-000878 | 28-10-20 | 41000 | 13 | 13.7 |
| 37 | HITESH | 0245-03819663-000879 | 29-10-20 | 51000 | 15.9 | 15.9 |
| 38 | HITESH | 0245-03819663-000883 | 02-11-20 | 167000 | 52 | 52.2 |
| 39 | HITESH | 0245-03819663-000890 | 04-11-20 | 31000 | 9.4 | 9.4 |
| 40 | HITESH | 0245-03819663-000891 | 04-11-20 | 42000 | 12.6 | 12.6 |
| 41 | HITESH | 0245-03819663-000894 | 04-11-20 | 52000 | 17 | 17.5 |
| 42 | HITESH | 0245-03819663-000895 | 04-11-20 | 38000 | 11 | 12.4 |
| 43 | HITESH | 0245-03819663-000898 | 04-11-20 | 45000 | 14 | 14.2 |
| 44 | HITESH | 0245-03819663-000905 | 06-11-20 | 79000 | 24 | 26.2 |
| 45 | HITESH | 0245-03819663-000906 | 06-11-20 | 34000 | 10.3 | 11.8 |
| 46 | HITESH | 0245-03819663-000908 | 07-11-20 | 26000 | 9 | 9.7 |
| 47 | HITESH | 0245-03819663-000910 | 13-11-20 | 80000 | 24.8 | 24.8 |
| 48 | HITESH | 0245-03819663-000924 | 17-11-20 | 16500 | 5.5 | 6.1 |
| 49 | HITESH | 0245-03819663-000925 | 17-11-20 | 16500 | 5.5 | 6.1 |
| 50 | HITESH | 0245-03819663-000949 | 25-11-20 | 27000 | 8.3 | 8.6 |
| 51 | HITESH | 0245-03819663-000955 | 28-11-20 | 46956 | 20 | 20 |
| 52 | HITESH | 0245-03819663-000956 | 30-11-20 | 23000 | 7.8 | 7.9 |
| 53 | HITESH | 0245-03819663-000957 | 30-11-20 | 27000 | 9 | 9.2 |
| 54 | HITESH | 0245-03819663-000958 | 30-11-20 | 90000 | 30 | 33.5 |
| 55 | HITESH | 0245-03819663-000961 | 30-11-20 | 45000 | 15 | 15.9 |
| 56 | HITESH | 0245-03819663-000964 | 01-12-20 | 55000 | 18.1 | 18.1 |
| 57 | HITESH | 0245-03819663-000969 | 04-12-20 | 6000 | 2 | 2.5 |
| 58 | HITESH | 0245-03819663-000970 | 04-12-20 | 23000 | 7.8 | 7.8 |
| 59 | HITESH | 0245-03819663-000971 | 04-12-20 | 16000 | 5.2 | 6.2 |
| 60 | HITESH | 0245-03819663-000974 | 04-12-20 | 24000 | 8 | 8.7 |
| 61 | HITESH | 0245-03819663-000976 | 05-12-20 | 15000 | 5 | 5.18 |
| 62 | HITESH | 0245-03819663-000979 | 08-12-20 | 24000 | 8 | 8.9 |
| 63 | HITESH | 0245-03819663-000983 | 09-12-20 | 44000 | 14 | 14.1 |
| 64 | HITESH | 0245-03819663-000987 | 14-12-20 | 27000 | 9 | 9.4 |
| 65 | HITESH | 0245-03819663-000989 | 14-12-20 | 54000 | 17 | 17.2 |
| 66 | HITESH | 0245-03819663-000991 | 14-12-20 | 23000 | 7.9 | 7.9 |
| 67 | HITESH | 0245-03819663-000992 | 14-12-20 | 12000 | 4 | 5.7 |
| 68 | HITESH | 0245-03819663-000993 | 15-12-20 | 16000 | 5 | 5.7 |
| 69 | HITESH | 0245-03819663-000996 | 16-12-20 | 24000 | 8 | 8.6 |
| 70 | HITESH | 0245-03819663-000998 | 18-12-20 | 15000 | 5 | 5.1 |
| 71 | HITESH | 0245-03819663-001004 | 21-12-20 | 25668 | 7.2 | 7.6 |
| 72 | HITESH | 0245-03819663-001005 | 21-12-20 | 30500 | 9.6 | 9.8 |
| 73 | HITESH | 0245-03819663-001011 | 23-12-20 | 41000 | 13 | 13 |
| 74 | HITESH | 0245-03819663-001012 | 23-12-20 | 26000 | 8.3 | 8.5 |
| 75 | HITESH | 0245-03819663-001014 | 24-12-20 | 27000 | 8.3 | 8.5 |
| 76 | HITESH | 0245-03819663-001015 | 24-12-20 | 26000 | 8.25 | 8.3 |
| 77 | HITESH | 0245-03819663-001017 | 28-12-20 | 51000 | 15.4 | 16.1 |
| 78 | HITESH | 0245-03819663-001018 | 28-12-20 | 50000 | 15.5 | 15.9 |
| 79 | HITESH | 0245-03819663-001023 | 05-01-21 | 43000 | 13 | 13.9 |
| 80 | HITESH | 0245-03819663-001024 | 05-01-21 | 41000 | 12.5 | 12.5 |
| 81 | HITESH | 0245-03819663-001025 | 05-01-21 | 28000 | 8.7 | 8.8 |
| 82 | HITESH | 0245-03819663-001026 | 06-01-21 | 12000 | 3.7 | 4 |
| 83 | HITESH | 0245-03819663-001028 | 07-01-21 | 28000 | 8.6 | 8.6 |
| 84 | HITESH | 0245-03819663-001030 | 08-01-21 | 37000 | 11.3 | 12.3 |
| 85 | HITESH | 0245-03819663-001032 | 08-01-21 | 18000 | 5.5 | 5.5 |
| 86 | HITESH | 0245-03819663-001033 | 08-01-21 | 34000 | 10.4 | 10.4 |
| 87 | HITESH | 0245-03819663-001035 | 15-01-21 | 25965 | 9.8 | 11.8 |
| 88 | HITESH | 0245-03819663-001038 | 21-01-21 | 70000 | 21.3 | 23.3 |
| 89 | HITESH | 0245-03819663-001039 | 22-01-21 | 34000 | 10.4 | 10.5 |
| 90 | HITESH | 0245-03819663-001042 | 22-01-21 | 25000 | 7.7 | 7.8 |
| 91 | HITESH | 0245-03819663-001043 | 27-01-21 | 44000 | 13.5 | 14 |
| 92 | HITESH | 0245-03819663-001044 | 27-01-21 | 73000 | 22.1 | 23.6 |
| 93 | HITESH | 0245-03819663-001045 | 27-01-21 | 42000 | 12.5 | 12.9 |
| 94 | HITESH | 0245-03819663-001050 | 28-01-21 | 39000 | 11.5 | 11.7 |
| 95 | HITESH | 0245-03819663-001052 | 30-01-21 | 34000 | 9.8 | 10 |
| 96 | HITESH | 0245-03819663-001054 | 01-02-21 | 28000 | 8.5 | 8.5 |
| 97 | HITESH | 0245-03819663-001055 | 01-02-21 | 27000 | 7.8 | 8 |
| 98 | HITESH | 0245-03819663-001056 | 01-02-21 | 33000 | 10 | 10 |
| 99 | HITESH | 0245-03819663-001057 | 01-02-21 | 35000 | 10 | 10.5 |
| 100 | HITESH | 0245-03819663-001058 | 01-02-21 | 38000 | 11.1 | 11.3 |
| 101 | HITESH | 0245-03819663-001063 | 02-02-21 | 22000 | 6.5 | 6.7 |
| 102 | HITESH | 0245-03819663-001064 | 03-02-21 | 30000 | 8.5 | 8.6 |
| 103 | HITESH | 0245-03819663-001065 | 03-02-21 | 15000 | 4.3 | 4.3 |
| 104 | HITESH | 0245-03819663-001067 | 03-02-21 | 15000 | 4.3 | 4.5 |
| 105 | HITESH | 0245-03819663-001068 | 04-02-21 | 11000 | 3.2 | 3.2 |
| 106 | HITESH | 0245-03819663-001069 | 04-02-21 | 21000 | 6 | 6.1 |
| 107 | HITESH | 0245-03819663-001071 | 04-02-21 | 52000 | 15.1 | 15.6 |
| 108 | HITESH | 0245-03819663-001073 | 05-02-21 | 149000 | 42.5 | 43.5 |
| 109 | HITESH | 0245-03819663-001074 | 08-02-21 | 46000 | 13.2 | 13.7 |
| 110 | HITESH | 0245-03819663-001075 | 08-02-21 | 42000 | 12 | 12.5 |
| 111 | HITESH | 0245-03819663-001080 | 10-02-21 | 38000 | 11.3 | 11.8 |
| 112 | HITESH | 0245-03819663-001081 | 11-02-21 | 11200 | 4.5 | 5 |
| 113 | HITESH | 0245-03819663-001082 | 15-02-21 | 72000 | 21.9 | 21.9 |
| 114 | HITESH | 0245-03819663-001083 | 15-02-21 | 57000 | 17.8 | 18.3 |
| 115 | HITESH | 0245-03819663-001085 | 15-02-21 | 67000 | 20.5 | 23.5 |
| 116 | HITESH | 0245-03819663-001086 | 15-02-21 | 34000 | 10.4 | 10.6 |
| 117 | HITESH | 0245-03819663-001087 | 15-02-21 | 37000 | 11.2 | 11.7 |
| 118 | HITESH | 0245-03819663-001088 | 15-02-21 | 30000 | 9.2 | 10.2 |
| 119 | HITESH | 0245-03819663-001089 | 15-02-21 | 44000 | 13.6 | 14.6 |
| 120 | HITESH | 0245-03819663-001091 | 15-02-21 | 25000 | 8.8 | 8.6 |
| 121 | HITESH | 0245-03819663-001094 | 16-02-21 | 28000 | 8.2 | 8.2 |
| 122 | HITESH | 0245-03819663-001095 | 16-02-21 | 49000 | 14.9 | 14.9 |
| 123 | HITESH | 0245-03819663-001096 | 17-02-21 | 28000 | 8.5 | 8.7 |
| 124 | HITESH | 0245-03819663-001098 | 18-02-21 | 30000 | 9.1 | 9.1 |
| 125 | HITESH | 0245-03819663-001099 | 19-02-21 | 54000 | 17 | 19 |
| 126 | HITESH | 0245-03819663-001100 | 22-02-21 | 47000 | 14.7 | 15.9 |
| 127 | HITESH | 0245-03819663-001102 | 22-02-21 | 46000 | 14.4 | 14.4 |
| 128 | HITESH | 0245-03819663-001108 | 24-02-21 | 22000 | 7 | 7.6 |
| 129 | IDAYATH PASHA | 0245-04132220-000001 | 28-07-20 | 40000 | 13 | 17.2 |
| 130 | LAKSHMI NARASAMMA | 0245-04118260-000002 | 28-07-20 | 160000 | 50.4 | 51.4 |
| 131 | LEENCE FENCICO | 0245-04125384-000003 | 29-06-20 | 25000 | 9 | 9.5 |
| 132 | MALLIKARJUNA | 0245-04048526-000004 | 19-01-21 | 279000 | 75.6 | 78.6 |
| 133 | MANJULA K K | 0245-04034740-000009 | 18-08-20 | 4000000 | 998.2 | 998.2 |
| 134 | MANJUNATHA | 0245-04016346-000004 | 09-07-20 | 60000 | 19.8 | 19.8 |
| 135 | MANJUNATHA | 0245-04016346-000008 | 19-09-20 | 16000 | 5 | 5 |
| 136 | MANJUNATHA | 0245-04016346-000010 | 02-11-20 | 86000 | 23.4 | 23.4 |
| 137 | MANJUNATHA | 0245-04016346-000011 | 23-11-20 | 48000 | 13.3 | 13.3 |
| 138 | MANJUNATHA C | 0245-04157672-000001 | 30-07-20 | 80500 | 25.2 | 26 |
| 139 | MOHAMMED RAFI | 0245-03938809-000008 | 30-07-20 | 100000 | 32.5 | 32.6 |
| 140 | MOHAMMED RAFI | 0245-03938809-000009 | 05-11-20 | 150000 | 40.8 | 49.8 |
| 141 | MOHAMMED RAFI | 0245-03938809-000010 | 24-12-20 | 60000 | 20.1 | 20.1 |
| 142 | MOHAMMED RAFI | 0245-03938809-000011 | 03-02-21 | 49194 | 15.5 | 15.6 |
| 143 | MOHAMMED RAFI | 0245-03938809-000012 | 09-02-21 | 110000 | 35 | 35 |
| 144 | MURTHY | 0245-07246371-000001 | 01-07-20 | 918000 | 270 | 275.5 |
| 145 | MURTHY | 0245-07246371-000002 | 08-07-20 | 190000 | 60.2 | 60.4 |
| 146 | MURTHY | 0245-07246371-000003 | 10-07-20 | 190000 | 60.2 | 61.1 |
| 147 | NAGARAJ | 0245-00674538-000028 | 02-01-20 | 936000 | 374.3 | 404.3 |
| 148 | NAGARAJ | 0245-00674538-000029 | 25-08-20 | 130000 | 50 | 65.5 |
| 149 | NAGARAJ | 0245-00674538-000031 | 15-01-21 | 403097 | 165 | 195.9 |
| 150 | NAGARAJ . | 0245-04145649-000001 | 25-06-20 | 12000 | 4.5 | 4.7 |
| 151 | NARENDRA | 0245-03950505-000200 | 04-04-20 | 21640 | 10 | 10 |
| 152 | NARENDRA | 0245-03950505-000211 | 19-06-20 | 18000 | 7.3 | 7.9 |
| 153 | NARENDRA | 0245-03950505-000212 | 19-06-20 | 20000 | 7.8 | 8 |
| 154 | NARENDRA | 0245-03950505-000213 | 30-07-20 | 1150000 | 359.3 | 365.8 |
| 155 | NARENDRA | 0245-03950505-000214 | 17-08-20 | 90000 | 31 | 32.3 |
| 156 | NARENDRA | 0245-03950505-000218 | 02-09-20 | 16000 | 5.3 | 5.6 |
| 157 | NARENDRA | 0245-03950505-000220 | 28-11-20 | 252700 | 78.9 | 78.9 |
| 158 | NARENDRA | 0245-03950505-000221 | 18-12-20 | 70000 | 26.7 | 29.7 |
| 159 | NENA | 0245-03893007-000082 | 09-12-19 | 80000 | 39 | 39 |
| 160 | NENA | 0245-03893007-000083 | 12-12-19 | 20000 | 10 | 10.2 |
| 161 | NENA | 0245-03893007-000095 | 05-02-20 | 110000 | 50.5 | 50.5 |
| 162 | NENA | 0245-03893007-000129 | 02-09-20 | 75000 | 24 | 25 |
| 163 | NENA | 0245-03893007-000130 | 07-09-20 | 27000 | 9.7 | 9.7 |
| 164 | NENA | 0245-03893007-000132 | 08-09-20 | 260000 | 74 | 78.3 |
| 165 | NENA | 0245-03893007-000136 | 09-09-20 | 58000 | 20.8 | 20.8 |
| 166 | NENA | 0245-03893007-000133 | 09-09-20 | 180000 | 64.5 | 65.5 |
| 167 | NENA | 0245-03893007-000140 | 28-09-20 | 20000 | 7 | 7.5 |
| 168 | NENA | 0245-03893007-000144 | 14-10-20 | 40000 | 12 | 14.9 |
| 169 | NENA | 0245-03893007-000148 | 21-10-20 | 43000 | 14.5 | 14.9 |
| 170 | NENA | 0245-03893007-000152 | 28-10-20 | 40000 | 12 | 12 |
| 171 | NENA | 0245-03893007-000154 | 28-10-20 | 35000 | 11 | 13 |
| 172 | NENA | 0245-03893007-000153 | 28-10-20 | 35000 | 10 | 12.5 |
| 173 | NENA | 0245-03893007-000151 | 28-10-20 | 42500 | 13.3 | 13.3 |
| 174 | NENA | 0245-03893007-000156 | 29-10-20 | 38000 | 12.3 | 12.3 |
| 175 | NENA | 0245-03893007-000157 | 29-10-20 | 25000 | 8 | 8.1 |
| 176 | NENA | 0245-03893007-000163 | 05-11-20 | 80000 | 26 | 27 |
| 177 | NENA | 0245-03893007-000165 | 28-12-20 | 26560 | 8.5 | 9.8 |
| 178 | OM PRAKASH | 0245-03387873-000310 | 05-02-20 | 33000 | 16.3 | 16.3 |
| 179 | OM PRAKASH | 0245-03387873-000342 | 22-06-20 | 26000 | 10 | 10 |
| 180 | OM PRAKASH | 0245-03387873-000347 | 29-06-20 | 23000 | 8.5 | 8.9 |
| 181 | OM PRAKASH | 0245-03387873-000350 | 29-06-20 | 17000 | 6.5 | 6.8 |
| 182 | OM PRAKASH | 0245-03387873-000352 | 30-06-20 | 17000 | 6.5 | 6.8 |
| 183 | OM PRAKASH | 0245-03387873-000359 | 08-07-20 | 20000 | 7.6 | 7.6 |
| 184 | OM PRAKASH | 0245-03387873-000361 | 08-07-20 | 24000 | 9.1 | 9.5 |
| 185 | OM PRAKASH | 0245-03387873-000365 | 01-10-20 | 30000 | 10 | 13 |
| 186 | OM PRAKASH | 0245-03387873-000367 | 21-11-20 | 60000 | 21 | 21.5 |
| 187 | OM PRAKASH | 0245-03387873-000368 | 25-11-20 | 43000 | 15 | 15.3 |
| 188 | OM PRAKASH | 0245-03387873-000372 | 04-12-20 | 22000 | 7.4 | 7.4 |
| 189 | OM PRAKASH | 0245-03387873-000373 | 08-12-20 | 22000 | 8 | 8.1 |
| 190 | OM PRAKASH | 0245-03387873-000388 | 16-12-20 | 75000 | 25 | 25.7 |
| 191 | OM PRAKASH | 0245-03387873-000393 | 16-12-20 | 52000 | 17.5 | 18 |
| 192 | OM PRAKASH | 0245-03387873-000395 | 16-12-20 | 90000 | 30.3 | 51.8 |
| 193 | OM PRAKASH | 0245-03387873-000398 | 17-12-20 | 50000 | 15.8 | 16.3 |
| 194 | OM PRAKASH | 0245-03387873-000399 | 17-12-20 | 17000 | 5 | 7 |
| 195 | OM PRAKASH | 0245-03387873-000400 | 22-12-20 | 40000 | 13.3 | 13.3 |
| 196 | OM PRAKASH | 0245-03387873-000401 | 23-12-20 | 121000 | 37.9 | 38.4 |
| 197 | OM PRAKASH | 0245-03387873-000402 | 28-12-20 | 27000 | 8 | 8.4 |
| 198 | OM PRAKASH | 0245-03387873-000403 | 28-12-20 | 40000 | 11.8 | 11.8 |
| 199 | OM PRAKASH | 0245-03387873-000404 | 29-12-20 | 19000 | 5.8 | 6 |
| 200 | OM PRAKASH | 0245-03387873-000405 | 30-12-20 | 47500 | 20.5 | 21.4 |
| 201 | OM PRAKASH | 0245-03387873-000407 | 30-12-20 | 122000 | 52 | 53.5 |
| 202 | OM PRAKASH | 0245-03387873-000410 | 30-12-20 | 61000 | 26 | 29.4 |
| 203 | OM PRAKASH | 0245-03387873-000411 | 30-12-20 | 72000 | 31 | 32.3 |
| 204 | OM PRAKASH | 0245-03387873-000412 | 30-12-20 | 78000 | 30.8 | 30.8 |
| 205 | OM PRAKASH | 0245-03387873-000436 | 13-01-21 | 73000 | 22 | 22 |
| 206 | OM PRAKASH | 0245-03387873-000439 | 13-01-21 | 51000 | 15.5 | 16.7 |
| 207 | OM PRAKASH | 0245-03387873-000440 | 13-01-21 | 32000 | 9.8 | 9.8 |
| 208 | OM PRAKASH | 0245-03387873-000446 | 13-01-21 | 20000 | 6 | 6 |
| 209 | OM PRAKASH | 0245-03387873-000451 | 13-01-21 | 172000 | 52 | 54.4 |
| 210 | OM PRAKASH | 0245-03387873-000452 | 13-01-21 | 35000 | 11.5 | 11.6 |
| 211 | OM PRAKASH | 0245-03387873-000453 | 13-01-21 | 72000 | 22 | 26.4 |
| 212 | OM PRAKASH | 0245-03387873-000454 | 13-01-21 | 120000 | 35 | 39.8 |
| 213 | OM PRAKASH | 0245-03387873-000455 | 13-01-21 | 46000 | 13.8 | 14.4 |
| 214 | OM PRAKASH | 0245-03387873-000457 | 13-01-21 | 33000 | 10.2 | 10.2 |
| 215 | OM PRAKASH | 0245-03387873-000458 | 13-01-21 | 20000 | 6.3 | 6.3 |
| 216 | OM PRAKASH | 0245-03387873-000459 | 15-01-21 | 20000 | 6.3 | 6.6 |
| 217 | OM PRAKASH | 0245-03387873-000460 | 15-01-21 | 25000 | 8.1 | 8.1 |
| 218 | OM PRAKASH | 0245-03387873-000461 | 16-01-21 | 143500 | 58.4 | 58.4 |
| 219 | OM PRAKASH | 0245-03387873-000462 | 16-01-21 | 20000 | 8.2 | 8.3 |
| 220 | OM PRAKASH | 0245-03387873-000463 | 16-01-21 | 18000 | 7 | 7.9 |
| 221 | OM PRAKASH | 0245-03387873-000465 | 18-01-21 | 95000 | 31 | 31 |
| 222 | OM PRAKASH | 0245-03387873-000467 | 18-01-21 | 200000 | 61 | 61 |
| 223 | OM PRAKASH | 0245-03387873-000472 | 25-01-21 | 50000 | 16 | 16 |
| 224 | OM PRAKASH | 0245-03387873-000474 | 28-01-21 | 40000 | 13.5 | 14.5 |
| 225 | OM PRAKASH | 0245-03387873-000475 | 29-01-21 | 39000 | 11.2 | 11.6 |
| 226 | OM PRAKASH | 0245-03387873-000476 | 30-01-21 | 19988 | 8 | 8.3 |
| 227 | OM PRAKASH | 0245-03387873-000477 | 01-02-21 | 21000 | 7 | 7 |
| 228 | OM PRAKASH | 0245-03387873-000478 | 01-02-21 | 20000 | 5.8 | 5.9 |
| 229 | OM PRAKASH | 0245-03387873-000481 | 05-02-21 | 57660 | 18.6 | 19.6 |
| 230 | OM PRAKASH | 0245-03387873-000483 | 08-02-21 | 20000 | 6 | 6 |
| 231 | OM PRAKASH | 0245-03387873-000486 | 12-02-21 | 64000 | 20 | 20.6 |
| 232 | OM PRAKASH | 0245-03387873-000490 | 17-02-21 | 50000 | 16 | 16 |
| 233 | OM PRAKASH | 0245-03387873-000491 | 24-02-21 | 50000 | 16.2 | 16.2 |
| 234 | OM PRAKASH | 0245-03387873-000493 | 25-02-21 | 25000 | 9.5 | 9.5 |
| 235 | OM PRAKASH | 0245-03387873-000494 | 01-03-21 | 18000 | 5.9 | 5.9 |
| 236 | OM PRAKASH | 0245-03387873-000494 | 12-02-21 | 130000 | 42 | 42.3 |
| 237 | OM PRAKASH | 0245-03387873-000495 | 15-02-21 | 120000 | 40.5 | 40.5 |
| 238 | OM PRAKASH | 0245-03387873-000496 | 17-02-21 | 50000 | 16 | 16 |
| 239 | PARASMAL B | 0245-00493367-000316 | 02-06-20 | 40000 | 14 | 14.2 |
| 240 | PARASMAL B | 0245-00493367-000319 | 02-06-20 | 16000 | 6 | 6.6 |
| 241 | PARASMAL B | 0245-00493367-000320 | 02-06-20 | 14000 | 5 | 5.5 |
| 242 | PARASMAL B | 0245-00493367-000321 | 02-06-20 | 14000 | 5 | 5.5 |
| 243 | PARASMAL B | 0245-00493367-000324 | 30-07-20 | 1000000 | 286 | 324.8 |
| 244 | PARASMAL B | 0245-00493367-000326 | 07-08-20 | 29000 | 8.9 | 8.9 |
| 245 | PARASMAL B | 0245-00493367-000328 | 12-08-20 | 79000 | 29.3 | 35.3 |
| 246 | PARASMAL B | 0245-00493367-000329 | 07-11-20 | 13877 | 6 | 6.3 |
| 247 | PARASMAL B | 0245-00493367-000332 | 20-11-20 | 136115 | 55.4 | 55.4 |
| 248 | PARASMAL B | 0245-00493367-000334 | 28-11-20 | 18919 | 9 | 10 |
| 249 | PARASMAL B | 0245-00493367-000336 | 28-11-20 | 21200 | 10 | 10 |
| 250 | PARASMAL B | 0245-00493367-000337 | 28-11-20 | 38472 | 15 | 15 |
| 251 | PARASMAL B | 0245-00493367-000338 | 28-11-20 | 37577 | 12 | 12 |
| 252 | PARASMAL B | 0245-00493367-000339 | 28-11-20 | 13456 | 10 | 10 |
| 253 | PARASMAL B | 0245-00493367-000340 | 28-11-20 | 18978 | 8 | 8 |
| 254 | PARASMAL B | 0245-00493367-000343 | 28-11-20 | 12515 | 5 | 5 |
| 255 | PARASMAL B | 0245-00493367-000344 | 28-11-20 | 17371 | 8 | 8 |
| 256 | PARASMAL B | 0245-00493367-000345 | 28-11-20 | 13994 | 8 | 8 |
| 257 | PARASMAL B | 0245-00493367-000346 | 28-11-20 | 37103 | 13 | 15 |
| 258 | PARASMAL B | 0245-00493367-000347 | 28-11-20 | 12757 | 5 | 5 |
| 259 | PARASMAL B | 0245-00493367-000348 | 28-11-20 | 21773 | 10 | 10 |
| 260 | PARASMAL B | 0245-00493367-000350 | 28-11-20 | 19035 | 10 | 10 |
| 261 | PARASMAL B | 0245-00493367-000353 | 28-11-20 | 55291 | 20 | 20 |
| 262 | PARASMAL B | 0245-00493367-000355 | 28-11-20 | 18427 | 15 | 15 |
| 263 | PARASMAL B | 0245-00493367-000357 | 28-11-20 | 14831 | 10 | 10 |
| 264 | PARASMAL B | 0245-00493367-000358 | 28-11-20 | 172847 | 100 | 100 |
| 265 | PARASMAL B | 0245-00493367-000359 | 28-11-20 | 12392 | 5 | 5 |
| 266 | PARASMAL B | 0245-00493367-000360 | 04-12-20 | 503000 | 139 | 144 |
| 267 | PARASMAL B | 0245-00493367-000361 | 04-12-20 | 600000 | 166.3 | 173.7 |
| 268 | PARASMAL B | 0245-00493367-000362 | 11-12-20 | 23000 | 7.5 | 7.9 |
| 269 | PARASMAL B | 0245-00493367-000367 | 18-12-20 | 420000 | 116.5 | 116.5 |
| 270 | PAVAN KALYAN | 0245-07242051-000003 | 28-07-20 | 141000 | 43.5 | 43.5 |
| 271 | PAVAN KALYAN | 0245-07242051-000004 | 11-08-20 | 996000 | 255.5 | 256.5 |
| 272 | RAGHAVENDRA P | 0245-04101351-000002 | 13-07-20 | 510000 | 170 | 179.6 |
| 273 | RAMESH G | 0245-00676458-000027 | 02-12-19 | 219000 | 110 | 111.7 |
| 274 | RAMESH G | 0245-00676458-000028 | 23-03-20 | 30500 | 15.5 | 16.3 |
| 275 | RAMESH G | 0245-00676458-000031 | 30-11-20 | 49729 | 24.7 | 24.9 |
| 276 | RAMESH G | 0245-00676458-000032 | 30-11-20 | 28354 | 14 | 28.9 |
| 277 | RAMESH G | 0245-00676458-000030 | 30-11-20 | 14212 | 7 | 7.4 |
| 278 | RAVIKUMAR | 0245-04134863-000003 | 29-07-20 | 80000 | 25 | 26.4 |
| 279 | RAVIKUMAR | 0245-04134863-000004 | 10-08-20 | 584000 | 149 | 152.4 |
| 280 | RAVIKUMAR | 0245-04134863-000006 | 25-11-20 | 134000 | 36 | 36.4 |
| 281 | S G | 0245-07248072-000004 | 28-07-20 | 140000 | 43.2 | 51.8 |
| 282 | SANDHYARANI. A.M | 0245-04109164-000008 | 15-10-20 | 17000 | 5.4 | 5.5 |
| 283 | SANDHYARANI. A.M | 0245-04109164-000009 | 09-12-20 | 77256 | 24 | 27.4 |
| 284 | SANDHYARANI. A.M | 0245-04109164-000004 | 09-07-20 | 103500 | 35.5 | 35.5 |
| 285 | SANDHYARANI. A.M | 0245-04109164-000006 | 13-07-20 | 78000 | 26.5 | 26.5 |
| 286 | SANDHYARANI. A.M | 0245-04109164-000007 | 13-07-20 | 105000 | 35 | 35.7 |
| 287 | SANGEETHA VIJAY | 0245-07251306-000004 | 28-09-20 | 2800000 | 757 | 824 |
| 288 | SANTHOSH N . | 0245-04141636-000001 | 12-06-20 | 22000 | 7.5 | 8.3 |
| 289 | SARITHA | 0245-04135395-000005 | 06-10-20 | 70000 | 20.2 | 20.5 |
| 290 | SARITHA | 0245-04135395-000006 | 11-02-21 | 193263 | 59 | 61.3 |
| 291 | SARITHA | 0245-04135395-000004 | 07-07-20 | 96000 | 28.4 | 29.7 |
| 292 | SATISH | 0245-04000974-000008 | 28-11-19 | 50000 | 24.5 | 25.5 |
| 293 | SATISH | 0245-04000974-000012 | 20-11-20 | 26061 | 9.9 | 9.9 |
| 294 | SAVARI MUTHU | 0245-04138886-000001 | 03-06-20 | 21000 | 7.5 | 7.8 |
| 295 | SAVARI MUTHU | 0245-04138886-000002 | 09-06-20 | 18000 | 6.6 | 6.6 |
| 296 | SAVARI MUTHU | 0245-04138886-000003 | 15-06-20 | 18000 | 6 | 6.1 |
| 297 | SUNIL | 0245-07255122-000001 | 23-07-20 | 300000 | 95 | 95.9 |
| 298 | SUNIL | 0245-07255122-000002 | 24-07-20 | 30000 | 11.8 | 11.8 |
| 299 | VEERAPPA K V | 0245-00674950-000035 | 23-07-20 | 75000 | 25.6 | 25.8 |
| 300 | VEERAPPA K V | 0245-00674950-000036 | 31-08-20 | 233000 | 63 | 74 |
| 301 | VEERAPPA K V | 0245-00674950-000037 | 04-09-20 | 830000 | 255 | 260.3 |
| 302 | VEERAPPA K V | 0245-00674950-000038 | 04-11-20 | 250000 | 70 | 79.8 |

Bank reserves right to postpone/ cancel auction without assigning any reason.
Date : 17.05.2021, Place : Bangalore — Sd/- (Branch Manager)

2ಎ,2ಬಿ ಮಾರ್ಗದಲ್ಲಿ ಶೇ 90 ರಷ್ಟು ಭೂಸ್ವಾಧೀನ ಮುಕ್ತಾಯ

# ಏರ್‌ಪೋರ್ಟ್‌ ಮಾರ್ಗ: ಶೀಘ್ರ ಟೆಂಡರ್

• ಗುರು ಪಿ.ಎಸ್

**ಬೆಂಗಳೂರು:** 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿನ ಬಹುನಿರೀಕ್ಷಿತ ಕೆ.ಆರ್. ಪುರ–ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗಕ್ಕೆ ತಿಂಗಳೊಳಗೆ ಟೆಂಡರ್ ಕರೆಯಲು ಬೆಂಗಳೂರು ಮೆಟ್ರೊ ರೈಲು ನಿಗಮ ಸಜ್ಜಾಗಿದೆ.

'ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರದವರೆಗೆ ಅಥವಾ ಹೊರ ವರ್ತುಲ ರಸ್ತೆಯ (ಒಆರ್‌ಆರ್) ಮಾರ್ಗಕ್ಕೆ (2ಎ) ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದ್ದು, ಒಂದು ವಾರದೊಳಗೆ ಕಾರ್ಯಾದೇಶ ನೀಡಲಾಗುತ್ತದೆ. ಅದೇ ರೀತಿ, ಕೆ.ಆರ್. ಪುರ–ವಿಮಾನ ನಿಲ್ದಾಣ ಮಾರ್ಗಕ್ಕೆ (2ಬಿ) ತಿಂಗಳೊಳಗೆ ಟೆಂಡರ್ ಆಹ್ವಾನಿಸಲಾಗುವುದು' ಎಂದು ಬಿಎಂಆರ್‌ಸಿಎಲ್ ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಚನ್ನಪ್ಪ ಗೌಡರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಒಆರ್‌ಆರ್ ಮಾರ್ಗದ ಭೂಸ್ವಾಧೀನ ಕಾರ್ಯ ಪೂರ್ಣಗೊಂಡಿದೆ. ವಿಮಾನ ನಿಲ್ದಾಣ ಮಾರ್ಗದಲ್ಲಿ ಶೇ 90ರಷ್ಟು ಭೂಸ್ವಾಧೀನ ಕಾರ್ಯ ಪೂರ್ಣಗೊಂಡಿದ್ದು, ಕೆಲವು ಅಂಗಡಿಗಳ ಸ್ಥಳಾಂತರ ಕಾರ್ಯ ಬಾಕಿ ಇದೆ. ಲಾಕ್‌ಡೌನ್ ಇರುವುದರಿಂದ ಈ ಕಾರ್ಯ ಸ್ವಲ್ಪ ನಿಧಾನವಾಗಿದೆ. ಕೆಲವೇ ದಿನಗಳಲ್ಲಿ ಈ ಕಾರ್ಯ ಪೂರ್ಣಗೊಳಿಸಿ, ಟೆಂಡರ್ ಆಹ್ವಾನಿಸಲಾಗುವುದು' ಎಂದು ಹೇಳಿದರು.

'ಕೆಲವು ಕಟ್ಟಡಗಳ ಮಾಲೀಕರು, ಬಾಡಿಗೆದಾರರು ಸ್ವಲ್ಪ ಸಮಯ ಕೇಳಿದ್ದಾರೆ. ಸೋಂಕು ಹರಡುತ್ತಿರುವುದರಿಂದ ಈ ವೇಳೆ ಸ್ಥಳಾಂತರವಾಗಲು ಕಷ್ಟವಾಗುತ್ತದೆ ಎಂದು ಕೋರಿದ್ದಾರೆ. ಅವರಿಗೆ ಕಾಲಾವಕಾಶ ಕೊಡಲಾಗಿದೆ' ಎಂದೂ ಹೇಳಿದರು.

ಈ ಎರಡೂ ಮಾರ್ಗ ಸೇರಿ ಒಟ್ಟು 3.13 ಲಕ್ಷ ಚದರ ಮೀಟರ್‌ನಷ್ಟು ಭೂಮಿ ಅಗತ್ಯವಿದೆ. ಈ ಪೈಕಿ ಈಗಾಗಲೇ 2.71 ಲಕ್ಷ ಚದರ ಮೀಟರ್‌ನಷ್ಟು ಭೂಮಿ ವಶಪಡಿಸಿಕೊಳ್ಳಲಾಗಿದ್ದು, ಎಂಜಿನಿಯರಿಂಗ್ ವಿಭಾಗಕ್ಕೆ ಇದನ್ನು ಹಸ್ತಾಂತರಿಸಲಾಗಿದೆ. ಇನ್ನು, ಶೇ 10ರಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

**₹8 ಸಾವಿರ ಕೋಟಿ:** ಈ ಎರಡೂ ಮಾರ್ಗಕ್ಕಾಗಿ ವಶಪಡಿಸಿಕೊಂಡಿರುವ ಭೂಮಿಗೆ ₹8 ಸಾವಿರ ಕೋಟಿ ಪರಿಹಾರ ನೀಡಲಾಗಿದೆ. ಈವರೆಗೆ ಒಟ್ಟು 3,006 ಕಟ್ಟಡ ಅಥವಾ ಆಸ್ತಿಗಳನ್ನು ಸ್ವಾಧೀನ ಮಾಡಿಕೊಳ್ಳಲಾಗಿದೆ.

ಪ್ರಜಾವಾಣಿ ವಿಶೇಷ

### ₹14,788 ಕೋಟಿ ಯೋಜನೆ

ಕೇಂದ್ರ ಸರ್ಕಾರ ಈ 2ಎ ಮತ್ತು 2ಬಿ ಮಾರ್ಗಕ್ಕೆ ಕಳೆದ ತಿಂಗಳು ಅನುಮೋದನೆ ನೀಡಿದೆ. ₹14,788 ಕೋಟಿ ವೆಚ್ಚದಲ್ಲಿ 58.19 ಕಿ.ಮೀ. ಉದ್ದದ ಈ ಮಾರ್ಗ ನಿರ್ಮಾಣವಾಗಲಿದೆ. ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್. ಪುರ, ನಾಗವಾರ ಮತ್ತು ಹೆಬ್ಬಾಳ ಮೂಲಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ನಿರ್ಮಾಣವಾಗುವ ಈ ಮಾರ್ಗದಲ್ಲಿ 30 ನಿಲ್ದಾಣಗಳು ತಲೆ ಎತ್ತಲಿವೆ.



### ಹೋಟೆಲ್ ಉದ್ಯಮಕ್ಕೆ ವಿಶೇಷ ಪ್ಯಾಕೇಜ್: ಒತ್ತಾಯ

**ಬೆಂಗಳೂರು:** ಕೊರೊನಾ ಹೊಡೆತದಿಂದಾಗಿ ಕಳೆದ ವರ್ಷದಿಂದಲೂ ಸಂಕಷ್ಟದಲ್ಲೇ ಇರುವ ಹೋಟೆಲ್ ಉದ್ಯಮಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ಒತ್ತಾಯಿಸಿದೆ.

ಈ ಸಂಬಂಧ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಂಘ ಪತ್ರ ಬರೆದಿದೆ.

'ನೆಲಕಚ್ಚಿರುವ ಹೋಟೆಲ್ ಉದ್ಯಮಕ್ಕೆ ಸರ್ಕಾರಗಳ ನೆರವು ಅಗತ್ಯವಿದೆ' ಎಂದು ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ಹೋಟೆಲ್‌ಗಳು ಪಡೆದಿರುವ ಸಾಲಗಳು, ನಗದು ಕ್ರೆಡಿಟ್ ಮತ್ತು ನಿಗದಿತ ಮಿತಿಗಳ ಮೇಲಿನ ಬಡ್ಡಿಯನ್ನು ಬ್ಯಾಂಕ್‌ಗಳು ಮನ್ನಾ ಮಾಡಬೇಕು. ಬಾಡಿಗೆ ಮೇಲೆ ಈಗಿರುವ ಶೇ 18ರಷ್ಟು ಜಿಎಸ್‌ಟಿ ಪ್ರಮಾಣವನ್ನು ತಾತ್ಕಾಲಿಕವಾಗಿ ಮನ್ನಾ ಮಾಡಬೇಕು' ಎಂದು ಒತ್ತಾಯಿಸಿದರು.

# ಒಂದೇ ಹುದ್ದೆ ಇದ್ದರೆ ಮೀಸಲಾತಿ ಅನ್ವಯವಾಗದು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಾಲೇಜಿನ ಒಂದು ವಿಷಯಕ್ಕೆ ಬೋಧಕ ಸಿಬ್ಬಂದಿ ಹುದ್ದೆ ಒಂದೇ ಇದ್ದರೆ ಅದನ್ನು ಪರಿಶಿಷ್ಟ ಜಾತಿ ಅಥವಾ ಪಂಗಡದ ಅಭ್ಯರ್ಥಿಗೆ ಮೀಸಲಿಡಲಾಗದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

2007ರ ಸೆಪ್ಟೆಂಬರ್‌ನಿಂದ ಮಂಡ್ಯದ ಅನುದಾನಿತ ಪಿಯು ಕಾಲೇಜಿನ ಗಣಿತ ಉಪನ್ಯಾಸಕಿ ಎಂ.ಎಸ್. ರಶ್ಮಿ ಅವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, 'ಇರುವ ಒಂದೇ ಹುದ್ದೆಯನ್ನು ಮೀಸಲಿರುವುದು ಕಾನೂನಿಗೆ ವಿರುದ್ಧ' ಎಂದು ವಾದಿಸಿದ್ದಾರೆ.



'ಗಣಿತ ವಿಷಯದ ಹುದ್ದೆಯನ್ನು ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಿರಿಸಿ 2019ರ ಸೆಪ್ಟೆಂಬರ್ 22ರಂದು ಅಧಿಸೂಚನೆ ಹೊರಡಿಸಲಾಗಿದೆ. ಒಂದೇ ಹುದ್ದೆಯನ್ನು ನಿರ್ದಿಷ್ಟ ಜಾತಿಗೆ ಮೀಸಲಿರಿಸಿದರೆ, ಅದು ಶೇ 100ರಷ್ಟು ಮೀಸಲಾತಿ ನಿಗದಿ ಮಾಡಿದಂತೆ ಆಗಲಿದೆ' ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ, 'ನೇಮಕಾತಿ ಪ್ರಕ್ರಿಯೆಗೆ ಹೊಸದಾಗಿ ಅಧಿಸೂಚನೆ ಹೊರಡಿಸಬೇಕು' ಎಂದು ತಿಳಿಸಿ, 'ಪ್ರಕ್ರಿಯೆ ಪೂರ್ಣಗೊಳ್ಳುವ ತನಕ ಅರ್ಜಿದಾರರ ಸೇವೆಗೆ ತೊಂದರೆ ಆಗಬಾರದು' ಎಂದು ಕಾಲೇಜಿಗೆ ನಿರ್ದೇಶನ ನೀಡಿತು.

# ಜ್ಞಾನಭಾರತಿ:ಪುನುಗು ಬೆಕ್ಕು ಸಂರಕ್ಷಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜ್ಞಾನಭಾರತಿ ಪ್ರಾಂಗಣದ ಬಳಿ ರಸ್ತೆ ಪಕ್ಕದಲ್ಲಿ ಗಾಯಗೊಂಡು ಬಿದ್ದಿದ್ದ ಪುನುಗು ಬೆಕ್ಕನ್ನು ಬಿಬಿಎಂಪಿಯ ವನ್ಯಜೀವಿ ಸಂರಕ್ಷಕರು ರಕ್ಷಿಸಿ ವನ್ಯಜೀವಿ ಪುನರ್ವಸತಿ ಕೇಂದ್ರಕ್ಕೆ ಒಪ್ಪಿಸಿದ್ದಾರೆ.

'ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಪಕ್ಕದ ಪೊದೆಯಲ್ಲಿ ಪುನುಗು ಬೆಕ್ಕು ಬಿದ್ದುಕೊಂಡಿತ್ತು. ವಾಯುವಿಹಾರಕ್ಕೆ ತೆರಳಿದ್ದವರೊಬ್ಬರು ಅದನ್ನು ನೋಡಿದ್ದರು. ಅವರು ನಮಗೆ ಮಾಹಿತಿ ನೀಡಿದರು. ಮುಂಗುಸಿ ಗಾಯಗೊಂಡಿದೆ ಎಂದು ಅವರು ತಿಳಿಸಿದ್ದರು. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಅದು ಹೆಣ್ಣು ಪುನುಗು ಬೆಕ್ಕು (ಸಿವೆಟ್ ಕ್ಯಾಟ್) ಎಂಬುದು ತಿಳಿಯಿತು' ಎಂದು ವನ್ಯಜೀವಿ ಸಂರಕ್ಷಕ ಪ್ರಸನ್ನ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪುನುಗು ಬೆಕ್ಕು ನಿಶಾಚರಿ ಪ್ರಾಣಿ. ಹಾಗಾಗಿ ಕಾಣಸಿಗುವುದು ಬಲು ಅಪರೂಪ. ಇವು ಪೊದೆ ಹಾಗೂ ಕಾಡು ಪ್ರದೇಶಗಳಲ್ಲಿ ವಾಸಿಸುತ್ತವೆ. ನಾವು ಸಂರಕ್ಷಿಸಿದ ಪುನುಗು ಬೆಕ್ಕಿನ ತಲೆ ಹಾಗೂ ಕಿವಿಯ ಭಾಗದಲ್ಲಿ ಗಾಯಗಳಿದ್ದವು.



ಗಾಯಗೊಂಡಿದ್ದ ಪುನುಗು ಬೆಕ್ಕು

ಅದು ಗಾಬರಿಗೊಂಡಿತ್ತು. ತುಂಬಾ ಸಮಯದಿಂದ ಅಲ್ಲೇ ಬಿದ್ದು ಹೊರಳಾಡಿದಂತಿತ್ತು. ಇನ್ನೊಂದು ಪುನುಗು ಬೆಕ್ಕಿನ ಜೊತೆ ಜಗಳವಾಡಿ ಗಾಯಗೊಂಡಿರುವ ಸಾಧ್ಯತೆ ಇದೆ ಅಥವಾ ನಾಯಿಗಳ ಬಾಯಿಗೆ ಸಿಕ್ಕಿ ತಪ್ಪಿಸಿಕೊಂಡಿರಲಿಕ್ಕೂ ಸಾಕು' ಎಂದು ಅವರು ಅಭಿಪ್ರಾಯಪಟ್ಟರು.

'ಪುನುಗು ಬೆಕ್ಕುಗಳು ಹೆಚ್ಚೂ ಕಡಿಮೆ 15 ವರ್ಷ ಬದುಕುತ್ತವೆ. ಸಂರಕ್ಷಿಸಿದ ಬೆಕ್ಕು ನಾಲ್ಕರಿಂದ ಐದು ವರ್ಷದ್ದಾಗಿರಬಹುದು' ಎಂದರು.

'ಬೆಂಗಳೂರಿನಂತಹ ಮಹಾನಗರದಲ್ಲಿ ಪುನುಗು ಬೆಕ್ಕು ನೋಡಲು ಸಿಗುವುದು ವಿಶೇಷವೇ ಸರಿ. ನಾನು ಒಂದೂವರೆ ವರ್ಷದ ಹಿಂದೆ ಕನಕಪುರ ರಸ್ತೆ ಸಮೀಪ ಒಂದು ಪುನುಗು ಬೆಕ್ಕನ್ನು ಕಾಪಾಡಿದ್ದೆ. ಎರಡೂವರೆ ವರ್ಷಗಳ ಹಿಂದೆ ಮಾಗಡಿ ರಸ್ತೆಯ ತಾವರೆಕೆರೆ ಸಮೀಪ ಒಂದು ಪುನುಗು ಬೆಕ್ಕನ್ನು ಸಂರಕ್ಷಿಸಿದ್ದೆ. ಅದು ಬಿಟ್ಟರೆ ಇವುಗಳನ್ನು ನೋಡಿದ್ದು ಕಡಿಮೆ. ಒಂದೂವರೆ ತಿಂಗಳ ಹಿಂದೆ ಜ್ಞಾನಭಾರತಿ ಪ್ರಾಂಗಣದ ಉರ್ದು ಕಾಲೇಜಿನ ಸಮೀಪ ಪುನುಗು ಬೆಕ್ಕು ಅಡ್ಡಾಡುತ್ತಿದ್ದ ಹಾಗೂ ಕಸದ ತೊಟ್ಟಿಗೆ ಬಿಸಾಡಿದ್ದ ಬಾಳೆಹಣ್ಣಿನ ಸಿಪ್ಪೆ ತಿನ್ನುತ್ತಿದ್ದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿತ್ತು' ಎಂದು ಅವರು ಮಾಹಿತಿ ನೀಡಿದರು.

'ಈ ಬೆಕ್ಕು ಸ್ರವಿಸುವ ಪುನುಗು ತುಂಬಾ ಪರಿಮಳದಿಂದ ಕೂಡಿರುತ್ತದೆ. ಸುಗಂಧ ದ್ರವ್ಯ ತಯಾರಿಸಲು ಈ ಪುನುಗು ಬಳಕೆ ಆಗುತ್ತದೆ. ಇದಕ್ಕೆ ಭಾರಿ ಬೇಡಿಕೆ ಇದೆ. ಈ ಕಾರಣಕ್ಕಾಗಿ ಈ ಬೆಕ್ಕುಗಳ ಕಳ್ಳಸಾಗಣೆಯೂ ನಡೆಯುತ್ತದೆ. ಇವುಗಳ ಸಂತತಿ ಅಪಾಯಕ್ಕೆ ಸಿಲುಕಿದೆ. ಇಂತಹ ಅಪೂರ್ವ ವನ್ಯಪ್ರಾಣಿಗಳ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು' ಎಂದು ಅವರು ತಿಳಿಸಿದರು.

### 'ಸಿನಿಮಾ ಕಾರ್ಮಿಕರಿಗೂ ಪ್ಯಾಕೇಜ್ ಘೋಷಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:**'ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುವ ಕಾರ್ಮಿಕರು ಹಾಗೂ ಪೋಷಕ ನಟರೂ ಅಸಂಘಟಿತ ವರ್ಗಕ್ಕೆ ಸೇರಿದ್ದು, ಸರ್ಕಾರ ಇವರಿಗೂ ವಿಶೇಷ ಪ್ಯಾಕೇಜ್ ಘೋಷಿಸಬೇಕು' ಎಂದು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧ ಮನವಿ ಮಾಡಿದ್ದಾರೆ.

'ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರವು ಆರ್ಥಿಕ ನೆರವು ನೀಡಲು ಮುಂದಾಗಿದೆ. ಚಿತ್ರರಂಗದಲ್ಲೂ ಸಾವಿರಾರು ಕಾರ್ಮಿಕರು ಅಸಂಘಟಿತರೇ ಆಗಿದ್ದು, ವಿಶೇಷ ಪ್ಯಾಕೇಜ್‌ನಲ್ಲಿ ಇವರನ್ನೂ ಸೇರಿಸಿಕೊಳ್ಳಬೇಕು. ಈ ಮೂಲಕ ಅವರ ಕುಟುಂಬಗಳಿಗೆ ಆಸರೆಯಾಗಬೇಕು' ಎಂದೂ ಒತ್ತಾಯಿಸಿದ್ದಾರೆ.




ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರ ಹುಟ್ಟು ಹಬ್ಬದ ಅಂಗವಾಗಿ ವಿಕ್ಟೋರಿಯಾ ಆಸ್ಪತ್ರೆ ಎದುರು 'ಅಪ್ಪಾಜಿ ಮೊಬೈಲ್ ಕ್ಯಾಂಟೀನ್'ಗೆ ಸೋಮವಾರ ಚಾಲನೆ ನೀಡಲಾಯಿತು. ಜೆಡಿಎಸ್ ಮುಖಂಡ ಟಿ.ಎ.ಶರವಣ ಅವರು ಬಡವರಿಗೆ ಉಚಿತವಾಗಿ ಆಹಾರ ವಿತರಿಸಿದರು –ಪ್ರಜಾವಾಣಿ ಚಿತ್ರ

### ತಿಂಗಳಿಗೆ ₹10 ಸಾವಿರ ನೆರವು ನೀಡಲು ಒತ್ತಾಯ

**ಬೆಂಗಳೂರು:** 'ಕೊರೊನಾ ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೆ ಬಿಪಿಎಲ್ ಕುಟುಂಬಗಳಿಗೆ ತಿಂಗಳಿಗೆ ₹10 ಸಾವಿರ ಆರ್ಥಿಕ ನೆರವು ನೀಡಬೇಕು' ಎಂದು ಮೂಲನಿವಾಸಿ ಮಹಾ ಒಕ್ಕೂಟದ ಅಧ್ಯಕ್ಷ ಜಿಗಣಿ ಶಂಕರ್ ಒತ್ತಾಯಿಸಿದರು.


ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಎಲ್ಲರಿಗೂ ತಲಾ 10 ಕೆ.ಜಿ. ಅಕ್ಕಿ, ಬೇಳೆ, ಅಡುಗೆ ಎಣ್ಣೆ ಸೇರಿದಂತೆ ದಿನಸಿ ವಿತರಿಸಬೇಕು. ನಿರುದ್ಯೋಗಿ ವಲಸಿಗರಿಗೆ ಉದ್ಯೋಗ ಕಲ್ಪಿಸಲು ನರೇಗಾ ಯೋಜನೆಯಡಿ ಕನಿಷ್ಠ ಕೂಲಿ ಮತ್ತು ಕೆಲಸದ ದಿನಗಳನ್ನು ಹೆಚ್ಚಿಸಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ 'ಕರ ನಿರಾಕರಣ ಚಳವಳಿ' ನಡೆಸಲಾಗುವುದು ಎಂದು ಎಚ್ಚರಿಸಿದರು.

'ಕಾರ್ಮಿಕರು, ಕುಶಲಕರ್ಮಿಗಳು, ಟ್ಯಾಕ್ಸಿ–ರಿಕ್ಷಾ ಚಾಲಕರು ಸೇರದಂತೆ ಎಲ್ಲ ದುಡಿಯುವ ವರ್ಗಕ್ಕೆ ನೆರವು ನೀಡಬೇಕು. ಸಣ್ಣ ಹಾಗೂ ಗೃಹ ಕೈಗಾರಿಕೆಗಳಿಗೆ ವಿಶೇಷ ಪ್ಯಾಕೇಜ್ ನೀಡಬೇಕು. ವಿದ್ಯುತ್, ಗ್ಯಾಸ್ ಹಾಗೂ ನೀರಿನ ಬಿಲ್ ಮತ್ತು ಸಾಲದ ಮೂರು ತಿಂಗಳ ಕಂತನ್ನು ಮನ್ನಾ ಮಾಡಬೇಕು' ಎಂದು ಮನವಿ ಮಾಡಿದರು.

ಉಪಾಧ್ಯಕ್ಷೆ ಭೀಮಪುತ್ರಿ ರೇವತಿ ರಾಜ್,'ರಾಜ್ಯದಲ್ಲಿನ ಉತ್ಪಾದನೆಯಾಗುವ ಆಮ್ಲಜನಕವನ್ನು ರಾಜ್ಯಕ್ಕೇ ಮೀಸಲಿಡಬೇಕು. ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಮಾರಾಟಕ್ಕೆ ತಡೆ ನೀಡಬೇಕು ಹಾಗೂ ಕೊರೊನಾ ಸೋಂಕಿತರಿಗೆ ಉಚಿತ ಚಿಕಿತ್ಸೆ ನೀಡಬೇಕು' ಎಂದು ಆಗ್ರಹಿಸಿದರು. 'ವೈದ್ಯಕೀಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರು , ಆಂಬುಲೆನ್ಸ್ ಚಾಲಕರು, ಸ್ಮಶಾನ ಕಾರ್ಮಿಕರು ಸೇರಿದಂತೆ ಕೊರೊನಾ ಸೇವೆಯಲ್ಲಿ ನಿರತರಾಗಿರುವವರು ಸೋಂಕಿನಿಂದ ಮೃತಪಟ್ಟರೆ, ₹50 ಲಕ್ಷ ಪರಿಹಾರ ಒದಗಿಸಬೇಕು' ಎಂದೂ ಹೇಳಿದರು.

### ರಣಹದ್ದಿನ ಮರಿ ಬಾಲ್ಕನಿಯಲ್ಲಿ ಪ್ರತ್ಯಕ್ಷ!

**ಬೆಂಗಳೂರು:** ವೈಟ್‌ಫೀಲ್ಡ್‌ನ ದಿವ್ಯಾ ಅರೋರ ಅವರ ಮನೆಯ ಬಾಲ್ಕನಿಯಲ್ಲಿ ಅಪರೂಪದ ಅತಿಥಿಯೊಬ್ಬರು ಸೋಮವಾರ ಬೆಳಿಗ್ಗೆ ಕಾಣಿಸಿಕೊಂಡಿದ್ದರು. ಬಂದಿದ್ದ ಅತಿಥಿ ಅಂತಿಂಥವರಲ್ಲ. ಜೀವಮಾನದಲ್ಲಿ ಎಂದೂ ಕಂಡಿರದ ಅತಿಥಿ!



ರಣಹದ್ದು

ಕೋವಿಡ್ ಲಾಕ್‌ಡೌನ್ ನಡುವೆಯೂ ಮನೆಗೆ ಅತಿಥಿಗಳು ಬಂದು ಹೋಗುವ ಪರಿಪಾಠ ಮುಂದುವರಿದಿದೆಯೇ ಎಂದು ಹುಬ್ಬೇರಿಸದಿರಿ. ಅರೋರ ಅವರ ಮನೆಯ ಬಾಲ್ಕನಿಯಲ್ಲಿ ಕಾಣಿಸಿಕೊಂಡಿದ್ದು ರಣಹದ್ದಿನ ಮುದ್ದು ಮರಿ!

ಹಾರಲಾಗದ ಸ್ಥಿತಿಯಲ್ಲಿದ್ದ ಹಕ್ಕಿ ಮರಿಯನ್ನು ಕಂಡು ಮನೆಯವರು ಬಿಬಿಎಂಪಿಯ ವನ್ಯಜೀವಿ ಸಂರಕ್ಷಣಾ ತಂಡದ ಸದಸ್ಯ ಎಂ.ರಾಜೇಶ್ ಕುಮಾರ್ ಅವರಿಗೆ ಕರೆ ಮಾಡಿದರು.

'ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಅದು ಬಿಳಿ ರಣಹದ್ದಿನ (ಈಜಿಪ್ಷಿಯನ್ ವಲ್ಚರ್) ಮರಿ ಎಂದು ಗೊತ್ತಾಯಿತು. ಇನ್ನೂ ಹಾರಲು ಕಲಿಯದ ಈ ಮರಿ ಹೇಗೆ ನಗರದ ಮನೆಯೊಂದರ ಬಾಲ್ಕನಿ ಸೇರಿತು ಎಂದೇ ಅರ್ಥವಾಗುತ್ತಿಲ್ಲ. ರಣಹದ್ದುಗಳು ತುಂಬಾ ಎತ್ತರದ ಬೆಟ್ಟಗಳಲ್ಲಿ ಕಡಿದಾದ ಪ್ರದೇಶದಲ್ಲಿ ಗೂಡು ಕಟ್ಟುತ್ತವೆ. ನಗರದ ಮಧ್ಯಭಾಗದ ವಸತಿ ಪ್ರದೇಶದಲ್ಲಿ ಇದು ಕಾಣಿಸಿಕೊಂಡಿದ್ದು ಹೇಗೆ ಎಂಬುದೇ ಅಚ್ಚರಿಯ ವಿಷಯ' ಎನ್ನುತ್ತಾರೆ ರಾಜೇಶ್ ಕುಮಾರ್.

'ಈ ಮರಿಯನ್ನು ಕೆಂಗೇರಿಯ ವನ್ಯಜೀವಿಗಳ ಪುನರ್ವಸತಿ ಕೇಂದ್ರಕ್ಕೆ ಒಪ್ಪಿಸಿದ್ದೇವೆ. ಇದಕ್ಕಿನ್ನೂ ರೆಕ್ಕೆಗಳು ಸರಿಯಾಗಿ ಬಲಿತಿಲ್ಲ. ಹಾಗಾಗಿ ಒಂದು ತಿಂಗಳು ಆರೈಕೆ ಮಾಡಿದ ಬಳಿಕ ರೆಕ್ಕೆ ಚೆನ್ನಾಗಿ ಬಲಿತರೆ ಬಳಿಕ ಹೊರಗೆ ಬಿಡಬಹುದು' ಎಂದರು.

# ‘ಭಯ ಬಿಟ್ಟರೆ ಕೊರೊನಾ ನಮ್ಮ ಅಡಿಯಾಳು’


ಗಿರಿಜಮ್ಮ

ಬೆಂಗಳೂರು: ‘ಕೊರೊನಾ ಸೋಂಕು ನನ್ನನ್ನೂ ಬಂಧಿಸಿತ್ತು. ಮನೆಯವರನ್ನು ಮತ್ತೆ ನೋಡುವ ನಂಬಿಕೆಯೇ ಕುಸಿದಿತ್ತು. ಒಂದು ತಿಂಗಳ ಜೀವನ್ಮರಣದ ಹೋರಾಟದಲ್ಲಿ ಕೊನೆಗೂ ಜಯ ನನ್ನದಾಯಿತು’.

ಇದು ಕೊರೊನಾ ಸೋಂಕಿಗೆ ಒಳಗಾಗಿದ್ದ ನಗರದ 86 ವರ್ಷದ ಗಿರಿಜಮ್ಮ ಅವರ ಗೆಲುವಿನ ಮಾತುಗಳು.

‘ಮನೆಗೆ ಮರಳಿದ ಬಳಿಕ ಸದಸ್ಯರ ಕಣ್ಣ ಬೆಳಕಲ್ಲಿ ನನ್ನ ಬಿಂಬ ಕಾಣಿಸಿತು. ಕುಟುಂಬಸ್ಥರ ಶಕ್ತಿಯೇ ನನಗೆ ಆತ್ಮಸ್ಥೈರ್ಯ ನೀಡಿತು. ಇದಕ್ಕೆ ಮನೆಯವರೆಲ್ಲ ನಿಬ್ಬೆರಗಾದರು. ಮನೆಯವರೂ ಸೋಂಕಿಗೆ ಒಳಗಾಗಿದ್ದ ವಿಚಾರ ತಿಳಿದು, ನಾನೂ ಬೆರಗಾದೆ.’

‘ಆಸ್ಪತ್ರೆಯೊಳಗೆ ಗುರುತೇ ಸಿಗದ, ಎಲ್ಲರೂ ಒಂದೇ ರೀತಿಯ ಪ್ಲಾಸ್ಟಿಕ್ ದಿರಿಸಿನಲ್ಲಿದ್ದರು. ಸದಾ ಉರಿಯುತ್ತಿದ್ದ ದೀಪಗಳಿಂದ ಹಗಲು, ರಾತ್ರಿಯ ವ್ಯತ್ಯಾಸವೇ ತಿಳಿಯುತ್ತಿರಲಿಲ್ಲ. ಮುಖಕ್ಕೆ ಹಾಕಿದ್ದ ಆಮ್ಲಜನಕದ ಮಾಸ್ಕ್‌ನಿಂದಾಗಿ ಮಾತನಾಡುವ ಅವಕಾಶವೂ ಇರಲಿಲ್ಲ’.

‘ಮುರಿತಗೊಂಡಿದ್ದ ಬಲಗೈ ನೋವು, ಆ ಔಷಧಗಳು, ಪರೀಕ್ಷೆಗಳು, ಮೈ ಚುಚ್ಚಿದ್ದೇ ಚುಚ್ಚಿದ್ದು. ಈ ವೇಳೆ ಉಸಿರುಗಟ್ಟುವ ಅನುಭವವೇ ಹೆಚ್ಚು. ಕಣ್ಣು ಹಾಯಿಸಿದಷ್ಟೂ ಎರಡೂ ಬದಿ ರೋಗಿಗಳು ಮಲಗಿದ್ದ ಹಾಸಿಗೆಗಳು. ಕುತೂಹಲದಿಂದ ನೋಡಿದರೆ, ಎಲ್ಲ ವಯೋಮಾನದವರೂ ಇದ್ದರು’.

‘ನೋಡ ನೋಡುತ್ತಿದ್ದಂತೆ ಮುಖದ ಮೇಲೆ ಬಟ್ಟೆ ಹಾಕಿ, ಸ್ಟ್ರೆಚರ್‌ಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಈ ವೇಳೆ ಏಕಾಂತ, ಅಗಾಧ ಮೌನ, ಅನಾಥ ಪ್ರಜ್ಞೆ, ಸಹಿಸಲಾಗದ ಸಂಕಟ ಎಲ್ಲವೂ ನನ್ನನ್ನು ಆವರಿಸಿಕೊಂಡಿತು. ಮೈ ಹಗುರಾಗುವ ಸ್ನಾನವಿರಲಿಲ್ಲ. ತಿನ್ನುವ ಉತ್ಸಾಹವಿಲ್ಲ, ನನ್ನವರ ಸುಳಿವೂ ಸಿಗಲಿಲ್ಲ. ಆಸ್ಪತ್ರೆಯಲ್ಲಿ ಇದಾಗಿತ್ತು ನನ್ನ ಸ್ಥಿತಿ.’

‘ಸಂಬಂಧಕ್ಕೆ ಜೊತೆಯಾಗಿದ್ದ ಮನೆಯ ಸದಸ್ಯರು ಸೋಂಕಿನಲ್ಲೂ ಜೊತೆಯಾಗಿದ್ದಾರೆ. ಅದರ ಸುಸ್ತು, ಸಂಕಟ, ಐಸಿಯುನಲ್ಲಿ ಕಳೆದ ಅನುಭವದ ರೋದನೆ ಮನೆಯವರನ್ನು ಕಾಡದಿರಲಿ’.

‘ಆಸ್ಪತ್ರೆಯಲ್ಲಿದ್ದಾಗ ಮನೆಯವರೂ ನನಗಾಗಿ ಪರದಾಡಿದ್ದಾರೆ. ಕೊರೊನಾದಿಂದ ಆಪ್ತರ, ಪರಿಚಿತರ ಸಾವು–ನೋವುಗಳು ನಮ್ಮನ್ನು ಹೆದರಿಕೆಯತ್ತ ತಳ್ಳುತ್ತಿವೆ. ಆದರೆ, ಅದನ್ನು ಗೆದ್ದಾಗ ಮಾತ್ರ ಕೊರೊನಾ ನಮ್ಮ ಅಡಿಯಾಳು ಎಂಬ ಮಾತನ್ನು ಪ್ರತಿಯೊಬ್ಬರೂ ಪಾಲಿಸಬೇಕು’.

‘ಸಾವಿನ ಸುದ್ದಿ ಕೇಳಿ ಮನಸ್ಸು ಹಿಂಡುವುದು ಸಾಮಾನ್ಯ. ಇವುಗಳ ನಡುವೆ ಕೊರೊನಾ ಮಣಿಸಿ, ಮನೆಗೆ ಬಂದಿರುವುದು ಯುದ್ಧ ಗೆದ್ದು ಬಂದ ಅನುಭವ ನೀಡುತ್ತಿದೆ. ಕಾಳಜಿ ತೋರುತ್ತಿದ್ದ ವೈದ್ಯರ ಕಾಳಜಿ, ಧೈರ್ಯ ನೀಡುತ್ತಿದ್ದ ಆತ್ಮೀಯರಿಗೂ ಇದರ ಪಾಲು ಸಿಗಲೇಬೇಕು. ತಾಯಿಗೆ ಮಕ್ಕಳು ಮತ್ತೆ ಸಿಕ್ಕಿರುವ ಆನಂದದಲ್ಲೇ ದಿನ ಕಳೆಯುತ್ತಿರುವೆ’.

‘ಎಲ್ಲೆಲ್ಲೂ ಸಾವು ನೋವಿನ ಸುದ್ದಿಗಳೇ ಕೇಳಿ ಬರುತ್ತಿರುವ ದಿನಗಳಲ್ಲಿ ‘ಪ್ರಜಾವಾಣಿ’ ಆರಂಭಿಸಿರುವ ಕೋವಿಡ್‌-ಗೆದ್ದವರ ಕಥೆ ಸಮಾಜಕ್ಕೆ ಮಾದರಿಯಾಗಿದೆ. ಕೋವಿಡ್ ಕಾಲದ ಅನುಭವಗಳಿಗೆ ವೇದಿಕೆ ಕಲ್ಪಿಸಿದೆ’.

# ‘ಮನಸ್ಸಿಗೇ ಹಚ್ಚಿಕೊಳ್ಳಲಿಲ್ಲ’

**ಕೋವಿಡ್ ಗೆದ್ದವರ ಕಥೆ**

**ನಮ್ಮ ಮನೆಯ** ನೆಲ ಮಹಡಿಯಲ್ಲಿದ್ದ ವೃದ್ಧ ದಂಪತಿಗೆ ಐದಾರು ದಿನಗಳು ತೀವ್ರ ಜ್ವರ ಬಂದು ಕೊಲಂಬಿಯಾ ಏಷ್ಯಾ ಸೇರಿದಾಗಲೇ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿತ್ತು. ಆಗಿನ್ನೂ ಎರಡನೇ ಅಲೆ ಆರಂಭವಾಗಿರಲಿಲ್ಲ. ವೃದ್ಧ ದಂಪತಿಯ ಮಗಳು ‘ನೀವು ಎಲ್ಲ ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಿ’ ಎಂದು ಮಧ್ಯರಾತ್ರಿ ತಿಳಿಸಿದರು.

ಮಾರನೇ ದಿನವೇ ರಾಜಮಹಲ್ ಗುಟ್ಟಹಳ್ಳಿಯ ಬಿಬಿಎಂಪಿ ಆಸ್ಪತ್ರೆಗೆ ಹೋಗಿ ‘ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು’ ಎಂದು ಹೇಳಿದೆವು. ನಿಮ್ಮಲ್ಲಿ ಯಾರಿಗಾದರೂ ಜ್ವರ ಬಂದಿತ್ತೇ ಎಂದು ಕೇಳಿದರು. ಅಪ್ಪ– ಅಮ್ಮನಿಗೆ ಜ್ವರ ಬಂದಿರಲಿಲ್ಲ. ‘ನನಗೆ ಬಂದಿತ್ತು’ ಎಂದೆ. ಮೂವರಿಗೂ ಆಂಟಿಜನ್ ಪರೀಕ್ಷೆ ಮಾಡಿದರು. ನನಗೆ ಮಾತ್ರ ಪಾಸಿಟಿವ್ ಬಂದಿತ್ತು . ಆರ್‌ಟಿಪಿಸಿಆರ್‌ಗಾಗಿ ಗಂಟಲ ದ್ರವ ಪಡೆದು ಲ್ಯಾಬ್‌ಗೆ ಕಳಿಸಿದರು. ಎರಡು ದಿನಗಳ ಬಳಿಕ ಪಾಸಿಟಿವ್ ಎಂಬುದು ಮತ್ತೊಮ್ಮೆ ಖಚಿತವಾಯಿತು.

ಅಲ್ಲಿಂದ ಹೊರಡುವ ಮುನ್ನ ಕೈಗೊಂದು ಮಾತ್ರೆಗಳ ಕಿಟ್ ಕೊಟ್ಟು, ಏನೆಲ್ಲ ಮಾಡಬೇಕು ಎಂದು ಬಿಬಿಎಂಪಿ ವೈದ್ಯರು ಹೇಳಿದರು. ಆಸ್ಪತ್ರೆಗೆ ಸೇರುತ್ತೀರಾ ಎಂದರು. ಬೇಡ ಎಂದೆವು. ಗಾಬರಿ ಆಗಬೇಡಿ, ಏನೇ ಇದ್ದರೂ ಕಾಲ್ ಮಾಡಿ ಎಂದು ವೈದ್ಯ ಡಾ.ರಾಹಿಲ್ ಎಂಬುವರು ತಮ್ಮ ಸಂಖ್ಯೆ ನೀಡಿದರು. ನರ್ಸ್‌ಗಳು ಕೂಡ ‘ಗಾಬರಿ ಆಗಬೇಕಿಲ್ಲ, ಧೈರ್ಯದಿಂದ ಇರಿ’ ಎಂದು ಹೇಳಿ ಕಳಿಸಿದರು. ಎರಡೇ ದಿನಗಳಲ್ಲಿ ಕೆಳ ಮನೆಯ ವೃದ್ಧ ದಂಪತಿಯಲ್ಲಿ ತಾತ ಆಸ್ಪತ್ರೆಯಲ್ಲೇ ತೀರಿಕೊಂಡ ವಿಚಾರ ಗೊತ್ತಾಯಿತು. ಅವರ ಪತ್ನಿ ಮನೆಯಲ್ಲಿ ಐಸೋಲೇಷನ್ ಆಗಿದ್ದರು. ಮನೆಯಲ್ಲಿ ನನ್ನ ಅಪ್ಪ, ಅಮ್ಮನಿಗೆ ಆತಂಕ. ಆದರೆ, ನನಗೆ ಕೊರೊನಾ ಪಾಸಿಟಿವ್ ಆಗಿದೆ ಎಂಬುದೇ ಮನಸ್ಸಿಗೆ ಹೋಗಲಿಲ್ಲ. ಪ್ರತಿ ನಿತ್ಯ ಬೆಳಗ್ಗಿನಿಂದ ಸಂಜೆವರೆಗೆ ಆನ್‌ಲೈನ್ ಕ್ಲಾಸ್‌ನಲ್ಲಿ ಕೂರುತ್ತಿದ್ದೆ, ಸಂಜೆ ಮೇಲೆ ವಿದೇಶಿ ಭಾಷೆಯ ಕಲಿಕೆಯ ತರಗತಿಗೆ ಹಾಜರಾಗುತ್ತಿದ್ದೆ.

ಮೊದಲ ಎರಡು ದಿನ ಬಿಬಿಎಂಪಿ ಕಡೆಯಿಂದ ಕರೆ ಬಂದು ಆರೋಗ್ಯ ವಿಚಾರಿಸುತ್ತಿದ್ದರು. ಹೊತ್ತು ಹೊತ್ತಿಗೆ ವೈದ್ಯರು ಹೇಳಿದಂತೆ ಗುಳಿಗೆ ನುಂಗುತ್ತಿದ್ದೆ. ಹಬೆ ತೆಗೆದುಕೊಳ್ಳುವುದು, ಬಿಸಿ ಉಪ್ಪು ನೀರನ್ನು ಗಂಟಲಿಗೆ ಬಿಟ್ಟುಕೊಂಡು ಗಾರ್ಗಲ್ ಮಾಡಿಕೊಳ್ಳುತ್ತಿದ್ದೆ. ಬಿಸಿ ಬಿಸಿ ನೀರು ಕುಡಿಯುತ್ತಿದ್ದೆ. ಇದಾದ ಎರಡು ದಿನಗಳಲ್ಲಿ ಬಾಯಿ ರುಚಿ ಮತ್ತು ಆಘ್ರಾಣ ಶಕ್ತಿ ಹೋಯಿತು. ಉಸಿರು ಕಟ್ಟಿದಂತೆ ಆಗುತ್ತಿತ್ತು. ಆ ವೇಳೆಗೆ ಪಲ್ಸ್ ಆಕ್ಸಿ ಮೀಟರ್ ತರಿಸಿಕೊಂಡಿದ್ದರಿಂದ ಅದರ ಮೂಲಕ ಆಮ್ಲಜನಕದ ಪ್ರಮಾಣ ನೋಡಿಕೊಳ್ಳುತ್ತಿದ್ದೆ. ದೀರ್ಘ ಉಸಿರಾಟ ಮಾಡುತ್ತಿದ್ದೆ. ತಾಜಾ ಹಣ್ಣುಗಳನ್ನು ಸೇವಿಸುವಂತೆ ಮತ್ತು ಹೆಚ್ಚು ನೀರು ಕುಡಿಯುವಂತೆ ಹೇಳಿದ್ದರು. ಭೇದಿಯೂ ಆಗುತ್ತಿತ್ತು. ಆಗ ವೈದ್ಯರಿಗೆ ವಾಟ್ಸ್ ಆ್ಯಪ್‌ನಲ್ಲಿ ಸಂದೇಶ ಕಳಿಸಿದಾಗ, ಅದಕ್ಕೆ ಏನು ಮಾಡಬೇಕು ಎಂದು ಹೇಳುತ್ತಿದ್ದರು. ಈ ಮಧ್ಯೆ ಕೆಮ್ಮು ಕೂಡ ಹೆಚ್ಚಾಗಿತ್ತು. ಆಯುರ್ವೇದಿಕ್ ಸಿರಪ್ ತೆಗೆದುಕೊಳ್ಳುವಂತೆ ವೈದ್ಯರು ಸಲಹೆ ನೀಡಿದರು.

ಇಷ್ಟೆಲ್ಲ ಆದರೂ ನನಗೆ ಕೋವಿಡ್ ಆಗಿದೆ ಎಂಬುದು ಮನಸ್ಸಿಗೆ ಬರಲಿಲ್ಲ. ಐಸೋಲೇಷನ್ ಅವಧಿ ಮುಗಿಯುವುದರೊಳಗೇ ಗುಣಮುಖಳಾಗಿದ್ದೆ. ತರಗತಿಗಳಲ್ಲದೇ, ಮನಸ್ಸಿಗೆ ಉಲ್ಲಾಸ ನೀಡುವ ಸಂಗೀತ ಮತ್ತು ಹಾಸ್ಯದ ಕಾರ್ಯಕ್ರಮಗಳನ್ನು ಮೊಬೈಲ್‌ನಲ್ಲಿ ನೋಡುತ್ತಿದ್ದೆ. ಟಿ.ವಿಗಳಲ್ಲಿ ಬರುತ್ತಿದ್ದ ಕೋವಿಡ್ ಸುದ್ದಿಗಳನ್ನು ನೋಡುವ ಗೋಜಿಗೆ ಹೋಗಲಿಲ್ಲ. ಆದರೆ, ಕೊರೊನಾ ವೈರಸ್ ಕುರಿತ ಅಧ್ಯಯನ ವರದಿಗಳನ್ನು ಓದಿಕೊಳ್ಳುತ್ತಿದ್ದೆ. ಜೀವವಿಜ್ಞಾನದ ವಿದ್ಯಾರ್ಥಿಯಾಗಿದ್ದರಿಂದ ಆ ಬಗ್ಗೆ ಕುತೂಹಲವೂ ಇತ್ತು. ಸಕಾಲದಲ್ಲಿ ಚಿಕಿತ್ಸೆ ಪಡೆದು, ಶಿಸ್ತುಬದ್ಧ ಜೀವನ ಶೈಲಿ ಇರಬೇಕು. ಯಾವುದೇ ಕಾರಣಕ್ಕೂ ಭೀತಿಗೊಳಗಾಗಬಾರದು.

**ಅನಘಾ, ವಿದ್ಯಾರ್ಥಿನಿ**

# ‘ವೈದ್ಯಕೀಯ ಜ್ಞಾನ ಆತಂಕವನ್ನು ದೂರಮಾಡಿತು’


ಡಾ ಸುಜಾತಾ ರಾಥೋಡ್

ಬೆಂಗಳೂರು: ‘ನಾನು ಮತ್ತು ಪತಿ ಇಬ್ಬರೂ ಕೋವಿಡ್ ಸೋಂಕಿತರಾಗಿದ್ದೆವು. ಮನೆಯಲ್ಲಿ ವಯಸ್ಸಾದ ಅತ್ತೆಯಿದ್ದರು. ಅವರಿಗೆ ರಕ್ಷಣೆ ಒದಗಿಸುವ ಜತೆಗೆ ನಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗಿತ್ತು. ಹೀಗಾಗಿ, ವೃತ್ತಿಯಲ್ಲಿ ವೈದ್ಯನಾಗಿದ್ದ ನನ್ನಲ್ಲಿಯೂ ಸ್ವಲ್ಪ ಆತಂಕವಿತ್ತು. ಉತ್ತಮವಾದ ಮನೆ ಆರೈಕೆ ಹಾಗೂ ವೈದ್ಯಕೀಯ ಜ್ಞಾನವು ಕಾಯಿಲೆಯನ್ನು ಸುಲಭವಾಗಿ ಜಯಿಸಲು ಸಹಕಾರಿಯಾಯಿತು.’

‘ನಮ್ಮ ಆಸ್ಪತ್ರೆಯಲ್ಲಿ ಕೆಲವರು ಸೋಂಕಿತರಾಗಿದ್ದರು. ಅಗತ್ಯ ಸುರಕ್ಷಾ ಸಾಧನಗಳನ್ನು ಧರಿಸಿ ಕಾರ್ಯನಿರ್ವಹಿಸಲಾಗುತ್ತಿತ್ತು. ಅಷ್ಟಾಗಿಯೂ ಏ.28ರಂದು ನನಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿತು. ಅದಾಗಲೇ ಪತಿ ಕೂಡ ಕೋವಿಡ್ ಪೀಡಿತರಾಗಿ ಮನೆ ಆರೈಕೆಯಲ್ಲಿದ್ದರು. ಅವರಿಗೆ ಹೃದಯ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಅತ್ತೆಗೆ ಮಧುಮೇಹವಿದೆ. ಇದು ನನ್ನ ಗಾಬರಿಗೆ ಕಾರಣವಾಗಿತ್ತು. ಸೋಂಕಿನ ಲಕ್ಷಣಗಳು ಅಷ್ಟಾಗಿ ಇರದ ಕಾರಣ ಮನೆ ಆರೈಕೆಗೆ ಒಳಗಾದೆ. ಶ್ವಾಸಕೋಶ ತಜ್ಞ ವೈದ್ಯರು ಸ್ನೇಹಿತರಿದ್ದರು. ಏನಾದರೂ ಸಮಸ್ಯೆಯಾದರೆ ಅವರ ಜತೆಗೆ ಸಮಾಲೋಚನೆ ನಡೆಸಬಹುದಾಗಿತ್ತು. ಇದರಿಂದಾಗಿ ಕಾಯಿಲೆ ಜಯಿಸುವ ಆತ್ಮವಿಶ್ವಾಸವಿತ್ತು.’

‘ಝಿಂಕ್ ಸೇರಿದಂತೆ ಕೊರೊನಾ ಸೋಂಕಿತರಿಗೆ ನೀಡುವ ಮಾತ್ರೆಗಳನ್ನು ಸೇವಿಸಿದೆ. ಪ್ರಾಣಾಯಾಮ ಹಾಗೂ ವ್ಯಾಯಾಮಗಳನ್ನು ಮಾಡಿದೆ. ದೂರವಾಣಿ ಮೂಲಕವೇ ಆಸ್ಪತ್ರೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ, ನಿರ್ದೇಶನಗಳನ್ನು ನೀಡಿದೆ. ಈಗ ನಾನು ಮತ್ತು ಪತಿ ಚೇತರಿಸಿಕೊಂಡಿದ್ದೇವೆ. ಸ್ಟೀರಾಯ್ಡ್ ಸೇವಿಸದೆಯೇ, ಆಮ್ಲಜನಕ ಪೂರಣ ವ್ಯವಸ್ಥೆಯ ನೆರವು ಪಡೆಯದೆಯೇ ಗುಣಮುಖರಾದೆವು ಎಂಬ ಸಮಾಧಾನವಿದೆ.’

‘ಈ ಕಾಯಿಲೆಯ ಬಗ್ಗೆ ಭಯ ಪಡುವ ಬದಲು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಭಯಪಟ್ಟಲ್ಲಿ ಖಿನ್ನತೆಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಸಾಮಾಜಿಕ ಜಾಲತಾಣದಲ್ಲಿ ಬರುವ ತಪ್ಪು ಸಂದೇಶಗಳಿಗೆ ಕಿವಿಗೊಡಬಾರದು. ಕೋವಿಡ್ ಬಗ್ಗೆ ಇರುವ ವೈದ್ಯಕೀಯ ದಾಖಲೆಗಳನ್ನು ಅನುಸರಿಸಿ ವೈದ್ಯರು ಚಿಕಿತ್ಸೆ ಒದಗಿಸುತ್ತಿದ್ದಾರೆ. ಲಸಿಕೆಯನ್ನು ಪಡೆದುಕೊಂಡಲ್ಲಿ ನಮಗೆ ರಕ್ಷಣೆ ಸಿಗಲಿದೆ. ಸೋಂಕಿತರಾದ ಎಲ್ಲರೂ ಆಸ್ಪತ್ರೆಗೆ ದಾಖಲಾಗಬೇಕಿಲ್ಲ. ಆರು ನಿಮಿಷ ನಡೆದಾಡಿದ ಬಳಿಕ ರಕ್ತದಲ್ಲಿನ ಆಮ್ಲಜನಕ ಪ್ರಮಾಣ 92 ಅಥವಾ ಅದಕ್ಕಿಂತ ಕಡಿಮೆಗೆ ಬಂದಲ್ಲಿ ವೈದ್ಯಕೀಯ ನಿಗಾದ ಅಗತ್ಯವಿದೆ.’

‘ಮನೆಯಲ್ಲೇ ಆರೈಕೆಗೆ ಒಳಗಾದಾಗ ಬಿಸಿ ನೀರಿನಲ್ಲಿ ಬಟ್ಟೆ ತೊಳೆದುಕೊಳ್ಳಬೇಕು. ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ವೈದ್ಯರ ಜತೆಗೆ ಸಂಪರ್ಕವನ್ನು ಇಟ್ಟುಕೊಂಡಿದ್ದು, ಸಲಹೆ ಪಡೆಯಬೇಕು. ಅವರು ಸೂಚಿಸುವ ಮಾತ್ರೆಗಳನ್ನು ಸೇವಿಸಬೇಕು. ಹಬೆ ತೆಗೆದುಕೊಳ್ಳುವಿಕೆ, ಬಿಸಿನೀರು ಕುಡಿಯುವುದು, ಪೌಷ್ಟಿಕ ಆಹಾರ ಸೇವನೆ, ಪ್ರಾಣಾಯಾಮದಂತಹ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು.’

**ಡಾ. ಸುಜಾತಾ ರಾಥೋಡ್**
ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ

# ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿಯ ಉತ್ತರಹಳ್ಳಿ ಮುಖ್ಯ ರಸ್ತೆಯಲ್ಲಿನ ಬಿ.ಜಿ.ಎಸ್. ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ಆಸ್ಪತ್ರೆಯಲ್ಲಿ 210 ಆಮ್ಲಜನಕ ಸಹಿತ ಹಾಸಿಗೆ ಸೌಲಭ್ಯದ ಕೋವಿಡ್ ಆರೈಕೆ ಕೇಂದ್ರ ಸೋಮವಾರದಿಂದ ಆರಂಭಗೊಂಡಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೋವಿಡ್ ಆರೈಕೆ ಕೇಂದ್ರಕ್ಕೆ ಚಾಲನೆ ನೀಡಿದರು. ‘ಕ್ಲಿಷ್ಟಕರ ಸಂದರ್ಭದಲ್ಲಿ ಬಿಜಿಎಸ್ ಆಸ್ಪತ್ರೆಯ ಆಡಳಿತ ಮಂಡಳಿ ಜನರ ನೆರವಿಗೆ ಬಂದಿರುವುದು ಶ್ಲಾಘನೀಯ. ಇದರ ಉಪಯೋಗವನ್ನು ನಗರದ ನಾಗರಿಕರು ಪಡೆದುಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥಸ್ವಾಮೀಜಿ ಮಾತನಾಡಿ, ‘ಕೋವಿಡ್ ಸೋಂಕಿತರ ಆರೈಕೆಗೆ ಆಸ್ಪತ್ರೆಯ ಶೇ 75ರಷ್ಟು ಹಾಸಿಗೆ ಮೀಸಲಿಟ್ಟಿದ್ದೇವೆ. ಎಲ್ಲೆಡೆ ಆಮ್ಲಜನಕ ಕೊರತೆ ಇರುವ ಕಾರಣ, 13 ಕಿಲೋ ಲೀಟರ್ ಸಾಮರ್ಥ್ಯದ ಆಮ್ಲಜನಕ ಟ್ಯಾಂಕ್ ಅಳವಡಿಸಲಾಗಿದೆ. ಕೋವಿಡ್ ನಿಯಮ ಸರಿಯಾಗಿ ಪಾಲಿಸದ ಕಾರಣ ಸೋಂಕು ಹೆಚ್ಚಾಗಿದೆ. ಮುಂದಾದರೂ ಜನರು ಮಾಸ್ಕ್ ಧರಿಸುವ ಮತ್ತು ಅಂತರ ಕಾಪಾಡುವ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದು ತಿಳಿಸಿದರು.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ‘ಕೋವಿಡ್ ಆರೈಕೆ ಕೇಂದ್ರ ತೆರೆಯಬೇಕು ಎಂಬ ನಮ್ಮ ಮನವಿಗೆ ಸ್ವಾಮೀಜಿ ಸ್ಪಂದಿಸಿದ್ದಾರೆ. ಅವರಿಗೆ ನಾನು ಅಭಾರಿ’ ಎಂದರು.

ಯಶವಂತಪುರ ಕ್ಷೇತ್ರದಲ್ಲಿ ಸುಸಜ್ಜಿತ ಹಾಗೂ ಶಾಶ್ವತ ಕೋವಿಡ್ ಆರೈಕೆ ಕೇಂದ್ರ ತೆರೆಯಲು ಪ್ರಯತ್ನ ನಡೆಯುತ್ತಿದೆ ಎಂದೂ ಅವರು ತಿಳಿಸಿದರು.

ಮೈಸೂರು ಹಸಿರು ಪ್ರತಿಷ್ಠಾನದಿಂದ ಮಠಕ್ಕೆ 2 ಸಾವಿರ ಸಸಿಗಳನ್ನು ಇದೇ ವೇಳೆ ನೀಡಲಾಯಿತು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ರಾಜೀವ್ ಅವರು ಸಸಿಗಳನ್ನು ಮಠಕ್ಕೆ ಹಸ್ತಾಂತರಿಸಿದರು.


ಕೋವಿಡ್ ಆರೈಕೆ ಕೇಂದ್ರದ ಬಗ್ಗೆ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರಿಗೆ ನಿರ್ಮಲಾನಂದನಾಥ ಸ್ವಾಮೀಜಿ ವಿವರಿಸಿದರು. ಸಚಿವ ಎಸ್‌.ಟಿ. ಸೋಮಶೇಖರ್ ಇದ್ದರು –ಪ್ರಜಾವಾಣಿ ಚಿತ್ರ

**ಅಂಕಿ-ಅಂಶಗಳು**

| 210 | 23 | 43 | 30 | 100 |
|---|---|---|---|---|
| ಆಸ್ಪತ್ರೆಯಲ್ಲಿರುವ ಆಮ್ಲಜನಕ ಸಹಿತ ಹಾಸಿಗೆ | ವೆಂಟಿಲೇಟರ್ ಸಹಿತ ಹಾಸಿಗೆ | ಐಸಿಯು ಹಾಸಿಗೆ | ಎಚ್‌ಡಿಯು ಹಾಸಿಗೆ | ಸಾಮಾನ್ಯ ಹಾಸಿಗೆ |

## ಟ್ರಯಾಜ್ ಕೇಂದ್ರಗಳಲ್ಲೂ ಆಮ್ಲಜನಕ ಸಾಂದ್ರಕ

ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಆರಂಭಿಸುತ್ತಿರುವ ಸರದಿ ನಿರ್ಧಾರ (ಟ್ರಯಾಜ್) ಕೇಂದ್ರಗಳಲ್ಲೂ ಆಮ್ಲಜನಕ ಸಾಂದ್ರಕಗಳನ್ನು ಬಳಸಿ ತುರ್ತು ಅಗತ್ಯ ಇರುವವರಿಗೆ ಚಿಕಿತ್ಸೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಕೆಂಗೇರಿ ಉಪ ನಗರದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆರಂಭಿಸಿರುವ ಟ್ರಯಾಜ್ ಕೇಂದ್ರವನ್ನು ಸೋಮವಾರ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ‘ಟ್ರಯಾಜ್ ಕೇಂದ್ರಗಳಿಗೆ ಬರುವ ಕೋವಿಡ್ ರೋಗಿಗಳ ಆರೋಗ್ಯದ ಸ್ಥಿತಿಯನ್ನು ಅಲ್ಲಿರುವ ವೈದ್ಯರು ಮೌಲ್ಯಮಾಪನ ನಡೆಸುತ್ತಾರೆ. ತುರ್ತು ಅಗತ್ಯ ಇರುವವರಿಗೆ ಅಲ್ಲಿಯೇ ಆಮ್ಲಜನಕದ ಪೂರೈಕೆ ಮಾಡಲಾಗುವುದು’ ಎಂದರು.

ಈ ಕೇಂದ್ರಗಳಲ್ಲಿ ದಿನದ 24 ಗಂಟೆಯೂ ವೈದ್ಯರು ಲಭ್ಯರಿರುತ್ತಾರೆ. ಅವರು ತಜ್ಞ ವೈದ್ಯರ ಜತೆ ಸಂಪರ್ಕದಲ್ಲಿದ್ದು, ಅಗತ್ಯ ಸಲಹೆಗಳನ್ನು ಪಡೆಯುತ್ತಿರುತ್ತಾರೆ. ವೈದ್ಯಕೀಯ ಉಪಕರಣಗಳು ಮತ್ತು ಔಷಧಿಗಳನ್ನೂ ಟ್ರಯಾಜ್ ಕೇಂದ್ರಗಳಿಗೆ ಪೂರೈಸಲಾಗುವುದು ಎಂದು ಹೇಳಿದರು.

ಟ್ರಯಾಜ್ ಕೇಂದ್ರಗಳಿಗೆ ಹೊಂದಿಕೊಂಡಂತೆ ಆಂಬುಲೆನ್ಸ್ ಇರಿಸಲಾಗುವುದು. ಅಲ್ಲಿಗೆ ಬರುವ ರೋಗಿಗಳನ್ನು ಪರೀಕ್ಷಿಸುವ ವೈದ್ಯರು, ಆಸ್ಪತ್ರೆಗೆ ದಾಖಲಿಸುವುದು, ಕೋವಿಡ್ ಆರೈಕೆ ಕೇಂದ್ರಕ್ಕೆ ಕಳಿಸುವುದು ಅಥವಾ ಮನೆಯಲ್ಲೇ ಪ್ರತ್ಯೇಕವಾಸದಲ್ಲಿ ಇರಿಸುವ ಕುರಿತು ತೀರ್ಮಾನಿಸುತ್ತಾರೆ. ಬಳಿಕ ಅಲ್ಲಿಂದಲೇ ಆಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಗುವುದು. ಮನೆಯಲ್ಲೇ ಪ್ರತ್ಯೇಕವಾಸದಲ್ಲಿ ಇರುವವರಿಗೆ ಟ್ರಯಾಜ್ ಕೇಂದ್ರಗಳ ಮೂಲಕವೇ ಔಷಧಿ ತಲುಪಿಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

## ನಗರದಲ್ಲಿ ಟ್ರಯಾಜ್ ಕೇಂದ್ರ

ರಾಜ್ಯದ ಎಲ್ಲ ನಗರ ಪ್ರದೇಶಗಳಲ್ಲೂ ಟ್ರಯಾಜ್ ಕೇಂದ್ರಗಳನ್ನು ಆರಂಭಿಸಲು ಆರೋಗ್ಯ ಇಲಾಖೆ ಚಿಂತನೆ ನಡೆಸಿದೆ. ಆಸ್ಪತ್ರೆಗಳ ಮೇಲಿನ ಒತ್ತಡ ತಗ್ಗಿಸಲು ಇಲಾಖೆ ಈ ಕ್ರಮಕ್ಕೆ ಮುಂದಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.


ಆಮ್ಲಜನಕ ವ್ಯವಸ್ಥೆಯ ಬಸ್ ಅನ್ನು ಶಿವಯೋಗಿ ಸಿ. ಕಳಸದ ಪರಿಶೀಲನೆ ನಡೆಸಿದರು. ನಿಗಮದ ಅಧಿಕಾರಿಗಳು ಇದ್ದರು

# ಆಮ್ಲಜನಕ ಬಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೌಂಡೇಷನ್ ಇಂಡಿಯಾ ಸಹಯೋಗದಲ್ಲಿ ಸಂಚಾರಿ ಆಮ್ಲಜನಕ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಸಿದ್ಧಪಡಿಸಿದ್ದು, ಆನೇಕಲ್ ಮತ್ತು ಚಿಕ್ಕಬಳ್ಳಾಪುರಕ್ಕೆ ಸೋಮವಾರ ಅವುಗಳನ್ನು ಹಸ್ತಾಂತರಿಸಿತು.

ಒಂದು ಬಸ್‌ನಲ್ಲಿ 4 ಆಮ್ಲಜನಕ ಸಿಲಿಂಡರ್ ಮತ್ತು 9 ಆಸನಗಳನ್ನು ಅಳವಡಿಸಲಾಗಿದೆ. ಆಂಬುಲೆನ್ಸ್‌ನಲ್ಲಿ ಆರು ಆಸನ, 4 ಆಮ್ಲಜನಕ ಸಿಲಿಂಡರ್ ಮತ್ತು ಎರಡು ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಒಂದು ಬಾರಿಗೆ ಗರಿಷ್ಠ 8 ಮಂದಿ ಈ ಸೌಲಭ್ಯ ಪಡೆಯಬಹುದಾಗಿದೆ.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ.ಕಳಸದ ಅವರು ಬಸ್‌ಗಳಿಗೆ ಚಾಲನೆ ನೀಡಿದರು. ಫೌಂಡೇಷನ್ ಇಂಡಿಯಾ ಕಾರ್ಯದರ್ಶಿ ಸಂಜಯ್ ಗುಪ್ತ ಇದ್ದರು.

**ಕೋವಿಡ್ ಅಂಕಿ–ಅಂಶ**
ಆಧಾರ: ಕೋವಿಡ್‌19 ಇಂಡಿಯಾ, ಒಆರ್‌ಜಿ

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 16.40 ಕೋಟಿ ▲ | 2.52 ಕೋಟಿ ▲ |
| ಸಕ್ರಿಯ ಪ್ರಕರಣ | 1.79 ಕೋಟಿ ▼ | 33.51 ಲಕ್ಷ ▼ |
| ಗುಣಮುಖ | 14.27 ಕೋಟಿ ▲ | 2.15 ಕೋಟಿ ▲ |
| ಸಾವು | 33.99 ಲಕ್ಷ ▲ | 2.78 ಲಕ್ಷ ▲ |

**ದಿನದ ಏರಿಕೆ**

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 5.42 ಲಕ್ಷ ▼ | 2,60,080 ▲ |
| ಗುಣಮುಖ | 7.560 ಲಕ್ಷ ▼ | 4,16,580 ▲ |
| ಸಾವು | 9,921 ▼ | 4,270 ▲ |

**ಎಲ್ಲಿ ಹೆಚ್ಚು ಪ್ರಕರಣ** (ಹಿಂದಿನ 24 ಗಂಟೆಗಳಲ್ಲಿ)
36,862 ▼ ಬ್ರೆಜಿಲ್; 17,834 ▼ ಅಮೆರಿಕ; 13,948 ▼ ಫ್ರಾನ್ಸ್

**ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು** (ಲಕ್ಷಗಳಲ್ಲಿ)
59.79 ▼ ಅಮೆರಿಕ; 10.94 ▲ ಬ್ರೆಜಿಲ್; 6.53 ▼ ಫ್ರಾನ್ಸ್
(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

**ಎಲ್ಲಿ ಹೆಚ್ಚು ಸಾವು**
82,486 ▲ ಮಹಾರಾಷ್ಟ್ರ; 18,005 ▲ ತಮಿಳುನಾಡು; 21,846 ▲ ದೆಹಲಿ

**ಎಲ್ಲಿ ಹೆಚ್ಚು ಪ್ರಕರಣ** (ಲಕ್ಷಗಳಲ್ಲಿ)
54.05 ಮಹಾರಾಷ್ಟ್ರ ▲; 21.69 ಕೇರಳ ▲; 16.31 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

# ಕೋವಿಡ್–19: ದಕ್ಷಿಣ ರಾಜ್ಯಗಳಲ್ಲೇ ಹೆಚ್ಚು

ಪ್ರಜಾವಾಣಿ ವಾರ್ತೆ



ನವದೆಹಲಿ: ಕಳೆದ ಎರಡು ವಾರಗಳಿಂದ ಕರ್ನಾಟಕ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲೇ ಅತಿ ಹೆಚ್ಚು ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ.

ಮೇ ತಿಂಗಳ ಆರಂಭದಲ್ಲಿ ಪ್ರತಿ ದಿನ ಪತ್ತೆಯಾಗುತ್ತಿದ್ದ ಕೋವಿಡ್–19 ಹೊಸ ಪ್ರಕರಣಗಳಲ್ಲಿ ಶೇಕಡ 30ರಷ್ಟು ದಕ್ಷಿಣ ರಾಜ್ಯಗಳಲ್ಲಿ ದೃಢಪಟ್ಟಿದ್ದವು. ಆದರೆ, ಕಳೆದ ಮೂರು ದಿನಗಳಿಂದ ಇದು ಶೇಕಡ 40ಕ್ಕೆ ಏರಿಕೆಯಾಗಿದೆ.

ಸೋಮವಾರ, ಶೇಕಡ 42ಕ್ಕೂ ಹೆಚ್ಚು ಪ್ರಕರಣಗಳು ಈ ನಾಲ್ಕು ರಾಜ್ಯಗಳಲ್ಲೇ ಪತ್ತೆಯಾಗಿವೆ. ತಮಿಳುನಾಡಿನಲ್ಲಿ ಪ್ರತಿ ದಿನ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ಪತ್ತೆಯಾಗುತ್ತಿರುವುದು ಆತಂಕ ಮೂಡಿಸಿದೆ. ತಮಿಳುನಾಡಿನಲ್ಲಿ ಸೋಮವಾರ 33 ಸಾವಿರಕ್ಕೂ ಹೆಚ್ಚು ಕೋವಿಡ್–19 ಪ್ರಕರಣಗಳು ಪತ್ತೆಯಾಗಿವೆ. ಮಹಾರಾಷ್ಟ್ರದಲ್ಲಿ 34 ಸಾವಿರ ಪ್ರಕರಣಗಳು ದೃಢಪಟ್ಟಿವೆ.

ನಾಲ್ಕು ದಕ್ಷಿಣ ರಾಜ್ಯಗಳ ಸುಮಾರು 100 ಜಿಲ್ಲೆಗಳಲ್ಲಿ ಶೇಕಡ 10ಕ್ಕೂ ಹೆಚ್ಚು ಪಾಸಿಟಿವಿಟಿ ದರ ವರದಿಯಾಗಿದೆ. ಇವುಗಳ ಪೈಕಿ ಎಂಟು ಜಿಲ್ಲೆಗಳಲ್ಲಿ ಶೇಕಡ 40ಕ್ಕೂ ಹೆಚ್ಚು ಪಾಸಿಟಿವಿಟಿ ದರ ವರದಿಯಾಗಿದೆ. ಇವುಗಳಲ್ಲಿ ಕರ್ನಾಟಕದ ಬಳ್ಳಾರಿ (ಶೇಕಡ 47.2), ಉತ್ತರ ಕನ್ನಡ (ಶೇಕಡ 46.1), ಮೈಸೂರು (ಶೇಕಡ 44.7), ಹಾಸನ (ಶೇಕಡ 42.6) ಮತ್ತು ಶಿವಮೊಗ್ಗ (ಶೇಕಡ 42.1) ಸೇರಿವೆ.

ಬಹುತೇಕ ರಾಜ್ಯಗಳಲ್ಲಿ ಪರೀಕ್ಷೆ ನಡೆಸುವುದನ್ನು ಕಡಿಮೆಗೊಳಿಸುತ್ತಿರುವುದಕ್ಕೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

‘ದಕ್ಷಿಣ ರಾಜ್ಯಗಳಲ್ಲಿ ಹೆಚ್ಚುತ್ತಿರುವ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತಡೆಯಬೇಕು. ಇದಕ್ಕಾಗಿ ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಬೇಕು. ಉತ್ತರ ಪ್ರದೇಶ ಸೇರಿದಂತೆ ಉತ್ತರ ಭಾರತದಲ್ಲಿ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಆಗ ಮಾತ್ರ ನಿಜವಾದ ಪರಿಸ್ಥಿತಿ ಗೊತ್ತಾಗುತ್ತದೆ’ ಎಂದು ಸಾರ್ವಜನಿಕ ನೀತಿ ಮತ್ತು ಆರೋಗ್ಯ ವ್ಯವಸ್ಥೆಯ ತಜ್ಞ ಚಂದ್ರಕಾಂತ್ ಲಹರಿಯಾ ಅಭಿಪ್ರಾಯಪಟ್ಟಿದ್ದಾರೆ.

‘ಯಾವ ರಾಜ್ಯವು ಸೋಂಕು ನಿಯಂತ್ರಿಸಿದೆ ಎನ್ನುವುದು ತಿಳಿಯುವುದು ಕಷ್ಟಸಾಧ್ಯ. ಬಹುತೇಕ ರಾಜ್ಯಗಳಲ್ಲಿ ಪರೀಕ್ಷೆ ನಡೆಸುವುದನ್ನು ಕಡಿಮೆಗೊಳಿಸಲಾಗಿದೆ’ ಎಂದು ತಜ್ಞರಾದ ಗಿರಿಧರ್ ಬಾಬು ಹೇಳಿದ್ದಾರೆ.

**ನಗರದ ಕೋವಿಡ್**
**ಕೋವಿಡ್ ಅಂಕಿ–ಅಂಶ**

10,64,396 ▲ ಒಟ್ಟು ಸೋಂಕಿತರು

| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |
|---|---|---|
| 3,64,382 ▲ | 6,90,291 | 9,723 ▲ |

**ದಿನದ ಏರಿಕೆ**

| | |
|---|---|
| ಹೊಸ ಪ್ರಕರಣ | 13,338 ▲ |
| ಗುಣಮುಖ | 10,097 ▼ |
| ಸಾವು | 239 ▲ |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

## ಆಧಾರ್ ಇಲ್ಲದ ಹಿರಿಯರಿಗೂ ಲಸಿಕೆ ಶಶಿಕಲಾ ಭರವಸೆ

ಬೆಂಗಳೂರು: ‘ಆಧಾರ್ ಇಲ್ಲದೇ ಇರುವ ಹಿರಿಯ ನಾಗರಿಕರಿಗೂ ಆದ್ಯತೆ ಮೇಲೆ ಕೋವಿಡ್ ಲಸಿಕೆ ನೀಡುವಂತೆ ಆರೋಗ್ಯ ಸಚಿವರಿಗೆ ಮನವಿ ಮಾಡಲಾಗಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, ‘ಸಮಗ್ರ ಮಕ್ಕಳ ರಕ್ಷಣಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು ಕೊರೊನಾ ಸೇನಾನಿಗಳೆಂದು ಪರಿಗಣಿಸಿ ಲಸಿಕೆ ನೀಡಬೇಕು. ಹೈಕೋರ್ಟ್ ಆದೇಶದಂತೆ ಹಿರಿಯ ನಾಗರಿಕರಿಗೆ ಮತ್ತು ಅಂಗವಿಕಲರಿಗೆ ಆದ್ಯತೆಯಲ್ಲಿ ಲಸಿಕೆ ನೀಡಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದೇನೆ’ ಎಂದರು.

‘ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ಮಕ್ಕಳಿಗಾಗಿ ಹಾಸಿಗೆ ಕಾಯ್ದಿರಿಸುವಂತೆಯೂ ಮನವಿ ಮಾಡಿದ್ದೇನೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಶೀಘ್ರವೇ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ’ ಎಂದೂ ತಿಳಿಸಿದರು.

## ‘ಅಗತ್ಯಗಳಿಗೆ ತಕ್ಷಣ ಸ್ಪಂದಿಸಿ’


ಬೆಂಗಳೂರು: ‘ಕೋವಿಡ್ ನಿಯಂತ್ರಣಕ್ಕಾಗಿ ಯಾವುದೇ ಜಿಲ್ಲೆಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಕೋರಿದರೆ ತಕ್ಷಣ ಸ್ಪಂದಿಸಿ, ಅನುಷ್ಠಾನಗೊಳಿಸಬೇಕು’ ಎಂದು ಉಪಮುಖ್ಯಮಂತ್ರಿಯೂ ಆಗಿರುವ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ ಅವರು ತಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ‘ಕೊರೊನಾ ನಿಯಂತ್ರಣ ಮಾಡುವುದು ಸರ್ಕಾರದ ಮೊದಲ ಕರ್ತವ್ಯ. ಆಯವ್ಯಯದಲ್ಲಿ ಅನುಮೋದಿತ ಯೋಜನೆಗಳ ಅನುಷ್ಠಾನಕ್ಕೆ ಕಾರ್ಯೋನ್ಮುಖರಾಗಬೇಕು. ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸಬೇಕು’ ಎಂದೂ ನಿರ್ದೇಶನ ನೀಡಿದರು.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಕಾರ್ಯದರ್ಶಿ ಕೆ.ಎಸ್. ಕೃಷ್ಣಾರೆಡ್ಡಿ ಸಭೆಯಲ್ಲಿದ್ದರು.

# ‘ಜನಹಿತದ ಲಾಕ್‌ಡೌನ್ ಇರಲಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರ ಲಾಕ್‌ಡೌನ್ ವಿಸ್ತರಿಸುವುದಾದಲ್ಲಿ ಆರ್ಥಿಕ ನೆರವಿನ ಪ್ಯಾಕೇಜ್, ಆಹಾರ ಪೂರೈಕೆ ಸೇರಿದಂತೆ ಜನಹಿತದ ಪರಿಹಾರ ಕ್ರಮಗಳನ್ನೂ ಕೈಗೊಳ್ಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೋಮವಾರ ಆಗ್ರಹಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿದ್ದು, ‘ಜನಹಿತದ ಲಾಕ್‌ಡೌನ್ ಕುರಿತು ಸರ್ವಪಕ್ಷಗಳ ಸಭೆಯಲ್ಲೂ ಸಲಹೆ ನೀಡಿದ್ದೆವು. ನೆರೆಯ ರಾಜ್ಯಗಳಲ್ಲಿ ಲಾಕ್‌ಡೌನ್ ಹೇಗಿದೆ ಎಂದು ಸರ್ಕಾರ ಅವಲೋಕಿಸಬೇಕು. ಜನರು ಮನೆಗಳಿಂದ ಬಾರದಂತೆ ತಡೆಯುವುದೇ ಲಾಕ್‌ಡೌನ್ ಆಗಬಾರದು. ಜನರ ಸಹಭಾಗಿತ್ವದಲ್ಲಿ ವೈರಾಣು ನಿಗ್ರಹಿಸಬೇಕು’ ಎಂದಿದ್ದಾರೆ.

ಜನರಿಗೆ ಪರಿಹಾರ ನೀಡಬೇಕಾಗುತ್ತದೆ ಎಂಬ ಕಾರಣದಿಂದ ಕೇಂದ್ರ ಸರ್ಕಾರ ಲಾಕ್‌ಡೌನ್ ಉಸಾಬರಿಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಿ ಕೈ ತೊಳೆದುಕೊಂಡಿದೆ. ರಾಜ್ಯ ಸರ್ಕಾರವೂ ಜನರನ್ನು ನಿರ್ಲಕ್ಷಿಸಬಾರದು ಎಂದಿದ್ದಾರೆ.

‘ಜನರ ಜೀವ ಉಳಿಸುತ್ತಲೇ, ಜೀವನಕ್ಕೂ ನೆರವಾಗುವುದು ಜನಪರ ಸರ್ಕಾರವೊಂದರ ಕರ್ತವ್ಯ’ ಎಂದು ಅವರು ಒತ್ತಾಯಿಸಿದ್ದಾರೆ.

## 2ಡಿಜಿ ಔಷಧಿ ವಿತರಣೆಗೆ ಜೆಡಿಎಸ್ ಚಿಂತನೆ

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ ‘2ಡಿಜಿ’ ಔಷಧಿಯನ್ನು ಖರೀದಿಸಿ ಕೋವಿಡ್ ರೋಗಿಗಳಿಗೆ ವಿತರಿಸಲು ಜೆಡಿಎಸ್ ಚಿಂತನೆ ನಡೆಸಿದೆ.

ರಾಜ್ಯದಲ್ಲಿನ ಕೋವಿಡ್ ಸ್ಥಿತಿಗತಿ ಮತ್ತು ಪಕ್ಷದ ವತಿಯಿಂದ ಜನರಿಗೆ ನೀಡುತ್ತಿರುವ ನೆರವಿನ ಕುರಿತು ಜೆಡಿಎಸ್ ಶಾಸಕರು ಮತ್ತು ಮುಖಂಡರ ಜತೆ ಸೋಮವಾರ ವರ್ಚ್ಯುವಲ್ ಸಭೆ ನಡೆಸಿದ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಈ ಮಾಹಿತಿ ಹಂಚಿಕೊಂಡರು.

‘ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ 2ಡಿಜಿ ಔಷಧಿ ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ಪರಿಣಾಮಕಾರಿ ಎಂಬ ಫಲಿತಾಂಶ ಬಂದರೆ ಪಕ್ಷದ ವತಿಯಿಂದ ಖರೀದಿಸಿ, ರಾಜ್ಯದಾದ್ಯಂತ ವಿತರಣೆ ಮಾಡಲಾಗುವುದು. ಇದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು’ ಎಂದು ಪಕ್ಷದ ಶಾಸಕರು, ಮುಖಂಡರಿಗೆ ಸೂಚಿಸಿದರು.

ಕೋವಿಡ್ ರೋಗಿಗಳಿಂದ ಆಸ್ಪತ್ರೆಗಳು ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ದೂರುಗಳ ಜತೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪಡಿತರ ವಿತರಣೆಯಲ್ಲಿ ವ್ಯತ್ಯಯ ಉಂಟಾಗಿರುವ ಕುರಿತು ಕುಮಾರಸ್ವಾಮಿ ಅವರಿಗೆ ಮುಖಂಡರು ಮಾಹಿತಿ ನೀಡಿದರು. ಎರಡೂ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದ ಗಮನ ಸೆಳೆಯುವುದಾಗಿ ಅವರು ಭರವಸೆ ನೀಡಿದರು.

# ಕೊರೊನಾ: ಜನಮನ ಅಭಿಯಾನ

ಬೆಂಗಳೂರು: ಜನ ಮಾಧ್ಯಮ ಸಂಸ್ಥೆಯು ಆನ್‌ಲೈನ್‌ನಲ್ಲಿ ‘ಕೊರೊನಾ ಜನಮನ ಅಭಿಯಾನ’ ಹಮ್ಮಿಕೊಂಡಿದೆ.

ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ‘ಸರ್ಕಾರದ ಜವಾಬ್ದಾರಿ ಮತ್ತು ಜನತೆ’ ವಿಷಯ ಕುರಿತು ಅಭಿಯಾನ ನಡೆಯಲಿದ್ದು, ಕೊರೊನಾ ನಿಯಂತ್ರಿಸಲು ಸರ್ಕಾರದ ಜವಾಬ್ದಾರಿ, ಜನಸಾಮಾನ್ಯರಿಗೆ ಇರಬೇಕಾದ ಅರಿವಿನ ಬಗ್ಗೆ ಜನರು ತಮ್ಮ ಅಭಿಪ್ರಾಯಗಳನ್ನು ಜನ ಮಾಧ್ಯಮ ಸಂಸ್ಥೆಗೆ (94483-24727) ಕಳುಹಿಸಬಹುದು’ ಎಂದು ಸಂಸ್ಥೆಯ ಬಿ. ರಾಜಶೇಖರ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಡಿನ ಗಣ್ಯರು ಮತ್ತು ಆಸಕ್ತರ ಅಭಿಪ್ರಾಯವನ್ನು ಪೋಸ್ಟರ್ ವಿನ್ಯಾಸದೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಲಾಗುವುದು. ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ತಮ್ಮ ಅಭಿಪ್ರಾಯದ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಅವರು ಹೇಳಿದ್ದಾರೆ.

# ‘ಕಪ್ಪು ಶಿಲೀಂಧ್ರ: ಅಧಿಕೃತ ರೋಗಗಳ ಪಟ್ಟಿಗೆ ಸೇರಿಸಲಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ರಾಜ್ಯ ಸರ್ಕಾರ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ರೋಗವನ್ನು ಅಧಿಕೃತ ರೋಗಗಳ ಪಟ್ಟಿಯಲ್ಲಿ ಸೇರಿಸಿ ಉಚಿತವಾಗಿ ಚಿಕಿತ್ಸೆ ನೀಡಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಪ್ರತಿವಾರ ಸುಮಾರು 400 ಜನರಿಗೆ ಈ ಸೋಂಕು ಬರಬಹುದು ಎಂದು ಅಂದಾಜಿಸಲಾಗುತ್ತಿದೆ. ಈಗಾಗಲೇ ಕೆಲವರು ಮೃತಪಟ್ಟಿದ್ದು, ಕೆಲವರು ಕಣ್ಣುಗಳನ್ನು ಕಳೆದುಕೊಂಡಿದ್ದಾರೆ. ಇನ್ನಷ್ಟು ಜೀವಗಳು ಈ ರೋಗಕ್ಕೆ ಬಲಿಯಾಗುವ ಮೊದಲು ಸೂಕ್ತ ಚಿಕಿತ್ಸೆ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಮಧುಮೇಹ ಮುಂತಾದ ಸಮಸ್ಯೆ ಇದ್ದು ಕೋವಿಡ್ ಬಂದವರನ್ನು ಕನಿಷ್ಠ ಮೂರು ತಿಂಗಳು ಗಮನಿಸುತ್ತಿರಬೇಕು. ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು, ಹೆಚ್ಚು ಸ್ಟಿರಾಯ್ಡ್ ನೀಡಲಾದವರ ಪಟ್ಟಿಯನ್ನು ತಾಲ್ಲೂಕುವಾರು, ವಾರ್ಡ್‌ವಾರು ಸಿದ್ಧಪಡಿಸಿ ನಿಗಾ ವಹಿಸಬೇಕು. ಈ ಅವಧಿಯಲ್ಲಿ ಸೋಂಕು ಕಾಣಿಸಿಕೊಂಡರೆ ಚಿಕಿತ್ಸೆ ನೀಡಬೇಕು’ ಎಂದಿದ್ದಾರೆ.

‘ಕಪ್ಪು ಶಿಲೀಂಧ್ರ ಪೀಡಿತರಿಗೆ ನೀಡುವ ಆಂಫೊಟೆರೆಸಿನ್ ಚುಚ್ಚುಮದ್ದು ಕಾಳಸಂತೆಯಲ್ಲಿ ₹ 5 ಸಾವಿರದಿಂದ ₹ 7 ಸಾವಿರಕ್ಕೆ ಮಾರಾಟವಾಗುತ್ತಿವೆ ಎಂಬ ದೂರುಗಳಿವೆ. ಕೋವಿಡ್ ಸಂದರ್ಭದಲ್ಲಿ ಸತ್ತವರು ಸಾಯಲಿ ಎಂಬಂತೆ ನಡೆದುಕೊಳ್ಳುತ್ತಿರುವ ಸರ್ಕಾರ, ಕಪ್ಪು ಶಿಲೀಂಧ್ರ ಕುರಿತು ಇನ್ನೂ ಸಮರ್ಪಕ ನಿರ್ಧಾರ ತೆಗೆದುಕೊಂಡಿಲ್ಲ’ ಎಂದು ದೂರಿದ್ದಾರೆ.

### ಕೋವಿಡ್: ಮಾರ್ಗಸೂಚಿ ಆದೇಶ ಹೊರಡಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ

# ಚಿಕಿತ್ಸೆ ನಿರ್ಧಾರಕ್ಕೆ ಮೂರು ಹಂತಗಳ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು (ಟ್ರಯಾಜ್ ಸೆಂಟರ್) ಆರಂಭಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಬಿಬಿಎಂಪಿ ಪ್ರಕಟಿಸಿದೆ.

ಈ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೋಮವಾರ ಆದೇಶ ಹೊರಡಿಸಿದ್ದಾರೆ. ಒಟ್ಟು ಮೂರು ಹಂತಗಳಲ್ಲಿ ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು (ಪಿಟಿಸಿ) ಆರಂಭಿಸುವಂತೆ ಸೂಚಿಸಿದ್ದಾರೆ. ಸೋಂಕಿತರ ದೇಹಸ್ಥಿತಿ ಅವಲೋಕಿಸಿ ಆದ್ಯತೆ ಮೇರೆಗೆ ಮನೆಯಲ್ಲೇ ಆರೈಕೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಅಥವಾ ಕೋವಿಡ್ ಆಸ್ಪತ್ರೆಗಳಲ್ಲಿ ಹೆಚ್ಚಿನ ಚಿಕಿತ್ಸೆಗಳಲ್ಲಿ ಯಾವುದರ ಅಗತ್ಯ ಇದೆ ಎಂಬುದನ್ನು ವೈದ್ಯರು ಭೌತಿಕ ತಪಾಸಣೆ ಬಳಿಕವೇ ಶಿಫಾರಸು ಮಾಡಲಿದ್ದಾರೆ.

ಇದುವರೆಗೆ ಎಂಟು ವಲಯಗಳ ನಿಯಂತ್ರಣ ಕೊಠಡಿಗಳ ಮೂಲಕ ಹಾಗೂ 1912 ಸಹಾಯವಾಣಿಗೆ ಬರುವ ಕರೆಗಳ ಮೂಲಕ ಕೋವಿಡ್ ಸೋಂಕಿತರ ಆರೋಗ್ಯ ಸ್ಥಿತಿ ತಿಳಿದು ಅವರಿಗೆ ಸೂಕ್ತ ಹಾಸಿಗೆ ಸೌಕರ್ಯ ಹೊಂದಿಸಲು ಬಿಬಿಎಂಪಿ ನೆರವಾಗುತ್ತಿತ್ತು. ನಗರದ 8 ವಲಯಗಳಲ್ಲಿ ಇತ್ತೀಚೆಗೆ ಒಟ್ಟು 32 ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು (ಪಿಟಿಸಿ) ತೆರೆಯಲಾಗಿದೆ.

**ಮುಖ್ಯಾಂಶಗಳು**

- ಮೂರು ಹಂತಗಳಲ್ಲಿ ಚಿಕಿತ್ಸೆ ನಿರ್ಧಾರ ಕೇಂದ್ರಗಳ ಸ್ಥಾಪನೆ
- ವಾರ್ಡ್ ಮಟ್ಟದಲ್ಲೂ ನಿರ್ಮಾಣವಾಗಲಿದೆ ಪಿಟಿಸಿ
- ಪಿಟಿಸಿಗಳಿಗೆ ಬರಲು ಸಾಧ್ಯವಾಗದ ರೋಗಿಗಳ ಮನೆ ಬಾಗಿಲಿಗೆ ಬರಲಿದೆ ಸಂಚಾರ ಘಟಕ

ರೋಗದ ಸೌಮ್ಯ ಲಕ್ಷಣಗಳಿರುವವರಿಗೆ ಹಾಗೂ ರಕ್ತದಲ್ಲಿ ಆಮ್ಲಜನಕದ ಮಟ್ಟ 90ಕ್ಕಿಂತ ಹೆಚ್ಚು ಇರುವವರಿಗೆ ಔಷಧೋಪಚಾರ ಒದಗಿಸುವ ಸೌಲಭ್ಯಗಳನ್ನು ಇವು ಹೊಂದಿವೆ.

ಒಂದನೇ ಹಂತದ ಪಿಟಿಸಿಗಳನ್ನು ವಾರ್ಡ್ ಮಟ್ಟದಲ್ಲಿ ನಿರ್ಮಿಸಲಾಗುತ್ತದೆ. ಇಲ್ಲಿ ಕೇವಲ ಕೋವಿಡ್ ಸೋಂಕಿತರಿಗೆ ಯಾವ ರೀತಿಯ ಚಿಕಿತ್ಸೆ ಅಗತ್ಯವಿದೆ ಎಂಬುದನ್ನು ಭೌತಿಕವಾಗಿ ನಿರ್ಧರಿಸುವ ಸೌಕರ್ಯಗಳು ಮಾತ್ರ ಇರಲಿವೆ. ಇವುಗಳಲ್ಲಿ ತಲಾ ಒಬ್ಬ ವೈದ್ಯ, ಅರೆವೈದ್ಯಕೀಯ ಸಿಬ್ಬಂದಿ ಹಾಗೂ ದತ್ತಾಂಶ ನೋಂದಣಿ ಸಿಬ್ಬಂದಿಯ ತಂಡ ಎರಡು ಪಾಳಿಗಳಲ್ಲಿ ಕಾರ್ಯನಿರ್ವಹಿಸಲಿದೆ. ಬೆಳಿಗ್ಗೆ 8 ರಿಂದ ಮಧ್ಯಾಹ್ನ 2ರವರೆಗೆ ಬೆಳಗ್ಗಿನ ಪಾಳಿ ಹಾಗೂ ಮಧ್ಯಾಹ್ನ 2ರಿಂದ ರಾತ್ರಿ 8 ಗಂಟೆವರೆಗೆ ಕೊನೆಯ ಪಾಳಿ ಇರಲಿದೆ. ಇಲ್ಲಿಗೆ ಬರುವ ರೋಗಿಗಳಿಗೆ ವೈದ್ಯರು ಮನೆಯಲ್ಲೇ ಆರೈಕೆಗೆ ಒಳಗಾಗುವುದಕ್ಕೆ ಅಥವಾ ಇತರ ಹೆಚ್ಚುವರಿ ಆರೈಕೆಯ ಅಗತ್ಯದ ಬಗ್ಗೆ ಶಿಫಾರಸು ಮಾಡಲಿದ್ದಾರೆ. ಹೆಚ್ಚುವರಿ ಚಿಕಿತ್ಸೆಯ ಅಗತ್ಯವಿದ್ದರೆ ವಲಯದ ಮಟ್ಟದ ಕಮಾಂಡ್ ಸೆಂಟರ್‌ಗೆ ಕರೆ ಮಾಡಿ ಹಾಸಿಗೆ ಕಾಯ್ದಿರಿಸಲು ಸಹಕರಿಸಲಿದ್ದಾರೆ.



ಕೋವಿಡ್ 19 ಎರಡನೇ ಅಲೆಯ ಭೀಕರತೆಯನ್ನು ತಡೆಯಲು ರಾಜ್ಯ ಸರ್ಕಾರ ಘೋಷಿಸಿರುವ ಲಾಕ್‌ಡೌನ್ ಮಧ್ಯೆ ಜಯನಗರದ ರಾಷ್ಟ್ರೀಯ ವಿದ್ಯಾಲಯ ರಸ್ತೆಯ ಒಂದು ನೋಟ ಪ್ರಜಾವಾಣಿ ಚಿತ್ರ/ ರಂಜು ಪಿ

ಎರಡನೇ ಹಂತದ ಪಿಟಿಸಿಗಳಲ್ಲಿ ಚಿಕಿತ್ಸೆ ನಿರ್ಧಾರ ವ್ಯವಸ್ಥೆಯ ಜೊತೆ ಕೋವಿಡ್ ರೋಗಿಗಳ ಅರೈಕೆ ಕೇಂದ್ರವೂ ಇರಲಿದೆ. ಸೋಂಕಿತರು ನೇರವಾಗಿ ಬಂದು ಸೌಲಭ್ಯ ಬಳಸಿಕೊಳ್ಳಬಹುದು. ಎರಡನೇ ಹಂತದ ಕೆಲವು ಕೇಂದ್ರಗಳಲ್ಲಿ ಕೋವಿಡ್ ರೋಗಿಗಳಿಗೆ ತೀವ್ರ ಅವಲಂಬನೆ ಘಟಕ (ಎಚ್‌ಡಿಯು) ಅಥವಾ ತೀವ್ರ ನಿಗಾ ಘಟಕದ (ಐಸಿಯು) ಅಗತ್ಯ ಬಿದ್ದರೆ, ಅಂತಹ ಹಾಸಿಗೆಗಳು ಲಭಿಸುವವರೆಗೆ ಅವರ ರಕ್ತದ ಆಮ್ಲಜನಕ ಮಟ್ಟವನ್ನು ಸ್ಥಿರೀಕರಿಸುವ ಸೌಕರ್ಯವೂ ಇರಲಿದೆ.


ಎರಡನೇ ಹಂತದ ಪಿಟಿಸಿಗಳಲ್ಲಿ ತಲಾ ಇಬ್ಬರು ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ದತ್ತಾಂಶ ನೋಂದಣಿ ಸಿಬ್ಬಂದಿ ಮತ್ತು ಸಹಾಯಕ ಸಿಬ್ಬಂದಿ ಇರಲಿದ್ದಾರೆ. ಮೂರು ಪಾಳಿಗಳಲ್ಲಿ ಈ ತಂಡಗಳು ಕಾರ್ಯನಿರ್ವಹಿಸಲಿವೆ. ಇಲ್ಲಿ ರೋಗಿಯ ಆರೋಗ್ಯ ಸ್ಥಿತಿ ಆಧರಿಸಿ ಮನೆಯಲ್ಲೇ ಆರೈಕೆಗೆ ಅಥವಾ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಶಿಫಾರಸು ಮಾಡಲಾಗುತ್ತದೆ. ರೋಗಿಗೆ ಹಾಸಿಗೆ ಕಾಯ್ದಿರಿಸಲು ಇಲ್ಲಿನ ಸಿಬ್ಬಂದಿ ಸದ್ಯಕ್ಕೆ ವಲಯ ಮಟ್ಟದ ಕಮಾಂಡ್ ಸೆಂಟರ್ ಸಂಪರ್ಕಿಸಬೇಕು. ಹಾಸಿಗೆ ಕಾಯ್ದಿರಿಸುವ ಸೌಕರ್ಯವನ್ನು ಕ್ರಮೇಣ ಎರಡನೇ ಹಂತದ ಪಿಟಿಸಿಗೂ ವಿಸ್ತರಿಸಲಾಗುತ್ತದೆ. ಬಿಬಿಎಂಪಿ ಇಂತಹ 60 ಕೇಂದ್ರಗಳನ್ನು ಅರಂಭಿಸಲು ಸಿದ್ಧತೆ ಮಾಡಿಕೊಂಡಿದೆ.

ಸಂಚಾರ ಚಿಕಿತ್ಸೆ ನಿರ್ಧಾರ ಘಟಕಗಳನ್ನು (ಎಂಟಿಯು) ಕೂಡಾ ಬಿಬಿಎಂಪಿ ಆರಂಭಿಸಲಿದೆ. ಇವುಗಳ ನಿರ್ವಹಣೆಗೆ ಪ್ರತಿ ವಾರ್ಡ್‌ಗೆ ತಲಾ ಒಬ್ಬ ವೈದ್ಯ, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ವೈದ್ಯಕೀಯ ವಿದ್ಯಾರ್ಥಿಯ ತಂಡವನ್ನು ಒದಗಿಸಲಾಗುತ್ತದೆ. ತುರ್ತಾಗಿ ಆಸ್ಪತ್ರೆಗೆ ದಾಖಲಾಗಬೇಕಾದ ರೋಗಿಗಳನ್ನು ತಕ್ಷಣ ಪಿಟಿಸಿಗಳಿಗೆ ಕರೆದೊಯ್ಯಲು ಸಾಧ್ಯವಾಗದೇ ಅವರ ಕಡೆಯವರು ಸಹಾಯವಾಣಿಗೆ ಕರೆ ಮಾಡಿದರೆ, ಅಂತಹವರ ಮನೆಗಳಿಗೇ ತೆರಳಿ ನೆರವಾಗುವ ಸಲುವಾಗಿ ಸಂಚಾರ ಘಟಕಗಳನ್ನು ಆರಂಭಿಸಲಾಗುತ್ತಿದೆ. ಇಲ್ಲಿ ಚಿಕಿತ್ಸೆ ಕುರಿತು ನೀಡುವ ಟಿಪ್ಪಣಿ ಆಧರಿಸಿ ವಲಯ ಮಟ್ಟದ ಕಮಾಂಡ್ ಸೆಂಟರ್‌ಗಳು ಅಥವಾ ಎರಡನೇ ಹಂತದ ಪಿಟಿಸಿಗಳ ಮೂಲಕ ಸೂಕ್ತ ಹಾಸಿಗೆ ಕಾಯ್ದಿರಿಸಲಾಗುತ್ತದೆ.

## ಸುದ್ದಿ 2 ನಿಮಿಷ

### ಸೂದ್ ಹೆಸರಿನಲ್ಲಿ ನಕಲಿ ಕೋವಿಡ್ ದೇಣಿಗೆ ಅಭಿಯಾನ: ಎಚ್ಚರಿಸಿದ ನಟ

**ಮುಂಬೈ (ಪಿಟಿಐ):** ಕೋವಿಡ್–19 ಬಿಕ್ಕಟ್ಟಿನ ಮಧ್ಯೆ ಜನರಿಗೆ ನಿರಂತರವಾಗಿ ಸಹಾಯ ಮಾಡುತ್ತಿರುವ ಬಾಲಿವುಡ್ ನಟ ಸೋನು ಸೂದ್, ಸಹಾಯ ಮಾಡುವ ನೆಪದಲ್ಲಿ ತಮ್ಮ ಹೆಸರನ್ನು ಬಳಸಿಕೊಂಡು ನಕಲಿ ಫೌಂಡೇಷನ್ ಮೂಲಕ ದೇಣಿಗೆ ಪಡೆಯುತ್ತಿರುವ ಬಗ್ಗೆ ಸೋಮವಾರ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ.



'ಸೋನು ಸೂದ್ ಫೌಂಡೇಷನ್' ಎನ್ನುವ ಹೆಸರಿನಲ್ಲಿ ಕೆಲವರು ದೇಣಿಗೆ ಪಡೆಯುತ್ತಿದ್ದಾರೆ. ಇದಕ್ಕೂ ನನಗೂ ಸಂಬಂಧವಿಲ್ಲ' ಎಂದು ತಮ್ಮ ಅಭಿಮಾನಿಗಳು ಮತ್ತು ಸಾರ್ವಜನಿಕರಿಗೆ ಸೋನು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಸಿದ್ದಾರೆ.

'ಈ ಬಗ್ಗೆ ಎಚ್ಚರಿಕೆಯಿಂದಿರಿ ಮತ್ತು ನಿಮ್ಮ ಸಮೀಪದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ' ಎಂದಿರುವ ಅವರು, ತಮ್ಮ ಹೆಸರಿನಲ್ಲಿರುವ ಫೌಂಡೇಷನ್‌ನ ಪೋಸ್ಟರ್ ಅನ್ನು ಟ್ಯಾಗ್ ಮಾಡಿ ಇದು ನಕಲಿ ಎಂದು ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಸೋನು ಬರೆದುಕೊಂಡಿದ್ದಾರೆ.

### ಡಾ.ರಾಜುಗೆ ನೋಟಿಸ್ ಜಾರಿ

**ಬೆಂಗಳೂರು:** ಮಾಸ್ಕ್ ಹಾಕದೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ ನಗರದ ಮೂಡಲಪಾಳ್ಯದ ಸಾಗರ್ ಕ್ಲಿನಿಕ್ ನ ಡಾ.ರಾಜು ಕೃಷ್ಣಮೂರ್ತಿಯವರಿಗೆ ಜಿಲ್ಲಾ ಆರೋಗ್ಯಾಧಿಕಾರಿ ನೋಟಿಸ್ ನೀಡಿದ್ದಾರೆ.

'ಕ್ಲಿನಿಕ್ ನಲ್ಲಿ ಮಾಸ್ಕ್ ಹಾಕದೆ, ಸ್ಯಾನಿಟೈಸರ್ ಬಳಸದೆ ಮತ್ತು ಸೂಕ್ತ ಅಂತರ ಕಾಯ್ದುಕೊಳ್ಳದೆ ಸಾಂಕ್ರಾಮಿಕ ರೋಗಗಳ ತಡೆ ಕಾಯ್ದೆಗಳನ್ನು ಉಲ್ಲಂಘಿಸಿದ್ದೀರಿ. ಇದಕ್ಕೆ ಕಾರಣ ನೀಡಿ' ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್ ನೋಟಿಸ್ ನೀಡಿದ್ದಾರೆ.

'ಮಾಧ್ಯಮಗಳಲ್ಲಿ ಈ ಬಗ್ಗೆ ವರದಿಯಾಗಿದ್ದು, ಡಾ. ರಾಜು ಅವರು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಕಾಯ್ದೆಯನ್ನೂ(ಕೆಪಿಎಂಇ) ಉಲ್ಲಂಘಿಸಿದ್ದಾರೆ. ಅವರ ಕ್ಲಿನಿಕ್ ಪರವಾನಗಿ ರದ್ದುಗೊಳಿಸಲು ಶಿಫಾರಸು ಮಾಡಲಾಗುವುದು. ಮಂಗಳವಾರ (ಮೇ 18) ಅವರ ಕ್ಲಿನಿಕ್ ಬಂದ್ ಮಾಡಿಸಲಾಗುವುದು' ಎಂದು ಡಾ.ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಾಸ್ಕ್ ಹಾಕದೆ ರೋಗಿಗಳಿಗೆ ಚಿಕಿತ್ಸೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಸೋಮವಾರ ವರದಿ ಪ್ರಕಟವಾಗಿತ್ತು. ಡಾ.ರಾಜು ಅವರ ನಡೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಬಹುದು ಎಂದು ತಜ್ಞರು, ನಾಗರಿಕರು ಆತಂಕ ವ್ಯಕ್ತಪಡಿಸಿದ್ದರು.

## ಅಕ್ಕ–ತಂಗಿ ವರಿಸಿದ ಭೂಪ ಜೈಲು ಪಾಲು

ಪ್ರಜಾವಾಣಿ ವಾರ್ತೆ

**ಕೋಲಾರ:** ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ವೇಗಮಡುಗು ಗ್ರಾಮದಲ್ಲಿ ಒಂದೇ ಮುಹೂರ್ತದಲ್ಲಿ ಅಕ್ಕ-ತಂಗಿಯನ್ನು ಮದುವೆಯಾಗಿದ್ದ ಉಮಾಪತಿ (30) ಅವರನ್ನು ಬಾಲ್ಯವಿವಾಹ ಆರೋಪದಡಿ ನಂಗಲಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಮುಳಬಾಗಿಲು ತಾಲ್ಲೂಕು ಚಿನ್ನಬಾಲೇಪಲ್ಲಿ ಗ್ರಾಮದ ಉಮಾಪತಿ ಅವರು ವೇಗಮಡುಗು ಗ್ರಾಮದ ಸುಪ್ರಿಯಾ ಸಹೋದರಿಯರನ್ನು ಮೇ 7ರಂದು ಮದುವೆಯಾಗಿದ್ದರು. ಅವರ ವಿವಾಹದ ಆಮಂತ್ರಣ ಪತ್ರಿಕೆ ಮತ್ತು ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದವು.

ಈ ಸಂಬಂಧ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ. ರಮೇಶ್ ಪರಿಶೀಲನೆ ನಡೆಸಿದಾಗ ಸುಪ್ರಿಯಾ ಅವರ ಸಹೋದರಿಗೆ 17 ವರ್ಷವಾಗಿದೆ ಎಂಬ ಸಂಗತಿ ಬೆಳಕಿಗೆ ಬಂದಿತ್ತು. ಹೀಗಾಗಿ ರಮೇಶ್ ಅವರು ಬಾಲ್ಯ ವಿವಾಹ ಆರೋಪ ಮತ್ತು ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯಡಿ ಉಮಾಪತಿ ಸೇರಿದಂತೆ 7 ಮಂದಿ ವಿರುದ್ಧ ಭಾನುವಾರ ಪ್ರಕರಣ ದಾಖಲಿಸಿದ್ದರು. ಬಳಿಕ ಎಲ್ಲಾ ಆರೋಪಿಗಳು ಪರಾರಿಯಾಗಿದ್ದರು.



ಉಮಾಪತಿ

ಪೊಲೀಸರು ಮೊಬೈಲ್ ಕರೆ ಮಾಹಿತಿ ಆಧರಿಸಿ ಉಮಾಪತಿಯನ್ನು ಬಂಧಿಸಿದ್ದಾರೆ. ಉಳಿದ ಆರೋಪಿಗಳಾದ ಉಮಾಪತಿಯ ತಂದೆ ಚಿಕ್ಕಚನ್ನರಾಯಪ್ಪ, ತಾಯಿ ದೊಡ್ಡಲಕ್ಷ್ಮಮ್ಮ, ಬಾಲಕಿಯ ತಂದೆ ನಾಗರಾಜಪ್ಪ, ತಾಯಿ ರಾಣೆಮ್ಮ, ವಿವಾಹ ಆಮಂತ್ರಣ ಪತ್ರಿಕೆ ಮುದ್ರಿಸಿದ್ದ ಮುಳಬಾಗಿಲಿನ ಗಾಯತ್ರಿ ಆಫ್‌ಸೆಟ್ ಪ್ರಿಂಟರ್ಸ್ ಮಾಲೀಕ, ಮದುವೆ ನಡೆದ ಚನ್ನರಾಯಸ್ವಾಮಿ ದೇವಾಲಯದ ಅರ್ಚಕ ತಲೆಮರೆಸಿಕೊಂಡಿದ್ದಾರೆ.

ಸುಪ್ರಿಯಾ, ನಾಗರಾಜಪ್ಪ ಅವರ ಹಿರಿಯ ಮಗಳು. ಅವರ ಕಿರಿಯ ಮಗಳಿಗೆ ವಾಕ್ ಮತ್ತು ಶ್ರವಣ ದೋಷ ವಿದೆ. ಹೀಗಾಗಿ, ಆಕೆಗೆ ಭವಿಷ್ಯದಲ್ಲಿ ಮದುವೆ ಆಗುವುದಿಲ್ಲ ಎಂದು ಚಿಂತಿತರಾಗಿದ್ದ ನಾಗರಾಜಪ್ಪ, ಪತ್ನಿ ರಾಣೆಮ್ಮ ಅವರ ತಮ್ಮ ಉಮಾಪತಿ ಜತೆ ಇಬ್ಬರೂ ಹೆಣ್ಣುಮಕ್ಕಳ ಮದುವೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸರ್ಕಾರ ಕೋವಿಡ್ ಹಿನ್ನೆಲೆಯಲ್ಲಿ ಲಾಕ್‌ಡೌನ್ ಜಾರಿಗೊಳಿಸಿರುವುದರಿಂದ ಮದುವೆಗೆ ಅನುಮತಿ ಪಡೆಯುವುದು ಕಡ್ಡಾಯ. ಆದರೆ, ಈ ವಿವಾಹಕ್ಕೆ ಕುಟುಂಬದ ಸದಸ್ಯರು ಪೂರ್ವಾನುಮತಿ ಪಡೆದಿರಲಿಲ್ಲ. ಲಾಕ್‌ಡೌನ್ ಆದೇಶ ಉಲ್ಲಂಘಿಸಿದ ಆರೋಪದಡಿ ಪ್ರತ್ಯೇಕ ಪ್ರಕರಣ ದಾಖಲಿಸುತ್ತೇವೆ' ಎಂದು ಮುಳಬಾಗಿಲು ತಹಶೀಲ್ದಾರ್ ರಾಜಶೇಖರ್ ತಿಳಿಸಿದರು.



ಕೋವಿಡ್ ಸಂಚಾರಿ ಕ್ಲಿನಿಕ್‌ಗೆ ತಹಶೀಲ್ದಾರ್ ಕೆ.ಮಂಜುನಾಥ್ ಚಾಲನೆ ನೀಡಿದರು. ಮೋಹನ್ ಕುಮಾರ್, ಆರೋಗ್ಯಾಧಿಕಾರಿ ಡಾ.ಹರೀಶ್, ಸಾರಿಗೆ ನಿರೀಕ್ಷಕ ಡಾ.ಡಿ. ಎಸ್.ಧನ್ವಂತರಿ, ಎಸ್.ಒಡೆಯರ್, ಆರೋಗ್ಯ ನಿರೀಕ್ಷಕ ನಾಗೇಶ್ ಹಾಗೂ ವೈದ್ಯರು ಇದ್ದಾರೆ.

## ಮನೆ ಬಾಗಿಲಿಗೆ 'ಕೋವಿಡ್ ಸಂಚಾರಿ ಕ್ಲಿನಿಕ್'

**ನೆಲಮಂಗಲ:** 'ಹಳ್ಳಿಗಳಲ್ಲಿ ಕೋವಿಡ್ ಸೋಂಕು ಹೆಚ್ಚಳವಾಗುವುದನ್ನು ತಪ್ಪಿಸಲು ಹಾಗೂ ರೋಗ ಲಕ್ಷಣವಿದ್ದರೂ ಮನೆಯಲ್ಲೇ ಇರುವವರಿಗೆ ಚಿಕಿತ್ಸೆ ನೀಡಲು ವೈದ್ಯರ ತಂಡಗಳನ್ನು ಮನೆ ಬಾಗಿಲಿಗೆ ಕಳುಹಿಸಿಕೊಡಲಾಗುವುದು' ಎಂದು ತಹಶೀಲ್ದಾರ್ ಕೆ.ಮಂಜುನಾಥ್ ತಿಳಿಸಿದರು.

ತಾಲ್ಲೂಕು ಕಚೇರಿ ಎದುರು 'ಕೋವಿಡ್ ಸಂಚಾರಿ ಕ್ಲಿನಿಕ್'ಗೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಮೋಹನ್ ಕುಮಾರ್, 'ತಾಲ್ಲೂಕಿನಲ್ಲಿ ಒಟ್ಟು 15 ಸಂಚಾರಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸಲಿವೆ. ಸದ್ಯ ಎರಡು ಕ್ಲಿನಿಕ್‌ಗೆ ಚಾಲನೆ ನೀಡಲಾಗಿದೆ' ಎಂದರು.

### ಮರಣ ಪ್ರಮಾಣ ಪತ್ರಕ್ಕೆ ವಿನಾಯಿತಿ: ಪ್ರತಿಕ್ರಿಯೆ ಕೇಳಿದ ಹೈಕೋರ್ಟ್

**ಬೆಂಗಳೂರು:** ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕೆ ಮರಣ ಪ್ರಮಾಣ ಪತ್ರ ಇಲ್ಲದೆಯೇ ಅನುಮತಿ ನೀಡಿದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಮಧ್ಯಂತರ ಅರ್ಜಿಗೆ(ಐಎ) ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಶವಗಳನ್ನು ಅಂತರ ಜಿಲ್ಲೆ ಅಥವಾ ಅಂತರರಾಜ್ಯಕ್ಕೆ ಕೊಂಡೊಯ್ಯಲು ಮಾತ್ರ ಮರಣ ಪ್ರಮಾಣ ಪತ್ರದ ಅಗತ್ಯ ಇದೆ ಎಂದು ಏ.21ರಂದು ಹೊರಡಿಸಿರುವ ಸುತ್ತೋಲೆಯನ್ನು ಉಲ್ಲೇಖಿಸಿ ಭಾರತ ಪುನರುತ್ಥಾನ ಟ್ರಸ್ಟ್ ಅರ್ಜಿ ಸಲ್ಲಿಸಿದೆ.

'ಮೃತದೇಹಗಳನ್ನು ತಮ್ಮ ಜಮೀನಿನಲ್ಲೂ ಹೂಳಲು ಅನುಮತಿಸಲಾಗಿದೆ. ಆದರೆ, ಅಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಪರಿಶೀಲಿಸಲು ಯಾವುದೇ ವಿಧಾನಗಳಿಲ್ಲ. ಅಂತರ್ ಜಿಲ್ಲೆ ಮತ್ತು ಅಂತರ ರಾಜ್ಯಕ್ಕೆ ಶವ ಸಂಸ್ಕಾರ ಮಾಡಲು ಮರಣ ಪ್ರಮಾಣ ಪತ್ರ ಕಡ್ಡಾಯ. ಆದರೆ, ಅವುಗಳ ಪರಿಶೀಲನೆಗೆ ಯಾವುದೇ ಕಾರ್ಯವಿಧಾನ ಇಲ್ಲ' ಎಂದು ಎಂದು ಅರ್ಜಿಯಲ್ಲಿ ದೂರಲಾಗಿದೆ.



'ಆಕ್ಸಿಜನ್ ಆನ್ ವೀಲ್ಸ್' ಬಸ್ ಸೇವೆಗೆ ಸಚಿವ ಬೈರತಿ ಬಸವರಾಜು ಚಾಲನೆ ನೀಡಿದರು. ಪ್ರತಿಷ್ಠಾನದ ಶಾಂತಾ ಕೃಷ್ಣಮೂರ್ತಿ, ಮುಖಂಡರಾದ ಕೃಷ್ಣಮೂರ್ತಿ, ಕೌದೇನಹಳ್ಳಿ ಬೀರಪ್ಪ, ರಮೇಶ್ ಹಾಗೂ ಇತರರು ಇದ್ದರು.

## 'ಆಕ್ಸಿಜನ್ ಆನ್ ವೀಲ್ಸ್' ಬಸ್ ಸೇವೆಗೆ ಚಾಲನೆ

**ಕೆ.ಆರ್.ಪುರ:** 'ರಾಮಮೂರ್ತಿ ನಗರ ವ್ಯಾಪ್ತಿಯಲ್ಲಿ ಶಾಂತಾ ಕೃಷ್ಣಮೂರ್ತಿ ಪ್ರತಿಷ್ಠಾನದ ಸಹಯೋಗದಲ್ಲಿ ಜನರಿಗೆ ಉಚಿತವಾಗಿ ಬಸ್‌ನಲ್ಲೇ ಆಮ್ಲಜನಕ ಸೌಲಭ್ಯ ನೀಡುವ 'ಆಕ್ಸಿಜನ್ ಆನ್ ವೀಲ್ಸ್' ಸೇವೆ ಆರಂಭಿಸಲಾಗಿದೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ತಿಳಿಸಿದರು.

ಇಲ್ಲಿನ ಎನ್.ಆರ್.ಐ ಬಡಾವಣೆಯಲ್ಲಿ 'ಆಕ್ಸಿಜನ್ ಆನ್ ವೀಲ್ಸ್' ಬಸ್ ಸೇವೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ತುರ್ತಾಗಿ ಆಮ್ಲಜನಕ ಬೇಕಿರುವ ಸೋಂಕಿತರು ಈ ವಾಹನದಲ್ಲಿ ಉಚಿತವಾಗಿ ಆಮ್ಲಜನಕ ಪಡೆಯಬಹುದು. ಏಕಕಾಲದಲ್ಲಿ ಹತ್ತು ಮಂದಿಗೆ ಆಮ್ಲಜನಕ ಪೂರೈಸುವ ವ್ಯವಸ್ಥೆ ಇದೆ' ಎಂದರು.

ಪ್ರತಿಷ್ಠಾನದ ಸಂಸ್ಥಾಪಕಿ ಶಾಂತಾ ಕೃಷ್ಣಮೂರ್ತಿ,'ಕೋವಿಡ್ ಪರಿಸ್ಥಿತಿ ಬಿಗಡಾಯಿಸಿದ್ದು, ರೋಗಿಗಳು ಆಮ್ಲಜನಕಕ್ಕಾಗಿ ಪರಿತಪಿಸುತ್ತಿದ್ದಾರೆ. ಇದನ್ನು ಮನಗಂಡು ಪ್ರತಿಷ್ಠಾನವು ಫೌಂಡೇಷನ್ ಇಂಡಿಯಾ ನ್ಯಾಚುರಲ್ ರೆಮಿಡೀಸ್ ಹಾಗೂ ಬಿಎಂಟಿಸಿ ಸಹಯೋಗದಲ್ಲಿ ಈ ಸೇವೆ ಆರಂಭಿಸಿದೆ' ಎಂದರು.

## ವೈದ್ಯನ ಮೇಲೆ ಇನ್‌ಸ್ಪೆಕ್ಟರ್ ಹಲ್ಲೆ; ಎಸಿಪಿ ತನಿಖೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮ ಮಾರಾಟದ ವಿಚಾರಣೆ ಹೆಸರಿನಲ್ಲಿ ಆಸ್ಪತ್ರೆಯೊಂದರ ವೈದ್ಯ ನಾಗರಾಜ್ ಮೇಲೆ ಸಂಜಯನಗರ ಠಾಣೆ ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಆಳ್ವ ಹಲ್ಲೆ ಮಾಡಿರುವ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ) ತನಿಖೆಗೆ ಆದೇಶಿಸಲಾಗಿದೆ.

ಆರೋಪದ ಬಗ್ಗೆ ವಿಡಿಯೊ ಹರಿಬಿಟ್ಟಿರುವ ವೈದ್ಯ ನಾಗರಾಜ್, 'ನನಗೂ ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರಾಟಕ್ಕೂ ಯಾವುದೇ ಸಂಬಂಧವಿಲ್ಲ. ಯಾರೋ ನನ್ನ ಹೆಸರು ಹೇಳಿದರೆಂಬ ಕಾರಣಕ್ಕೆ ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಹಾಗೂ ಸಿಬ್ಬಂದಿ ನನ್ನನ್ನು ಠಾಣೆಗೆ ಕರೆದೊಯ್ದು ಎರಡು ದಿನ ಅಕ್ರಮವಾಗಿ ಬಂಧನದಲ್ಲಿಟ್ಟುಕೊಂಡಿದ್ದರು' ಎಂದು ದೂರಿದ್ದಾರೆ.

'ನಾನು ಮಾಡದೇ ಇರುವ ತಪ್ಪು ಒಪ್ಪಿಕೊಳ್ಳುವಂತೆ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಒತ್ತಾಯಿಸಿದ್ದರು. ಅದಕ್ಕೆ ಒಪ್ಪದಿದ್ದಾಗ ಮನಬಂದಂತೆ ದೇಹದ ಹಲವು ಭಾಗಗಳಿಗೆ ಹೊಡೆದಿದ್ದಾರೆ. ಹಣವನ್ನೂ ಕಿತ್ತುಕೊಂಡಿದ್ದಾರೆ' ಎಂದೂ ವೈದ್ಯ ಆರೋಪಿಸಿದ್ದಾರೆ.

'ನಾನು ತಪ್ಪು ಮಾಡಿಲ್ಲವೆಂದು ಗೊತ್ತಾದ ನಂತರ ಮನೆಗೆ ಕಳುಹಿಸಿದ್ದಾರೆ. ಠಾಣೆಯಲ್ಲಾದ ಹಲ್ಲೆ ಬಗ್ಗೆ ಯಾರಿಗೂ ಹೇಳದಂತೆ ಬೆದರಿಕೆ ಹಾಕಿದ್ದಾರೆ. ನಾನೀಗ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದು, ಹಾಸಿಗೆಯಿಂದ ಮೇಲೇಳಲು ಆಗುತ್ತಿಲ್ಲ. ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದೂ ನಾಗರಾಜ್ ಒತ್ತಾಯಿಸಿದ್ದಾರೆ.

ಘಟನೆ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ, 'ತನಿಖೆ ನಡೆಸಿ ವರದಿ ನೀಡುವಂತೆ ಎಸಿಪಿ ಅವರಿಗೆ ಸೂಚನೆ ನೀಡಿದ್ದೇನೆ. ಇನ್‌ಸ್ಪೆಕ್ಟರ್ ಅವರದ್ದು ತಪ್ಪು ಕಂಡುಬಂದರೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಇನ್‌ಸ್ಪೆಕ್ಟರ್ ಕಾತ್ಯಾಯಿನಿ, 'ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರಾಟದ ಬಗ್ಗೆ ಮಾಹಿತಿ ಇತ್ತು. ವಿಚಾರಣೆಗಾಗಿ ಹಲವು ವೈದ್ಯರಿಗೆ ನೋಟಿಸ್ ನೀಡಲಾಗಿತ್ತು. ಯಾರ ಮೇಲೂ ಹಲ್ಲೆ ಮಾಡಿಲ್ಲ' ಎಂದರು.

## ಪತಿಯ ಕೊಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿತ್ಯವೂ ಕಿರುಕುಳ ನೀಡುತ್ತಿದ್ದಾನೆಂಬ ಕಾರಣಕ್ಕೆ ಪತಿಯನ್ನೇ ಕೊಲೆ ಮಾಡಿಸಿದ ಆರೋಪದಡಿ ಮಹಿಳೆ ಸೇರಿ ಮೂವರನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಟಿನ್ ಫ್ಯಾಕ್ಟರಿ ಹಿಂಭಾಗದ ದೂರವಾಣಿ ನಗರದ ನಿವಾಸಿ ಲೋಕನಾಥ್ (48) ಕೊಲೆಯಾದ ವ್ಯಕ್ತಿ. ಅವರ ಪತ್ನಿ ಯಶೋಧಾ (40), ಆಕೆಯ ಸ್ನೇಹಿತರಾದ ವಿಜಿನಾಪುರದ ಎಂ. ಮುನಿರಾಜು (33), ಕಸ್ತೂರಿನಗರದ ಪಿ. ಪ್ರಭು (27) ಬಂಧಿತರು.

'ಬೈಯಪ್ಪನಹಳ್ಳಿ ಹಾಗೂ ಚನ್ನಸಂದ್ರ ರೈಲು ನಿಲ್ದಾಣಗಳ ನಡುವಿನ ಹಳಿ ಮೇಲೆ ಮೃತದೇಹ ಸಿಕ್ಕಿತ್ತು. ಅದರ ತನಿಖೆ ಕೈಗೊಂಡಾಗ ಕೊಲೆ ಎಂಬುದು ತಿಳಿಯಿತು. ಮೂವರು ಆರೋಪಿಗಳು ಸಿಕ್ಕಿಬಿದ್ದರು' ಎಂದು ರೈಲ್ವೆ ಎಸ್ಪಿ ಡಿ.ಆರ್. ಸಿರಿಗೌರಿ ಹೇಳಿದರು.

'ಕಾರ್ಮಿಕ ಲೋಕನಾಥ್, ಯಶೋಧಾ ಅವರನ್ನು ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ಆಕೆ ಸಹ ಮನೆಗಳಲ್ಲಿ ಕೆಲಸ ಮಾಡುತ್ತಿದ್ದಳು. ಮದ್ಯವ್ಯಸನಿಯಾಗಿದ್ದ ಲೋಕನಾಥ್, ನಿತ್ಯ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಪತ್ನಿಗೆ ಹೊಡೆಯುವುದು, ಬೈಯುವುದು ಹಾಗೂ ಹಣಕ್ಕಾಗಿ ಪೀಡಿಸುತ್ತಿದ್ದ.'

'ಕಿರುಕುಳದಿಂದ ಬೇಸತ್ತ ಯಶೋಧಾ, ಪತಿಯನ್ನೇ ಕೊಲೆ ಮಾಡಿಸಲು ಮುಂದಾಗಿದ್ದಳು. ಸ್ನೇಹಿತ ಮುನಿರಾಜುವನ್ನು ಸಂಪರ್ಕಿಸಿ ಕೊಲೆ ಮಾಡುವಂತೆ ಹೇಳಿದ್ದರು' ಎಂದೂ ತಿಳಿಸಿದರು.

**ಮದ್ಯ ಕುಡಿಸಿ ಕೊಲೆ:** 'ಲೋಕನಾಥ್ ಅವರಿಗೆ ಮೇ 15ರಂದು ಕರೆ ಮಾಡಿದ್ದ ಮುನಿರಾಜು ಹಾಗೂ ಪ್ರಭು, ಮದ್ಯದ ಪಾರ್ಟಿ ಮಾಡೋಣವೆಂದು ಕಸ್ತೂರಿನಗರದ ರೈಲ್ವೆ ಹಳಿ ಬಳಿ ಕರೆಸಿದ್ದರು. ಅಲ್ಲಿ ಲೋಕನಾಥ್ ಅವರಿಗೆ ಮದ್ಯ ಕುಡಿಸಿ, ಕುತ್ತಿಗೆಯನ್ನು ಹಗ್ಗದಿಂದ ಬಿಗಿದು ಕೊಂದಿದ್ದರು' ಎಂದೂ ಸಿರಿಗೌರಿ ಹೇಳಿದರು.

'ಕೊಲೆ ಎಂಬುದು ಯಾರಿಗೂ ಗೊತ್ತಾಗಬಾರದೆಂದು ಮೃತದೇಹವನ್ನು ಹಳಿ ಮೇಲೆ ಎಸೆದು ಹೋಗಿದ್ದರು. ಮೃತದೇಹ ನೋಡಿದ್ದ ವ್ಯಕ್ತಿಯೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದೂ ತಿಳಿಸಿದರು.



ಜಪ್ತಿ ಮಾಡಲಾದ ಗಾಂಜಾ ಜೊತೆ ಆರೋಪಿ

## ಲಾಕ್‌ಡೌನ್‌ನಲ್ಲೂ ಗಾಂಜಾ; ಕಾರಿನ ಡಿಕ್ಕಿಯಲ್ಲಿ ಸಾಗಣೆ

**ಬೆಂಗಳೂರು:** ಲಾಕ್‌ಡೌನ್ ಜಾರಿಯಲ್ಲಿರುವಾಗಲೇ ಕಾರಿನಲ್ಲಿ ಗಾಂಜಾ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ಆರೋಪಿ ಸುಬ್ಬರೆಡ್ಡಿ ಅಲಿಯಾಸ್ ಸುಬ್ಬು (42) ಎಂಬಾತನನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಸುಬ್ಬರೆಡ್ಡಿ, ಬೆಂಗಳೂರು ನಾಗಾವರದ ವೀರಣ್ಣನಪಾಳ್ಯದಲ್ಲಿ ವಾಸವಿದ್ದ. ಆತನಿಂದ ₹ 6 ಲಕ್ಷ ಮೌಲ್ಯದ ಗಾಂಜಾ ಹಾಗೂ ₹ 4 ಲಕ್ಷ ಮೌಲ್ಯದ ಕಾರು ಜಪ್ತಿ ಮಾಡಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಎಸ್. ಡಿ.ಶರಣಪ್ಪ ತಿಳಿಸಿದರು.

'ಕೊರೊನಾ ಸೋಂಕು ಹೆಚ್ಚುತ್ತಿರುವುದರಿಂದ ರಾಜ್ಯದಾದ್ಯಂತ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ಅಗತ್ಯ ವಸ್ತುಗಳ ಸಾಗಣೆಗಾಗಿ ಗೂಡ್ಸ್ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಆರೋಪಿ, ಸರಕು ಹೆಸರಿನಲ್ಲಿ ಗಾಂಜಾ ಸಾಗಿಸುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಸುಬ್ಬರೆಡ್ಡಿಯನ್ನು ಸೆರೆಹಿಡಿಯಲಾಗಿದೆ' ಎಂದೂ ಹೇಳಿದರು.

**ಆಂಧ್ರದಿಂದ ಬಂದು ಮಾರಾಟ:** 'ಆಂಧ್ರಪ್ರದೇಶದಲ್ಲಿ ಗಾಂಜಾ ಖರೀದಿಸುತ್ತಿದ್ದ ಆರೋಪಿ, ಅದನ್ನೇ ಬೆಂಗಳೂರಿಗೆ ತಂದು ಮಾರುತ್ತಿದ್ದ. ರಾಮಮೂರ್ತಿನಗರ, ಬಾಣಸವಾಡಿ, ಹೆಣ್ಣೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಈತನಿಗೆ ಗ್ರಾಹಕರಿದ್ದಾರೆ' ಎದು ಶರಣಪ್ಪ ತಿಳಿಸಿದರು.

'ಹೊಂಡಾ ಸಿಟಿ ಕಾರು ಇಟ್ಟುಕೊಂಡಿದ್ದ ಆರೋಪಿ, ಅದರ ಡಿಕ್ಕಿಯಲ್ಲಿ ಹೆಚ್ಚುವರಿ ಚಕ್ರ ಇರಿಸುವ ಜಾಗದಲ್ಲಿ ಗಾಂಜಾ ಬಚ್ಚಿಟ್ಟಿದ್ದ. ಆ ಕಾರಿನಲ್ಲಿ ನಗರದೆಲ್ಲೆಡೆ ಸುತ್ತಾಡಿ ಗಾಂಜಾ ಸರಬರಾಜು ಮಾಡುತ್ತಿದ್ದ. ಪ್ರತಿ ಕೆ.ಜಿ. ಗಾಂಜಾವನ್ನು ₹ 25 ಸಾವಿರಕ್ಕೆ ಮಾರುತ್ತಿದ್ದ' ಎಂದೂ ಹೇಳಿದರು.

## ಚಿನ್ನದ ಸಾಲ ಹೆಸರಿನಲ್ಲಿ ಮೀಟರ್ ಬಡ್ಡಿ: ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಹಲವು ಕಂಪನಿಗಳು ಚಿನ್ನದ ಸಾಲ ಹೆಸರಿನಲ್ಲಿ ಕಾನೂನುಬಾಹಿರವಾಗಿ ಮೀಟರ್ ಬಡ್ಡಿ ವ್ಯವಹಾರ ನಡೆಸುತ್ತಿವೆ' ಎಂದು ಆರೋಪಿಸಿ ಸಮೂಹ ಶಕ್ತಿ ಸಂಘಟನೆಯ ಕಾರ್ಯದರ್ಶಿಯೂ ಆಗಿರುವ ವಕೀಲ ಬಿ.ಕೆ. ಬೋಪಣ್ಣ, ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಸೋಮವಾರ ದೂರು ಸಲ್ಲಿಸಿದ್ದಾರೆ.

'ಚಿನ್ನ ಅಡವಿಟ್ಟುಕೊಂಡು ಸಾಲ ನೀಡುವ ಹಲವು ಕಂಪನಿಗಳು ನಗರದಲ್ಲಿವೆ. ಕಷ್ಟದ ಕಾಲದಲ್ಲಿ ಹಲವರು ಸಾಲ ಪಡೆದುಕೊಂಡಿದ್ದಾರೆ. ಚಿನ್ನ ವಾಪಸು ಪಡೆಯುವ ವೇಳೆಯಲ್ಲಿ ಕಂಪನಿಯವರು ಮೀಟರ್ ಬಡ್ಡಿ ಹಾಗೂ ಹಲವು ಶುಲ್ಕಗಳನ್ನು ಪಾವತಿಸುವಂತೆ ಹೇಳುತ್ತಿದ್ದಾರೆ. ಅಸಲಿಗಿಂತ ಸಾಲದ ಒಟ್ಟು ಮೊತ್ತವೇ ದುಪ್ಪಟ್ಟಾಗುತ್ತಿದೆ. ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಕಂಗೆಟ್ಟಿರುವ ಜನ, ಇಂಥ ಕಂಪನಿಗಳ ವರ್ತನೆಯಿಂದ ಬೇಸತ್ತು ಹೋಗಿದ್ದಾರೆ' ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಆರ್‌ಬಿಐ ಬ್ಯಾಂಕ್ ನಿಯಮಾವಳಿಗೆ ವಿರುದ್ಧವಾಗಿ ಕಂಪನಿಗಳು ಅಕ್ರಮ ಚಟುವಟಿಕೆಯಲ್ಲಿ ತೊಡಗಿವೆ. ಇಂಥ ಕಂಪನಿಗಳ ವಿರುದ್ಧ ಕಾನೂನಿನ್ವಯ ಕ್ರಮ ಕೈಗೊಂಡು ಜನರ ಹಿತ ಕಾಯಬೇಕು' ಎಂದೂ ಬೋಪಣ್ಣ ಒತ್ತಾಯಿಸಿದ್ದಾರೆ.

### 'ಇಂಗ್ಲೆಂಡ್' ಉಡುಗೊರೆ ನಂಬಿ ₹ 2.31 ಲಕ್ಷ ಕಳೆದುಕೊಂಡರು

**ಬೆಂಗಳೂರು:** ಇಂಗ್ಲೆಂಡ್‌ನಿಂದ ಉಡುಗೊರೆ ಬಂದಿರುವುದಾಗಿ ಹೇಳಿ ಶುಲ್ಕದ ಹೆಸರಿನಲ್ಲಿ ನಗರದ ಮಹಿಳೆಯೊಬ್ಬರಿಂದ ₹ 2.31 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಯಲಹಂಕ ನಿವಾಸಿಯಾಗಿರುವ 47 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, 'ನಿಮಗೆ ಇಂಗ್ಲೆಂಡ್‌ನಿಂದ ಉಡುಗೊರೆ ಬಂದಿದೆ. ಅದರಲ್ಲಿ ವಿದೇಶಿ ಕರೆನ್ಸಿ ಹಾಗೂ ಆಭರಣಗಳಿವೆ. ಅದನ್ನು ನಿಮ್ಮ ವಿಳಾಸಕ್ಕೆ ಕಳುಹಿಸಬೇಕಾದರೆ ಶುಲ್ಕ ಹಾಗೂ ಜಿಎಸ್‌ಟಿ ಪಾವತಿಸಬೇಕು' ಎಂದಿದ್ದರು. ಅದನ್ನು ನಂಬಿದ್ದ ಮಹಿಳೆ, ಆರೋಪಿ ಹೇಳಿದ್ದ ಖಾತೆಗಳಿಗೆ ಹಂತ ಹಂತವಾಗಿ ₹ 2.31 ಲಕ್ಷ ಜಮೆ ಮಾಡಿದ್ದರು. ನಂತರ, ಆರೋಪಿ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

### ಜಿಯೊ ಟವರ್; ₹ 2.21 ಲಕ್ಷ ವಂಚನೆ

**ಬೆಂಗಳೂರು:** ಜಿಯೊ ಟವರ್ ಅಳವಡಿಸುವ ಆಮಿಷವೊಡ್ಡಿ ನಾನಾ ಶುಲ್ಕದ ಹೆಸರಿನಲ್ಲಿ ನಗರದ ನಿವಾಸಿಯೊಬ್ಬರಿಂದ ₹ 2.21 ಲಕ್ಷ ಪಡೆದು ವಂಚಿಸಲಾಗಿದೆ. ವಸಂತನಗರದ 71 ವರ್ಷದ ವೃದ್ಧರೊಬ್ಬರು ವಂಚನೆ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

'ದೂರುದಾರರ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ಆರೋಪಿ, 'ಬೆಂಗಳೂರಿನಲ್ಲಿ ಜಿಯೊ ಟವರ್ ಅಳವಡಿಸಲಾಗುತ್ತಿದೆ. ಖಾಲಿ ಜಾಗ ನೀಡಿದರೆ ಪ್ರತಿ ತಿಂಗಳು ₹ 50,000 ಬಾಡಿಗೆ ನೀಡಲಾಗುವುದು. ಜೊತೆಗೆ, ಮುಂಗಡ ಠೇವಣಿ ₹ 60 ಲಕ್ಷ ಕೊಡಲಾಗುವುದು' ಎಂದಿದ್ದ. ಅದನ್ನು ನಂಬಿದ್ದ ದೂರುದಾರ ಆರೋಪಿಯನ್ನು ಸಂಪರ್ಕಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟವರ್ ಅಳವಡಿಕೆ ಪ್ರಕ್ರಿಯೆ ಆರಂಭಿಸಲು ಆಧಾರ್, ಚುನಾವಣಾ ಗುರುತಿನ ಚೀಟಿ, ಜಾಗದ ಪತ್ರ ಕಳುಹಿಸುವಂತೆ ಆರೋಪಿ ಹೇಳಿದ್ದ. ದೂರುದಾರ ಎಲ್ಲ ಪ್ರತಿಗಳನ್ನು ಕಳುಹಿಸಿದ್ದರು. ಅದಾದ ಬಳಿಕವೂ ಆರೋಪಿ ಅರ್ಜಿ ಭರ್ತಿ ಹಾಗೂ ನೋಂದಣಿ ಶುಲ್ಕ ಕೇಳಿದ್ದ. ಅದನ್ನೂ ನಂಬಿದ್ದ ದೂರುದಾರ ಆರೋಪಿ ಹೇಳಿದ್ದ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ ₹ 2.21 ಲಕ್ಷ ಜಮೆ ಮಾಡಿದ್ದರು.'

'ಹಣ ಪಡೆದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ. ಆತನ ಮೊಬೈಲ್ ಸಹ ಸ್ವಿಚ್ ಆಫ್ ಮಾಡಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

### 'ಟಾಟಾ' ಕೆಲಸ; ₹ 3.93 ಲಕ್ಷ ವಂಚನೆ

**ಬೆಂಗಳೂರು:** 'ಟಾಟಾ ಪ್ರಾಜೆಕ್ಟ್' ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ₹ 3.93 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಚನೆಗೀಡಾಗಿರುವ ಯಲಹಂಕದ ನಿವಾಸಿಯೊಬ್ಬರು ದೂರು ನೀಡಿದ್ದಾರೆ.

'ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದ ದೂರುದಾರ, ಆನ್‌ಲೈನ್ ಜಾಲತಾಣವೊಂದರಲ್ಲಿ ರೆಸ್ಯುಮೆ ಅಪ್‌ಲೋಡ್ ಮಾಡಿದ್ದರು. ಅದರಲ್ಲಿರುವ ಮಾಹಿತಿ ತಿಳಿದುಕೊಂಡು ಕರೆ ಮಾಡಿದ್ದ ಆರೋಪಿಗಳು, 'ಟಾಟಾ ಪ್ರಾಜೆಕ್ಟ್' ಕಂಪನಿಯಲ್ಲಿ ಹಿರಿಯ ವ್ಯವಸ್ಥಾಪಕ ಹುದ್ದೆ ಖಾಲಿ ಇದ್ದು, ಅದಕ್ಕೆ ನೀವು ಆಯ್ಕೆಯಾಗಿದ್ದೀರಿ' ಎಂಬುದಾಗಿ ಹೇಳಿ ನಂಬಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹುದ್ದೆಯ ಅರ್ಜಿ, ಸಂದರ್ಶನ ಹಾಗೂ ಇತರೆ ಪ್ರಕ್ರಿಯೆಗಳಿಗೆ ಶುಲ್ಕ ಪಾವತಿಸಬೇಕೆಂದು ಆರೋಪಿಗಳು ಹೇಳಿದ್ದರು. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 3.93 ಲಕ್ಷ ಕಳುಹಿಸಿದ್ದ. ಅದಾದ ನಂತರ ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

### 'ಕಪ್ಪು ಶಿಲೀಂಧ್ರ' ಔಷಧಿ ಹೆಸರಿನಲ್ಲಿ ₹6.12 ಲಕ್ಷ ವಂಚನೆ

**ಬೆಂಗಳೂರು:** ಕಪ್ಪು ಶಿಲೀಂಧ್ರ ರೋಗಕ್ಕೆ ಔಷಧಿ ನೀಡುವುದಾಗಿ ಹೇಳಿ ₹ 6.12 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಹೊಸಕೋಟೆ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ.

ಹೊಸಕೋಟೆ ನಿವಾಸಿಯಾದ ಮಹಿಳೆಯೊಬ್ಬರು ದೂರು ನೀಡಿದ್ದಾರೆ.

'ಕಪ್ಪು ಶಿಲೀಂಧ್ರ ರೋಗದಿಂದ ಪತಿ ಬಳಲುತ್ತಿದ್ದರು. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಗೆ ಅಗತ್ಯವಿರುವ ಚುಚ್ಚುಮದ್ದು ಆಸ್ಪತ್ರೆಯ ಔಷಧಿ ಮಳಿಗೆಯಲ್ಲಿ ಇರಲಿಲ್ಲ. ಅಕ್ವಾ ಪ್ರೈವೇಟ್ ಲಿಮಿಟೆಟ್ ಕಂಪನಿಯಲ್ಲಿ ಚುಚ್ಚು ಮದ್ದು ಸಿಗುವ ಮಾಹಿತಿ ತಿಳಿದು ಪ್ರತಿನಿಧಿಯನ್ನು ಸಂಪರ್ಕಿಸಿದ್ದೆ. ಚುಚ್ಚುಮದ್ದು ಕಳುಹಿಸುವುದಾಗಿ ಪ್ರತಿನಿಧಿ ಸೋಗಿನಲ್ಲಿ ಮಾತನಾಡಿದ ವಂಚಕ, ₹ 6.12 ಲಕ್ಷವನ್ನು ಬ್ಯಾಂಕ್ ಖಾತೆಗೆ ಹಾಕಿಸಿಕೊಂಡಿದ್ದ. ನಂತರ ಆತ ಸಂಪರ್ಕಕ್ಕೆ ಸಿಗದೇ ನಾಪತ್ತೆಯಾಗಿದ್ದಾನೆ' ಎಂದೂ ಮಹಿಳೆ ತಿಳಿಸಿದ್ದಾರೆ.

# ಕೋವಿಡ್: ಪ್ರೆಸ್ಟೀಜ್‌ನಿಂದ ₹2 ಕೋಟಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯಿಂದ ಎದುರಾಗಿರುವ ಸಂಕಷ್ಟಗಳ ಪರಿಹಾರಕ್ಕೆ ಪ್ರೆಸ್ಟೀಜ್ ಪ್ರತಿಷ್ಠಾನವು ₹2 ಕೋಟಿಯಷ್ಟು ನೆರವಿನ ಸಹಾಯಹಸ್ತ ಚಾಚಿದೆ.

ಪ್ರತಿಷ್ಠಾನವು ತನ್ನ ಸಿಎಸ್‌ಆರ್ ಚಟುವಟಿಕೆಯಡಿ ಕಳೆದ ಏಪ್ರಿಲ್‌ನಿಂದ ಈವರೆಗೆ ಕೋವಿಡ್ ನೆರವಿಗಾಗಿ ಎರಡು ಕೋಟಿ ದೇಣಿಗೆ ನೀಡಿದೆ.

ಎಲೆಕ್ಟ್ರಾನಿಕ್ ಸಿಟಿಯ ವಿಮಲಾಲಯ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆಗೆ ಸಂಸ್ಥೆ ಸಹಕರಿಸಿದೆ. ರೋಟರಿ ಮಿಡ್‌ಟೌನ್ ಮುಖೇನ ಎಚ್‌ಬಿಎಸ್ ಆಸ್ಪತ್ರೆಯಲ್ಲಿ 24 ಐಸಿಯು ಹಾಸಿಗೆಗಳ ಸೌಲಭ್ಯವನ್ನು ಸ್ಥಾಪಿಸಲು ನೆರವು ನೀಡಿದೆ. ಕೊಡಗು ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ರೋಗಿಗಳಿಗೆ ವೆಂಟಿಲೇಟರ್ ಹಾಗೂ ಆಮ್ಲಜನಕ ಸಾಂದ್ರಕಗಳನ್ನು ನೀಡಲಾಗಿದೆ.

ಕೊರೊನಾ ಸೇವೆಯಲ್ಲಿ ತೊಡಗಿರುವ ಮುಂಚೂಣಿ ಯೋಧರು ಹಾಗೂ ಸಿಬ್ಬಂದಿ ಸೇರಿದಂತೆ ಒಂದು ಸಾವಿರ ಮಂದಿಗೆ ಲಸಿಕೆ ಹಾಕಿಸುವ ಕಾರ್ಯ ಯಶಸ್ವಿಯಾಗಿದೆ.

‘ಬ್ಯಾಟರಾಯನಪುರ, ಹೆಬ್ಬಾಳ, ಕೆಂಪಾಪುರ, ನಾಗವಾರ, ಪುಲಿಕೇಶಿ ನಗರ, ಗೋವಿಂದಪುರ, ಶಿವಾಜಿನಗರ, ಸಿದ್ದಾಪುರ, ಜಯನಗರ, ಚಾಮರಾಜ ನಗರ, ವೈಟ್‌ಫೀಲ್ಡ್, ವರ್ತೂರು, ಹೊಸಕೋಟೆ ಸೇರಿದಂತೆ ಹಲವೆಡೆ ಇರುವ ದಿನಗೂಲಿ ಕಾರ್ಮಿಕರು, ಬಡ ಮಕ್ಕಳು ಸೇರಿದಂತೆ 20 ಸಾವಿರಕ್ಕೂ ಹೆಚ್ಚು ಜನರಿಗೆ ದಿನಸಿ ಹಾಗೂ ಆಹಾರ ವಿತರಿಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ಪ್ರೆಸ್ಟೀಜ್ ಸಮೂಹ ಸಂಸ್ಥೆಯ ಸಿಎಂಡಿ ಇರ್ಫಾನ್ ರಜಾಕ್, ‘ಪ್ರಸ್ತುತ ಸವಾಲಿನ ಸನ್ನಿವೇಶದಲ್ಲಿ ಕಾರ್ಮಿಕರು, ವೈದ್ಯಕೀಯ ಸಿಬ್ಬಂದಿ ಸೇವೆಗೆ ಕೃತಜ್ಞರಾಗಿದ್ದೇವೆ. ಆರೋಗ್ಯಕರ ಭವಿಷ್ಯ ಅಗತ್ಯವಿರುವ ಎಲ್ಲ ಕ್ರಮಗಳನ್ನು ಹಾಗೂ ಬೆಂಬಲ ನೀಡಲು ಇದು ಸೂಕ್ತ ಸಮಯ. ಅದಕ್ಕಾಗಿ ಸಂಸ್ಥೆ ಬದ್ಧ’ ಎಂದು ಹೇಳಿಕೆ.

# ಮುಖ್ಯಮಂತ್ರಿ ವಿರುದ್ಧ ಮಾಧುಸ್ವಾಮಿ ಗರಂ

ತುಮಕೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ. ಮಾಧುಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ನಿಮ್ಮ ಜತೆಯಲ್ಲಿ ಇರುವವರಿಗೆ ಉದಾರವಾಗಿ ವರ್ತಿಸುವಂತೆ ಹೇಳಿ. ಆ ಮೇಲೆ ನಮ್ಮ ಪರಿಶೀಲನೆ ನಡೆಸಿ’ ಎಂದು ನೇರವಾಗಿ ಹೇಳಿದ್ದಾರೆ.

ಸೋಮವಾರ ಸಂಜೆ ಕೋವಿಡ್ ನಿಯಂತ್ರಣ ಸಂಬಂಧ ಮುಖ್ಯಮಂತ್ರಿ ಜತೆಗೆ ನಡೆದ ವಿಡಿಯೊ ಸಂವಾದದಲ್ಲಿ ಸಚಿವರು, ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದಿದ್ದಾರೆ. ‘ಮೊದಲು ನಮ್ಮ ಸಮಸ್ಯೆ ಪರಿಹರಿಸಿ. ನಂತರ ಪರಿಶೀಲನೆ ನಡೆಸಿ’ ಎಂದು ಜೋರಾಗಿಯೇ ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದರು ಎಂದು ಮೂಲಗಳು ತಿಳಿಸಿವೆ.

‘ಹಿಂದೆಯೇ ಜಿಲ್ಲೆಯಲ್ಲಿ ಆಮ್ಲಜನಕದ ಒಂದು ಪ್ಲಾಂಟ್ ನಿರ್ಮಾಣಕ್ಕೆ ಅನುಮತಿ ನೀಡಿದ್ದರೆ ಈ ವೇಳೆಗೆ ಉತ್ಪಾದನೆ ಆರಂಭವಾಗುತ್ತಿತ್ತು. ನಮಗೆ ಸಮಸ್ಯೆ ಆಗುತ್ತಿರಲಿಲ್ಲ. ಎಚ್.ಡಿ. ಕೋಟೆಯಲ್ಲಿ ಆಮ್ಲಜನಕ ಘಟಕ ನಿರ್ಮಾಣ ಮಾಡಿದರೆ ಏನು ಪ್ರಯೋಜನ. ನಮಗೆ ಅವಕಾಶ ನೀಡಿದ್ದರೆ ಸಮಸ್ಯೆ ಉಂಟಾಗುತ್ತಿರಲಿಲ್ಲ. ಇದಕ್ಕೆ ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಅವರು ಅವಕಾಶ ನೀಡಲಿಲ್ಲ. ನಿಮ್ಮ ಜತೆಯಲ್ಲಿ ಇರುವವರಿಗೆ ರಾಜ್ಯವೆಲ್ಲ ನಮ್ಮದೇ ಎನ್ನುವಂತೆ ವರ್ತಿಸಲು ಹೇಳಿ’ ಎಂದು ಕೋಪ ವ್ಯಕ್ತಪಡಿಸಿದ್ದಾರೆ.

‘ಜಿಲ್ಲೆ ಸಮಸ್ಯೆಗಳಿಗೆ ಒಂದು ತಿಂಗಳಿನಿಂದ ಸಣ್ಣ ಪರಿಹಾರವೂ ಸಿಕ್ಕಿಲ್ಲ. ಒಮ್ಮೆ ಮಾಡಿ ಎನ್ನುತ್ತೀರಿ. ಇನ್ನೊಮ್ಮೆ ಮಾಡಬೇಡಿ ಎನ್ನುತ್ತೀರಿ. ಹೀಗಾದರೆ ನಾವು ಕೆಲಸ ಮಾಡುವುದಾದರೂ ಹೇಗೆ’ ಎಂದಿದ್ದಾರೆ.

ಜಿಲ್ಲೆಯಲ್ಲಿ ಆಮ್ಲಜನಕ ಕೊರತೆಯಾದ ಸಮಯದಲ್ಲಿ ಮುಖಂಡರೊಬ್ಬರು ಪ್ರಶ್ನಿಸಿದಾಗ, ‘ಮುಖ್ಯಮಂತ್ರಿ ಕೇಳಿ ಆಮ್ಲಜನಕ ಪಡೆದುಕೊಳ್ಳಿ’ ಎಂದು ಸಚಿವರು ಹೇಳಿದ್ದು ವಿವಾದಕ್ಕೆ ಸಿಲುಕಿತ್ತು.

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧಾರ

# ಕೋನದಾಸಪುರದಲ್ಲಿ ಬಹೂಪಯೋಗಿ ಟೌನ್‌ಶಿಪ್

ಪ್ರಜಾವಾಣಿ ವಾರ್ತೆ



ಬಿಡಿಎ ಆಡಳಿತ ಮಂಡಳಿ ಸಭೆಯಲ್ಲಿ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ಸೋಮವಾರ ಮಾತನಾಡಿದರು. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಡಿಎ ಆಯುಕ್ತ ರಾಜೇಶ್ ಗೌಡ ಇದ್ದಾರೆ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಕೋನದಾಸಪುರದಲ್ಲಿ ಸುಸಜ್ಜಿತವಾದ ಬಹೂಪಯೋಗಿ ಟೌನ್ ಶಿಪ್ ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಧರಿಸಿದೆ.

ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್.ವಿಶ್ವನಾಥ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಬಿಡಿಎ ಆಡಳಿತ ಮಂಡಳಿ ಸಭೆಯಲ್ಲಿ ಈ ಯೋಜನೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

ಸಭೆಯ ನಿರ್ಧಾರಗಳ ಬಗ್ಗೆ ಪ್ರತಿಕ್ರಿಯಿಸಿದ ವಿಶ್ವನಾಥ್, ‘ಖಾಸಗಿ ಸಹಭಾಗಿತ್ವದಲ್ಲಿ ಈ ಟೌನ್ ಶಿಪ್ ನಿರ್ಮಿಸಲು ಉದ್ದೇಶಿಸಲಾಗಿದೆ. 4 ಬಿಎಚ್‌ಕೆ ಮನೆಗಳಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳು, ವಾಣಿಜ್ಯ ಸಂಕೀರ್ಣಗಳು, ಮನೋರಂಜನಾ ತಾಣ, ವ್ಯಾಯಾಮ ಘಟಕಗಳು ಸೇರಿದಂತೆ ವಿವಿಧ ಸೌಲಭ್ಯಗಳನ್ನು ಇಲ್ಲಿ ಕಲ್ಪಿಸಲಾಗುತ್ತದೆ. ಖಾಸಗಿ ಟೌನ್ ಶಿಪ್‌ಗೆ ಸರಿಸಮನಾದ ಸೌಲಭ್ಯಗಳನ್ನು ಇಲ್ಲಿ ಒದಗಿಸಲಿದ್ದೇವೆ. ಈ ಯೋಜನೆಗೆ ಸರ್ಕಾರದ ಅನುಮೋದನೆ ಸಿಕ್ಕಿದ ತಕ್ಷಣವೇ ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುತ್ತದೆ’ ಎಂದು ತಿಳಿಸಿದರು.

‘ಬಿಡಿಎ ರಚಿಸಿರುವ 64 ಬಡಾವಣೆಗಳಲ್ಲಿ ಲಭ್ಯವಿರುವ ಜಮೀನುಗಳ ಪರಿಶೋಧನೆ (ಲ್ಯಾಂಡ್ ಆಡಿಟ್) ನಡೆಸಲಾಗಿದೆ. ಇವುಗಳಲ್ಲಿ 357 ಎಕರೆಗಳಷ್ಟು ಜಮೀನು ಹಂಚಿಕೆಯಾಗದೇ ಉಳಿದಿರುವುದು ಕಂಡುಬಂದಿದೆ. ಈ ಜಮೀನನ್ನು ಹರಾಜಿನ ಮೂಲಕ ಮಾರಾಟ ಮಾಡುವ ಪ್ರಸ್ತಾಪಕ್ಕೆ ಸಭೆಯಲ್ಲಿ ಅನುಮೋದನೆ ನೀಡಲಾಯಿತು’ ಎಂದರು.

‘ಆಲೂರಿನಲ್ಲಿ ನಿರ್ಮಿಸಲಾಗಿರುವ 1 ಬಿಎಚ್‌ಕೆ ವಸತಿ ಸಮುಚ್ಚಯಕ್ಕೆ ಆವರಣ ಗೋಡೆ ನಿರ್ಮಾಣ ಮತ್ತು ಹತ್ತಿರದ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ರಸ್ತೆಗಳ ನಿರ್ಮಾಣಕ್ಕೆ ₹ 1 ಕೋಟಿ ಮಂಜೂರು ಮಾಡಲು ಒಪ್ಪಿಗೆ ನೀಡಲಾಯಿತು’ ಎಂದು ಅವರು ಮಾಹಿತಿ ನೀಡಿದರು.


‘ಬನಶಂಕರಿ ಬಡಾವಣೆಯಲ್ಲಿ 100 ಅಡಿ ಮತ್ತು 80 ಅಡಿ ರಸ್ತೆಗಳ ಇಕ್ಕೆಲಗಳಲ್ಲಿ ಇರುವ ಬೀದಿದೀಪಗಳ ಕಂಬಗಳನ್ನು ರಸ್ತೆಯ ಮಧ್ಯಭಾಗಕ್ಕೆ ಸ್ಥಳಾಂತರಿಸಿ ಹೊಸದಾಗಿ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗುತ್ತದೆ. ಪ್ರಮುಖ ವೃತ್ತಗಳಲ್ಲಿ ಹೈ-ಮಾಸ್ಟ್ ದೀಪಗಳನ್ನು ಅಳವಡಿಸಲಾಗುತ್ತದೆ. ₹ 2.75 ಕೋಟಿ ವೆಚ್ಚದ ಈ ಕಾಮಗಾರಿಗಳಿಗೆ ಅನುಮೋದನೆ ನೀಡಲಾಯಿತು’ ಎಂದರು.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಿಸಲು ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲು ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. ಖಾಲಿ ಇರುವ ಹುದ್ದೆಗಳಿಗೆ ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ನೇಮಕಾತಿ ಮಾಡಿಕೊಳ್ಳಲು ಸಭೆ ತಾತ್ವಿಕವಾಗಿ ಒಪ್ಪಿಗೆ ಸೂಚಿಸಿದೆ. ಪ್ರಾಧಿಕಾರದ 2021-22 ನೇ ಸಾಲಿನ ₹ 2,252 ಕೋಟಿ ಗಾತ್ರದ ಬಜೆಟ್‌ಗೂ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

### ಪಿಆರ್‌ಆರ್– ಅನುಮೋದನೆ ಕೋರಲು ನಿರ್ಧಾರ

‘ಬಹುನಿರೀಕ್ಷಿತ ಬೆಂಗಳೂರು ಪೆರಿಫೆರಲ್ ವರ್ತುಲ ರಸ್ತೆ ಯೋಜನೆಯ ಪರಿಷ್ಕೃತ ನೀಲನಕ್ಷೆಯನ್ನು ಬಿಡಿಎ ರೂಪಿಸಿದೆ. ಈ ಯೋಜನೆ ಅನುಷ್ಠಾನಕ್ಕೆ ದೇಶ-ವಿದೇಶಗಳ ಹಲವು ಕಂಪನಿಗಳು ಆಸಕ್ತಿ ತೋರಿರುವ ಕಾರಣ ಜಾಗತಿಕ ಟೆಂಡರ್ ಕರೆಯಲು ಅನುಮತಿ ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ’ ಎಂದು ವಿಶ್ವನಾಥ್ ತಿಳಿಸಿದರು.

# ಅನುದಾನ ಮೊತ್ತದಲ್ಲಿ ತಾರತಮ್ಯ: ಮುಖ್ಯಮಂತ್ರಿಗೆ ಎಚ್‌.ಡಿ. ದೇವೇಗೌಡ ಪತ್ರ



ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯ ದಾಸರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ವಿವಿಧ ದುರಸ್ತಿ ಕಾರ್ಯಕ್ಕೆ ಸರ್ಕಾರ ಅನುಮೋದನೆ ನೀಡಿರುವ ಅನುದಾನದ ಮೊತ್ತದಲ್ಲಿ ತಾರತಮ್ಯ ಎಸಗಲಾಗಿದೆ. ಕ್ಷೇತ್ರಕ್ಕೆ ನ್ಯಾಯಯುತವಾಗಿ ಸಲ್ಲಬೇಕಾದ ಅನುದಾನವನ್ನು ಶೀಘ್ರವೇ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

‘ಬಿಬಿಎಂಪಿಗೆ ಹೊಸದಾಗಿ ಸೇರಿರುವ 110 ಹಳ್ಳಿಗಳ ಪೈಕಿ ದಾಸರಹಳ್ಳಿ ಕ್ಷೇತ್ರದ ಐದು ಹಳ್ಳಿಗಳಲ್ಲಿ ಜಲಮಂಡಳಿಯು ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ. ಈ ಕಾಮಗಾರಿಗಾಗಿ ಬಿಬಿಎಂಪಿ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ ₹405.96 ಕೋಟಿ ಮೊತ್ತದ ಅಂದಾಜು ವೆಚ್ಚದ ಪ್ರಸ್ತಾವ ಸಲ್ಲಿಸಿದ್ದಾರೆ. ನಗರಾಭಿವೃದ್ಧಿ ಇಲಾಖೆಯು ₹327 ಕೋಟಿ ಮೊತ್ತದ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ’ ಎಂದು ಅವರು ತಿಳಿಸಿದ್ದಾರೆ.

‘ಈ ಪೈಕಿ ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ₹110 ಕೋಟಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವ ಸಲ್ಲಿಸಿದ್ದರೂ ಸರ್ಕಾರದಿಂದ ₹190 ಕೋಟಿ ಬಿಡುಗಡೆಗೆ ಅನುಮೋದನೆ ನೀಡಲಾಗಿದೆ. ಯಲಹಂಕ ಮತ್ತು ಬ್ಯಾಟರಾಯನಪುರ ಕ್ಷೇತ್ರಕ್ಕೆ ₹156 ಕೋಟಿ ಬಿಡುಗಡೆ ಮಾಡಬೇಕು ಎಂದು ಪ್ರಸ್ತಾವದಲ್ಲಿ ಹೇಳಿದ್ದರೂ ₹185 ಕೋಟಿಗೆ ಅನುಮೋದನೆ ನೀಡಲಾಗಿದೆ. ಆದರೆ, ದಾಸರಹಳ್ಳಿ ಕ್ಷೇತ್ರಕ್ಕೆ ₹107.55 ಕೋಟಿ ನೀಡುವುದಾಗಿ ನೀವೇ (ಬಿ.ಎಸ್. ಯಡಿಯೂರಪ್ಪ) ಲಿಖಿತ ಉತ್ತರ ನೀಡಿದ್ದರೂ, ₹25 ಕೋಟಿಗಳ ಅನುದಾನಕ್ಕೆ ಮಾತ್ರ ಕ್ರಿಯಾಯೋಜನೆ ಸಲ್ಲಿಸಲು ಆದೇಶಿಸಲಾಗಿದೆ. ಈ ತಾರತಮ್ಯ ಹೋಗಲಾಡಿಸಿ, ಪ್ರಸ್ತಾವ ಸಲ್ಲಿಸಿದ್ದ ಮೊತ್ತದಷ್ಟು ಅನುದಾನ ನೀಡಬೇಕು’ ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಶಾಸಕ ಆರ್. ಮಂಜುನಾಥ್ ಕೂಡ ಈ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.



ಚಾಮರಾಜಪೇಟೆಯಲ್ಲಿ ಲಾರಿ ಚಾಲಕರು ಹಾಗೂ ಕ್ಲೀನರ್‌ಗಳು ರಸ್ತೆಯಲ್ಲೇ ಸೋಮವಾರ ಅಡುಗೆ ತಯಾರಿಸಿ ಊಟ ಮಾಡಿದರು

– ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ

# ಲಸಿಕೆ ಪಡೆದವರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಶೀಲ್ಡ್ ಲಸಿಕೆ ಪಡೆದವರಲ್ಲಿ ಪ್ರತಿಕಾಯಗಳ ಸೃಷ್ಟಿ ಉತ್ತಮವಾಗಿದ್ದು, ಅವರಲ್ಲಿ ರೋಗನಿರೋಧಕ ಶಕ್ತಿಯೂ ಹೆಚ್ಚಾಗಿದೆ ಎಂಬುದು ಪರೀಕ್ಷೆಯಿಂದ ದೃಢಪಟ್ಟಿದೆ.

ನಗರದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಎಸ್‌ಜೆಐಸಿಆರ್) ಕೋವಿಶೀಲ್ಡ್ ಲಸಿಕೆ ಪಡೆದಿದ್ದ 140 ಆರೋಗ್ಯ ಕಾರ್ಯಕರ್ತರಿಗೆ ಈ ಪರೀಕ್ಷೆ ನಡೆಸಲಾಗಿದೆ. ಪ್ರತಿಕಾಯಗಳ ಸ್ಪಂದನೆ ಮತ್ತು ರೋಗನಿರೋಧಕ ಶಕ್ತಿಯನ್ನು ತಿಳಿಯಲು ‘ಎಲಿಸಾ’ ಪರೀಕ್ಷೆ ನಡೆಸಲಾಗಿತ್ತು. 140 ಜನರ ಪೈಕಿ 109 ಕಾರ್ಯಕರ್ತರಲ್ಲಿ ಉತ್ತಮ ರೋಗನಿರೋಧಕ ಶಕ್ತಿ ವೃದ್ಧಿಯಾಗಿರುವುದು ಪರೀಕ್ಷೆಯಿಂದ ತಿಳಿದು ಬಂದಿದೆ. ಅಂದರೆ, ಶೇ 78 ಮಂದಿಯಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿದೆ.

ಇವರೆಲ್ಲರೂ ಕೋವಿಶೀಲ್ಡ್‌ನ ಮೊದಲ ಡೋಸ್ ಪಡೆದ ಒಂದು ತಿಂಗಳ ನಂತರ ಪರೀಕ್ಷೆ ನಡೆಸಲಾಗಿದೆ. ಒಂದು ತಿಂಗಳು ಬಿಟ್ಟು ಇವರಿಗೆ ಮತ್ತೆ ಎಲಿಸಾ ಪರೀಕ್ಷೆ ನಡೆಸಲಿದ್ದು, ಇವರೊಂದಿಗೆ ಇನ್ನೂ 200 ಜನರು ಪರೀಕ್ಷೆಗೆ ಒಳಗಾಗಲಿದ್ದಾರೆ.

‘ಕೋವಿಶೀಲ್ಡ್‌ನ ಮೊದಲ ಮತ್ತು ಎರಡನೇ ಡೋಸ್ ಲಸಿಕೆ ಪಡೆಯುವ ಅವಧಿಯನ್ನು ಸರ್ಕಾರ 6ರಿಂದ 8 ವಾರ ಇದ್ದದ್ದನ್ನು, 12ರಿಂದ 16 ವಾರಕ್ಕೆ ವಿಸ್ತರಿಸಿದಾಗ ನಮಗೆ ಸ್ವಲ್ಪ ಆತಂಕವಾಯಿತು. ಪರೀಕ್ಷೆಗೆ ಒಳಗಾಗಿದ್ದ ಈ ಆರೋಗ್ಯ ಕಾರ್ಯಕರ್ತರು ನಾಲ್ಕು ವಾರಗಳ ಅಂತರದಲ್ಲಿ ಎರಡು ಡೋಸ್ ಪಡೆದಿದ್ದರು. ಅವಧಿ ವಿಸ್ತರಣೆ ನಂತರ, ಇವರಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಯಾಗಿದೆಯೋ, ಇಲ್ಲವೋ ಎಂಬ ಅನುಮಾನವಿತ್ತು. ಆದರೆ, ನಾಲ್ಕು ವಾರಗಳ ಅವಧಿಯಲ್ಲಿಯೇ ರೋಗ ನಿರೋಧಕ ಶಕ್ತಿ ವೃದ್ಧಿಯಾಗಿರುವುದು ಪರೀಕ್ಷೆಯಿಂದ ಸಾಬೀತಾಗಿದ್ದು, ತೃಪ್ತಿ ತಂದಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ದೇಹದಲ್ಲಿ ಶೇ 30ರಷ್ಟು ಪ್ರತಿಕಾಯಗಳು ಸೃಷ್ಟಿಯಾದರೂ ಅದನ್ನು ನಾವು ಉತ್ತಮ ರೋಗನಿರೋಧಕ ಪ್ರತಿಕ್ರಿಯೆ ಎಂದು ಪರಿಗಣಿಸಬಹುದು. ನಮ್ಮ ಆರೋಗ್ಯ ಕಾರ್ಯಕರ್ತರ ಪೈಕಿ ಶೇ 50 ಮಂದಿಯಲ್ಲಿ ಶೇ 30ರಿಂದ ಶೇ 60ರಷ್ಟು ಪ್ರತಿಕಾಯಗಳು ಸೃಷ್ಟಿಯಾಗಿವೆ’ ಎಂದು ಅವರು ಹೇಳಿದರು.

## ಸೂಕ್ತ ಕ್ರಿಯಾಯೋಜನೆ ರೂಪಿಸಲು ಸಲಹೆ

# ‘3ನೇ ಅಲೆಯಿಂದ ಮಕ್ಕಳನ್ನು ರಕ್ಷಿಸಿ’

ಪ್ರಜಾವಾಣಿ ವಾರ್ತೆ



ನಾಗಸಿಂಹ ಜಿ.ರಾವ್

ಬೆಂಗಳೂರು: ‘ಕೊರೊನಾ ಮೂರನೇ ಅಲೆಗೆ ಮಕ್ಕಳು ಹೆಚ್ಚಾಗಿ ತುತ್ತಾಗಬಹುದು ಎಂಬ ವರದಿಗಳು ಬಂದಿವೆ. ಸರ್ಕಾರ ಈ ನಿಟ್ಟಿನಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಬೇಕು’ ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ಒತ್ತಾಯಿಸಿದೆ.

‘ಮಕ್ಕಳನ್ನು ರಕ್ಷಿಸಲು ಅರೋಗ್ಯ, ಗ್ರಾಮೀಣಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಶಿಕ್ಷಣ ಇಲಾಖೆ ಒಟ್ಟಾಗಿ ಕಾರ್ಯನಿರ್ವಹಿಸಬೇಕು. ಈ ಇಲಾಖೆಗಳೊಂದಿಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಮಕ್ಕಳ ಕಲ್ಯಾಣ ಸಮಿತಿ , ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಸೇರಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕು’ ಎಂದು ಟ್ರಸ್ಟ್‌ನ ನಿರ್ದೇಶಕ ನಾಗಸಿಂಹ ಜಿ.ರಾವ್ ಒತ್ತಾಯಿಸಿದ್ದಾರೆ.

‘ಗ್ರಾಮೀಣ ಪ್ರದೇಶಗಳಲ್ಲಿ ಮೂರನೇ ಅಲೆ ತಡೆಯಲು ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು. ಮಕ್ಕಳನ್ನು ರಕ್ಷಿಸುವ ಕುರಿತು ಪಂಚಾಯಿತಿ ಸದಸ್ಯರುಗಳಿಗೆ ಆನ್‌ಲೈನ್ ತರಬೇತಿ ನೀಡಬೇಕು’ ಎಂದು ಅವರು ಸಲಹೆ ನೀಡಿದ್ದಾರೆ.

‘ಅನೇಕ ಹಳ್ಳಿಗಳಲ್ಲಿ ಜನ ಮತ್ತು ಮಕ್ಕಳು ವಾರಗಟ್ಟಲೆ ಒಂದೇ ಮಾಸ್ಕ್ ಉಪಯೋಗಿಸುತ್ತಿರುವುದು ಕಂಡು ಬಂದಿದೆ. ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಹಳ್ಳಿಗಳಲ್ಲಿನ ಬಡ ಕುಟುಂಬಗಳಿಗೆ ಕುಟುಂಬಗಳ ಸದಸ್ಯರ ಆಧಾರದ ಮೇಲೆ ಪ್ರತಿ ವಾರ ಉಚಿತವಾಗಿ ಮಾಸ್ಕ್ ವಿತರಿಸಬೇಕು’ ಎಂದು ಹೇಳಿದ್ದಾರೆ.

‘ಪ್ರತಿ ಎರಡು ದಿನಗಳಿಗೊಮ್ಮೆ ಕೊರೊನಾ ಜಾಗೃತಿ ಪ್ರಚಾರ ಮಾಡಬೇಕು, ಮಕ್ಕಳೊಂದಿಗೆ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವನ್ನು ಪಂಚಾಯಿತಿಗಳು ಪಡೆದುಕೊಳ್ಳಬೇಕು’ ಎಂದೂ ಅವರು ಸಲಹೆ ನೀಡಿದ್ದಾರೆ.

## ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಮನವಿ

# ಪ್ರತ್ಯೇಕ ಪ್ಯಾಕೇಜ್ ಘೋಷಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕ –ಶಿಕ್ಷಕೇತರ ಸಿಬ್ಬಂದಿಗೆ ರಾಜ್ಯ ಸರ್ಕಾರ ಪ್ರತ್ಯೇಕ ಪ್ಯಾಕೇಜ್ ಘೋಷಿಸಬೇಕು. ಜೊತೆಗೆ, ಈ ಸಂಸ್ಥೆಗಳು ಸಂಕಷ್ಟದ ಪರಿಸ್ಥಿತಿ ನಿಭಾಯಿಸಲು ₹ 1 ಸಾವಿರ ಕೋಟಿ ಮೀಸಲಿಟ್ಟು ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಬೇಕು’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಕರ್ನಾಟಕ ಖಾಸಗಿ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿ, ಶಿಕ್ಷಕ–ಶಿಕ್ಷಕೇತರ ಸಂಘಟನೆಗಳ ಸಮನ್ವಯ ಸಮಿತಿ ಮನವಿ ಸಲ್ಲಿಸಿದೆ.

‘ಖಾಸಗಿ ಅನುದಾನರಹಿತ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗೆ ಗೌರವಧನ ಹಾಗೂ ಪ್ರಸ್ತುತ ಪರಿಸ್ಥಿತಿಯ ಪರಿಹಾರಗಳನ್ನು ವಿಪತ್ತು ಕಾಯ್ದೆಯಡಿ ನೀಡುವಂತೆ ಈ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಉಚಿತವಾಗಿ ಕೋವಿಡ್ ಲಸಿಕೆ ನೀಡಲು ವಿಶೇಷ ವ್ಯವಸ್ಥೆ ಮಾಡುವಂತೆಯೂ ಕೋರಲಾಗಿತ್ತು. ಆದರೆ, ಈ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸಿಲ್ಲ’ ಎಂದು ಮನವಿಯಲ್ಲಿ ಸಮಿತಿಯ ಸಂಚಾಲಕ ಡಿ. ಶಶಿಕುಮಾರ್ ಅಳಲು ತೋಡಿಕೊಂಡಿದ್ದಾರೆ.

‘ಕೋವಿಡ್ ಕಾರಣ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಎರಡು ವರ್ಷಗಳ ಶುಲ್ಕವನ್ನು ಪೋಷಕರು ಸರಿಯಾಗಿ ಪಾವತಿಸಿಲ್ಲ. ಸರ್ಕಾರ ನಿಗದಿಪಡಿಸಿದ ಶುಲ್ಕವನ್ನೂ ಪೋಷಕರು ಪಾವತಿಸದೇ ಇರುವುದರಿಂದ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಶಿಕ್ಷಕ– ಶಿಕ್ಷಕೇತರ ಸಿಬ್ಬಂದಿಗೆ ಕನಿಷ್ಠ ವೇತನ ಕೂಡಾ ಕೊಡಲು ಸಾಧ್ಯ ಆಗಿಲ್ಲ. ಕಳೆದ ವರ್ಷದ ಆರ್‌ಟಿಇ ಮರು ಪಾವತಿ ಹಣವನ್ನೂ ಬಹುತೇಕ ಶಾಲೆಗಳಿಗೆ ಸರ್ಕಾರ ನೀಡಿಲ್ಲ’ ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

# ರಾಷ್ಟ್ರೀಯ ಶಿಕ್ಷಣ ನೀತಿ ಸಭೆ ತಮಿಳುನಾಡು ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಚೆನ್ನೈ: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕುರಿತು ಸೋಮವಾರ ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೊಖ್ರಿಯಾಲ್ ಅವರು ನಡೆಸಿದ ವರ್ಚುವಲ್ ಸಭೆಗೆ ತಮಿಳುನಾಡು ಸರ್ಕಾರ ಬಹಿಷ್ಕಾರ ಹಾಕಿತು.

ಇಂತಹ ಮಹತ್ವದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರವು, ಸಚಿವರ ಜತೆ ಸಮಾಲೋಚನೆ ಮಾಡಬೇಕೇ ಹೊರತು ಅಧಿಕಾರಿಗಳ ಜತೆ ಅಲ್ಲ ಎಂದು ತಿಳಿಸಿದೆ.

ಸಭೆಯಲ್ಲಿ ಸಚಿವರು ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ಕೋರಿ ತಮಿಳುನಾಡು ಶಿಕ್ಷಣ ಸಚಿವ ಅಂಬಿಲ್ ಮಹೇಶ್ ಪೊಯ್ಯಾಮೊಳಿ ಅವರು ಕೇಂದ್ರ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದರು. ಆದರೆ, ಈ ಪತ್ರಕ್ಕೆ ಯಾವುದೇ ರೀತಿಯ ಪ್ರತಿಕ್ರಿಯೆ ದೊರೆಯಲಿಲ್ಲ. ಹೀಗಾಗಿ, ರಾಜ್ಯ ಸರ್ಕಾರದ ಅಧಿಕಾರಿಗಳು ಸಭೆಯಿಂದ ದೂರ ಉಳಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಹಲವು ಅಂಶಗಳಿಗೆ ತಮಿಳುನಾಡು ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ. ತ್ರಿಭಾಷಾ ನೀತಿ ಮತ್ತು ಮೂರನೇ, ಐದನೇ ಮತ್ತು ಎಂಟನೇ ತರಗತಿಗಳಿಗೆ ಪರೀಕ್ಷೆ ನಡೆಸುವ ಬಗ್ಗೆ ವಿರೋಧ ವ್ಯಕ್ತಪಡಿಸಿದೆ ಎಂದು ಸಚಿವ ಅಂಬಿಲ್ ಮಹೇಶ್ ಅವರು ತಿಳಿಸಿದರು.

# ‘ಕೋವಿನ್’ ಪೋರ್ಟಲ್: ಶೀಘ್ರದಲ್ಲೇ 14 ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯ

ನವದೆಹಲಿ (ಪಿಟಿಐ): ‘ಕೋವಿನ್’ ವೆಬ್ ಪೋರ್ಟಲ್ ಮುಂದಿನ ವಾರದಿಂದ ಹಿಂದಿ ಮತ್ತು 14 ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಸೋಮವಾರ ತಿಳಿಸಿದೆ.

ಕೋವಿಡ್ -19ರ ರೂಪಾಂತರಗಳನ್ನು ಮೇಲ್ವಿಚಾರಣೆ ಮಾಡಲು ಇನ್ನೂ 17 ಪ್ರಯೋಗಾಲಯಗಳನ್ನು ಐಎನ್‌ಎಸ್‌ಎಸಿಒಜಿ ನೆಟ್‌ವರ್ಕ್‌ಗೆ ಸೇರಿಸಲಾಗುವುದು ಎಂದೂ ಸಚಿವಾಲಯವು ಹೇಳಿದೆ.

ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಕೋವಿಡ್–19 ಕುರಿತು ನಡೆದ ಸಚಿವರ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಸಚಿವಾಲಯದ ಪ್ರಕಟಣೆಯು ತಿಳಿಸಿದೆ.

‘ಕೋವಿನ್’ ವೆಬ್ ಪೋರ್ಟಲ್‌ನಲ್ಲಿ ಮನೆಯಲ್ಲಿ ಪ್ರತ್ಯೇಕವಾಗಿ ಇರುವ ಕುರಿತು ಮಾರ್ಗಸೂಚಿಗಳ ಮಾಹಿತಿಯನ್ನು ನೀಡಲಾಗಿದ್ದು, ಹಿಂದಿ ಸೇರಿದಂತೆ ಇತರ 14 ಪ್ರಾದೇಶಿಕ ಭಾಷೆಗಳಲ್ಲೂ ಮುಂದಿನ ವಾರದಿಂದ ಮಾಹಿತಿ ಲಭ್ಯವಾಗಲಿದೆ. ಆಸ್ಪತ್ರೆಗೆ ದಾಖಲಿಸುವುದು, ಐಸಿಯುಗೆ ಪ್ರವೇಶ, ರೆಮ್‌ಡಿಸಿವಿರ್ ಕುರಿತ ಮಾಹಿತಿಗಳು ಎದ್ದು ಕಾಣುವಂತೆ ಚಿಹ್ನೆಗಳನ್ನೂ ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ ಎಂದು ಸಚಿವಾಲಯವು ತಿಳಿಸಿದೆ.

## 20 ವರ್ಷದ ನಂತರ ನಾಳೆಯಿಂದ ಕಾರ್ಯಾರಂಭ

# ಲೋಕಾರ್ಪಣೆಗೆ ಬಿಜಿಎಂಎಲ್ ಆಸ್ಪತ್ರೆ ಸಜ್ಜು

ಪ್ರಜಾವಾಣಿ ವಾರ್ತೆ



ಬಿಜಿಎಂಎಲ್ ಆಸ್ಪತ್ರೆಯಲ್ಲಿ ನವೀಕರಣಗೊಂಡಿರುವ ವಾರ್ಡ್


ಕೆಜಿಎಫ್: ಕೋವಿಡ್–19ರ ಎರಡನೇ ಅಲೆಯ ಸಂದರ್ಭಲ್ಲಿ ಬಿಜಿಎಂಎಲ್ ಆಸ್ಪತ್ರೆ ಮರುಚಾಲನೆಗೆ ಮರು ಜೀವ ಬಂದಿದ್ದು, ಮರು ಆರಂಭಕ್ಕೆ ಕ್ಷಣಗಣನೆ ಶುರುವಾಗಿದೆ.

ಬಿಜಿಎಂಎಲ್ (ಚಿನ್ನದ ಗಣಿ) 2001 ರಲ್ಲಿ ಮುಚ್ಚಿದ ನಂತರ, ಅದರ ಆಡಳಿತದಲ್ಲಿ ನಡೆಯುತ್ತಿದ್ದ ಬಿಜಿಎಂಎಲ್ ಆಸ್ಪತ್ರೆ ಕೂಡ 107 ವರ್ಷಗಳ ಸೇವೆಯನ್ನು ನೀಡಿ ಬಾಗಿಲು ಮುಚ್ಚಿತು.ಅಂದಿನಿಂದ ಹಲವಾರು ಬಾರಿ ಆಸ್ಪತ್ರೆಯನ್ನು ಮರುಬಳಕೆ ಮಾಡಿಕೊಳ್ಳಬೇಕೆಂಬ ಮಾತುಗಳು ಕೇಳಿ ಬಂದರೂ ಕಾರ್ಯಗತಗೊಂಡಿರಲಿಲ್ಲ.

ಕೋವಿಡ್ ಎರಡನೇ ಅಲೆ ತೀವ್ರವಾಗಿರುವ ಈ ಸಂದರ್ಭದಲ್ಲಿ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದೆ ಇದ್ದಾಗ, ಕಾರ್ಯಕರ್ತರ ಒತ್ತಾಸೆಗೆ ಮಣಿದ ಸಂಸದ ಎಸ್.ಮುನಿಸ್ವಾಮಿ ಆಸ್ಪತ್ರೆಗೆ ಭೇಟಿ ನೀಡಿದರು. ಆಸ್ಪತ್ರೆಯ ವಿಸ್ತಾರ, ಆಕಾರ ಮತ್ತು ಪರಿಸರ ಕಂಡು ಆಸ್ಪತ್ರೆಗೆ ಮರು ಜೀವ ಕೊಡಲು ತೀರ್ಮಾನಿಸಿದರು. ಸ್ಥಳದಲ್ಲಿಯೇ ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಷಿ ಅವರನ್ನು ಸಂಪರ್ಕಿಸಿ, ಕೋವಿಡ್ ಆಸ್ಪತ್ರೆಗಾಗಿ ಅನುಮತಿ ಪಡೆದರು. ಬಿಜೆಪಿ ಮತ್ತು ಆರ್ ಎಸ್‌ಎಸ್ ಕಾರ್ಯಕರ್ತರನ್ನು ಬಳಸಿಕೊಂಡು ಐದು ಎಕರೆ ವಿಸ್ತೀರ್ಣವುಳ್ಳ ಆಸ್ಪತ್ರೆಯಲ್ಲಿ ಸ್ವಚ್ಛತಾ ಕಾರ್ಯ ಶುರು ಮಾಡಿದರು.

ಎರಡು ವಾರಗಳ ಕಾಲ ನಿರಂತರವಾಗಿ ನಡೆದ ಸ್ವಚ್ಛತಾ ಕಾರ್ಯ ನಡೆದು, ಮೂರು ವಾರ್ಡ್‌ಗಳು ಸಿದ್ದವಾಗಿದೆ. ಕಾರ್ಮಿಕರ ಬಾಯಲ್ಲಿ ಜನನಿತವಾಗಿದ್ದ ‘ಕಂಪನಿ ಆಸ್ಪತ್ರೆ’ ಮೇ 19 ರಂದು ಮರು-ಲೋಕಾರ್ಪಣೆಯಾಗಲು ಸಕಲ ಸಿದ್ಧತೆ ಮಾಡಲಾಗಿದೆ. ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಷಿ ವರ್ಚುವಲ್ ಮೀಟ್ ಮೂಲಕ ಆಸ್ಪತ್ರೆಯನ್ನು ಉದ್ಘಾಟಿಸಲಿದ್ದಾರೆ ಎಂದು ಸ್ವಚ್ಛತೆಯ ಉಸ್ತುವಾರಿ ವಹಿಸಿರುವ ಕಮಲನಾಥನ್ ಮಾಹಿತಿ ನೀಡಿದರು.

# ಶಿಕ್ಷಕರನ್ನು ಕೋವಿಡ್ ಯೋಧರೆಂದು ಘೋಷಿಸಿ: ಸಭಾಪತಿ ಹೊರಟ್ಟಿ



ಬಸವರಾಜ ಹೊರಟ್ಟಿ

ಬೆಂಗಳೂರು: ಶಾಲಾ ಶಿಕ್ಷಕರನ್ನು ‘ಕೋವಿಡ್ ಯೋಧ’ರು ಎಂದು ಘೋಷಿಸುವಂತೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ ಶಿಕ್ಷಕರು ಮತ್ತು ಅಧಿಕಾರಿಗಳನ್ನು ಕೋವಿಡ್ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗಿದೆ. ಸರ್ಕಾರ ಕೆಲವೇ ಇಲಾಖೆಗಳ ಸಿಬ್ಬಂದಿಯನ್ನು ಮಾತ್ರ ಕೋವಿಡ್ ಯೋಧರೆಂದು ಪರಿಗಣಿಸಲಾಗಿದೆ. ಶಿಕ್ಷಕರನ್ನು ಪರಿಗಣಿಸಿಲ್ಲ ಎಂದು ಅವರು ಹೇಳಿದ್ದಾರೆ.

ಕೂಡಲೇ ರಾಜ್ಯದ ಎಲ್ಲ ಶಿಕ್ಷಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ಆದ್ಯತೆ ಮೇರೆಗೆ ಕೋವಿಡ್ ಲಸಿಕೆ ಹಾಕಿಸಲು ಸರ್ಕಾರ ಕ್ರಮವಹಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟ ಶಿಕ್ಷಕರ ಕುಟುಂಬಕ್ಕೆ ಸೂಕ್ತ ಆರ್ಥಿಕ ಪರಿಹಾರ ನೀಡಿ, ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಕೋವಿಡ್ ಸೋಂಕಿಗೆ ತುತ್ತಾಗುತ್ತಿರುವ ಶಿಕ್ಷಕರಿಗೆ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡ್‌ಗಳನ್ನು ಗುರುತಿಸಿ ಆದ್ಯತೆ ಮೇರೆಗೆ ಸೂಕ್ತ ಚಿಕಿತ್ಸೆಯನ್ನು ಒದಗಿಸುವ ವ್ಯವಸ್ಥೆ ಮಾಡಬೇಕು ಎಂದೂ ಒತ್ತಾಯಿಸಿದ್ದಾರೆ.

ಕೋವಿಡ್ ನಿರ್ವಹಿಸುವ ಶಿಕ್ಷಕರಿಗೆ ಪಿಪಿಇ ಕಿಟ್, ಸ್ಯಾನಿಟೈಸರ್, ಮಾಸ್ಕ್ ಇತ್ಯಾದಿಗಳನ್ನು ನೀಡಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

## ವ್ಯಾಪಾರವಿಲ್ಲದೆ ಜೀವನ ನಿರ್ವಹಣೆಗೆ ಪರದಾಟ

# ಕೋವಿಡ್: ಕುಂಬಾರರ ಬದುಕು ಅತಂತ್ರ

• ಶಿವರಾಜ್ ಮೌರ್ಯ



ಕೆ.ಆರ್‌.ಪುರದ ಹಳೆ ಪೊಲೀಸ್ ಠಾಣೆ ರಸ್ತೆಯಲ್ಲಿರುವ ಮಡಿಕೆ ಅಂಗಡಿ

ಕೆ.ಆರ್.ಪುರ: ಬೇಸಿಗೆ ಆರಂಭವಾಗುತ್ತಿದ್ದಂತೆ ನಗರದ ಮುಖ್ಯ ರಸ್ತೆಗಳಲ್ಲಿ ಹೆಚ್ಚು ಮಾರಾಟವಾಗುತ್ತಿದ್ದ ಮಣ್ಣಿನ ಮಡಿಕೆಗಳು ಲಾಕ್‌ಡೌನ್‌ನಿಂದಾಗಿ ಬೇಡಿಕೆ ಕಳೆದುಕೊಂಡಿವೆ. ಖರೀದಿಗೆ ಗ್ರಾಹಕರಿಲ್ಲದೆ ಕುಂಬಾರರ ಬದುಕು ಅತಂತ್ರವಾಗಿದೆ.

ಕೋವಿಡ್ ಎರಡನೇ ಅಲೆಯಿಂದಾಗಿ ಬೆಂಗಳೂರು ಸೇರಿ ಇಡೀ ರಾಜ್ಯಕ್ಕೆ ಬೀಗ ಹಾಕಿದಂತಾಗಿದೆ. ಇದರ ಪರಿಣಾಮ ಕೆ.ಆರ್.ಪುರ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ನೂರಾರು ಕುಂಬಾರು ವ್ಯಾಪಾರವಿಲ್ಲದೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಬೇಸಿಗೆಯಲ್ಲಿ ಹೊಟ್ಟೆಗೆ ತಣ್ಣೀರು ಬಟ್ಟೆ.. ಎನ್ನುತ್ತಾ ಜೀವನ ನಿರ್ವಹಣೆಗಾಗಿ ಪರದಾಡುತ್ತಿದ್ದಾರೆ.

ಕೆ.ಆರ್.ಪುರದ ಹಳೆ ಮದ್ರಾಸ್ ರಸ್ತೆ, ಕುಂಬಾರ ಬೀದಿ, ಹಳೆ ಪೊಲೀಸ್ ಠಾಣೆ ರಸ್ತೆ, ಕೆ.ನಾರಾಯಣಪುರ, ಬೈಯಪ್ಪನಹಳ್ಳಿ ಮುಂತಾದ ಕಡೆಗಳಲ್ಲಿ ನೂರಕ್ಕೂ ಹೆಚ್ಚು ಕುಟುಂಬಗಳು ಕುಂಬಾರಿಕೆ ವೃತ್ತಿಯನ್ನೇ ಅವಲಂಬಿಸಿವೆ.

ಕೆಲ ಕುಟುಂಬಗಳು ಮಡಿಕೆ ಪಾಟ್ ಹಾಗೂ ಇನ್ನಿತರ ಮಣ್ಣಿನ ವಸ್ತುಗಳನ್ನು ಬೇರೆ ಊರುಗಳಿಂದ ಖರೀದಿಸಿ ತಂದು, ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದವು. ಇನ್ನೂ ಕೆಲವರು ಗಣೇಶ ಚತುರ್ಥಿ ಸಂದರ್ಭದಲ್ಲಿ ಮೂರ್ತಿಗಳನ್ನು ಮಾಡುವ ಮೂಲಕ ಜೀವನ ಸಾಗಿಸುತ್ತಿದ್ದರು.

‘ಕೊರೊನಾದಿಂದಾಗಿ ಕಳೆದ ವರ್ಷದ ಮಾರ್ಚ್‌ನಿಂದಲೂ ವ್ಯಾಪಾರ ಇಲ್ಲವಾಗಿದೆ. ಈ ವರ್ಷದ ಆರಂಭದಲ್ಲಿ ಕೊರೊನಾ ತಗ್ಗಿತ್ತು. ಹಾಗಾಗಿ, ಈ ಬೇಸಿಗೆಯಲ್ಲಿ ವ್ಯಾಪಾರ ನಡೆಸಿ, ಒಂದಷ್ಟು ಲಾಭ ಕಾಣುವ ಕನಸು ಕಾಣುತ್ತಿರುವಾಗಲೇ ಲಾಕ್‌ಡೌನ್‌ನಿಂದಾಗಿ ಮತ್ತೆ ಪೆಟ್ಟು ಬಿತ್ತು’ ಎಂದು ಮಡಿಕೆ ಅಂಗಡಿ ವ್ಯಾಪಾರಿ ಬಾಬು ಅಳಲು ತೋಡಿಕೊಂಡರು.

‘ಕೊರೊನಾದಿಂದ ನೂರಾರು ಮಂದಿ ಮೃತಪಟ್ಟರೂ, ಅಂತ್ಯಕ್ರಿಯೆಗೆ ಮಡಿಕೆ ಖರೀದಿಸಲು ಜನ ಬರುತ್ತಿಲ್ಲ. ಬಹುತೇಕರು ಯಾವುದೇ ವಿಧಿ ವಿಧಾನಗಳನ್ನು ಪಾಲಿಸುತ್ತಿಲ್ಲ. ಸಾರಿಗೆ ಇಲ್ಲದಿರುವುದೂ ನಮಗೆ ಇದಕ್ಕೆ ಕಾರಣ’ ಎಂದು ಬೇಸರ ವ್ಯಕ್ತಪಡಿಸಿದರು.

‘ಅಕ್ಕಪಕ್ಕದ ಜಿಲ್ಲೆಗಳಿಂದ ಸಾಲ ಮಾಡಿ, ಮಡಿಕೆಗಳನ್ನು ತಂದು ದಾಸ್ತಾನು ಮಾಡಿಕೊಂಡಿದ್ದೆವು. ಯುಗಾದಿ ಹಬ್ಬಕ್ಕೆ ತಯಾರಿಸಿದ ಬೇವಿನ ಗಡಿಗೆ ಹಾಗೆಯೇ ಉಳಿದಿದೆ. ಒಲೆ, ಮಡಿಕೆಗಳು, ಹೂಜಿಗಳು, ತಂಪಾದ ಗಡಿಗೆಗಳಿಗೆ ಬೇಸಿಗೆಯಲ್ಲಿ ಬೇಡಿಕೆ ಇರುತ್ತಿತ್ತು. ಬೇಸಿಗೆಯ ಆದಾಯದಿಂದ ಇಡೀ ವರ್ಷ ಜೀವನ ಸಾಗುತ್ತಿತ್ತು. ವರ್ಷದಿಂದ ಜೀವನ ನಿರ್ವಹಣೆ ಸಮಸ್ಯೆಯಾಗಿದೆ’ ಎಂದು ಕುಂಬಾರಿಕೆ ವೃತ್ತಿ ನೆಚ್ಚಿಕೊಂಡಿರುವ ನಂಜುಂಡಪ್ಪ ಹೇಳಿದರು.

‘ಕೊರೊನಾದಿಂದ ಕುಂಬಾರಿಕೆ ವೃತ್ತಿಯ ಕುಟುಂಬಗಳ ಜೀವನ ದುಸ್ತರವಾಗಿದೆ. ಕುಲ ಕಸುಬು ನಂಬಿಕೊಂಡಿರುವ ಕುಂಬಾರರಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು. ನೆರವು ನೀಡುವ ಮೂಲಕ ಇವರ ಸಂಕಷ್ಟ ಪರಿಹರಿಸಬೇಕು’ ಎಂದು ಕುಂಬಾರ ಸಮಾಜದ ಮುಖಂಡ ಕೆ. ಪಿ.ಕೃಷ್ಣ ಒತ್ತಾಯಿಸಿದರು.

# ಮೋದಿ ವಿರುದ್ಧ ಕಾಂಗ್ರೆಸ್ ಟೀಕೆ




ಜೈರಾಂ ರಮೇಶ್

ನವದೆಹಲಿ: ಕೊರೊನಾ ವೈರಸ್‌ನ ರೂಪಾಂತರಗಳನ್ನು ಪತ್ತೆಹಚ್ಚಲು ಕೇಂದ್ರ ಸರ್ಕಾರವು ರಚಿಸಿರುವ ಉನ್ನತ ವೈಜ್ಞಾನಿಕ ಸಲಹೆಗಾರರ ವೇದಿಕೆಯ ಅಧ್ಯಕ್ಷ ಸ್ಥಾನಕ್ಕೆ ವೈರಾಣು ತಜ್ಞ ಡಾ.ಶಾಹೀದ್ ಜಮೀಲ್ ಅವರು ರಾಜೀನಾಮೆ ನೀಡಿರುವ ಕುರಿತು ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರವನ್ನು ಗುರಿಯಾಗಿಸಿಕೊಂಡು ಟೀಕೆ ಮಾಡಿದೆ.

‘ದೇಶದ ಅತ್ಯುತ್ತಮ ವೈರಾಣು ತಜ್ಞರಲ್ಲೊಬ್ಬರಾಗಿದ್ದ ಡಾ. ಶಾಹೀದ್ ಜಮೀಲ್ ಅವರು ರಾಜೀನಾಮೆ ಸಲ್ಲಿಸಿರುವುದು ನೋವಿನ ಸಂಗತಿ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದಲ್ಲಿ ಭಯವಿಲ್ಲದೆ ಮುಕ್ತವಾಗಿ ಮಾತನಾಡುವ ವೃತ್ತಿಪರರಿಗೆ ಸ್ಥಾನವಿಲ್ಲ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಮ್ ರಮೇಶ್ ಹೇಳಿದ್ದಾರೆ.

# ಕೂಡ್ಲಿ ಶೃಂಗೇರಿ ಮಠದ ಪೀಠಾಧಿಪತಿ ನಿಧನ



ವಿದ್ಯಾಭಿನವ ಶಂಕರಭಾರತಿ ಸ್ವಾಮೀಜಿ


ಬೆಂಗಳೂರು: ಇಲ್ಲಿನ ಚಾಮರಾಜಪೇಟೆಯಲ್ಲಿರುವ ಕೂಡ್ಲಿ ಶೃಂಗೇರಿ ಮಠದ ಪೀಠಾಧಿಪತಿ ವಿದ್ಯಾಭಿನವ ಶಂಕರಭಾರತಿ ಸ್ವಾಮೀಜಿ ಶ್ರೀಮಠದಲ್ಲಿ ಸೋಮವಾರ ನಿಧನರಾದರು.

ಬಾಲ್ಯದಿಂದಲೂ ಆಧ್ಯಾತ್ಮದಲ್ಲಿ ಆಸಕ್ತಿ ಹೊಂದಿದ್ದ ಶ್ರೀಗಳು ಧಾರವಾಡದ ಶಂಕರಾಚಾರ್ಯ ಪಾಠಶಾಲೆಯಲ್ಲಿ ವೇದ, ಧರ್ಮಶಾಸ್ತ್ರಗಳ ಅಧ್ಯಯನ ನಡೆಸಿದ್ದರು. 2004ರಲ್ಲಿ ಶ್ರೀಮಠದ ಪೀಠಾಧಿಪತಿಯಾಗಿ ನಿಯುಕ್ತಿಗೊಂಡಿದ್ದರು. ಮಠದ ಏಳಿಗೆಗೆ ಹಲವು ಕಾರ್ಯಕ್ರಮಗಳನ್ನು ಅವರು ರೂಪಿಸಿದ್ದರು.

ಸನಾತನ ಹಿಂದೂ ಧರ್ಮ ರಕ್ಷಣೆ ಮತ್ತು ಯುವ ಪೀಳಿಗೆಯಲ್ಲಿ ಹಿಂದೂ ಧರ್ಮ ಜಾಗೃತಿಗಾಗಿ ಶ್ರಮಿಸಿದ್ದರು. ಆದಿ ಜಗದ್ಗುರು ಶಂಕರಾಚಾರ್ಯರ ತತ್ವ- ಸಿದ್ಧಾಂತಗಳನ್ನು ಜನಮಾನಸಕ್ಕೆ ತಲುಪಿಸುವಲ್ಲಿ ನಿರಂತರವಾಗಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದ ಶ್ರೀಗಳು ಜಗದ್ಗುರು ಶಂಕರಾಚಾರ್ಯರ ಜಯಂತಿ ದಿನದಂದೇ ದೈವಾಧೀನರಾಗಿದ್ದಾರೆ.

ಮೂಲತಃ ಧಾರವಾಡದವರಾಗಿದ್ದ ಶ್ರೀಗಳು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಧರರಾಗಿ ತಮ್ಮ ಪೂರ್ವಾಶ್ರಮದಲ್ಲಿ ಧಾರವಾಡದ ಕೆ.ಇ. ಬೋರ್ಡ್ ಶಾಲೆಯಲ್ಲಿ ಸಂಸ್ಕೃತ ಶಿಕ್ಷಕರಾಗಿ ಹಾಗೂ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದರು ಎಂದು ಮಠದ ಮೂಲಗಳು ತಿಳಿಸಿವೆ.

# ಭತ್ತದ ತಳಿ ಸಂಗ್ರಹ: ಸಚಿವೆ ನಿರ್ಮಲಾ ಮೆಚ್ಚುಗೆ


ಭತ್ತದ ಬೋರೇಗೌಡ

ಮಂಡ್ಯ: ಭತ್ತದ ವಿವಿಧ ತಳಿ, ಕೃಷಿ ಪರಿಕರಗಳನ್ನು ಸಂಗ್ರಹಿಸಿ 'ಮ್ಯೂಸಿಯಂ ಮ್ಯಾನ್' ಎಂದೇ ಹೆಸರಾಗಿರುವ, ತಾಲ್ಲೂಕಿನ ಶಿವಳ್ಳಿಯ ಭತ್ತದ ಬೋರೇಗೌಡ ಅವರ ಕಾರ್ಯವು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮೆಚ್ಚುಗೆಗೆ ಪಾತ್ರರಾಗಿದೆ. ಸಚಿವೆಯ ಟ್ವೀಟ್ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮಾಧ್ಯಮಗಳಲ್ಲಿ ಬಂದ ಬೋರೇಗೌಡರ ಸಾಧನೆ ಗಮನಿಸಿದ ಸಚಿವೆ, ರೈತ ಸಂಗ್ರಹಿಸಿದ ದೇಸಿ ಭತ್ತದ ತಳಿಗಳ ಚಿತ್ರದೊಂದಿಗೆ ಸಂದೇಶ ಪ್ರಕಟಿಸಿದ್ದರು. 'ಭಾರತದ ಶ್ರೀಮಂತ ಕೃಷಿ ಪರಂಪರೆಗೆ, ಆ ವ್ಯಕ್ತಿಯ ನೀಡಿರುವ ಸ್ವಯಂಪ್ರೇರಿತ ಕೊಡುಗೆ ಅನುಕರಣೀಯ' ಎಂದು ಸಂದೇಶ ಹಾಕಿದ್ದರು.

ಬೋರೇಗೌಡರು ತಮ್ಮ ಮನೆಗೆ ಮ್ಯೂಸಿಯಂ ರೂಪ ಕೊಟ್ಟು, 210ಕ್ಕೂ ಹೆಚ್ಚು ಸ್ಥಳೀಯ ಭತ್ತದ ತಳಿ ಸಂಗ್ರಹಿಸಿದ್ದಾರೆ. ಜೊತೆಗೆ ಕೃಷಿಗೆ ಬಳಸುತ್ತಿದ್ದ ಹಳೆಯ ಮರದ ನೇಗಿಲು, ಕುಡುಗೋಲು ಸೇರಿದಂತೆ ಹಲವು ಉಪಕರಣಗಳನ್ನು ಸಂಗ್ರಹಿಸಿದ್ದಾರೆ.

'ನಾಟಿ ತಳಿಯಲ್ಲಿ ಅತಿ ಹೆಚ್ಚು ಪೋಷಕಾಂಶಗಳಿವೆ. ಹೈಬ್ರೀಡ್ ತಳಿಗಳ ಫಸಲಿನಲ್ಲಿ ಇಳುವರಿ ಹೆಚ್ಚಿರುತ್ತದೆ, ಆದರೆ ಗುಣಮಟ್ಟ ಇರುವುದಿಲ್ಲ. ಈ ಬಗ್ಗೆ ರೈತರಲ್ಲಿ ಅರಿವು ಮೂಡಿಸುತ್ತಿದ್ದೇನೆ. ಸಂಗ್ರಹಾಲಯದ ಬಗ್ಗೆ ಕೇಂದ್ರ ಸಚಿವೆ ಟ್ವೀಟ್ ಮಾಡಿರುವುದು ಸಂತಸ ತಂದಿದೆ' ಎಂದು ಕೃಷಿಕ ಬೋರೇಗೌಡ ಹೇಳಿದರು.



# ರೈತನ ಈರುಳ್ಳಿ ಖರೀದಿಸಿದ ನಟ ಉಪೇಂದ್ರ

ಪಟ್ರೇಹಳ್ಳಿ (ಹಿರಿಯೂರು): ತಾಲ್ಲೂಕಿನ ಪಟ್ರೇಹಳ್ಳಿ ಗ್ರಾಮದ ಮಹೇಶ್ ಬೆಳೆದಿದ್ದ 60 ಚೀಲ ಈರುಳ್ಳಿಯನ್ನು ನಟ ಉಪೇಂದ್ರ ಖರೀದಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಉಪೇಂದ್ರ ಅವರು ಹಂಚಿಕೊಂಡಿದ್ದ ಫೋನ್ ನಂಬರ್ ಸಂಪರ್ಕಿಸಿದ್ದ ರೈತ ಲಾಭದ ನಿರೀಕ್ಷೆ ಇಲ್ಲದೇ ಮಾರಾಟ ಮಾಡಿದ್ದಾರೆ.

ಮಹೇಶ್, ಉಪೇಂದ್ರ ಅವರಿಗೆ ಕರೆ ಮಾಡಿ ಈರುಳ್ಳಿಯನ್ನು ಬೆಂಗಳೂರಿಗೆ ಒಯ್ದು ಮಾರಾಟ ಮಾಡಿದ್ದಾರೆ. ಬಾಡಿಗೆ ಸೇರಿಸಿ ₹ 37 ಸಾವಿರ ಸಿಕ್ಕಿದೆ.







ಚಂಡಮಾರುತದ ಅಬ್ಬರ; ಗುಜರಾತಿಗೆ ಅಪ್ಪಳಿಸಿದ ತೌತೆ

# ಮುಂಬೈ: ಮಳೆಗೆ ಜನಜೀವನ ಅಸ್ತವ್ಯಸ್ತ

ಮುಂಬೈ (ಪಿಟಿಐ): ತೌತೆ ಚಂಡಮಾರುತವು ಸೋಮವಾರ ಮುಂಬೈನಲ್ಲಿ ಅನಾಹುತ ಸೃಷ್ಟಿಸಿದೆ. ನಗರದ ಹಲವು ಭಾಗಗಳು ಮತ್ತು ನೆರೆಯ ಪ್ರದೇಶಗಳಲ್ಲಿ ಭಾರೀ ಮಳೆಯೊಂದಿಗೆ ಬಿರುಗಾಳಿ ಬೀಸಿದ್ದರಿಂದ ಜನಜೀವನ ಅಸ್ತವ್ಯಸ್ತವಾಗಿತ್ತು. ಬೃಹನ್‌ಮುಂಬೈ ಪಾಲಿಕೆಯು ಬಿದ್ದ ಮರಗಳನ್ನು ತೆರವುಗೊಳಿಸುವ ಕೆಲಸದಲ್ಲಿ ತೊಡಗಿದೆ.

ಚಂಡಮಾರುತವು ಗಂಟೆಗೆ 114 ಕಿಲೋಮೀಟರ್ ವೇಗದಲ್ಲಿ ಮಹಾರಾಷ್ಟ್ರ ಕರಾವಳಿಗೆ ಅಪ್ಪಳಿಸಿತು. ಮುಂಜಾಗ್ರತಾ ಕ್ರಮವಾಗಿ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಹಳಿಗಳ ಮೇಲೆ ನೀರು ನಿಂತಿದ್ದರಿಂದ ವಡಾಲ ಮತ್ತು ಸಿಎಸ್‌ಎಂಟಿ ನಡುವಿನ ಉಪನಗರ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

ರಾಜ್ಯದ ಕೊಂಕಣ ಪ್ರದೇಶದ ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಸೋಮವಾರ ಮುಂಬೈ, ಥಾಣೆ ಮತ್ತು ರಾಜ್ಯದ ಇತರ ಕರಾವಳಿ ಜಿಲ್ಲೆಗಳ ಪರಿಸ್ಥಿತಿ ಅವಲೋಕಿಸಿದರು.

ಮಳೆಯ ಕಾರಣ 12,000ಕ್ಕೂ ಹೆಚ್ಚು ನಾಗರಿಕರನ್ನು ಕರಾವಳಿ ಪ್ರದೇಶಗಳಿಂದ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು. ರಾಯಗಡದಲ್ಲಿ 8,380, ರತ್ನಗಿರಿಯಲ್ಲಿ 3,896 ಮತ್ತು ಸಿಂಧುದುರ್ಗ ಜಿಲ್ಲೆಗಳಲ್ಲಿ 144 ಜನರನ್ನು ಸ್ಥಳಾಂತರ ಮಾಡಲಾಯಿತು. ರಾಯಗಡದಲ್ಲಿ 23 ಮಿ.ಮೀ ಮಳೆಯಾಗಿದ್ದು, 839 ಮರಗಳು ಬಿದ್ದಿವೆ.

## ಚಂಡಮಾರುತದ ಪ್ರತಾಪ

- ಬಾಂಬೆ ಹೈ ಏರಿಯಾದ ಹೀರಾ ಆಯಿಲ್ ಫೀಲ್ಡ್ ನಲ್ಲಿ 273 ಸಿಬ್ಬಂದಿಯೊಂದಿಗೆ ಸಿಲುಕಿಕೊಂಡಿರುವ ಪಿ-305 ಹೆಸರಿನ ದೋಣಿಯ ರಕ್ಷಣೆಗೆ ಐಎನ್‌ಎಸ್ ಕೊಚ್ಚಿ ಯುದ್ಧನೌಕೆಯನ್ನು ಕಳುಹಿಸಲಾಗಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ
- ಮುಂಬೈನಿಂದ 8 ನಾಟಿಕಲ್ ಮೈಲು ದೂರದಲ್ಲಿ ಸಿಲುಕಿರುವ, 137 ಜನರು ಇರುವ ಜಿಎಎಲ್ ಕನ್‌ಸ್ಟ್ರಕ್ಟರ್ ದೋಣಿಯ ರಕ್ಷಣೆಗೆ ಐಎನ್‌ಎಸ್ ಕೋಲ್ಕತ್ತ ಧಾವಿಸಿದೆ
- ಮೇ 16ರ ರಾತ್ರಿ ಚಂಡಮಾರುತದಿಂದಾಗಿ ಕೇರಳದ ಕೊಚ್ಚಿ ಕರಾವಳಿಯಿಂದ 35 ನಾಟಿಕಲ್ ಮೈಲು ದೂರದಲ್ಲಿ ಸಿಲುಕಿದ್ದ 12 ಮೀನುಗಾರರನ್ನು ರಕ್ಷಿಸಲಾಗಿದೆ ಎಂದು ಭಾರತೀಯ ಕೋಸ್ಟ್ ಗಾರ್ಡ್ ತಿಳಿಸಿದೆ
- ರಾಜ್ಯದ ಕೊಂಕಣ ಪ್ರದೇಶದ ರೈತರು ನಷ್ಟ ಅನುಭವಿಸಿದ್ದಾರೆ ಮತ್ತು ಹಾನಿಯನ್ನು ಪರಿಶೀಲಿಸುವ ಮತ್ತು ಅಂದಾಜು ಮಾಡುವ ಕೆಲಸ ಪ್ರಾರಂಭವಾಗಿದೆ ಎಂದು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಹೇಳಿದ್ದಾರೆ
- ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರ, ಗುಜರಾತ್ ಮತ್ತು ಗೋವಾದ ಮುಖ್ಯಮಂತ್ರಿಗಳು, ದಮನ್ ಮತ್ತು ದಿಯು ಲೆಫ್ಟಿನೆಂಟ್ ಗವರ್ನರ್ ಜೊತೆಗೆ ಮಾತನಾಡಿದರು
- ಚಂಡಮಾರುತದಿಂದಾಗಿ ಮಧ್ಯಪ್ರದೇಶದ 13 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಸೋಮವಾರ ಆರೆಂಜ್ ಅಲರ್ಟ್ ನೀಡಿದೆ.


ಮುಂಬೈನಲ್ಲಿ ಜಲಾವೃತ ರಸ್ತೆಯಲ್ಲಿ ಸಾಗಿದ ಬಸ್–ಪಿಟಿಐ ಚಿತ್ರ

## ಗುಜರಾತ್‌ನಲ್ಲಿ ಆತಂಕ

ಅಹಮದಾಬಾದ್: ಗಂಟೆಗೆ 185 ಕಿಲೋಮೀಟರ್ ವೇಗದಲ್ಲಿ ಬೀಸುತ್ತಿರುವ ಚಂಡಮಾರುತವು ಗುಜರಾತ್‌ಗೆ ರಾತ್ರಿ 8.30ಕ್ಕೆ ಅಪ್ಪಳಿಸಿದೆ. ಮುನ್ನೆಚ್ಚರಿಕೆ ಕ್ರಮವಾಗಿ 1.5 ಲಕ್ಷ ಜನರನ್ನು ಸ್ಥಳಾಂತರಿಸಲಾಗಿದೆ. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್‌ನ 54 ತಂಡಗಳನ್ನು ನಿಯೋಜಿಸಲಾಗಿದೆ.

ಪೋರಬಂದರ್ ಆಸ್ಪತ್ರೆಯ ಐಸಿಯುನಲ್ಲಿ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕೋವಿಡ್ ರೋಗಿಗಳನ್ನು ಮುಂಜಾಗ್ರತಾ ಕ್ರಮವಾಗಿ ಸ್ಥಳಾಂತರಿಸಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಂಡಮಾರುತದ ಪರಿಣಾಮ ಎದುರಿಸಲು ಕೇಂದ್ರ ಸರ್ಕಾರವು ಗುಜರಾತ್‌ಗೆ ಎಲ್ಲಾ ಸಹಾಯವನ್ನು ನೀಡಿದ್ದು, ಅಗತ್ಯವಿದ್ದರೆ ಆಡಳಿತಕ್ಕೆ ಸಹಾಯ ಮಾಡಲು ಸೇನೆ, ನೌಕಾಪಡೆ ಮತ್ತು ವಾಯುಪಡೆಯನ್ನು ಸನ್ನದ್ಧ ಸ್ಥಿತಿಯಲ್ಲಿರುವಂತೆ ಸೂಚಿಸಲಾಗಿದೆ.

ನೌಕಾಪಡೆ, ಕರಾವಳಿ ಕಾವಲು ಪಡೆ ಜಂಟಿ ಕಾರ್ಯಾಚರಣೆ

# ಮಂಗಳೂರು: ಟಗ್‌ನಲ್ಲಿ ಸಿಲುಕಿದ್ದ 9 ಜನರ ರಕ್ಷಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಲ್ಕಿ ಸಮೀಪದ ಸಮುದ್ರದಲ್ಲಿ ಸಿಲುಕಿದ್ದ 'ಕೋರಮಂಡಲ್ ಸಪೋರ್ಟರ್ ಐಎಕ್ಸ್' ಟಗ್‌ನಲ್ಲಿದ್ದ ಎಲ್ಲ ಒಂಬತ್ತು ಮಂದಿಯನ್ನು ನೌಕಾಪಡೆ ಹಾಗೂ ಕರಾವಳಿ ಕಾವಲು ಪಡೆ ರಕ್ಷಣೆ ಮಾಡಿವೆ. ಶುಕ್ರವಾರವೇ ಟಗ್ ಅಪಘಾತಕ್ಕೀಡಾಗಿತ್ತು. ಇವರು ಸುಮಾರು 44 ಗಂಟೆ ಪ್ರಕ್ಷುಬ್ಧ ಕಡಲಿನ ಮಧ್ಯೆ ಟಗ್‌ನಲ್ಲಿಯೇ ಕಳೆದಿದ್ದರು.

ಟಗ್‌ನಲ್ಲಿದ್ದ ಮೊಹಿಜುದ್ದೀನ್ ಮುಲ್ಲಾ (ಕ್ಯಾಪ್ಟನ್), ಗೌರವ್ ಕುಮಾರ್ (ಸೆಕೆಂಡ್ ಕ್ಯಾಪ್ಟನ್), ಶಾಂತನು ಕುಮಾರ್, ರಾಹುಲ್ ಮುಜುಂದಾರ್, ದೀಪಕ್ ದಿನೇಶ್, ಪ್ರಶಾಂತ್ ಸುಬ್ರಹ್ಮಣ್ಯಂ, ತುಷಾನ್ ಬಿಸ್ವಾಸ್, ನಾರಾಯಣ ಲಕ್ಷ್ಮೀ, ರೂಡ್ ಅಹ್ಮದ್ ಅವರನ್ನು ರಕ್ಷಿಸಲಾಗಿದೆ.

ಸೋಮವಾರ ಕೊಚ್ಚಿನ್‌ನಿಂದ ಬಂದ ನೌಕಾಪಡೆಯ ಹೆಲಿಕಾಪ್ಟರ್ ಮೂಲಕ ಇಬ್ಬರನ್ನು ಹಾಗೂ ಕರಾವಳಿ ಕಾವಲು ಪಡೆಯ ಸ್ಪೀಡ್ ಬೋಟ್ ಮೂಲಕ ಏಳು ಜನರನ್ನು ರಕ್ಷಣೆ ಮಾಡಲಾಯಿತು. ಬಳಿಕ ಎಲ್ಲರನ್ನೂ ಐಎನ್‌ಎಸ್ ವರಾಹ ಹಡಗಿನ ಮೂಲಕ ಎನ್‌ಎಂಪಿಟಿಗೆ ಕರೆತರಲಾಯಿತು.

ಎಲ್ಲರನ್ನೂ ಎನ್‌ಎಂಪಿಟಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ತಲಾ ₹10 ಲಕ್ಷ ಪರಿಹಾರ:** ಸೋಮವಾರ ಎನ್‌ಎಂಪಿಟಿಗೆ ಭೇಟಿ ನೀಡಿದ್ದ ಕಂದಾಯ ಸಚಿವ ಆರ್. ಅಶೋಕ್, 'ಒಂದು ಟಗ್‌ನಲ್ಲಿದ್ದ 9 ಜನರ ರಕ್ಷಿಸಲಾಗಿದೆ. ಇನ್ನೊಂದು ಟಗ್ ಮಗುಚಿದ್ದು, ಇಬ್ಬರ ಶವ ಪತ್ತೆಯಾಗಿದೆ. ಮೂವರಿಗೆ ಶೋಧ ಮುಂದುವರಿದಿದೆ. ಎಂಆರ್‌ಪಿಎಲ್ ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ನೀಡಲು ಒಪ್ಪಿದೆ' ಎಂದರು.

**ತಗ್ಗಿದ 'ತೌತೆ' ಅಬ್ಬರ:** ಜನತೆ ನಿಟ್ಟುಸಿರು ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಸೋಮವಾರ ಬೆಳಿಗ್ಗೆಯಿಂದ ಗಾಳಿ ಎಂದಿನ ವೇಗದಲ್ಲಿ ಬೀಸುತ್ತಿದೆ. ಕೆಲವೆಡೆ ಸಾಧಾರಣ ಮಳೆಯಾಯಿತು. ಗಾಳಿಗೆ ಕರಾವಳಿಯುದ್ದಕ್ಕೂ ವಿದ್ಯುತ್ ಕಂಬಗಳು, ಪರಿವರ್ತಕಗಳು ಹಾನಿಗೊಂಡಿವೆ. ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯವಸ್ಥೆಯು ಇನ್ನು ಒಂದು ದಿನ ಬೇಕಾಗಬಹುದು.

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ನಗರ ಹೋಬಳಿಯ ಘಾಟಿ ಪ್ರದೇಶದಲ್ಲಿ ಧಾರಾಕಾರ ಮಳೆ ಬಿದ್ದಿದೆ. ಗಾಳಿ–ಮಳೆಗೆ ಮರಗಿಡಗಳು ಧರೆಗುರುಳಿವೆ. ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 766 'ಸಿ'ಯಲ್ಲಿ ಬೈಕ್ ಮೇಲೆ ಮರ ಬಿದ್ದ ಪರಿಣಾಮ ಚಾಲಕರೊಬ್ಬರು ತೀವ್ರ ಗಾಯಗೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಹದಮಳೆಯಾಗಿದೆ. ದಾವಣಗೆರೆ ನಗರ ಹಾಗೂ ಜಗಳೂರು ತಾಲ್ಲೂಕಿನಲ್ಲಿ ತುಂತುರು ಮಳೆಯಾಯಿತು. ಕೊಡಗು ಜಿಲ್ಲೆಯಲ್ಲಿ ಮಳೆ ಅಬ್ಬರ ತಗ್ಗಿದ್ದು, ಜಿಲ್ಲೆಯಾದ್ಯಂತ ಜಿಟಿಜಿಟಿ ಮಳೆ ಸುರಿಯಿತು.

## ನಷ್ಟದ ಅಂದಾಜು ಸಲ್ಲಿಸಲು ಸೂಚನೆ

ಮಂಗಳೂರು: ತೌತೆ ಚಂಡಮಾರುತದಿಂದ ಆದ ಹಾನಿಯ ಅಂದಾಜು ಪಟ್ಟಿ ಸಿದ್ಧಪಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲಾಡಳಿತದ ಬಳಿ ಒಟ್ಟು ₹106 ಕೋಟಿ ಲಭ್ಯವಿದೆ. ಮೂಲಸೌಕರ್ಯ ಅಭಿವೃದ್ಧಿ, ಪರಿಹಾರ ನೀಡಲು ಬಳಕೆ ಮಾಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

'ಮನೆ ಹಾನಿಗೆ ಒಳಗಾದವರಿಗೆ ತಕ್ಷಣದ ಪರಿಹಾರವಾಗಿ ₹10 ಸಾವಿರ ವಿತರಿಸಲಾಗುತ್ತಿದೆ. ಭಾಗಶಃ ಹಾನಿಯಾದರೆ ₹1 ಲಕ್ಷ, ಪೂರ್ಣ ಹಾನಿಯಾಗಿದ್ದರೆ ₹5 ಲಕ್ಷ ಪರಿಹಾರ ನೀಡಲಾಗುವುದು' ಎಂದು ವಿವರಿಸಿದರು.

## ಬುಧವಾರ ತನಕ 'ಯೆಲ್ಲೊ ಅಲರ್ಟ್'

ಬೆಂಗಳೂರು: ತೌತೆ ಚಂಡಮಾರುತದ ಪರಿಣಾಮ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮೇ 19ರವರೆಗೆ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಭಾಗದಲ್ಲಿ ಚಂಡಮಾರುತದ ಅಬ್ಬರ ತುಸು ಕಡಿಮೆಯಾಗಿದೆ. ಆದರೂ, ಮುಂದಿನ ಎರಡು ದಿನ ಹೆಚ್ಚು ಮಳೆಯಾಗುವ ಮುನ್ಸೂಚನೆ ಇದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಬುಧವಾರದವರೆಗೆ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ.

**ಮೀನುಗಾರರಿಗೆ ಎಚ್ಚರಿಕೆ:** ಚಂಡಮಾರುತದ ಪರಿಣಾಮ ಕರಾವಳಿಯಲ್ಲಿ ಗರಿಷ್ಠ 5.0 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುತ್ತಿವೆ. ವೇಗವಾದ ಗಾಳಿಯೂ ಬೀಸುತ್ತಿರುವುದರಿಂದ ಮೀನುಗಾರರು ಮೇ 19ರವರೆಗೆ ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಕೆ ನೀಡಿದೆ.

**ಮಳೆ–ಎಲ್ಲಿ, ಎಷ್ಟು?:** ಉತ್ತರ ಕನ್ನಡ ಜಿಲ್ಲೆಯ ಕದ್ರಾ ಭಾಗದಲ್ಲಿ ಸೋಮವಾರ 11 ಸೆಂ.ಮೀ. ಗರಿಷ್ಠ ಮಳೆಯಾಗಿದೆ. ಹೊನ್ನಾವರ, ಕೊಲ್ಲೂರು 7, ಸಿದ್ದಾಪುರ 6, ಕಾರವಾರ, ಬೆಳಗಾವಿ, ಸೋಮವಾರಪೇಟೆ 5, ಕಾರ್ಕಳ, ನಿಪ್ಪಾಣಿ, ಸಂಕೇಶ್ವರ 4, ಅಂಕೋಲಾ, ಬೆಳ್ತಂಗಡಿ, ಭಾಗಮಂಡಲ 3, ಭಟ್ಕಳ, ಕುಂದಾಪುರ, ಹುಕ್ಕೇರಿ, ಧಾರವಾಡ, ಸಾಗರ, ಆಗುಂಬೆ, ಮಡಿಕೇರಿ 2, ಮೂಡುಬಿದರೆ, ಮಂಗಳೂರು, ಬೈಲಹೊಂಗಲ, ತೀರ್ಥಹಳ್ಳಿ, ಸೊರಬ, ಶೃಂಗೇರಿ, ಬಂಗಾರಪೇಟೆಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.







ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ವಲಯಕ್ಕೆ ಭಾರಿ ನಷ್ಟ

# ಕೋವಿಡ್‌ನಿಂದ 156 ಶಿಕ್ಷಕರ ಸಾವು

• ಮನೋಜಕುಮಾರ್ ಗುದ್ದಿ

ಕಲಬುರ್ಗಿ: ಕಳೆದ ವರ್ಷದ ಮಾರ್ಚ್‌ನಿಂದ ಪ್ರಸ್ತುತ ಮೇ 16ರವರೆಗೆ ಕಲ್ಯಾಣ ಕರ್ನಾಟಕದಲ್ಲಿ 156 ಸರ್ಕಾರಿ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ. ಅತಿ ಹೆಚ್ಚಿನ ಸಾವುಗಳು ಬೀದರ್ ಜಿಲ್ಲೆಯಲ್ಲಿ ಸಂಭವಿಸಿವೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಈ ವಿವರವನ್ನು ಸಂಗ್ರಹಿಸಿದೆ. ಹುದ್ದೆ, ಇಲಾಖೆಗೆ ಸೇರ್ಪಡೆಯಾದ ವರ್ಷ, ಕೋವಿಡ್ ಕರ್ತವ್ಯ ಹಾಗೂ ಚುನಾವಣಾ ಕರ್ತವ್ಯದಲ್ಲಿದ್ದಾಗ ಸಾವು ಸಂಭವಿಸಿದೆಯೇ ಎಂಬ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರಿಗೆ ಸಲ್ಲಿಸಿದೆ.

156 ಶಿಕ್ಷಕರ ಪೈಕಿ ಕೋವಿಡ್ ಕರ್ತವ್ಯಕ್ಕೆ ನಿಯೋಜಿತರಾಗಿದ್ದ ಆರು ಜನ ಹಾಗೂ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ 9 ಶಿಕ್ಷಕರು ಸೇರಿ 15 ಶಿಕ್ಷಕರು ಮೃತಪಟ್ಟಿದ್ದಾರೆ. ಈ ಶಿಕ್ಷಕರಿಗೆ ಕೋವಿಡ್ ವಾರಿಯರ್‌ಗಳಿಗೆ ನೀಡಲಾಗುವ ಪರಿಹಾರ ದೊರೆಯಲಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಮೃತಪಟ್ಟವ ಶಿಕ್ಷಕರ ಸಂಖ್ಯೆ ಹೆಚ್ಚಾಗಿಲ್ಲ. ಆದರೆ, ಏಪ್ರಿಲ್‌ನಿಂದ ಆರಂಭವಾದ ಎರಡನೇ ಅಲೆಯಲ್ಲಿ ಹೆಚ್ಚು ಜನ ಸಾವಿಗೀಡಾಗಿದ್ದಾರೆ.

'ಇಲಾಖೆ ಸೂಚಿಸಿದಂತೆ ವಿದ್ಯಾರ್ಥಿಗಳಿಲ್ಲದಿದ್ದರೂ ಶಾಲೆಗಳಿಗೆ ಭೇಟಿ ನೀಡಿ ಕರ್ತವ್ಯ ನಿರ್ವಹಿಸಿದ್ದಾರೆ. ವಿದ್ಯಾಗಮ ಯೋಜನೆಯಡಿ ಪಾಠ ಹೇಳಿದವರಿಗೂ ಕೋವಿಡ್ ತಗುಲಿದೆ. ಸರ್ಕಾರದ ಮಾನದಂಡಗಳ ಪ್ರಕಾರ ಇವರಿಗೆ ಕೋವಿಡ್ ಸಂಬಂಧಿ ಕೆಲಸದಲ್ಲಿ ತೊಡಗಿದ್ದಾರೆ ಎಂದು ಪರಿಗಣಿಸುವುದಿಲ್ಲ. ಈ ನಿಯಮವನ್ನು ಸಡಿಲಿಸಿ ಕೋವಿಡ್‌ನಿಂದ ಮೃತಪಟ್ಟ ಎಲ್ಲ ಶಿಕ್ಷಕರಿಗೂ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಸಚಿವ ಸುರೇಶಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಕೋವಿಡ್‌ನಿಂದ ಸಾವಿಗೀಡಾದ ಎಲ್ಲ ಶಿಕ್ಷಕರನ್ನು ಕೊರೊನಾ ವಾರಿಯರ್‌ಗಳೆಂದು ಪರಿಗಣಿಸಿ ₹ 1 ಕೋಟಿ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು. ಕೋವಿಡ್ ರೋಗಿಗಳ ಸಂಪೂರ್ಣ ವೈದ್ಯಕೀಯ ವೆಚ್ಚವನ್ನು ಭರಿಸಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಿ ಒತ್ತಾಯಿಸಿದ್ದಾರೆ.

## ಬೆಳಗಾವಿ ಜಿಲ್ಲೆಯಲ್ಲಿ 90 ಶಿಕ್ಷಕರು ಮೃತ

ಬೆಳಗಾವಿ: ಜಿಲ್ಲೆಯಲ್ಲಿ ಕೋವಿಡ್–19ನಿಂದಾಗಿ ಭಾನುವಾರದವರೆಗೆ 90 ಮಂದಿ ಶಿಕ್ಷಕರು ಸಾವಿಗೀಡಾಗಿದ್ದಾರೆ.

ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿ ಕೋವಿಡ್ ಮೊದಲನೇ ಅಲೆಯಲ್ಲಿ 23 ಹಾಗೂ 2ನೇ ಅಲೆಯಲ್ಲಿ 20 ಮಂದಿ, ಅಂತೆಯೇ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ 18 ಮತ್ತು 29 ಶಿಕ್ಷಕರು ಮರಣ ಹೊಂದಿದ್ದಾರೆ. ಈ ವಿಷಯವನ್ನು ಡಿಡಿಪಿಐಗಳಾದ ಆನಂದ ಪುಂಡಲೀಕ ಹಾಗೂ ಗಜಾನನ ಮನ್ನಿಕೇರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ 2ನೇ ಅಲೆ ಕಾಣಿಸಿಕೊಂಡ ನಂತರ ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿ 20 ಶಿಕ್ಷಕರು ಮರಣ ಹೊಂದಿದ್ದಾರೆ. ಅವರಲ್ಲಿ 10 ಮಂದಿ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕೆಲಸ ನಿರ್ವಹಿಸಿದ್ದರು ಎಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ' ಎಂದು ಆನಂದ ಮಾಹಿತಿ ನೀಡಿದರು. 'ಪ್ರಸ್ತುತ 53 ಮಂದಿ ಶಿಕ್ಷಕರು ಸೋಂಕು ಪೀಡಿತರಾಗಿದ್ದಾರೆ. ಕೆಲವರು ಆಸ್ಪತ್ರೆ ಹಾಗೂ ಕೆಲವರು ಹೋಂ ಐಸೊಲೇಷನ್‌ನಲ್ಲಿ ಇದ್ದಾರೆ' ಎಂದು ತಿಳಿಸಿದರು.

## ಬಾಗಲಕೋಟೆ: 36 ಶಿಕ್ಷಕರ ಸಾವು

ಬಾಗಲಕೋಟೆ: ಜಿಲ್ಲೆಯಲ್ಲಿ ಕೋವಿಡ್‌ನಿಂದ ಇಲ್ಲಿಯವರೆಗೆ 36 ಶಿಕ್ಷಕರು ಸಾವಿಗೀಡಾಗಿದ್ದಾರೆ. ಮೊದಲ ಅಲೆಯ ವೇಳೆ 17 ಮಂದಿ, ಎರಡನೇ ಅಲೆಯಲ್ಲಿ ಇಲ್ಲಿಯವರೆಗೆ 19 ಮಂದಿ ಮರಣ ಹೊಂದಿದ್ದಾರೆ ಎಂದು ಡಿಡಿಪಿಐ ಶ್ರೀಶೈಲ ಬಿರಾದಾರ 'ಪ್ರಜಾವಾಣಿ'ಗೆ ತಿಳಿಸಿದರು.

**ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ 15 ಜನ ಶಿಕ್ಷಕರು ಮೃತಪಟ್ಟಿದ್ದು, ಪರಿಹಾರ ನೀಡುವ ಸಂಬಂಧ ಸರ್ಕಾರಕ್ಕೆ ಮಾಹಿತಿ ಕಳಿಸಿದ್ದೇವೆ**

**ಡಾ. ಬಿಕೆಎಸ್ ವರ್ಧನ್,** ನಿರ್ದೇಶಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ವಿಭಾಗ

**ಜಿಲ್ಲಾವಾರು ಮೃತ ಶಿಕ್ಷಕರ ವಿವರ**

| ಜಿಲ್ಲೆ | ಸಂಖ್ಯೆ |
|---|---|
| ಬೀದರ್ | 52 |
| ಕಲಬುರ್ಗಿ | 37 |
| ಬಳ್ಳಾರಿ | 27 |
| ರಾಯಚೂರು | 15 |
| ಯಾದಗಿರಿ | 14 |
| ಕೊಪ್ಪಳ | 11 |
| ಒಟ್ಟು | 156 |



# ಕೋವಿಡ್ ಗುಣವಾದ ನಂತರ...

ಡಾ. ಕಿರಣ್ ವಿ. ಎಸ್.

ಕೋವಿಡ್-19 ಗುಣವಾದ ನಂತರವೂ ಶರೀರ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಸ್ವಲ್ಪ ಕಾಲ ಹಿಡಿಯುತ್ತದೆ. ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕು? ಈ ಪ್ರಶ್ನೆಗೆ ಲೇಖನ ಉತ್ತರ ನೀಡುತ್ತದೆ.

ಪ್ರಸ್ತುತ ಕೋವಿಡ್-19 ಭಾರತದಲ್ಲಿ ಸಾಕಷ್ಟು ವ್ಯಾಪಿಸಿದೆ. ಪ್ರತಿದಿನವೂ ಹೊಸ ಸೋಂಕಿತರು ಬೆಳಕಿಗೆ ಬರುತ್ತಿದ್ದಾರೆ. ಅಂತೆಯೇ ಗುಣಮುಖರಾದವರ ಸಂಖ್ಯೆಯೂ ಗಣನೀಯವಾಗಿ ಏರುತ್ತಿದೆ. ಯಾವುದೇ ವೈರಸ್ ಕಾಯಿಲೆ ಒಂದೇ ಏಟಿಗೆ ಸಂಪೂರ್ಣವಾಗಿ ಗುಣವಾಗುವುದಿಲ್ಲ. ಚಿಕನ್‌ಗುನ್ಯಾ ಕಾಯಿಲೆಯಿಂದ ನರಳಿದ ಹಲವಾರು ಮಂದಿ ಸುಮಾರು ತಿಂಗಳುಗಳ ಕಾಲ ಕೀಲುಗಳ ನೋವಿನಿಂದ ಬಳಲಿದ್ದ ಪ್ರಸಂಗಗಳಿವೆ. ಅಂತೆಯೇ, ಕೋವಿಡ್-19 ಗುಣವಾದ ನಂತರವೂ ಶರೀರ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಸ್ವಲ್ಪ ಕಾಲ ಹಿಡಿಯುತ್ತದೆ. ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕು?

ಕೋವಿಡ್-19 ಮೂಲತಃ ಶ್ವಾಸಾಂಗಗಳಿಗೆ ಸಂಬಂಧಪಟ್ಟ ಕಾಯಿಲೆಯಾದ್ದರಿಂದ, ಗುಣವಾದವರಲ್ಲಿ ಉಸಿರಾಟದ ಸಮಸ್ಯೆ ಮುಂದುವರೆಯಬಹುದು. ಇದು ಆತಂಕಕ್ಕೆ ದಾರಿಯಾಗುತ್ತದೆ. ತಲೆಯ ಅಡಿಯಲ್ಲಿ ಎರಡು-ಮೂರು ದಿಂಬುಗಳನ್ನು ಇರಿಸಿ, ಒಂದು ಬದಿಗೆ ಹೊರಳಿ ಮಲಗುವುದು; ಕುರ್ಚಿಯಲ್ಲಿ ಕೂತು, ಮೇಜಿನ ಮೇಲೆ ಕೈಗಳನ್ನು ಇರಿಸಿ ಒಂದು ದಿಂಬಿನ ಮೇಲೆ ತಲೆ ಇರಿಸಿ ವಿಶ್ರಮಿಸುವುದು; ಯಾವುದಾದರೂ ಆಧಾರವನ್ನು ಹಿಡಿದು ನಿಲ್ಲುವುದು; ಬೆನ್ನಿಗೆ ಆಸರೆಯನ್ನಿತ್ತು ನಿಲ್ಲುವುದು; ನಿಧಾನವಾಗಿ ದೀರ್ಘಶ್ವಾಸ ತೆಗೆದುಕೊಳ್ಳುವುದು; ಪ್ರತಿಯೊಂದು ಮೆಟ್ಟಿಲನ್ನು ನಿಧಾನವಾಗಿ ಹತ್ತುವ ಮುನ್ನ ಶ್ವಾಸ ತೆಗೆದುಕೊಳ್ಳುವುದು - ಇಂತಹ ಪ್ರಯತ್ನಗಳಿಂದ ಶ್ವಾಸ ನಿಯಂತ್ರಣ ಸಾಧ್ಯ. ಆತಂಕವೂ ಕಡಿಮೆಯಾಗುತ್ತದೆ.

ನಿಯಮಿತ, ಸುರಕ್ಷಿತ ವ್ಯಾಯಾಮ ಚೇತರಿಕೆಗೆ ಸಹಾಯಕ. ವ್ಯಾಯಾಮಕ್ಕೆ ಮುನ್ನ ಮಾಂಸಖಂಡಗಳನ್ನು ಸಡಿಲಿಸಬೇಕು. ಕುರ್ಚಿಯ ಮೇಲೆ ಕೂತು ಭುಜಗಳನ್ನು ಕಿವಿಯತ್ತ ಎತ್ತುವುದು; ಭುಜಗಳನ್ನು ವೃತ್ತಾಕಾರವಾಗಿ ಚಲಿಸುವುದು; ಮಂಡಿಯನ್ನು ಎತ್ತುವುದು; ಪಾದಗಳನ್ನು ವೃತ್ತಾಕಾರವಾಗಿ ಚಲಿಸುವುದು; ನೆಲದ ಮೇಲೆ ನಿಂತು ಎಡ-ಬಲ ಬದಿಗಳಿಗೆ ಬಾಗುವುದು; ಪಾದಗಳನ್ನು ಮೇಲೆ-ಕೆಳಗೆ ಬಾಗಿಸುವುದು; ನಿಂತಲ್ಲೇ ಮಂಡಿ ಎತ್ತುತ್ತಾ ನಡೆಯುವಂತಹ ಚಲನೆ; ನೆಲಮಟ್ಟದಿಂದ ಮೊದಲ ಮೆಟ್ಟಿಲನ್ನು ಮಾತ್ರ ನಿಧಾನವಾಗಿ ಹತ್ತಿ-ಇಳಿದು ಮಾಡುವುದು; ಸಾಧಾರಣ ವೇಗದಿಂದ ಆರಂಭಿಸಿ ಸಾಧ್ಯವಾದಷ್ಟು ವೇಗವಾಗಿ ನಡೆಯುವುದು - ಇವುಗಳು ಆರಂಭಿಕ ವ್ಯಾಯಾಮಗಳಾಗಬೇಕು. ಸಾಮರ್ಥ್ಯವನ್ನು ಅನುಸರಿಸಿ ಮುಂದಿನ ಹಂತದ ವ್ಯಾಯಾಮ ಮಾಡಬಹುದು.

ನಮ್ಮ ಧ್ವನಿ ಹೊರಡುವುದು ಶ್ವಾಸಕೋಶದಿಂದ ಹೊರಬರುವ ಗಾಳಿಯ ಮೂಲಕ. ಹೀಗಾಗಿ, ಚೇತರಿಕೆಯ ಸಮಯದಲ್ಲಿ ಧ್ವನಿ ಬದಲಾಗಬಹುದು; ಕ್ಷೀಣವಾಗಬಹುದು. ಗಂಟಲಿಗೆ ಹೆಚ್ಚು ತ್ರಾಸ ನೀಡದಿರುವುದು ಸೂಕ್ತ. ಅಗತ್ಯವಿದ್ದಾಗ ಮಾತ್ರ ಮಾತನಾಡಬೇಕು; ದನಿಯನ್ನು ಎತ್ತರಿಸಬಾರದು; ಮಾತಿನ ಮಧ್ಯೆ ದೀರ್ಘ ಶ್ವಾಸ ತೆಗೆದುಕೊಳ್ಳುತ್ತಾ ಧ್ವನಿಗೆ ಆರಾಮ ನೀಡಬೇಕು; ಬೆಚ್ಚಗಿನ ನೀರನ್ನು ಸ್ವಲ್ಪಸ್ವಲ್ಪವಾಗಿ ಕುಡಿಯುತ್ತಾ ಗಂಟಲಿನ ಆರ್ದ್ರತೆಯನ್ನು ಕಾಪಾಡಿಕೊಳ್ಳಬೇಕು; ಬೆನ್ನು ಬಾಗದಂತೆ ನೇರವಾಗಿ ಕೂರಬೇಕು; ನಿಧಾನವಾಗಿ, ಆರಾಮವಾಗಿ ತಿನ್ನಬೇಕು.

ಚೇತರಿಕೆಯ ಸಮಯದಲ್ಲಿ ನಮ್ಮ ನೆನಪು, ಗಮನ ಹರಿಸುವಿಕೆ, ಸ್ಪಷ್ಟ ಚಿಂತನೆಗಳಲ್ಲಿ ತೊಂದರೆಯಾಗಬಹುದು. ಇದರಿಂದ ಕುಟುಂಬದ ಇತರ ಸದಸ್ಯರಿಗೆ ಇರುಸುಮುರುಸಾಗಬಹುದು. ಈ ರೀತಿಯ ಸಾಧ್ಯತೆಗಳ ಬಗ್ಗೆ ವೈದ್ಯರಲ್ಲಿ ಚರ್ಚಿಸಬೇಕು. ಇದರ ಪರಿಹಾರದಲ್ಲಿ ವ್ಯಾಯಾಮ ನೆರವಾಗುತ್ತದೆ. ಮೆದುಳಿಗೆ ಕೆಲಸ ಕೊಡುವುದು ಉತ್ತಮ. ಹೊಸದೊಂದು ಹವ್ಯಾಸ; ಒಗಟು ಬಿಡಿಸುವಿಕೆ; ಸಮಸ್ಯಾಪೂರಣ; ಓದುವಿಕೆಗಳು ಸಹಕಾರಿ. ಮಾಡಬೇಕಾದ ಕೆಲಸಗಳ ಪಟ್ಟಿಮಾಡುವಿಕೆ; ಕೆಲಸಗಳನ್ನು ನೆನಪಿಸಲು ಅಲಾರಂ ಗಂಟೆಯ ಬಳಕೆ; ದೊಡ್ಡ ಕೆಲಸವನ್ನು ಸಣ್ಣಸಣ್ಣ ಘಟಕಗಳಲ್ಲಿ ಮಾಡುವಿಕೆ - ಇವೆಲ್ಲವೂ ಉತ್ತಮ ಪರಿಣಾಮ ನೀಡುತ್ತವೆ.

ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ನೆರವಾಗುವುದು ಕುಟುಂಬದ ಪ್ರಮುಖ ಲಕ್ಷಣ. ಕಾಯಿಲೆಯ ನಂತರದ ಕಾಲದಲ್ಲಿ ಅಗತ್ಯಬಿದ್ದಾಗ ನಿಸ್ಸಂಕೋಚವಾಗಿ ಸಹಾಯ ಕೇಳಬೇಕು. ಇದರಲ್ಲಿ ಯಾವುದೇ ಅವಮಾನವಿಲ್ಲ. ಅಕಾರಣವಾಗಿ ಸುಸ್ತಾಗುವ ಕೆಲಸಗಳನ್ನು ಮಾಡಬಾರದು; ಶರೀರದ ಶಕ್ತಿಯನ್ನು ವೃಥಾ ವ್ಯಯ ಮಾಡಬಾರದು; ಕುಳಿತು ಮಾಡಬಹುದಾದ ಕೆಲಸವನ್ನು ನಿಂತು ಮಾಡಬಾರದು; ಕೆಲಸಗಳ ನಡುವೆ ಸಾಕಷ್ಟು ವಿಶ್ರಾಂತಿ ಪಡೆಯಬೇಕು; ಮಾಡುವ ಕೆಲಸದ ಪರಿಮಾಣವನ್ನು ಶಕ್ತಿಗೆ ತಕ್ಕಂತೆ ನಿಧಾನವಾಗಿ ವಿಸ್ತರಿಸಬೇಕು.

ಒತ್ತಡ, ಆತಂಕ, ಖಿನ್ನತೆಗಳು ಈ ಹಂತದಲ್ಲಿ ಸಹಜ. ಆಸ್ಪತ್ರೆಯ ಅನುಭವಗಳು, ಸಮೀಪ ಬಂಧುಗಳ ಮರಣ, ಕಿವಿಗೆ ಬೀಳುತ್ತಲೇ ಇರುವ ಕೆಟ್ಟಸುದ್ದಿಗಳು ಇದನ್ನು ಉಲ್ಬಣಿಸುತ್ತವೆ. ಇದನ್ನು ಹತೋಟಿಯಲ್ಲಿಡುವುದು ಆರೋಗ್ಯದ ದೃಷ್ಟಿಯಿಂದ ಮುಖ್ಯ. ಚೆನ್ನಾಗಿ ಗಾಳಿಯಾಡುವ, ಸದ್ದು-ಬೆಳಕು ಕಡಿಮೆ ಇರುವೆಡೆ ಸಾಕಷ್ಟು ನಿದ್ರೆ ಮಾಡುವಿಕೆ; ಆರೋಗ್ಯಕರ ಸಾತ್ವಿಕ ಆಹಾರ; ಯಾವುದಾದರೂ ನಿಯಮಿತ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಿಕೆ; ಧನಾತ್ಮಕ ಮನಃಸ್ಥಿತಿಯವರ ಜೊತೆಗಿನ ಮಾತುಕತೆ; ಮನಸ್ಸಿಗೆ ಮುದ ನೀಡುವ ಸಂಗೀತ-ಸಾಹಿತ್ಯ - ಇವುಗಳು ಆತಂಕ-ಖಿನ್ನತೆಗಳ ನಿಗ್ರಹದಲ್ಲಿ ಫಲಕಾರಿ. ಮಾನಸಿಕ ತಜ್ಞರ ಜೊತೆಗಿನ ಚರ್ಚೆಯಿಂದ ಮಾನಸಿಕ ಕ್ಲೇಶ ಕಳೆಯುತ್ತದೆ.

ಯಾವುದೇ ಹಂತದಲ್ಲಿ ಅನಾರೋಗ್ಯ ಲಕ್ಷಣಗಳು ಮರುಕಳಿಸಿದರೆ, ಹೊಸದಾದ ರೋಗಲಕ್ಷಣಗಳು ಕಂಡುಬಂದರೆ, ಯಾವುದೇ ಆರೋಗ್ಯ ಸಮಸ್ಯೆ ನಿಯಂತ್ರಣಕ್ಕೆ ಬಾರದೇ ಹೆಚ್ಚಾಗುತ್ತಿದ್ದರೆ, ನೋವು-ಮಾನಸಿಕ ಕ್ಲೇಶ ಹೆಚ್ಚಾಗುತ್ತಿದ್ದರೆ ಸಾಧ್ಯವಾದಷ್ಟು ಬೇಗ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ. ಈ ಬಗ್ಗೆ ಕುಟುಂಬದ ಇತರ ಸದಸ್ಯರಿಗೆ ಮಾಹಿತಿ ನೀಡುವುದನ್ನು ಮರೆಯಬಾರದು. ಸಾಂಘಿಕ ಪ್ರಯತ್ನದಿಂದ ಈ ಕಾಯಿಲೆಯನ್ನು ಗೆಲ್ಲುವ ಮನಃಸ್ಥಿತಿ ನಮ್ಮೆಲ್ಲರದ್ದಾಗಲಿ.

(ಲೇಖಕರು ವೈದ್ಯರು)




# ಶುಚಿತ್ವದಲ್ಲಿದೆ ಆರೋಗ್ಯದ ಗುಟ್ಟು

ಡಾ.ವಿನಯ ಶ್ರೀನಿವಾಸ್

ಸ್ವಚ್ಛತೆ ನಮ್ಮನ್ನು ಕೇವಲ ಕೊರೊನಾ ಸೋಂಕಿನಿಂದ ಮಾತ್ರವಲ್ಲ, ಹಲವಾರು ಬಗೆಯ ಸೋಂಕುಗಳಿಂದಲೂ ರಕ್ಷಿಸಬಲ್ಲದು.

ಕೊರೊನಾಕಾಲದಲ್ಲಿ ಕೈಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಿಕೊಳ್ಳಿ ಎಂಬ ಮಾತುಗಳನ್ನು ಕೇಳುತ್ತಲೇ ಇದ್ದೇವೆ. ಸ್ವಚ್ಛತೆ ನಮ್ಮನ್ನು ಕೇವಲ ಕೊರೊನಾ ಸೋಂಕಿನಿಂದ ಮಾತ್ರವಲ್ಲ, ಹಲವಾರು ಬಗೆಯ ಸೋಂಕುಗಳಿಂದಲೂ ರಕ್ಷಿಸಬಲ್ಲದು. ವೈಯಕ್ತಿಕ ಸ್ವಚ್ಛತೆಯ ಜೊತೆಯಲ್ಲಿಯೇ ನಮ್ಮ ಮನೆ ಹಾಗೂ ಮನೆಯ ಸುತ್ತಲಿನ ಪರಿಸರದ ನೈರ್ಮಲ್ಯದ ಬಗ್ಗೆಯೂ ನಾವು ಗಮನ ವಹಿಸಬೇಕು.

- ಹೊರಗಿನಿಂದ ಮನೆಗೆ ಬಂದ ಕೂಡಲೇ ಕೈಕಾಲುಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಿಕೊಳ್ಳುವುದು ನಮ್ಮ ಕೈಕಾಲುಗಳ ಮೇಲೆ ಕುಳಿತಿರಬಹುದಾದ ವಾತಾವರಣದಲ್ಲಿನ ಸೂಕ್ಷ್ಮಾಣುಗಳನ್ನು ಹೊಡೆದೋಡಿಸಬಲ್ಲದು.
- ದಿನವೂ ಸ್ನಾನ ಮಾಡುವುದರಿಂದ ಬೆವರುಗುಳ್ಳೆ, ಕಜ್ಜಿ, ಮತ್ತಿತರ ಚರ್ಮದ ಸಮಸ್ಯೆಗಳನ್ನು ದೂರವಿಡಬಹುದು.
- ಸ್ನಾನದ ನಂತರ ಶರೀರವನ್ನು, ಮುಖ್ಯವಾಗಿ ಕಂಕುಳ ತೊಡೆ ಬೆರಳುಗಳ ಸಂಧಿಗಳಲ್ಲಿ, ಮಹಿಳೆಯರಲ್ಲಿ ಸ್ತನಗಳ ಕೆಳಭಾಗವನ್ನು ಶುದ್ಧಬಟ್ಟೆ(ಟವೆಲ್)ಯಿಂದ ಚೆನ್ನಾಗಿ ಒಣಗಿಸಿಕೊಳ್ಳುವುದರಿಂದ ಶಿಲೀಂಧ್ರದ ಸೋಂಕನ್ನು ತಡೆಯಬಹುದು.
- ಬಾಯಿಯ ಸ್ವಚ್ಛತೆ ಕೇವಲ ದಂತಕ್ಷಯವನ್ನಷ್ಟೇ ಅಲ್ಲ, ಕೆಲವು ಬಗೆಯ ಹೃದಯಸಂಬಂಧಿ ಕಾಯಿಲೆಗಳನ್ನು ಕೂಡ ತಡೆಯಬಲ್ಲದು. ದಿನವೂ ಬೆಳಿಗ್ಗೆ ಮತ್ತು ರಾತ್ರಿ ಮಲಗುವ ಮುನ್ನ ಕಡ್ಡಾಯವಾಗಿ ಹಲ್ಲುಗಳನ್ನು ಉಜ್ಜಿ, ಬಾಯಿಯನ್ನು ಸ್ವಚ್ಛಗೊಳಿಸಿಕೊಳ್ಳಬೇಕು.
- ಮಗುವಿಗೆ ಎದೆಹಾಲನ್ನು ಉಣಿಸುವ ಮೊದಲು ಹಾಗೂ ಮಕ್ಕಳಿಗೆ ಊಟ ಮಾಡಿಸುವ ಮೊದಲು ಮರೆಯದೆ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಇದು ಮಗುವನ್ನು ವಿವಿಧ ವೈರಾಣು ಹಾಗೂ ಸೂಕ್ಷ್ಮಾಣುಗಳ ಸೋಂಕಿನಿಂದ ರಕ್ಷಿಸಬಲ್ಲದು.
- ಮಲ-ಮೂತ್ರವಿಸರ್ಜನೆಯ ನಂತರ ಕಡ್ಡಾಯವಾಗಿ ಕೈಕಾಲುಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಿಕೊಳ್ಳಬೇಕು. ಇದು ಕೈಕಾಲುಗಳ ಸಂಪರ್ಕಕ್ಕೆ ಬಂದಿರಬಹುದಾದ ಸೂಕ್ಷ್ಮಾಣುಗಳನ್ನು ನಾಶ ಮಾಡುತ್ತದೆ ಹಾಗೂ ಪರೋಕ್ಷವಾಗಿ ಆಹಾರವು ಕಲುಷಿತಗೊಳ್ಳುವುದನ್ನು ತಡೆದು, ಆ ಮೂಲಕ ಹರಡುವ ಕಾಯಿಲೆಗಳ ಅಪಾಯದಿಂದ ನಮ್ಮನ್ನು ದೂರವಿಡಬಲ್ಲದು. ಟೈಫಾಯ್ಡ್, ಅತಿಸಾರ, ಜಾಂಡೀಸ್, ಕರುಳುಬೇನೆ, ಕಾಲರಾ ಮೊದಲಾದ ಕಾಯಿಲೆಗಳ ಸೂಕ್ಷ್ಮಾಣುಗಳು ನಮ್ಮನ್ನು ತಲುಪುವುದು ಕಲುಷಿತ ಆಹಾರದ ಮೂಲಕವೇ.
- ಮನೆಯ ಮೇಜು, ಕುರ್ಚಿ, ಸೋಫಾಗಳ ಮೇಲ್ಮೈ ಮೇಲೆ ಧೂಳು ಕೂರದಂತೆ ನಿತ್ಯವೂ ಸ್ವಚ್ಛಗೊಳಿಸುವುದರಿಂದ ಅಲರ್ಜಿ, ಅಸ್ತಮಾದಂತಹ ಸಮಸ್ಯೆಯನ್ನು ತಡೆಯಬಹುದು.
- ಮನೆಯ ಸುತ್ತಲಿನ ಪರಿಸರವನ್ನೂ ಸ್ವಚ್ಛವಾಗಿಟ್ಟುಕೊಳ್ಳಬೇಕು. ಅಲ್ಲಿ ಪೊದೆಗಳಂತೆ ಬೆಳೆದ ಗಿಡ ಗೆಂಟೆಗಳನ್ನು ಆಗಾಗ್ಗೆ ತುಂಡರಿಸಬೇಕು ಮತ್ತು ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಏಕೆಂದರೆ ತೆಂಗಿನ ಚಿಪ್ಪು, ಎಳನೀರಿನ ಬುರುಡೆ, ಮುರಿದ ಪ್ಲಾಸ್ಟಿಕ್ ಡಬ್ಬಿ, ಬಿಸಾಡಿದ ಖಾಲಿ ಸೀಸೆಗಳಲ್ಲಿ ನಿಂತ ನೀರು ಸೊಳ್ಳೆಗಳ ಸಂತಾನಾಭಿವೃದ್ಧಿಯ ತಾಣಗಳಾಗುತ್ತವೆ. ಮಲೇರಿಯಾ, ಡೆಂಗಿ, ಚಿಕನ್ ಗುನ್ಯಾ, ಆನೆಕಾಲುರೋಗ (ಫೈಲೇರಿಯಾಸಿಸ್) ಮೊದಲಾದ ಸೊಳ್ಳೆಗಳ ಮೂಲಕ ಹರಡುವ ಕಾಯಿಲೆಗಳಿಗೆ ಇಂತಹ ಕೊಳಕು ಪರಿಸರವೇ ಮುಖ್ಯ ಕಾರಣವಾಗುತ್ತದೆ.
- ಮನೆಯ ಸುತ್ತಮುತ್ತಲಿನ ಹೂದೋಟದ ಸ್ವಚ್ಛತೆಯೂ ಮುಖ್ಯ. ಅಲ್ಲಿನ ಕೊಳಕು ಪರಿಸರವು ಅಲ್ಲಿ ಇಲಿ, ಹೆಗ್ಗಣಗಳು ಮನೆ ಮಾಡಲು ಪೂರಕವಾಗುತ್ತದೆ. ಇದು ಇಲಿಗಳ ಮೂತ್ರದ ಸಂಪರ್ಕದಿಂದ ಬರುವ ಇಲಿಜ್ವರ ಮತ್ತಿತರ ಆರೋಗ್ಯ ಸಮಸ್ಯೆಗೆ ಕಾರಣವಾಗಬಹುದು.
- ಅಡುಗೆಮನೆಯ ಸ್ವಚ್ಛತೆ ಕೂಡ ಬಹಳ ಮುಖ್ಯ. ತರಕಾರಿಗಳನ್ನು ಚೆನ್ನಾಗಿ ತೊಳೆದು ಉಪಯೋಗಿಸಬೇಕು. ಸ್ವಲ್ಪ ಉಪ್ಪು ಬೆರೆಸಿದ ನೀರಿನಲ್ಲಿ ತೊಳೆಯುವ ಅಭ್ಯಾಸ ಒಳ್ಳೆಯದೇ. ಅದರಲ್ಲಿಯೂ ಹಸಿ ತರಕಾರಿಗಳನ್ನು ಸಲಾಡ್ ರೂಪದಲ್ಲಿ ತಿನ್ನುವ ಮೊದಲು ಈ ಬಗ್ಗೆ ಹೆಚ್ಚು ಗಮನ ವಹಿಸಬೇಕು. ಕೆಲವು ಪರಾವಲಂಬಿ ಸೂಕ್ಷ್ಮಾಣುಗಳ ಸೋಂಕು (ಕೊಕ್ಕೆ ಹುಳು, ಜಂತುಹುಳು) ಈ ಬಗೆಯ ಕಲುಷಿತ ತರಕಾರಿಗಳ ಮೂಲಕ ಹರಡುವ ಸಾಧ್ಯತೆ ಇರುತ್ತದೆ.
- ಹಣ್ಣುಗಳನ್ನು ತಿನ್ನುವ ಮೊದಲು ಚೆನ್ನಾಗಿ ತೊಳೆಯಬೇಕು. ಇದು ಸೂಕ್ಷ್ಮಾಣುಗಳಿಂದಷ್ಟೇ ಅಲ್ಲದೆ, ಗಿಡಗಳಿಗೆ ಸಿಂಪಡಿಸಿರಬಹುದಾದ ಕೀಟನಾಶಕ ಹಾಗೂ ಕಳೆನಾಶಕ ಔಷಧಗಳಲ್ಲಿರುವ ಹಾನಿಕಾರಕ ರಾಸಾಯನಿಕಗಳ ಅಪಾಯದಿಂದ ನಮ್ಮನ್ನು ಪಾರು ಮಾಡುತ್ತದೆ. ಹಾಗಾಗಿ ಹಣ್ಣುಗಳನ್ನು ತುಸು ಉಪ್ಪು ಬೆರೆಸಿದ ನೀರಿನಿಂದ ತೊಳೆದು ನಂತರವೇ ಉಪಯೋಗಿಸಬೇಕು. ಅಲ್ಲದೆ, ಕೆಲವು ಬಗೆಯ ಹಣ್ಣುಗಳನ್ನು (ಉದಾ: ಸೇಬು) ಬಹಳ ಕಾಲ ಶೇಖರಿಸಿಡಲೆಂದು ಅವುಗಳ ಮೇಲೆ ಒಂದು ಬಗೆಯ ಪ್ಲಾಸ್ಟಿಕನ್ನು ಲೇಪಿಸಿರುತ್ತಾರೆ. ಚೆನ್ನಾಗಿ ತೊಳೆಯುವುದರಿಂದ ಈ ಪ್ಲಾಸ್ಟಿಕ್ ಪದರವೂ ನಾಶವಾಗುತ್ತದೆ.
- ಅಡುಗೆಮನೆಯಲ್ಲಿ ತಯಾರಿಸಿಟ್ಟ ಆಹಾರಪದಾರ್ಥಗಳನ್ನು ಸರಿಯಾಗಿ ಮುಚ್ಚಿಡುವುದೂ ಬಹಳ ಮುಖ್ಯ. ತೆರೆದಿಟ್ಟ ಪದಾರ್ಥಗಳ ಮೇಲೆ ನೊಣ, ಹಲ್ಲಿ, ಜಿರಲೆಯಂತಹ ಕೀಟಗಳು ಓಡಾಡಿ ಆಹಾರವನ್ನು ಕಲುಷಿತಗೊಳಿಸಬಹುದು.
- ಮನೆಯಲ್ಲಿನ ಸಾಕುಪ್ರಾಣಿಗಳನ್ನು ಮುದ್ದಾಡಿದ ನಂತರ ಕಡ್ಡಾಯವಾಗಿ ಕೈಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಿಕೊಳ್ಳಬೇಕು. ನಾಯಿ ಹಾಗೂ ಬೆಕ್ಕುಗಳ ಮಲವು ಕೆಲವು ಬಗೆಯ ಪರಾವಲಂಬಿ ಸೂಕ್ಷ್ಮಾಣುಗಳನ್ನು ಹೊಂದಿರಬಹುದು. ಇದರೊಂದಿಗಿನ ಸಂಪರ್ಕವು ಕಾಯಿಲೆಗಳಿಗೆ ಆಹ್ವಾನ ಕೊಟ್ಟಂತೆಯೇ.
- ರಸ್ತೆಬದಿಯಲ್ಲಿ ಮಾರಾಟಕ್ಕೆಂದು ಇಡುವ ತೆರೆದಿಟ್ಟ ಹಣ್ಣುಗಳು, ತಿಂಡಿತಿನಿಸುಗಳನ್ನು ತಿನ್ನುವುದು ಕೂಡ ಸುರಕ್ಷಿತವಲ್ಲ.

(ಲೇಖಕಿ ವೈದ್ಯೆ)

## ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

# ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ

(ಮುಂದುವರಿದ ಭಾಗ)

ವಿಜ್ಞಾನ

ಎಸ್ಸೆಸ್ಸೆಲ್ಸಿ

### ಅರಣ್ಯವಾಸಿಗಳು ಸಾಂಪ್ರದಾಯಿಕವಾಗಿ ನಡೆಸಿಕೊಂಡು ಬಂದ ಅರಣ್ಯ ನಿರ್ವಹಣೆ ಪದ್ಧತಿಗಳು

- ಕುರಿಗಾಹಿಗಳು ಬೇಸಿಗೆಯಲ್ಲಿ ತಮ್ಮ ಕುರಿಗಳನ್ನು ಮೇಯಿಸಲು ಕಣಿವೆಯಿಂದ ಮೇಲಿನ ಹುಲ್ಲುಗಾವಲು ಪ್ರದೇಶಕ್ಕೆ ಹೊಡೆಯುತ್ತಿದ್ದರು. ಇದರಿಂದ ಹುಲ್ಲು ಅತಿ ಎತ್ತರವಾಗಿ ಬೆಳೆಯದೆ ಹೊಸ ಬೆಳವಣಿಗೆಗಳು ಚೆನ್ನಾಗಿ ಆಗುತ್ತಿದ್ದವು. ಆದರೆ ಈಗ ಇಂತಹ ಕೆಲ ಪ್ರದೇಶಗಳನ್ನು ರಾಷ್ಟ್ರೀಯ ಉದ್ಯಾನವನವನ್ನಾಗಿ ಪರಿವರ್ತಿಸಲಾಗಿದ್ದು, ಕುರಿಗಳ ಮೇಯುವಿಕೆ ನಿಂತು ಹುಲ್ಲು ಅತಿ ಎತ್ತರವಾಗಿ ಬೆಳೆದು ಹೊಸ ಬೆಳವಣಿಗೆಯನ್ನು ತಡೆಗಟ್ಟುತ್ತವೆ.
- ಈ ಸಮುದಾಯಗಳು ಸಾಂಪ್ರದಾಯಿಕವಾಗಿ ಕೊಂಬೆಗಳನ್ನು ಕತ್ತರಿಸುತ್ತಿದ್ದರು ಮತ್ತು ಎಲೆಗಳನ್ನು ಕೀಳುತ್ತಿದ್ದರು. ಇದರಿಂದ ಕಾಲಾಂತರದಲ್ಲಿ ಸಂಪನ್ಮೂಲಗಳು ನವೀಕರಣಗೊಳ್ಳಲು ಅನುವು ಮಾಡಿ ಕೊಟ್ಟಂತಾಗುತ್ತಿತ್ತು.

### ಅರಣ್ಯಗಳ ನಿರ್ವಹಣೆಯಲ್ಲಿ ಜನರ ಭಾಗವಹಿಸುವಿಕೆ ಒಂದು ಉದಾಹರಣೆ

ಮಿಡ್ನಾಪುರ ಜಿಲ್ಲೆಯಲ್ಲಿ ಅರಣ್ಯಾಧಿಕಾರಿ ಎ.ಕೆ.ಬ್ಯಾನರ್ಜಿ ಅವರ ವಿನಂತಿ ಮೇರೆಗೆ ಗ್ರಾಮಸ್ಥರು 1272 ಹೆಕ್ಟೇರ್‌ನಷ್ಟಿರುವ ಅರಣ್ಯಗಳ ರಕ್ಷಣೆಯಲ್ಲಿ ಪಾಲ್ಗೊಂಡರು. ಈ ಸಹಾಯಕ್ಕಾಗಿ ಗ್ರಾಮಸ್ಥರಿಗೆ ಮರ ಬೆಳೆಸುವ ಮತ್ತು ಕೊಯ್ಲು ಕಾರ್ಯಾಚರಣೆಯಲ್ಲಿ ಉದ್ಯೋಗ ನೀಡಲಾಯಿತು. ಅಂತಿಮ ಕೊಯ್ಲಿನ ಶೇ 25 ಭಾಗ ಉರುವಲು ಹಾಗೂ ಕನಿಷ್ಠ ಶುಲ್ಕವನ್ನು ಪಾವತಿಸಿ ಮೇವಿನ ಸಂಗ್ರಹಣೆಯನ್ನು ಮಾಡಲು ಅನುಮತಿ ನೀಡಲಾಯಿತು. ಇದರಿಂದ ಅರಣ್ಯವೂ ಸಮೃದ್ಧವಾಗಿ ನಿರ್ವಹಣೆಗೊಂಡಿತು ಮತ್ತು ಸ್ಥಳೀಯರಿಗೂ ಜೀವನೋಪಾಯಕ್ಕೆ ನೆರವಾಯಿತು. ಇದರಿಂದ ನಿಷ್ಪ್ರಯೋಜಕವಾಗಿದ್ದ ಅರಣ್ಯದ ಮೌಲ್ಯವು 12.5ಕೋಟಿ ರೂಪಾಯಿಗಳಾಗಿತ್ತು.



### ನೀರಿನ ಆಕರಗಳ ನಿರ್ವಹಣೆಯಲ್ಲಿ ಮಾನವನ ವೈಫಲ್ಯ

ನೀರು ಭೂಮಿಯ ಮೇಲಿರುವ ಎಲ್ಲಾ ಜೀವಿಗಳ ಮೂಲಭೂತ ಅಗತ್ಯವಾಗಿದ್ದು, ಇದರ ನಿರ್ವಹಣೆ ತುಂಬಾ ಅಗತ್ಯವಾಗಿದೆ. ಬಹುತೇಕ ನೀರಿನ ಕೊರತೆಯಿರುವ ಪ್ರದೇಶಗಳು ಬಡತನದಲ್ಲಿರುವುದನ್ನು ಗಮನಿಸಬಹುದು.

- ಭಾರತದಲ್ಲಿ ಮುಂಗಾರು ಕೆಲವೇ ತಿಂಗಳುಗಳ ಕಾಲ ಮಾತ್ರ ಮಳೆಯನ್ನು ಸುರಿಸುತ್ತಿದ್ದು, ತೀವ್ರತರದ ಅರಣ್ಯ ನಾಶ, ಹೆಚ್ಚು ನೀರು ಬೇಡುವ ತಳಿಗಳ ಕಡೆಗೆ ತಿರುಗಿರುವುದು ಮತ್ತು ಕೈಗಾರಿಕಾ ತ್ಯಾಜ್ಯ ಹಾಗೂ ನಗರಗಳ ತ್ಯಾಜ್ಯಗಳಿಂದುಂಟಾಗುವ ಮಾಲಿನ್ಯದಿಂದ ಅಂತರ್ಜಲವನ್ನು ಉಳಿಸಿಕೊಳ್ಳುವುದರಲ್ಲಿ ನಾವು ವಿಫಲವಾಗಿದ್ದೇವೆ.
- ಅಣೆಕಟ್ಟುಗಳು, ಕೆರೆಗಳು ಮತ್ತು ಕಾಲುವೆಗಳಂತಹ ನೀರಾವರಿ ವಿಧಾನಗಳು ಸ್ಥಳೀಯರಿಂದ ನಿರ್ವಹಿಸಲ್ಪಡುತ್ತಿದ್ದವು. ಕೃಷಿ ಹಾಗೂ ದೈನಂದಿನ ಜೀವನಕ್ಕೆ ಅಗತ್ಯವಾದ ಕನಿಷ್ಠ ಮೂಲಭೂತ ಅವಶ್ಯಕತೆಗಳನ್ನು ವರ್ಷಪೂರ್ತಿ ಒದಗಿಸಿ, ನೀರಿನ ಲಭ್ಯತೆಯ ಆಧಾರದ ಮೇಲೆ ಗರಿಷ್ಠ ಇಳುವರಿ ನೀಡುವ ಬೆಳೆಯ ವಿಧಾನಗಳನ್ನು ಬಳಕೆಯಲ್ಲಿಟ್ಟುಕೊಂಡಿದ್ದರು. ಆದರೆ ಬ್ರಿಟಿಷರ ಆಗಮನದ ನಂತರ ಈ ತರಹದ ನೀರಾವರಿ ಪದ್ಧತಿಗಳು ಸರ್ಕಾರದ ವಶವಾಗುತ್ತಾ ಸ್ಥಳೀಯರ ಕೈತಪ್ಪಿ ಹೋಗಿವೆ.

### ಅಣೆಕಟ್ಟುಗಳು

ಅಣೆಕಟ್ಟುಗಳನ್ನು ಕೇವಲ ಸಾಕಷ್ಟು ನೀರನ್ನು ಸಂಗ್ರಹಿಸುವುದಕ್ಕೆ ಮಾತ್ರವಲ್ಲದೆ ವಿದ್ಯುತ್ ಉತ್ಪಾದನೆಗೂ ಬಳಸಲಾಗುತ್ತದೆ. ಅಣೆಕಟ್ಟುಗಳಲ್ಲಿ ಸಂಗ್ರಹವಾದ ನೀರು ಹೆಚ್ಚಿನ ಪ್ರಚ್ಛನ್ನ ಶಕ್ತಿಯನ್ನು ಹೊಂದಿದ್ದು ಇದರಿಂದ ಟರ್ಬೈನ್‌ಗಳನ್ನು ತಿರುಗಿಸಿ ವಿದ್ಯುತ್ ಅನ್ನು ಉತ್ಪಾದಿಸಲಾಗುತ್ತದೆ. ಅಣೆಕಟ್ಟುಗಳಿಂದ ಹೊರಟ ನೀರು ಕಾಲುವೆಗಳ ಮೂಲಕ ಬಹುದೂರ ತಲುಪುತ್ತದೆ.

### ಅಣೆಕಟ್ಟುಗಳಿಂದಾಗುವ ಸಮಸ್ಯೆಗಳು

1) ಸಾಮಾಜಿಕ ಸಮಸ್ಯೆಗಳು: ಅಣೆಕಟ್ಟನ್ನು ಕಟ್ಟುವ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯ ರೈತರನ್ನು, ಬುಡಕಟ್ಟು ಜನರನ್ನು ಸಾಕಷ್ಟು ಪರಿಹಾರ ಅಥವಾ ಪುನರ್ವಸತಿ ಸೌಕರ್ಯಗಳನ್ನು ಕಲ್ಪಿಸದೇ ಸ್ಥಳಾಂತರಿಸಲಾಗುತ್ತದೆ.
2) ಆರ್ಥಿಕ ಸಮಸ್ಯೆಗಳು: ಅಣೆಕಟ್ಟುಗಳು ಸರಿಯಾದ ಪ್ರಮಾಣದಲ್ಲಿ ಪ್ರಯೋಜನಗಳನ್ನು ಸೃಷ್ಟಿಸದೇ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕರ ಹಣ ವ್ಯರ್ಥವಾಗುತ್ತಿದೆ.
3) ಪರಿಸರದ ಸಮಸ್ಯೆಗಳು: ಅಣೆಕಟ್ಟುಗಳು ಸಾವಿರಾರು ಹೆಕ್ಟೇರ್‌ಗಳಷ್ಟು ಸ್ಥಳವನ್ನು ಆಕ್ರಮಿಸುವುದರಿಂದ ಅವು ಬೃಹತ್ ಪ್ರಮಾಣದ ಅರಣ್ಯ ನಾಶ ಮತ್ತು ಜೀವ ವೈವಿಧ್ಯತೆಯ ನಾಶಕ್ಕೆ ಕಾರಣವಾಗುತ್ತವೆ.

ಈ ಸಮಸ್ಯೆಗಳು ಮಾತ್ರವಲ್ಲದೆ ನೀರಿನ ನ್ಯಾಯ ಸಮ್ಮತ ಹಂಚಿಕೆ ಇಲ್ಲವಾದುದರಿಂದ ನೀರಿನ ಆಕರಕ್ಕೆ ಹತ್ತಿರವಿರುವ ಜನರು ಹೆಚ್ಚಿನ ನೀರು ಬಳಸುವ ಕಬ್ಬು ಮತ್ತು ಭತ್ತ ಬೆಳೆಗಳನ್ನು ಬೆಳೆದರೆ ನೀರಿನ ಆಕರದಿಂದ ಅತ್ಯಂತ ದೂರವಿರುವ ಜನರು ಯಾವುದೇ ನೀರಿನ ಪ್ರಯೋಜನವನ್ನು ಪಡೆಯದೇ ಇರುವುದು ವಿಷಾದನೀಯ.

(ಮುಂದುವರಿಯುವುದು)

# ಸಮನ್ವಯಿ ಸಂಯುಕ್ತಗಳು

ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ

**ಸಂಕ್ರಮಣ** ಲೋಹಗಳು ಬಹು ಸಂಖ್ಯೆಯಲ್ಲಿ ಸಂಕೀರ್ಣ ಸಂಯುಕ್ತಗಳನ್ನು ರೂಪಿಸಿ, ಅವುಗಳಲ್ಲಿ ಲೋಹದ ಪರಮಾಣುಗಳ ಹಲವು ಋಣ ಅಯಾನು ಅಥವಾ ತಟಸ್ಥ ಅಣುಗಳ ಬಂಧದೊಂದಿಗೆ ಇರುವುದು. ಆಧುನಿಕ ಪರಿಭಾಷೆಯಲ್ಲಿ ಅಂತಹ ಸಂಯುಕ್ತಗಳನ್ನು ಸಮನ್ವಯಿ ಸಂಯುಕ್ತಗಳು ಎಂದು ಕರೆಯುತ್ತಾರೆ.

ರಾಸಾಯನಿಕ ಬಂಧ ಮತ್ತು ಅಣ್ವಿಕ ರಚನೆಯ ಹೊಸ ಪರಿಕಲ್ಪನೆಗಳು ಜೈವಿಕ ವ್ಯವಸ್ಥೆಯ ಪ್ರಮುಖ ಘಟಕಗಳ ಕಾರ್ಯ ಸ್ವರೂಪದ ಒಳನೋಟವನ್ನು ಒದಗಿಸಿವೆ. ಕ್ಲೋರೊಫಿಲ್, ಹಿಮೊಗ್ಲೋಬಿನ್ ಮತ್ತು ವಿಟಮಿನ್ ಬಿ-12, ಕ್ರಮವಾಗಿ ಮ್ಯಾಗ್ನಿಶಿಯಂ, ಕಬ್ಬಿಣ ಮತ್ತು ಕೋಬಾಲ್ಟ್‌ಗಳ ಸಮನ್ವಯಿ ಸಂಯುಕ್ತಗಳಾಗಿವೆ.

ವಿವಿಧ ಲೋಹ ವಿದ್ಯೆ ಪ್ರಕ್ರಿಯೆಗಳು, ಕಾರ್ಖಾನೆಗಳ ವೇಗವರ್ಧಗಳು ಮತ್ತು ವಿಶ್ಲೇಷಣಾಕಾರಕಗಳು, ಸಮನ್ವಯಿ ಸಂಯುಕ್ತಗಳ ಬಳಕೆಯನ್ನು ಒಳಗೊಂಡಿವೆ. ಎಲೆಕ್ಟ್ರೋಪ್ಲೇಟಿಂಗ್, ವಸ್ತ್ರ ವರ್ಣೀಕರಣ ಮತ್ತು ಔಷಧ ರಸಾಯನಶಾಸ್ತ್ರದಲ್ಲೂ ಕೂಡ ಸಮನ್ವಯಿ ಸಂಯುಕ್ತಗಳು ಬಹಳಷ್ಟು ಅನ್ವಯಗಳನ್ನು ಕಂಡುಕೊಂಡಿವೆ.

### ಸಮನ್ವಯಿ ಸಂಯಕ್ತಗಳಿಗೆ ವರ್ನರ್ಸ್ ಸಿದ್ಧಾಂತ

ಸ್ವಿಸ್ ರಸಾಯನಶಾಸ್ತ್ರಜ್ಞ ಆಲ್‌ಫ್ರೆಡ್ ವರ್ನರ್ (1866-1919) ಮೊಟ್ಟಮೊದಲಿಗೆ ಸಮನ್ವಯಿ ಸಂಯುಕ್ತಗಳ ರಚನೆಯ ಬಗ್ಗೆ ಅವನ ಚಿಂತನೆಗಳನ್ನು ಸೂತ್ರೀಕರಿಸಿದನು. ಒಂದು ಲೋಹದ ಅಯಾನ್‌ಗೆ, ಒಂದು ಪ್ರಾಥಮಿಕ ವೇಲೆನ್ಸಿ ಮತ್ತು ಒಂದು ದ್ವಿತೀಯಕ ವೇಲೆನ್ಸಿ ಎನ್ನುವ ಪರಿಕಲ್ಪನೆಯನ್ನು ಪ್ರತಿಪಾದಿಸಿದನು.

ಕೆಲವು ದ್ವಿಸಂಯುಕ್ತಗಳಾದ $CrCl_3$, $CoCl_2$ ಅಥವಾ $PdCl_2$ ಗಳಿಗೆ ಪ್ರಾಥಮಿಕ ವೇಲೆನ್ಸಿ ಕ್ರಮವಾಗಿ 3, 2, 2 ಆಗಿದೆ.

ವರ್ನರ್ 1898 ರಲ್ಲಿ ಸಮನ್ವಯಿ ಸಂಯಕ್ತಗಳ ಸಿದ್ಧಾಂತವನ್ನು ಮಂಡಿಸಿದನು. ಪ್ರಮುಖ ಪ್ರತಿಪಾದನೆಗಳೇನೆಂದರೆ

1)ಸಮನ್ವಯಿ ಸಂಯುಕ್ತಗಳಲ್ಲಿ ಲೋಹಗಳು ಎರಡು ಬಗೆಯ ಬಂಧವನ್ನು (ವೇಲೆನ್ಸಿ) ತೋರಿಸುತ್ತದೆ-ಪ್ರಾಥಮಿಕ ಮತ್ತು ದ್ವಿತೀಯಕ

2)ಪ್ರಾಥಮಿಕ ವೇಲೆನ್ಸಿಯು ಸಹಜವಾಗಿ ಅಯಾನೀಕರಣವಾಗುತ್ತದೆ ಮತ್ತು ಅಯಾನ್‌ಗಳಿಂದ ತೃಪ್ತಿಗೊಳ್ಳುತ್ತದೆ.

3)ದ್ವಿತೀಯಕ ವೇಲೆನ್ಸಿಯು ಅಯಾನೀಕರಣಗೊಳ್ಳುವುದಿಲ್ಲ. ಇವುಗಳ ತಟಸ್ಥ ಅಣುಗಳು ಅಥವಾ ಋಣ ಅಯಾನ್‌ಗಳಿಂದ ತೃಪ್ತಿಗೊಳ್ಳಲ್ಪಡುತ್ತವೆ. ದ್ವಿತೀಯಕ ವೇಲೆನ್ಸಿಯು ಸಮನ್ವಯಿ ಸಂಖ್ಯೆಗೆ ಸಮನಾಗಿರುತ್ತದೆ ಮತ್ತು ಲೋಹವೊಂದಕ್ಕೆ ಅದು ಸ್ಥಿರವಾಗಿರುತ್ತದೆ.

4)ಲೋಹದೊಂದಿಗೆ ದ್ವಿತೀಯಕ ವೇಲೆನ್ಸಿಯಿಂದ ಬಂಧವನ್ನು ಹೊಂದಿರುವ ಅಯಾನ್ ಅಥವಾ ಗುಂಪುಗಳು ವಿವಿಧ ಸಮನ್ವಯಿ ಸಂಖ್ಯೆಗೆ ಅನುಗುಣವಾಗಿ ವಿಶಿಷ್ಟ ವ್ಯೂಹ ಜೋಡಣೆ ಹೊಂದಿರುತ್ತದೆ.

ಆಧುನಿಕ ಸೂತ್ರೀಕರಣದಲ್ಲಿ ಅಂತಹ ವ್ಯೂಹ ಜೋಡಣೆಯನ್ನು ಸಮನ್ವಯಿ ಬಹುಮುಖಿತ್ವ ಎಂದು ಕರೆಯುವರು. ಚೌಕಾಕಾರದ ಆವರಣದಲ್ಲಿ ಇರುವ ಪ್ರಬೇಧಗಳನ್ನು ಸಮನ್ವಯಿ ಘಟಕ ಅಥವಾ ಸಂಕೀರ್ಣಗಳು ಮತ್ತು ಚೌಕಾಕಾರದ ಆವರಣದ ಹೊರಗೆ ಇರುವ ಅಯಾನ್‌ಗಳನ್ನು ಪ್ರತಿ ಅಯಾನ್‌ಗಳು (counterion) ಎಂದು ಕರೆಯುವರು.

ಸಂಕ್ರಮಣ ಲೋಹಗಳ ಸಮನ್ವಯಿ ಸಂಯುಕ್ತಗಳಲ್ಲಿ ಅಷ್ಟಮುಖಾಕೃತಿ (octachedron) ಚತುರ್ಮುಖಾಕೃತಿ (tetrahedron) ಮತ್ತು ಸಮತಳ ಚೌಕ (square palnar) ಜ್ಯಾಮಿತಿ ಆಕೃತಿಗಳು ಸರ್ವಸಾಮಾನ್ಯವಾಗಿರುತ್ತವೆ ಎಂದು ಪ್ರತಿಪಾದಿಸಿದನು. ಹೀಗಾಗಿ

$$[Co(NH_3)_6]^{3+}, [CoCl(NH_3)_5]^{2+}, [CoCl_2(NH_3)_4]^{+}$$

ಅಷ್ಟಮುಖಾಕೃತಿ ಘಟಕಗಳು. ಆದರೆ $[Ni(CO)_4]$ ಮತ್ತು $[PtCl_4]^{2-}$ ಕ್ರಮವಾಗಿ ಚತುರ್ಮುಖಾಕೃತಿ ಮತ್ತು ಸಮತಲ ಚೌಕಾಕೃತಿಯಾಗಿವೆ.

### ಒಂದು ಯುಗ್ಮ ಲವಣ ಮತ್ತು ಒಂದು ಸಂಕೀರ್ಣದ ನಡುವೆ ವ್ಯತ್ಯಾಸ

ಗಾತ್ರಾನುಸಾರ ಅನುಪಾತದಲ್ಲಿ ಎರಡು ಅಥವಾ ಹೆಚ್ಚು ಸ್ಥಿರ ಸಂಯುಕ್ತಗಳ ಸಹಯೋಗದಿಂದ ಯುಗ್ಮ ಲವಣ ಮತ್ತು ಸಂಕೀರ್ಣಗಳೆರಡೂ ರೂಪುಗೊಳ್ಳುತ್ತವೆ. ಆದರೆ ಯುಗ್ಮ ಲವಣಗಳಾದ ಕಾರ್ನಲೈಟ್ $KCl, MgCl_2, 6H_20$, ಮೋರ್‌ನ $FeSO_4.(NH_4)_2\ SO_4.6H_20$ ಲವಣ ಪೊಟ್ಯಾಶ್ ಆಲಮ್ $KAl(SO_4)_2\ 12H_20$ ಮುಂತಾದವುಗಳನ್ನು ನೀರಿನಲ್ಲಿ ಕರಗಿಸಿದಾಗ ಸರಳ ಅಯಾನ್‌ಗಳಾಗಿ ಸಂಪೂರ್ಣವಾಗಿ ವಿಯೋಜನೆಗೊಳ್ಳುತ್ತವೆ. ಆದರೆ


$$K_4[Fe(CN)_6] \text{ ನ } [Fe(CN)_6]^{4-},$$

ಅಂತಹ ಸಂಕೀರ್ಣ ಅಯಾನ್‌ಗಳು $Fe^{2+}$ ಮತ್ತು $CN^-$ ಅಯಾನ್‌ಗಳಾಗಿ ವಿಯೋಜನೆಗೊಳ್ಳುವುದಿಲ್ಲ.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಮೆಟಲರ್ಜಿ_ಎಕ್ಸ್‌ಟ್ರ್ಯಾಕ್ಷನ್ ಆಫ್ ಕ್ರೂಡ್ ಮೆಟಲ್ ಫ್ರಮ್ ಕಾನ್ಸಂಟ್ರೇಟೆಡ್ ಓರ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3flJIhO



**ಸುಭಾಷಿತ**

ನಾನು ಸೋತಿಲ್ಲ. ನಿಷ್ಪ್ರಯೋಜಕವಾದ 10,000 ಮಾರ್ಗಗಳನ್ನು ಕಂಡುಹಿಡಿದಿದ್ದೇನೆ.

-ಥಾಮಸ್ ಆಲ್ವ ಎಡಿಸನ್

# ಗ್ರಾಮೀಣ ಪ್ರದೇಶಗಳಲ್ಲಿ ಕೊರೊನಾ ಸೋಂಕು ತಡೆಗೆ ವ್ಯಾಪಕ ಕ್ರಮ ಅಗತ್ಯ

**ನಗರ** ಕೇಂದ್ರಿತವಾಗಿರುವ ಕೊರೊನಾ ಸೋಂಕಿನ ನಿಯಂತ್ರಣದ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶಗಳಿಗೂ ಹೊಂದುವಂತೆ ಪರಿಷ್ಕರಿಸಿ ವಿಸ್ತರಿಸಲು ಇದು ಸಕಾಲ. ಗ್ರಾಮೀಣ ಪ್ರದೇಶಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸೋಂಕನ್ನು ನಿಯಂತ್ರಿಸುವ ಉದ್ದೇಶದಿಂದ ಸಮರೋಪಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದುದು ಸದ್ಯದ ತುರ್ತು. ಈ ತುರ್ತಿಗೆ ಸ್ಪಂದಿಸುವಂತೆ ಸೋಂಕನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಮಾರ್ಗಸೂಚಿ ಬಿಡುಗಡೆ ಮಾಡಿರುವುದು ಹಾಗೂ ರಾಜ್ಯ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಪ್ರಕಟಿಸಿರುವುದು ಅಗತ್ಯವಾಗಿದ್ದ ಕ್ರಮಗಳು. ಕೊರೊನಾ ಸೋಂಕಿನ ಮೊದಲ ಅಲೆ ಗ್ರಾಮೀಣ ಪ್ರದೇಶಗಳನ್ನು ಹೆಚ್ಚು ಬಾಧಿಸಿರಲಿಲ್ಲ. ಆದರೆ, ಪ್ರಸ್ತುತ ಬಾಧಿಸುತ್ತಿರುವ ಎರಡನೇ ಅಲೆಯು ನಗರ ಪ್ರದೇಶಗಳ ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲೂ ಹೆಚ್ಚಿನ ಸಾವುನೋವು ಉಂಟು ಮಾಡಿದೆ. ನಗರ ಪ್ರದೇಶಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಕಡಿಮೆಯಿರುವುದರಿಂದ, ಸೋಂಕಿನ ಹೆಚ್ಚಳಕ್ಕೆ ಆರಂಭದಲ್ಲೇ ಕಡಿವಾಣ ಹಾಕುವುದು ಅನಿವಾರ್ಯವಾಗಿದೆ. ಕೊರೊನಾ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ಪರೀಕ್ಷೆಗಳನ್ನು ಹೆಚ್ಚಿಸಬೇಕು ಹಾಗೂ ಮನೆ ಮನೆಗೆ ತೆರಳಿ ಪರೀಕ್ಷೆಗಳನ್ನು ನಡೆಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿರುವುದನ್ನು ಕೂಡ ಹಳ್ಳಿಗಳಲ್ಲಿ ಕೊರೊನಾ ಸೋಂಕನ್ನು ನಿಯಂತ್ರಿಸುವ ತುರ್ತಿನ ನೆಲೆಗಟ್ಟಿನಲ್ಲಿಯೇ ನೋಡಬೇಕಾಗಿದೆ. ಆ ಕಾಳಜಿಯನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನದ ರೂಪದಲ್ಲಿ, ಹಳ್ಳಿಗಳು ಮತ್ತು ಕೊಳೆಗೇರಿಗಳಲ್ಲಿನ ಕೋವಿಡ್ ಪೀಡಿತರಿಗೆ ಮನೆಯಲ್ಲಿಯೇ ಪ್ರತ್ಯೇಕ ವಾಸಕ್ಕೆ ಅವಕಾಶ ನೀಡದಿರಲು ರಾಜ್ಯ ಸರ್ಕಾರ ನಿರ್ಧರಿಸಿದೆ ಹಾಗೂ ಸೋಂಕಿತರನ್ನು ಕೋವಿಡ್ ಆರೈಕೆ ಕೇಂದ್ರಗಳಿಗೆ ಸ್ಥಳಾಂತರಿಸಲು ತೀರ್ಮಾನಿಸಿದೆ. ಮನೆಗಳಲ್ಲಿಯೇ ಚಿಕಿತ್ಸೆ ಪಡೆಯುವ ಬದಲು, ಕೋವಿಡ್ ಕೇಂದ್ರಗಳಿಗೆ ಸೋಂಕಿತರನ್ನು ಕರೆತರುವುದರಿಂದ ಅವರಿಗೆ ಗುಣಮಟ್ಟದ ಚಿಕಿತ್ಸೆಯೊಂದಿಗೆ ಉತ್ತಮ ಆಹಾರವೂ ದೊರೆಯಲಿದೆ ಎನ್ನುವುದು ಸರ್ಕಾರದ ಉದ್ದೇಶ. ಪ್ರತೀ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಸರ್ಕಾರ ಹೇಳಿದೆ. ಗ್ರಾಮೀಣ ಮತ್ತು ನಗರದ ಹೊರವಲಯ ಪ್ರದೇಶಗಳಲ್ಲಿ ಕನಿಷ್ಠ 30 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವಂತೆ ಕೇಂದ್ರ ಸರ್ಕಾರ ಪ್ರಕಟಿಸಿರುವ ಮಾರ್ಗದರ್ಶಿ ಸೂತ್ರವೂ ರಾಜ್ಯ ಸರ್ಕಾರದ ಪ್ರಯತ್ನಕ್ಕೆ ಪೂರಕವಾಗಿದೆ.



**ಪರೀಕ್ಷೆ, ಚಿಕಿತ್ಸೆ ಹಾಗೂ ಲಸಿಕೆಯ ಸೂತ್ರಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರೆ, ದೇಶದ ಜೀವನಾಡಿಗಳಾದ ಹಳ್ಳಿಗಳಲ್ಲಿ ಕೊರೊನಾ ಸೋಂಕಿನ ಸರಪಳಿಯನ್ನು ತುಂಡರಿಸಬಹುದು**

ಗ್ರಾಮೀಣ ಭಾಗಗಳಲ್ಲಿ ಕೊರೊನಾ ಸೋಂಕಿನ ಸರಪಳಿಯನ್ನು ತುಂಡರಿಸುವ ದಿಸೆಯಲ್ಲಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಗಮನಸೆಳೆಯುವಂತಿವೆ. ಈ ಎಲ್ಲ ಕಾರ್ಯಕ್ರಮಗಳನ್ನು ವಿಳಂಬವಿಲ್ಲದೆ ಅನುಷ್ಠಾನಗೊಳಿಸುವುದು ಸರ್ಕಾರದ ಮುಂದಿರುವ ಸವಾಲು. ಸೋಂಕಿತರ ಪ್ರಾಥಮಿಕ ಸಂಪರ್ಕದಲ್ಲಿ ಇದ್ದವರನ್ನು ಗುರುತಿಸಿ ತಕ್ಷಣ ಪರೀಕ್ಷೆಗೊಳಪಡಿಸುವ ಕೆಲಸಕ್ಕೆ ಆದ್ಯತೆ ದೊರಕಬೇಕಾಗಿದೆ. ಕೊರೊನಾ ಪರೀಕ್ಷೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಗ್ರಾಮೀಣ ಭಾಗದ ಜನರಿಗೆ ಸರಳವಾಗಿ ಅರ್ಥವಾಗುವಂತೆ ರೂಪಿಸಿ ತಲುಪಿಸಬೇಕಾಗಿದೆ. ಪ್ರಾತ್ಯಕ್ಷಿಕೆ ಮೂಲಕ ಜನರಲ್ಲಿ ಕೊರೊನಾ ಕುರಿತ ಜಾಗೃತಿ ಮೂಡಿಸಲು ಪ್ರಯತ್ನಿಸಬಹುದು. ಸೋಂಕಿತರಿಗೆ ಚಿಕಿತ್ಸೆಯ ಜೊತೆಗೆ, ಅರ್ಹರಿಗೆ ಲಸಿಕೆ ನೀಡುವ ಪ್ರಕ್ರಿಯೆಗೂ ಹೆಚ್ಚಿನ ವೇಗ ದೊರೆಯಬೇಕಾಗಿದೆ. ಪ್ರಸ್ತುತ ಆಮೆಗತಿಯಲ್ಲಿರುವ ಲಸಿಕಾ ಆಂದೋಲನ ಚುರುಕಾಗದಿದ್ದರೆ, ಕೊರೊನಾ ವಿರುದ್ಧದ ಹೋರಾಟ ಲಂಬಿಸುವುದರ ಜೊತೆಗೆ ಸಾವುನೋವಿನ ಪ್ರಮಾಣವೂ ಹೆಚ್ಚಲಿದೆ. ಗ್ರಾಮೀಣ ಭಾಗದಲ್ಲಿನ ಕೊರೊನಾ ವಿರುದ್ಧದ ಹೋರಾಟ ನಗರಪ್ರದೇಶಗಳಿಗಿಂತಲೂ ಭಿನ್ನವಾದುದು. ಜನಸಂಖ್ಯೆಯ ಸಾಂದ್ರತೆ ಕಡಿಮೆ ಇರುವುದರಿಂದ ಲಾಕ್‌ಡೌನ್ ಉದ್ದೇಶವನ್ನು ಗ್ರಾಮೀಣ ಪ್ರದೇಶಗಳಲ್ಲಿ ಸುಲಭವಾಗಿ ಕಾರ್ಯಗತಗೊಳಿಸಬಹುದು. ಪಡಿತರ ವ್ಯವಸ್ಥೆಯನ್ನು ಚುರುಕುಗೊಳಿಸುವ ಹಾಗೂ ಸರಳಗೊಳಿಸುವ ಮೂಲಕ ಜನರನ್ನು ಮನೆಯಲ್ಲೇ ಇರುವಂತೆ ಮಾಡಬಹುದು. ಸೀಮಿತ ಜನಸಂಖ್ಯೆಯಿಂದಾಗಿ ಲಸಿಕೆ ಅಭಿಯಾನವು ಗ್ರಾಮೀಣ ಪ್ರದೇಶಗಳಲ್ಲಿ ಯಶಸ್ವಿಯಾಗುವುದು ಸುಲಭ. ಪರೀಕ್ಷೆ, ಚಿಕಿತ್ಸೆ ಹಾಗೂ ಲಸಿಕೆಯ ಸೂತ್ರಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರೆ ದೇಶದ ಜೀವನಾಡಿಗಳಾದ ಹಳ್ಳಿಗಳಲ್ಲಿ ಕೊರೊನಾ ಸೋಂಕಿನ ಸರಪಳಿಯನ್ನು ತುಂಡರಿಸಬಹುದು.

## ದಿನದ ಟ್ವೀಟ್



### ಭಾರತದಲ್ಲೇ ತಯಾರಾಗಲಿ

**ಭಾರತವು ನೂರಾರು ಕೋಟಿ ರೂಪಾಯಿ ಮೌಲ್ಯದ ಆಕ್ಸಿಜನ್ ಕಾನ್ಸನ್‌ಟ್ರೇಟರ್‌ಗಳನ್ನು ಆಮದು ಮಾಡಿಕೊಂಡಿದೆ. ದುರದೃಷ್ಟಕರ ಸಂಗತಿಯೆಂದರೆ, ಈ ಯಂತ್ರಗಳಲ್ಲಿ ಹೆಚ್ಚಿನವು ಬರುತ್ತಿರುವುದು ಚೀನಾದಿಂದ. ಇವು ಅಗತ್ಯವಾಗಿದ್ದರೂ ಇವುಗಳನ್ನು ಭಾರತದಲ್ಲಿಯೇ ತಯಾರಿಸಬಹುದಾಗಿತ್ತು. ಅದರಿಂದ ಉದ್ಯೋಗ ಸೃಷ್ಟಿ ಸಾಧ್ಯವಾಗುತ್ತಿತ್ತಲ್ಲದೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಉತ್ತೇಜನ ಕೊಟ್ಟಂತೆಯೂ ಆಗುತ್ತಿತ್ತು. ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬೆಂಬಲಿಸಿ.**

**ರಾಹುಲ್ ರಾಜ್**, ನಾಗರಿಕ

## 25 ವರ್ಷಗಳ ಹಿಂದೆ

ಶನಿವಾರ, 18-5-1996

- **ಸ್ಪೀಕರ್ ಹುದ್ದೆಗೆ ಸಮಾನ ಅಭ್ಯರ್ಥಿ ತೃತೀಯ ರಂಗ- ಕಾಂಗ್ರೆಸ್ ನಿರ್ಧಾರ**

**ನವದೆಹಲಿ, ಮೇ, 17 (ಪಿಟಿಐ)**– ಲೋಕಸಭೆಯಲ್ಲಿ ಸ್ಪೀಕರ್ ಹುದ್ದೆಗೆ ತೃತೀಯ ರಂಗ ಮತ್ತು ಕಾಂಗ್ರೆಸ್ ಪಕ್ಷಗಳ ಸಹಿತ ಎಲ್ಲ ವಿರೋಧ ಪಕ್ಷಗಳ ಸಮಾನ ಅಭ್ಯರ್ಥಿಯನ್ನು ಸ್ಪರ್ಧೆಗೆ ಇಳಿಸುವ ಮಹತ್ವದ ಬೆಳವಣಿಗೆ ಇಂದು ನಡೆದಿದೆ. ಈ ಮಧ್ಯೆ ವಾಜಪೇಯಿ ನೇತೃತ್ವದ ಸರ್ಕಾರದ ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಮತ ಚಲಾಯಿಸಲು ತನ್ನ ಸಂಸತ್ ಸದಸ್ಯರಿಗೆ 'ವಿಪ್' ನೀಡಲೂ ಕಾಂಗ್ರೆಸ್ ನಿರ್ಧರಿಸಿದೆ.

ನವದೆಹಲಿಯಲ್ಲಿ ಇಂದು ತೃತೀಯ ರಂಗದ ಸಭೆ ಒಂದೆಡೆ ನಡೆದರೆ, ಇನ್ನೊಂದೆಡೆ ಕಾಂಗ್ರೆಸ್ ಕಾರ್ಯಕಾರಿಣಿಯ ಅನೌಪಚಾರಿಕ ಸಭೆ ನಡೆಯಿತು. ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಸ್ಪೀಕರ್ ಹುದ್ದೆಗೆ ಏಕ ಅಭ್ಯರ್ಥಿಯನ್ನು ಸ್ಪರ್ಧೆಗೆ ಇಳಿಸಲು ಕಾಂಗ್ರೆಸ್ ತೀರ್ಮಾನಿಸಿದೆ.

ತೃತೀಯ ರಂಗದ ಸಭೆಯಲ್ಲಿ ಕೂಡಾ ಸ್ಪೀಕರ್ ಹುದ್ದೆಗೆ ಅಭ್ಯರ್ಥಿಯನ್ನು ನಿಲ್ಲಿಸುವ ಮುನ್ನ ಕಾಂಗ್ರೆಸ್ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಯಿತು.

- **ಬಹುಮತ: ರಾಷ್ಟ್ರಪತಿಗೆ ಮನವರಿಕೆ**

**ನವದೆಹಲಿ, ಮೇ 17**– ತೃತೀಯ ರಂಗದ ಪ್ರಧಾನಿ ಅಭ್ಯರ್ಥಿಯಾಗಿರುವ ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಅವರು ಇಂದು ರಾಷ್ಟ್ರಪತಿ ಡಾ. ಶಂಕರ ದಯಾಳ ಶರ್ಮಾ ಅವರನ್ನು ಭೇಟಿಯಾಗಿ, ತಮಗಿರುವ ಬೆಂಬಲವನ್ನು ಅವರಿಗೆ ಮನವರಿಕೆ ಮಾಡಿಕೊಟ್ಟರೆಂದು ಗೊತ್ತಾಗಿದೆ.

ಬಿಜೆಪಿ ನಾಯಕ ವಾಜಪೇಯಿ ಅವರನ್ನು ಸರ್ಕಾರ ರಚಿಸಲು ಆಮಂತ್ರಿಸಿದ್ದರಿಂದ ತೃತೀಯ ರಂಗದ ಕೆಲವು ನಾಯಕರು ಮಾಡಿರುವ ಟೀಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂದು ರಾಷ್ಟ್ರಪತಿ ಅವರಿಗೆ ಮನವಿ ಮಾಡಿದರೆಂದು ಹೇಳಲಾಗಿದೆ.

## 50 ವರ್ಷಗಳ ಹಿಂದೆ

ಮಂಗಳವಾರ, 18-5-1971

- **ಲಿಂಗನಮಕ್ಕಿ, ಕಾಳಿ ನದಿ ಯೋಜನೆ ಎಲ್ಲ ಘಟ್ಟಗಳಿಗೆ ಮಂಜೂರಾತಿಗೆ ಒತ್ತಾಯ**

**ಬೆಂಗಳೂರು, ಮೇ 17**– ಕಾಳಿ ನದಿ ಯೋಜನೆಯ ಎಲ್ಲ ಘಟ್ಟಗಳಿಗೆ, ಲಿಂಗನಮಕ್ಕಿ ವಿದ್ಯುತ್ ಯೋಜನೆಗೆ ಶೀಘ್ರ ಮಂಜೂರಾತಿ ನೀಡುವಂತೆ ಕೇಂದ್ರಕ್ಕೆ ರಾಜ್ಯಪಾಲ ಶ್ರೀ ಧರ್ಮವೀರರವರು ಪತ್ರ ಬರೆದಿದ್ದಾರೆ.

ಕಾಳಿ ನದಿ ವಿದ್ಯುತ್ ಯೋಜನೆಯ ಪ್ರಥಮ ಹಂತಕ್ಕೆ ಈಗಾಗಲೇ ಕೇಂದ್ರ ಮಂಜೂರಾತಿ ನೀಡಿದೆ. ಶರಾವತಿ ಯೋಜನೆಯ ಕೊನೆಯ ಭಾಗದ ನೀರನ್ನು ಉಪಯೋಗಿಸಿ ಲಿಂಗನಮಕ್ಕಿಯಲ್ಲಿ ವಿದ್ಯುಚ್ಛಕ್ತಿ ಉತ್ಪನ್ನದ ಸಣ್ಣ ಯೋಜನೆಗೆ ರಾಜ್ಯ ಸರ್ಕಾರ ಮಂಜೂರಾತಿ ಕೇಳುತ್ತಿದೆ.

- **ಮಹಾರಾಜರಿಗೆ ಎರಡು ಪಕ್ಕೆಲುಬುಗಳ ಮುರಿತ**

**ಮೈಸೂರು, ಮೇ 17**– ನಿನ್ನೆ ಕಾರು ಅಪಘಾತದಲ್ಲಿ ಗಾಯಗೊಂಡ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರಿಗೆ ಬಲಪಾರ್ಶ್ವದ ಪಕ್ಕೆಲುಬುಗಳು ಮುರಿದಿರುವುದಾಗಿ ಕೆ.ಆರ್. ಆಸ್ಪತ್ರೆಯ ಡಾ. ಕೆ.ಗೋವಿಂದ ದಾಸ್ ಅವರು ತಿಳಿಸಿದ್ದಾರೆ.

ಡಬಲ್ ಎಂಜಿನ್ ಸರ್ಕಾರದಿಂದ ಹೊಗೆ ಬಂದಿತೇ ವಿನಾ ಆಮ್ಲಜನಕ ಬರಲಿಲ್ಲ!

# ಕೆಟ್ಟ ಎಂಜಿನ್: ಬಟ್ಟಬಯಲಿನಲಿ ಬೋಗಿ



**ಗತಿಬಿಂಬ**

**ವೈ.ಗ.ಜಗದೀಶ್**

**ಒಂದು** ಕಾಲದಲ್ಲಿ ಅದೊಂದು ನಂಬಿಕೆ ಇತ್ತು. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇದ್ದರೆ ಅಭಿವೃದ್ಧಿಯ ಹೊಳೆ ಧುಮ್ಮಿಕ್ಕುತ್ತದೆ; ಲಕ್ಷ್ಮಿ ಕಾಲು ಮುರಿದುಕೊಂಡು ರಾಜ್ಯದಲ್ಲೇ ಬಿದ್ದಿರುತ್ತಾಳೆ; ಕೇಳುವ ಮುನ್ನವೇ ನೆರವಿನ ಮಹಾಪೂರವೇ ಹರಿದುಬರುತ್ತದೆ...

ಏಕೆಂದರೆ ಅರ್ಧ ಶತಮಾನದ ಈಚೆಗಿನ ರಾಜಕೀಯ ಇತಿಹಾಸವನ್ನು ಗಮನಿಸಿದರೆ, ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇದ್ದದ್ದು ಅಪರೂಪ. ಇದ್ದರೂ ಒಂದು ವರ್ಷವಷ್ಟೇ. ಅವಿಭಜಿತ ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ಬೇರೆ ಪಕ್ಷಗಳ ನೇತೃತ್ವದ ಸರ್ಕಾರ ಇದ್ದರೂ ಅಲ್ಲಿಯ ಪ್ರಾದೇಶಿಕ ಪಕ್ಷಗಳು ಕೇಂದ್ರದಲ್ಲಿ ಅಧಿಕಾರ ನಡೆಸುವ ಪಕ್ಷಗಳ ಜತೆ ಕೂಡಿಕೆ ರಾಜಕಾರಣ ಮಾಡಿಕೊಳ್ಳುವುದನ್ನು ಕರಗತ ಮಾಡಿಕೊಂಡಿರುತ್ತಿದ್ದವು. ರಾಜಕೀಯ ನೆಂಟಸ್ತಿಕೆಯ ಕಾರಣಕ್ಕೆ ಆ ರಾಜ್ಯಗಳ ಅಭಿವೃದ್ಧಿಗೆ ತೊಡಕಾಗಲಿಲ್ಲ. ಕರ್ನಾಟಕ ಮಾತ್ರ ಈ ವಿಷಯದಲ್ಲಿ ಹತಭಾಗ್ಯವನ್ನೇ ಉಂಡುಟ್ಟು ಸೆಣಸುತ್ತಲೇ ಬಂದಿದೆ.

ಅದೇ ಕಾರಣಕ್ಕೋ ಏನೋ ಕರ್ನಾಟಕದ ಜನರು 2019ರಲ್ಲಿ ಎಡವಿ ಬಿದ್ದರು. ಹೀಗಾಗಿ, ಈಗ ಸೊಂಟ ಮುರಿದುಕೊಂಡು ಏಳಲು ನರಳಾಡಬೇಕಾದ ಸ್ಥಿತಿ ಬಂದಿದೆ. ಲೋಕಸಭೆ ಚುನಾವಣೆ ಹೊತ್ತಿಗೆ ಇಲ್ಲಿದ್ದ ಜೆಡಿಎಸ್- ಕಾಂಗ್ರೆಸ್ ಮೈತ್ರಿಕೂಟ ನೇತೃತ್ವದ ಸರ್ಕಾರದ ಒಳಜಗಳ ಕಂಡು ಜನ ಬೇಸತ್ತಿದ್ದರು. ಕೇಂದ್ರ-ರಾಜ್ಯದಲ್ಲಿ ಬೇರೆ ಪಕ್ಷಗಳ ನೇತೃತ್ವದ ಸರ್ಕಾರಗಳು ಇದ್ದಾಗಿನ ದುಃಸ್ಥಿತಿ ಕಂಡು ಪಶ್ಚಾತ್ತಾಪವನ್ನೂ ಪಟ್ಟಿದ್ದರು.

ಲೋಕಸಭೆ ಚುನಾವಣೆಯಲ್ಲಿ ಪ್ರಚಾರ ನಡೆಸಿದ್ದ ಬಿಜೆಪಿ ನಾಯಕರು 'ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ ರಾಜ್ಯದಲ್ಲೂ ಬಿಜೆಪಿ ನೇತೃತ್ವದ ಸರ್ಕಾರ ಬರಲಿದೆ. ಹೀಗೆ ಡಬಲ್ ಎಂಜಿನ್ ಸರ್ಕಾರದಿಂದ ಅಭಿವೃದ್ಧಿಯೇ ಧರೆಗಿಳಿಯಲಿದೆ' ಎಂದು ಬಣ್ಣದ ಭರವಸೆಗಳನ್ನು ಉರುಳಿಸಿದ್ದರು. 28 ಕ್ಷೇತ್ರಗಳ ಪೈಕಿ 25 ಅನ್ನು ಬಿಜೆಪಿ ಗೆದ್ದರೆ, ಒಂದರಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಗೆದ್ದಿದ್ದರು. ಕಾಂಗ್ರೆಸ್-ಜೆಡಿಎಸ್ ತಲಾ ಒಂದು ಸ್ಥಾನವನ್ನಷ್ಟೇ ಪಡೆದವು. ಹೀಗೆ ಬಿಜೆಪಿ ಮೇಲಿನ ಮಮಕಾರ ಹಾಗೂ ಆ ಪಕ್ಷದ ನಾಯಕರ ಮಾತಿನ ಮೇಲೆ ನಂಬಿಕೆ ಇಟ್ಟು ಮತಗಳನ್ನೆಲ್ಲ ಧಾರೆ ಎರೆದುಬಿಟ್ಟರು.

ಆದರೆ, ಎರಡು ವರ್ಷ ಕಳೆಯುವಷ್ಟರಲ್ಲಿ ಬಿಜೆಪಿ ನಾಯಕರ ಭರವಸೆ ಎಷ್ಟು ಪೊಳ್ಳೆಂಬುದು, ಬಣ್ಣದ ಮಾತು ನಂಬಿ ಮತ ಹಾಕಿದವರಿಗಷ್ಟೇ ಅಲ್ಲ, ಮತ ಹಾಕಿಸಿದ 'ನಿಷ್ಠಾವಂತ'ರಿಗೂ ಅರ್ಥವಾಗಿ ಹೋಯಿತು.

ಕೋವಿಡ್‌ನಂತಹ ಸಾಂಕ್ರಾಮಿಕ ರೋಗ ನಾಡಿನ ಮೂಲೆಮೂಲೆಯನ್ನೂ ವ್ಯಾಪಿಸಿ ಕುಟುಂಬವನ್ನೇ ಅಥವಾ ಕುಟುಂಬದ ಯಜಮಾನನನ್ನೇ ಆಪೋಶನ ತೆಗೆದುಕೊಳ್ಳುತ್ತಾ, ಸಮಾಜವನ್ನೇ ಸ್ಮಶಾನಸದೃಶ ವಾಸ್ತವಕ್ಕೆ ದೂಡುತ್ತಿದೆ. ಡಬಲ್ ಎಂಜಿನ್ ಸರ್ಕಾರದ ಭರವಸೆ ಕೊಟ್ಟ ನರೇಂದ್ರ ಮೋದಿ, ನಾಡು- ದೇಶದ ಜನರ ಹಿತ ಕಾಯಲು ಬೇಕಾದ ನಿರ್ಣಯ ಕೈಗೊಳ್ಳಲು ಮೀನಮೇಷ ಎಣಿಸುತ್ತಿದ್ದಾರೆ.

ಡಬಲ್ ಎಂಜಿನ್ ಸರ್ಕಾರ ಹೋಗಲಿ, ಸಿಂಗಲ್ ಎಂಜಿನ್ ಸರ್ಕಾರ ಇದೆಯೇ ಎಂಬ ಅನುಮಾನ ದಟ್ಟವಾಗತೊಡಗಿದೆ. ಒಕ್ಕೂಟ ವ್ಯವಸ್ಥೆಯನ್ನು ಎಳೆಯುವ ಎಂಜಿನ್, ಕೊರೊನಾ ಸೃಷ್ಟಿಸಿದ ಭೀಕರ ಸಂಕಷ್ಟಗಳ ಮಧ್ಯೆ ಕೆಟ್ಟು ನಿಂತಂತೆ ಭಾಸವಾಗತೊಡಗಿದೆ. ನರೇಂದ್ರ ಮೋದಿ– ಅಮಿತ್ ಶಾ ಜೋಡಿ ಡಬಲ್ ಎಂಜಿನ್ ರೈಲಿನಂತೆ ಮುಂದೆ ನಿಂತು, ಕರ್ನಾಟಕವನ್ನು ವಿಶ್ವದಲ್ಲೇ ಅಭಿವೃದ್ಧಿಶೀಲ ರಾಜ್ಯದ ಬೋಗಿಯಾಗಿಸಿ ಎಳೆದೊಯ್ಯಲಿದೆ ಎಂದು ನಂಬಿ, 'ಆಪರೇಷನ್ ಕಮಲ' ನಡೆಸಿ ಸರ್ಕಾರ ರಚಿಸಿದ ಬಿ.ಎಸ್.ಯಡಿಯೂರಪ್ಪ ಮಾತ್ರ, ಎಂಜಿನ್ ಇಲ್ಲದ ಬೋಗಿಯನ್ನು ಬಟ್ಟಬಯಲಿನಲ್ಲಿ ನಿಲ್ಲಿಸಿಕೊಂಡು ಉಧೋ ಉಧೋ ಎಲ್ಲಮ್ಮ ಎಂದು ಅಂಗಲಾಚುವ ಸ್ಥಿತಿಗೆ ತಲುಪಿದ್ದಾರೆ.

ಕೋವಿಡ್ ಕಾಲದಲ್ಲಿ ರಾಜ್ಯಗಳ ನೆರವಿಗೆ ನಿಲ್ಲಬೇಕಾದುದು ಕೇಂದ್ರ ಸರ್ಕಾರದ ಸಾಂವಿಧಾನಿಕ ಜವಾಬ್ದಾರಿ. ಪಕ್ಷ ಯಾವುದೇ ಇದ್ದರೂ ಯಾತನೆಯ ಸಮಯದಲ್ಲಿ ರಾಜಕೀಯ ಮಾಡುವುದು ಕ್ರೌರ್ಯದ ಪರಮಾವಧಿ. 2009ರಲ್ಲಿ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವದಲ್ಲಿತ್ತು. ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಮಹಾಪ್ರವಾಹ ಬಂದು ಜನ ನೆಲ-ನೆಲೆ ಕಳೆದುಕೊಂಡಿದ್ದರು. ಆಗ ರಾಜ್ಯಕ್ಕೆ ಭೇಟಿ ಕೊಟ್ಟ ಅಂದಿನ ಪ್ರಧಾನಿ ಮನಮೋಹನ ಸಿಂಗ್, ಅಧಿಕಾರದಲ್ಲಿರುವ ಪಕ್ಷ ಯಾವುದು ಎಂದು ನೋಡದೆ ಸ್ಥಳದಲ್ಲೇ ₹1,500 ಕೋಟಿ ನೆರವು ಘೋಷಿಸಿದ್ದರು. ಡಬಲ್ ಎಂಜಿನ್ ಸರ್ಕಾರ ಕೊಡುತ್ತೇವೆ ಎಂದು ವಾಗ್ದಾನ ಕೊಟ್ಟ ನರೇಂದ್ರ ಮೋದಿ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್, ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ನೇತೃತ್ವದ ಸರ್ಕಾರ ಬಂದ ಮೇಲೆ ರಾಜ್ಯದ ದುರಿತ ಕಾಲದಲ್ಲಿ ನೆರವಿಗೆ ನಿಲ್ಲುವುದು ಹೋಗಲಿ, ಕರ್ನಾಟಕದ ಜನ ಅಥವಾ ಮುಖ್ಯಮಂತ್ರಿಯ ಅಹವಾಲು ಆಲಿಸುವ ಪರಿಪಾಟವನ್ನೇ ನಿಲ್ಲಿಸಿದರು. ದಶಕದ ನಂತರ ಮತ್ತೆ ಅಂತಹುದೇ ಪ್ರವಾಹ ಬಂದು ಊರು-ಕೇರಿಗಳೆಲ್ಲ ಕೊಚ್ಚಿ ಹೋದಾಗ, ಪ್ರಧಾನಿ 'ಟ್ವೀಟ್' ಮಾಡಿ ಸಮಾಧಾನ ಹೇಳುವ ಔದಾರ್ಯವನ್ನಷ್ಟೇ ತೋರಿದರು.

ಕೋವಿಡ್ ಕಾಲದಲ್ಲಿ ಕೂಡ ರಾಜ್ಯಕ್ಕೆ ಬೇಕಾದ ಸಹಾಯಹಸ್ತ ಚಾಚುವುದರಲ್ಲಿ ಮೋದಿ ನೇತೃತ್ವದ ಸರ್ಕಾರ ಔದಾರ್ಯ ತೋರುವುದು ಹೋಗಲಿ; ಕರ್ತವ್ಯವನ್ನೇ ನಿಭಾಯಿಸಲಿಲ್ಲ. ಕರ್ನಾಟಕ ಸರ್ಕಾರ ಆಮ್ಲಜನಕ ಕೇಳಿದರೆ ತಾರತಮ್ಯ ಮಾಡಿತು. 'ಅಗತ್ಯದಷ್ಟು ಆಮ್ಲಜನಕ ಕೊಡದೇ ಇದ್ದರೆ ಆಸ್ಪತ್ರೆ-ಆರೋಗ್ಯ ಕೇಂದ್ರಗಳನ್ನು ಮುಚ್ಚುವ ದಯನೀಯ ಸ್ಥಿತಿ ಬರುತ್ತದೆ' ಎಂದು ಯಡಿಯೂರಪ್ಪ ಅವರು ಪ್ರಧಾನಿ ಮುಂದೆ ಗೋಗರೆದರು. ಡಬಲ್ ಎಂಜಿನ್‌ನಿಂದ ಹೊಗೆ ಬಂದಿತೇ ವಿನಾ ಆಮ್ಲಜನಕ ಬರಲಿಲ್ಲ. ಕರ್ನಾಟಕಕ್ಕೆ 1,200 ಟನ್ ಆಮ್ಲಜನಕ ಒದಗಿಸಿ ಎಂದು ಹೈಕೋರ್ಟ್ ಹೇಳಿದರೂ ಅದನ್ನು ಪ್ರಶ್ನಿಸಿದ ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್ ಮೊರೆ ಹೋಗಿ ತಮ್ಮದೇ ಪಕ್ಷದ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ವ್ಯಾಜ್ಯ ಹೂಡಿತು. ಒಕ್ಕೂಟ ವ್ಯವಸ್ಥೆಯ ನಂಬಿಕೆಗಳನ್ನೇ ಬುಡಮೇಲು ಮಾಡಿತು.


ಲಸಿಕೆ, ರೆಮ್‌ಡಿಸಿವಿರ್ ಚುಚ್ಚುಮದ್ದಿನ ವಿಷಯದಲ್ಲಿ ಕೂಡ ಕರ್ನಾಟಕವನ್ನು ಅಪ್ಪುಟು ಕಡೆಗಣಿಸಿತು. 'ಮಗನನ್ನು ಹದ್ದುಬಸ್ತಿನಲ್ಲಿಡಿ' ಎಂದು ಹೇಳಿದ್ದನ್ನು ಕೇಳುತ್ತಿಲ್ಲ ಎಂಬ ಕಾರಣಕ್ಕೆ ಯಡಿಯೂರಪ್ಪನವರ ಮೇಲೆ ಮೋದಿ ಮತ್ತು ಶಾ ಅವರಿಗೆ ಸಿಟ್ಟಿರಬಹುದು; ಒಪ್ಪಿಕೊಳ್ಳೋಣ. ಆದರೆ, ಮೋದಿ ಪ್ರಧಾನಿಯಾಗುವಾಗ ಬೆಂಬಲಿಸಿದರಲ್ಲ; ಆ ಮತದಾರರ ಪ್ರಾಮಾಣಿಕ ನಂಬಿಕೆಯನ್ನಾದರೂ ಮೋದಿ ಅಥವಾ ಮತ ಪಡೆದ ಸಂಸದರು ಅಥವಾ ಅಂದು ಪಕ್ಷದ ಅಧ್ಯಕ್ಷರಾಗಿದ್ದ ಅಮಿತ್ ಶಾ ನೆನಪಿಸಿಕೊಳ್ಳಬೇಕಲ್ಲ.

ಇಲ್ಲಿಯವರೆಗೆ ಕರ್ನಾಟಕದ ಬಿಜೆಪಿ ನಾಯಕರು ಉತ್ತರಪ್ರದೇಶ, ಗುಜರಾತ್ ಮಾದರಿ ಎಂದು ಹೇಳುತ್ತಿದ್ದರು. ಈಗ, ಕೋವಿಡ್ ನಿಯಂತ್ರಣಕ್ಕೆ ಮಹಾರಾಷ್ಟ್ರ, ಕೇರಳ ಮಾದರಿ ಅನುಸರಿಸುವುದಾಗಿ ಸ್ವತಃ ಸಚಿವ ಅರವಿಂದ ಲಿಂಬಾವಳಿ ಹೇಳುತ್ತಿದ್ದಾರೆ. ಹಿಂದೆಲ್ಲ, ಕೋವಿಡ್ ಹರಡಲು ಮಹಾರಾಷ್ಟ್ರ, ಕೇರಳವೇ ಕಾರಣ ಎಂದು ದೂರುತ್ತಿದ್ದ ಬಿಜೆಪಿಯವರಿಗೆ ಈಗಲಾದರೂ ಅಲ್ಲಿನ ರಾಜ್ಯಗಳ ಸತ್ಕಾರ್ಯದ ಅರಿವಾಗಿರುವುದು ಸಮಾಧಾನದ ಸಂಗತಿ.

ಒಕ್ಕೂಟ ವ್ಯವಸ್ಥೆಯನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತು ಪ್ರಧಾನಿಯಾದವರು ದೇಶಕ್ಕೆ ಮಾದರಿಯನ್ನು ಹಾಕಿಕೊಡಬೇಕು. ಸೈದ್ಧಾಂತಿಕ ಭಿನ್ನತೆ ಇದ್ದರೂ ಆ ಮಾದರಿಯನ್ನು ಎಲ್ಲ ರಾಜ್ಯಗಳೂ ಅನುಸರಿಸುವಂತೆ ಇರಬೇಕು. ಆದರೆ, ಮೋದಿ ಮಾದರಿ ಇಲ್ಲದಿರುವುದನ್ನು ಗಮನಿಸಿದ ಅವರ ಪಕ್ಷದವರೇ ಮಹಾರಾಷ್ಟ್ರ-ಕೇರಳ ಮಾದರಿಗಳ ಜಪ ಮಾಡುತ್ತಿದ್ದಾರೆ. ವಿಶ್ವಗುರು ಆಗಲು ಹೊರಟ ಮೋದಿ, ಈಗ ಅವರದ್ದೇ ಪಕ್ಷ ಆಡಳಿತ ನಡೆಸುತ್ತಿರುವ ರಾಜ್ಯಗಳಿಗೆ ಮಾದರಿಯಾಗಲು ಸಾಧ್ಯವಾಗದೇ ಇರುವುದು ಕೋವಿಡ್ ಕಲಿಸಿದ ಪಾಠವಾಗಿರಬೇಕು; ಇಲ್ಲವೇ ಸತ್ಯದರ್ಶನದ ಸಮಯದ ಬಾಗಿಲಿನಲ್ಲಿ ಅವರೆಲ್ಲ ಬಂದು ನಿಂತಿರಬೇಕು. ಅದನ್ನು ಇತಿಹಾಸ ಮಾತ್ರ ಹೇಳಬಲ್ಲದು.



## ಚುರುಮುರಿ



### ಭಗೀರಥನ ಚಿಂತೆ

• ಸುಮಂಗಲಾ

'ನನ್ನ ಪಾಡಿಗೆ ನಾನಿದ್ದೆ, ನಿನ್ನ ವಂಶಸ್ಥರಿಗೆ ಮೋಕ್ಷ ದೊರೆಯಲೆಂದು ಭರತಭೂಮಿಗೆ ಕರಕೊಂಡು ಹೋದೆ. ನೀನಿಲ್ಲಿ ಸ್ವರ್ಗದಲ್ಲಿ ಆರಾಮಾಗಿದ್ದಿ. ಅಲ್ಲಿ ನನ್ನ ದಂಡೆ ಮ್ಯಾಗಿರೋ ಸಾವಿರಾರು ಫ್ಯಾಕ್ಟರಿಗಳು, ನಗರಗಳು, ಹಳ್ಳಿಗಳ ಕಸಕಡ್ಡಿ, ಕಾರ್ಖಾನೆ ತ್ಯಾಜ್ಯ ಸುರಿದು ನನ್ನ ಅವಸ್ಥೆ ನೋಡು' ಭಗೀರಥನಿಗೆ ಗಂಗೆ ಫೋನಿನಲ್ಲಿ ವರಾತ ಹಚ್ಚಿದ್ದಳು.

'ಪ್ರಧಾನಿಗಳೇ ಗಂಗಾಮಾ ಅಂತ ನಿನ್ನ ಬಾಯ್ತುಂಬ ಕರದು, ನಮಾಮಿ ಗಂಗೆ ಯೋಜನೆಗೆ ಒಂಬತ್ತು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ, ಅಗದಿ ಭಯಂಕರ ಸ್ವಚ್ಛ ಮಾಡ್ಯಾರೆ. ಇನ್ನಾ ಏನ್ ಬೇಕು ನಿನಗ' ಎಂದು ಭಗೀರಥ ಬುದ್ಧಿ ಹೇಳಿದ.

'ಹೆಣ ಸುಡಾಕೆ ಕಟ್ಟಿಗೆಗೆ ರೊಕ್ಕ ಇಲ್ಲ ಅಂತ್ಹೇಳಿ ಮಂದಿ ಅದನ್ನೂ ಆವಾಗೀವಾಗ ನನ್ನ ಒಡಲಿಗೆ ಬಿಸಾಕತಿದ್ರು. ಬಡಮಂದಿ ಅಂತ ಸುಮ್ಮನಿರತಿದ್ದೆ. ನಮಾಮಿ ಗಂಗೆ ಪ್ರಾಜೆಕ್ಟಿನಾಗೆ ಬಡವರ ಹೆಣ ಸುಡಾಕೂ ವ್ಯವಸ್ಥೆ ಮಾಡಬೇಕಿತ್ತು...'

'ಬರೀ ಎಡಗಣ್ಣಿಗೆ ಕಂಡಿದ್ದೇ ಖರೇ ಅಲ್ಲಬೇ... ಬಲಗಣ್ಣಿಂದ ನೋಡು. ಎಪ್ಪತ್ತನಾಕು ದೇಶಗಳಲ್ಲಿ ಎಪ್ಪತ್ತನಾಕು ಪ್ರಧಾನಿಗಳಿದ್ದರೂ ಹತ್ತೊಂಬತ್ತು ಲಕ್ಷ ಜನ ಸತ್ತಾರೆ. ನಮ್ಮಲ್ಲಿ ಒಬ್ಬರೇ ಪ್ರಧಾನಿ ಕೊರೊನಾ ಸಾವನ್ನು ಎರಡೂವರೆ ಲಕ್ಷಕ್ಕೆ ನಿಲ್ಸ್ಯಾರೆ...' ಭಗೀರಥನ ವಿವರಣೆ.

'ಕೊರೊನಾದಿಂದ ಸತ್ತ ನೂರಾರು ಹೆಣಗಳನ್ನೂ ನನ್ನ ಒಡಲಿಗೆ ಎಸದಾರ. ಯಾವ ಕಣ್ಣಿಂದ ನೋಡಿದರೂ ಅಷ್ಟೇ. ನಾ ಕೊಳೆತು ನಾರಾಕಹತ್ತೀನಿ'.

'ಇಲಿ ಹೋದ್ರೆ ಹುಲಿ ಹೋತು ಅನ್ನಾಕಿ ನೀ. ತಡಿ, ವಿಚಾರಿಸತೀನಿ' ಎಂದು ಬಿಹಾರ, ಉತ್ತರ ಪ್ರದೇಶದ ಮುಖ್ಯಮಂತ್ರಿಗಳನ್ನು ಕಾನ್ಫರೆನ್ಸ್ ಕಾಲ್‌ಗೆ ಸೇರಿಸಿಕೊಂಡ. 'ಅವೆಲ್ಲ ಮ್ಯಾಗಿಂದ ಕೆಳಗೆ ಬಂದಾವು, ಯೋಗಣ್ಣನ ರಾಜ್ಯದವು' ನಿತೀಶಣ್ಣನ ವಾದಕ್ಕೆ ಯೋಗಿವರ್ಯರು 'ಅವು ನಮ್ಮವಲ್ಲ. ಪ್ರವಾಹ ಜಾಸ್ತಿಯಾಗಿ ಕೆಳಗಿಂದ ಮ್ಯಾಗೆ ತೇಲಿಕೋತ ನಮ್ಮಕಡಿಗೂ ಬಂದಾವು' ಎಂದು ವಾದಿಸತೊಡಗಿದರು.

ಈ ವಿತಂಡವಾದಗಳ ನಡುವೆ, ಕೊರೊನಾ ಮೋಕ್ಷಕ್ಕೆ ಭಗೀರಥ ಪ್ರಯತ್ನ ಮಾಡುವವರು ಯಾರಪ್ಪ ಎಂದುಕೊಳ್ಳುತ್ತ ಭಗೀರಥ ಮೆತ್ತಗೆ ಫೋನಿಟ್ಟ.

## ಸಂಗತ

# ಕರೀ ಬೂಷ್ಟಿನ ಕರಾಳ ಕುಣಿತ

### ಸಕ್ಕರೆಯ ಮೇಲಿನ ಅಕ್ಕರೆಯೇ ಇದಕ್ಕೆ ಕಾರಣ

• ನಾಗೇಶ ಹೆಗಡೆ

**ಕೋವಿಡ್** ಕಾಯಿಲೆಯಿಂದ ಇದೀಗ ತಾನೇ ಎದ್ದು ಓಡಾಡುವಂತಾದ ಕೆಲವರ ಮೂಗಿಗೆ ಈಗ ಹೊಸದೊಂದು ವೈರಿ ವಕ್ಕರಿಸುತ್ತಿದೆ. ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಎಂಬ ಬೂಷ್ಟು ಬೀಜಾಣು ನುಗ್ಗಿ ಬಂದು ಹೊಸದೊಂದು ಕಾಯಿಲೆಯನ್ನು ತರುವಂತಾಗಿದೆ. ವಿಶೇಷವಾಗಿ ಇದು ಮಧುಮೇಹ ಅಥವಾ ಸಕ್ಕರೆ ಕಾಯಿಲೆ ಇದ್ದವರಿಗೆ ಜಾಸ್ತಿ ಕಾಟ ಕೊಡುತ್ತಿದೆ. ಶರೀರದಲ್ಲಿ ಸಕ್ಕರೆ ಪ್ರಮಾಣವನ್ನು ನಿಯಂತ್ರಣದಲ್ಲಿ ಇಟ್ಟರೆ ಈ ಕಾಯಿಲೆಯಿಂದ ಬಚಾವಾಗಬಹುದು.


ಬೂಷ್ಟು (ಬೂಜು) ಅಥವಾ ಶಿಲೀಂಧ್ರ ನಮ್ಮ ಸುತ್ತ ಎಲ್ಲ ಕಡೆ ಸೂಕ್ಷ್ಮ ಅಣುವಿನ ರೂಪದಲ್ಲಿರುತ್ತವೆ. ಮಣ್ಣು, ನೀರು, ಗಾಳಿಯಲ್ಲಿ ಸಂಚರಿಸುತ್ತ, ಊಟ ಸಿಕ್ಕರೆ ತಕ್ಷಣ ಉದ್ದುದ್ದ ಬೆಳೆಯುತ್ತ, ಸಂತಾನವೃದ್ಧಿ ಮಾಡುತ್ತ ಹೋಗುತ್ತವೆ. ಲಿಂಬೆ ಹೋಳು, ಕೊಳೆತ ಹಣ್ಣು, ತರಕಾರಿ, ರೊಟ್ಟಿ ಪಲ್ಲೆ ಎಲ್ಲವುಗಳ ಮೇಲೆ ಬೆಳೆಯುತ್ತವೆ. ಎಲ್ಲಿ ಏನೇ ಬೆಳೆಯಲಿ, ಅವನ್ನು ಚಿಂದಿಚಿಂದಿ ಮಾಡಿ ಕಣರೂಪಕ್ಕೆ ತಂದು ಮಣ್ಣಿಗೆ ಸೇರಿಸುವ ಕೆಲಸ ಅವುಗಳದ್ದು.

ಪ್ರಕೃತಿಯಲ್ಲಿ ಸುಮಾರು 35 ಲಕ್ಷ ಪ್ರಭೇದಗಳಿಗೆ ಸೇರಿದ ಶಿಲೀಂಧ್ರಗಳಿವೆ ಎಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ನಮಗೆಲ್ಲ ಪರಿಚಿತವಿರುವ ಅಣಬೆ (ನಾಯಿಕೊಡೆ) ಅವುಗಳಲ್ಲಿ ಅತಿ ದೊಡ್ಡದು. ಕಣ್ಣಿಗೆ ಕಾಣದ ಸೂಕ್ಷ್ಮ ಅಣಬೆಗಳಲ್ಲಿ ಕೆಲವು ನಮಗೆ ತುಂಬ ಪ್ರಯೋಜನಕಾರಿ; ಇನ್ನು ಕೆಲವು ಅಷ್ಟೇ ಕಾಟ ಕೊಡುತ್ತವೆ. ಈಗ ಚರ್ಚೆಯಲ್ಲಿರುವ ಕಪ್ಪುಶಿಲೀಂಧ್ರಗಳು ಮ್ಯೂಕರ್ ಮೈಸಿಟೀಸ್ ಎಂಬ ವರ್ಗಕ್ಕೆ ಸೇರಿವೆ.

ಶಿಲೀಂಧ್ರದ ಸೂಕ್ಷ್ಮ ಬೀಜಕಣಗಳು ನಮ್ಮ ಪಾದದ ಉಂಗುಷ್ಠದಿಂದ ಹಿಡಿದು ತಲೆಯವರೆಗಿನ ಶರೀರದ ಯಾವ ಭಾಗಕ್ಕಾದರೂ ಅಂಟಿ ಕೂತು ಬೆಳೆದು ಹಿಂಸೆ ಕೊಡಬಹುದು. ದೇಹದ ಒಳಕ್ಕೂ ಹೊಕ್ಕು ಹಾವಳಿ ಎಬ್ಬಿಸಬಹುದು. ಮೂಗಿನ ಮೂಲಕ ಪ್ರವೇಶ ಪಡೆಯುವ ಈ ಕಪ್ಪು ಶಿಲೀಂಧ್ರ ತುಂಬ ಅಪಾಯಕಾರಿಯಾದರೂ ಅಷ್ಟೇ ಅಪರೂಪವಾದದ್ದು. ಸಾಮಾನ್ಯವಾಗಿ ಕಾಯಿಲೆಯಿಂದ ಚೇತರಿಸಿಕೊಳ್ಳುತ್ತಿರುವ (ಅಂದರೆ ರೋಗನಿರೋಧಕ ಶಕ್ತಿ ಸಾಕಷ್ಟು ದುರ್ಬಲವಾಗಿರುವ) ಪ್ರತೀ ಲಕ್ಷ ಜನರಲ್ಲಿ ಹದಿನಾಲ್ಕು ಜನರ ಮೇಲೆ ಇದು ದಾಳಿ ಮಾಡುತ್ತದೆ.

ಮೂಗಿನೊಳಕ್ಕೆ ತೂರಿಕೊಂಡ ಇದು ಶುದ್ಧ ರಕ್ತನಾಳಕ್ಕೆ ಹೋಗಿ ರಕ್ತದ ಸಕ್ಕರೆಯನ್ನು ಹೀರುತ್ತ ಬೆಳೆಯುತ್ತ ತನ್ನ ಸಂತಾನವೃದ್ಧಿ ಮಾಡಿಕೊಳ್ಳುತ್ತ ಹೋಗುತ್ತದೆ. ಚಿಕಿತ್ಸೆ ನೀಡದಿದ್ದರೆ ಕಣ್ಣು, ಕಿವಿ, ವಸಡು ಕೊನೆಗೆ ಮಿದುಳಿನಲ್ಲೂ ಇದರ ಸಂತಾನ ಬೆಳೆಯುತ್ತದೆ. ಈ ಕಾಯಿಲೆಗೆ ವೈದ್ಯವಿಜ್ಞಾನದಲ್ಲಿ 'ಮ್ಯೂಕರ್‌ಮೈಕೊಸಿಸ್' ಎನ್ನುತ್ತಾರೆ. ಇದರ ದಾಳಿಗೆ ಸಿಲುಕುವವರಲ್ಲಿ ಶೇಕಡ 60- 70 ಮಂದಿ ಡಯಾಬಿಟೀಸ್ ಕಾಯಿಲೆ ಇದ್ದವರೇ ಆಗಿರುತ್ತಾರೆ. ಕೋವಿಡ್‌ಗೆ ಸಿಲುಕಿದವರನ್ನು ಮತ್ತು ಅಂಗಾಂಶ ಕಸಿ ಮಾಡಿಸಿಕೊಂಡು ಚೇತರಿಸಿಕೊಳ್ಳುತ್ತಿರುವವರನ್ನು ಇದು ಹೆಚ್ಚಾಗಿ ಬಾಧಿಸುತ್ತದೆ. ಈ ಕಾಯಿಲೆಗೆ ಸೋಂಕು ಗುಣವಿಲ್ಲ. ಅಷ್ಟರಮಟ್ಟಿಗೆ ನಾವೆಲ್ಲ ಸುರಕ್ಷಿತ.

ಕಪ್ಪು ಶಿಲೀಂಧ್ರ ದಾಳಿಯ ಮೊದಲ ಲಕ್ಷಣ ಏನೆಂದರೆ ಮೂಗಿನಲ್ಲಿ ದುರ್ವಾಸನೆ ಬರುವುದು, ಮೂಗು ಕಟ್ಟಿದಂತಾಗುವುದು, ಮೂಗಿನ ಒಳಪೊರೆ ಊದಿಕೊಂಡು ಕಪ್ಪುಬಣ್ಣಕ್ಕೆ ತಿರುಗುವುದು. ಮೂಗಿನಿಂದ ಕಪ್ಪು ಸಿಂಬಳ ಬರುವುದು; ತಲೆನೋವು, ಜ್ವರ ಕಾಣಿಸಿಕೊಳ್ಳುವುದು. ಶಿಲೀಂಧ್ರ ಪ್ರಸರಣ ಹೆಚ್ಚುತ್ತ ಹೋದರೆ ಮೇಲ್ದುಟಿಯ ಒಳಭಾಗವೂ ಕಪ್ಪಾಗುತ್ತದೆ. ಕೆನ್ನೆ ಕಪ್ಪಾಗಿ, ಮುಖದ ಒಂದು ಭಾಗದಲ್ಲಿ ನೋವು ಕಾಣಿಸಿಕೊಳ್ಳುವುದು, ಜೊತೆಗೆ ವಸಡಿನ ನೋವು. ಕಣ್ಣಿಗೂ ಇದು ಪಸರಿಸಿದಾಗ ಕಣ್ಣೆವೆ ಊತು, ಅದು ಜೋತುಬೀಳುತ್ತದೆ. ಕೆಂಪಾಗುತ್ತದೆ. ಕ್ರಮೇಣ ಕಪ್ಪಾಗುತ್ತದೆ. ಶಿಲೀಂಧ್ರ ದಾಳಿಯನ್ನು ಸಾಕಷ್ಟು ಮುಂಚಿತವಾಗಿ ಗುರುತಿಸಿದರೆ ಅವುಗಳನ್ನು ಸೋಲಿಸಲು 'ಅಂಫೊಟೆರಿಸಿನ್ ಬಿ' ಎಂಬ ಔಷಧ, ಚುಚ್ಚುಮದ್ದು ಈ ಹಿಂದೆಯೇ ಬಳಕೆಯಲ್ಲಿದೆ. ಇರುವುದು ಅದೊಂದೇ ಔಷಧ. ಮೊದಲೇ ದುಬಾರಿ. ಈಗಂತೂ ಕಾಳಸಂತೆ ಸೇರಿರಬಹುದು.



ಕೋವಿಡ್ ಕಾಯಿಲೆಯಿಂದ ಗುಣವಾಗುತ್ತಿರುವ ಎಲ್ಲರ ಮೇಲೂ ಇದು ದಾಳಿ ಮಾಡುವುದಿಲ್ಲ. ಮಧುಮೇಹಿಗಳಲ್ಲೂ ಅನೇಕರಲ್ಲಿ ರೋಗನಿರೋಧಕ ಶಕ್ತಿ ಚೆನ್ನಾಗಿದ್ದರೆ ಇದು ಅಂಜುತ್ತದೆ. ಕೋವಿಡ್ ರೋಗವನ್ನು ಹಿಮ್ಮೆಟ್ಟಿಸಲೆಂದು ಕೆಲವು ಡಾಕ್ಟರ್‌ಗಳು ಸ್ಟೀರಾಯಿಡ್ ಔಷಧವನ್ನು ಪ್ರಯೋಗಿಸುತ್ತಾರೆ. ಕೆಲವು ಬಾರಿ ಮೊನೊಕ್ಲೋನಲ್ ಆ್ಯಂಟಿಬಾಡೀಸ್ (ಅಂದರೆ ಮನುಷ್ಯರ ಬಿಳಿರಕ್ತಗೋಲಗಳಿಂದ ತಯಾರಿಸಿದ ಜೀವಿರೋಧಕಗಳನ್ನು) ಔಷಧ ರೂಪದಲ್ಲಿ ಕೊಡುತ್ತಾರೆ. ವಿಶೇಷವಾಗಿ ಸ್ಟೀರಾಯಿಡ್‌ಗಳನ್ನು ಲೆಕ್ಕ ತಪ್ಪಿ ಕೊಟ್ಟಾಗ ಅದು ರೋಗನಿರೋಧಕ ಶಕ್ತಿಯನ್ನು ಕಮ್ಮಿ ಮಾಡುತ್ತಲೇ ರಕ್ತದಲ್ಲಿನ ಸಕ್ಕರೆ ಅಂಶವನ್ನು ಹೆಚ್ಚಿಸುತ್ತದೆ. ಮೇಲಾಗಿ, ಕಾಯಿಲೆ ಬಿದ್ದವರಿಗೆ ಶಕ್ತಿ ಬರಲೆಂದು ಗ್ಲುಕೋಸ್ ಮತ್ತು ಸಕ್ಕರೆ ಅಂಶ ಜಾಸ್ತಿ ಇರುವ ಹಣ್ಣು, ಪೇಯಗಳನ್ನು ಕೊಡಲಾಗುತ್ತದೆ. ಅವೆಲ್ಲವೂ ಈ ಫಂಗಸ್‌ನ ವೃದ್ಧಿಗೆ ಸಹಾಯ ಮಾಡುತ್ತವೆ. ವೈರಿಯನ್ನು ಪೋಷಿಸುವ ಕೆಲಸ ಕೊಲವೊಮ್ಮೆ ಆಸ್ಪತ್ರೆಗಳಲ್ಲೇ ನಡೆಯುತ್ತದೆ. ಮನೆಯಲ್ಲೇ ಚಿಕಿತ್ಸೆ ಪಡೆಯುವವರಲ್ಲಿ ಸಕ್ಕರೆ ಕಾಯಿಲೆ ಇದ್ದರೆ ಸ್ಟೀರಾಯಿಡ್ ಔಷಧವನ್ನು ಬಳಸುವಾಗ ಹುಷಾರಾಗಿರಬೇಕು. ಸಿಹಿ ತಿನ್ನಿಸಬಾರದು.

ಸಕ್ಕರೆಯ ನಿಯಂತ್ರಣ ರಕ್ತಕ್ಕೂ ಒಳ್ಳೆಯದು, ದೇಹಕ್ಕೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು.

## ವಾಚಕರ ವಾಣಿ

### ಬ್ಯಾಂಕಿಂಗ್ ಸೇವೆ: ತೊಡಕಿನ ಮೂಲ ಸರಿಪಡಿಸಿ

ಮಂಡ್ಯ ಜಿಲ್ಲೆಯ ಕೆರಗೋಡಿನಲ್ಲಿ ರೈತರೊಬ್ಬರು ವ್ಯವಹಾರಕ್ಕಾಗಿ ಬ್ಯಾಂಕಿಗೆ ಹೋಗಿದ್ದಾಗ, ಕನ್ನಡ ಬಾರದ ಅಲ್ಲಿನ ಮೇಲಧಿಕಾರಿಯು ಅವರನ್ನು ಸರಿಯಾಗಿ ನಡೆಸಿಕೊಳ್ಳದೆ, ಇಂಗ್ಲಿಷ್ ಅಥವಾ ಮರಾಠಿಯಲ್ಲಿ ಮಾತನಾಡುವಂತೆ ಹೇಳಿದ್ದು ಬೆಳಕಿಗೆ ಬಂದಿದೆ. ಇಂತಹ ಪ್ರಕರಣವೇನೂ ಹೊಸದಲ್ಲ. ಯಾಕೆಂದರೆ ರಾಜ್ಯದ ಹಲವು ಬ್ಯಾಂಕುಗಳಲ್ಲಿ ಇಂತಹವು ನಡೆಯುತ್ತಲೇ ಇರುತ್ತವೆ. ಆದರೆ ಕೆಲವು ಬಾರಿಯಷ್ಟೇ ಬೆಳಕಿಗೆ ಬರುತ್ತವೆ.

ಈ ತೊಡಕಿನ ಮೂಲ ಇರುವುದೇ ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆಯ (ಐಬಿಪಿಎಸ್) ಕಟ್ಟಲೆಗಳಲ್ಲಿ. 2014ಕ್ಕೆ ಮುನ್ನ, ಕರ್ನಾಟಕದಲ್ಲಿನ ಬ್ಯಾಂಕಿನ ಸಿಬ್ಬಂದಿಗೆ ಕನ್ನಡ ಗೊತ್ತಿರಬೇಕೆಂಬ ಕಟ್ಟಲೆಯಿತ್ತು. ಆದರೆ ಆನಂತರ ಇದಕ್ಕೆ ತಿದ್ದುಪಡಿ ತಂದು, ಕೆಲಸಕ್ಕೆ ಸೇರಿದ ಆರು ತಿಂಗಳೊಳಗೆ ಕನ್ನಡ ಕಲಿಯಬೇಕೆಂಬ ಕಟ್ಟಲೆ ತರಲಾಯಿತು. ಇದರಿಂದಾಗಿ ರಾಜ್ಯದ ಹಲವು ಬ್ಯಾಂಕುಗಳಲ್ಲಿ ಕನ್ನಡ ಗೊತ್ತಿಲ್ಲದ ಮಂದಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಕನ್ನಡಿಗರಿಗೆ ತಮ್ಮ ಬ್ಯಾಂಕಿಂಗ್ ವ್ಯವಹಾರಗಳನ್ನು ನೆರವೇರಿಸಿಕೊಳ್ಳಲು ತುಂಬಾ ತೊಡಕಾಗುತ್ತಿದೆ.

2014ಕ್ಕೆ ಮೊದಲಿದ್ದ ಐಬಿಪಿಎಸ್ ಕಟ್ಟಲೆಗಳನ್ನು ಜಾರಿಗೆ ತರುವುದೇ ಇದಕ್ಕಿರುವ ಪರಿಹಾರ. ಇದರ ಜೊತೆಗೆ ಡಾ. ಸರೋಜಿನಿ ಮಹಿಷಿ ವರದಿ ಜಾರಿಗೆ ತಂದು, ಕರ್ನಾಟಕದಲ್ಲಿನ ಕೆಲಸಗಳು ಕನ್ನಡಿಗರಿಗೆ ದೊರೆಯುವಂತೆ ಮಾಡಬೇಕು. ಇವುಗಳ ಜೊತೆಗೆ ಇಡಬೇಕಾದ ಇನ್ನೊಂದು ಹೆಜ್ಜೆ ಎಂದರೆ, ಬ್ಯಾಂಕಿಂಗ್ ವಲಯವನ್ನು ರಾಜ್ಯಗಳ ತೆಕ್ಕೆಗೆ ತರುವುದು. ಒಟ್ಟಿನಲ್ಲಿ, ಕರ್ನಾಟಕದಲ್ಲಿನ ಬ್ಯಾಂಕುಗಳ ಎಲ್ಲ ಸೇವೆ, ತಿಳಿವು ಕನ್ನಡದಲ್ಲಿ ದೊರೆಯುವಂತೆ ಆಗಬೇಕು.

**ವಿವೇಕ್ ಶಂಕರ್**, ಬೆಂಗಳೂರು

### ವೈದ್ಯಪಡೆಯ ಶ್ಲಾಘನೀಯ ಕಾರ್ಯ

'ಆಸ್ಪತ್ರೆಗಳ ಭಾರ ತಗ್ಗಿಸಲು ಬಿಎಂಸಿ- 92 ವೈದ್ಯಪಡೆಯ ಹೊಸ ಮಾರ್ಗ' ಎಂಬ ಸುದ್ದಿ (ಪ್ರ.ವಾ., ಮೇ 15) ಓದಿ ಸಂತಸವಾಯಿತು. ಕೋವಿಡ್ ಸಾಂಕ್ರಾಮಿಕದ ಈ ದುರಿತ ಕಾಲದಲ್ಲಿ ಆಸ್ಪತ್ರೆ, ಹಾಸಿಗೆ, ಆಮ್ಲಜನಕ, ಲಸಿಕೆ ವಿಚಾರವಾಗಿ ಸರ್ಕಾರವೇ ಗೊಂದಲದಲ್ಲಿರುವಾಗ, ಬೆಂಗಳೂರು ವೈದ್ಯಕೀಯ ಕಾಲೇಜಿನ (ಬಿಎಂಸಿ) 1992ರ ಬ್ಯಾಚ್‌ನ ಪದವೀಧರರ ಗುಂಪು ಕೊರೊನಾ ಸೋಂಕಿತರಿಗೆ ನೆರವು ನೀಡಲು ಮುಂದಾಗಿರುವುದು ಶ್ಲಾಘನೀಯ ಕಾರ್ಯ.

ಹಾಗೆಯೇ ದೇಶ ವಿದೇಶಗಳಲ್ಲಿರುವ ಈ ತಂಡದ ವೈದ್ಯರು ಈ ಕಾರ್ಯಕ್ಕೆ ಕೈ ಜೋಡಿಸಿ, ಈ ಸಂಬಂಧ ದೇಣಿಗೆಯನ್ನು ಸಂಗ್ರಹಿಸಿ ಅದನ್ನು ಕೊರೊನಾ ಸೋಂಕಿತರ ಸೇವೆಗೆ ಸದ್ಬಳಕೆ ಮಾಡಿಕೊಂಡಿರುವುದು, ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲೂ ಸಹಾಯವಾಣಿಗಳನ್ನು ತೆರೆದು, ಇಂತಹ ಸಂಕಷ್ಟದ ಸಮಯದಲ್ಲಿ ಜನತೆಗೆ ನೆರವಾಗುತ್ತಿರುವುದು ನೊಂದವರಲ್ಲಿ ಹೊಸ ಭರವಸೆ ಮೂಡಿಸುತ್ತಿದೆ.

ಎಲ್ಲದಕ್ಕೂ ಸರ್ಕಾರವನ್ನೇ ಕಾಯದೆ ಸ್ವಯಂ ಸೇವಕರು ಸ್ವ ಇಚ್ಛೆಯಿಂದ ಮುಂದೆ ಬಂದು ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕಾದುದು ಇಂದಿನ ಅನಿವಾರ್ಯಗಳಲ್ಲಿ ಒಂದು.

**ರಾಘವೇಂದ್ರ ಅಪುರಾ**, ಅಗತಗೌಡನಹಳ್ಳಿ, ಗುಂಡ್ಲುಪೇಟೆ

### ವೋಟಿಗಾಗಿ ನೋಟು... ಈಗ ಕೊಡಿ!

ರಾಜ್ಯದಲ್ಲಿ ಲಾಕ್‌ಡೌನ್ ಇರುವುದರಿಂದ ಜನರಿಗೆ ಕೆಲಸ ಕಾರ್ಯಗಳು ಇಲ್ಲದೆ ಜೀವನ ನಡೆಸುವುದು ತುಂಬಾ ಕಷ್ಟವಾಗಿದೆ. ಚುನಾವಣೆಯ ಸಂದರ್ಭದಲ್ಲಿ ಚುನಾವಣೆಗೆ ಸ್ಪರ್ಧಿಸುವ ನಾಯಕರು ಮತ್ತು ಅವರ ಬೆಂಬಲಿಗರು ವೋಟಿಗಾಗಿ ಬಡಜನರ ಮನೆಮನೆಗೂ ಹೋಗಿ, ಅವರ ಯೋಗಕ್ಷೇಮ ವಿಚಾರಿಸುತ್ತಾರೆ. ವೋಟಿಗಾಗಿ ನೋಟು ಜೊತೆಗೆ ಮಾಂಸ, ಮದ್ಯವನ್ನು ಕೊಟ್ಟು, 'ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ' ಎಂದೆಲ್ಲ ಆಶ್ವಾಸನೆ ಕೊಡುತ್ತಾರೆ. ಆದರೆ ಅವರೆಲ್ಲ ಈಗ ಎಲ್ಲಿದ್ದಾರೆ?

ಯಾವುದೇ ಸಾಲದ ಇಎಂಐಗಳನ್ನು ಲಾಕ್‌ಡೌನ್ ಸಮಯದಲ್ಲಿ ಕಟ್ಟುವುದು ಅನಿವಾರ್ಯವಲ್ಲ ಎಂದು ಸರ್ಕಾರ ಘೋಷಣೆ ಮಾಡಿಲ್ಲ. ಬಡವರಿಗೆ ಸರ್ಕಾರದಿಂದ ಬರುವ ಅಕ್ಕಿ ಇದ್ದರಷ್ಟೇ ಸಾಲದು. ದಿನನಿತ್ಯದ ವಸ್ತುಗಳು ಅಗತ್ಯವಾಗಿ ಬೇಕಾಗಿರುತ್ತವೆ. ಶಾಸಕರು, ಸಂಸದರು ಹಾಗೂ ಅವರ ಬೆಂಬಲಿಗರು ಇಂತಹ ಸಂಕಷ್ಟದ ಸಮಯದಲ್ಲಿ ಬಡಜನರ ಬೆಂಬಲಕ್ಕೆ ನಿಂತು, ವೋಟಿಗಾಗಿ ಅವರಿಗೆ ಕೊಡುತ್ತಿದ್ದ ನೋಟನ್ನು ಈಗ ಕೊಡುವಂತಾಗಲಿ. ದಿನನಿತ್ಯದ ಅಗತ್ಯ ವಸ್ತುಗಳು ಮತ್ತು ಹೆಲ್ತ್ ಕಿಟ್‌ಗಳನ್ನು ಕೊಟ್ಟು ಅವರಿಗೆ ಧೈರ್ಯ ತುಂಬುವಂತಹ ಕೆಲಸಕ್ಕೆ ಮುಂದಾಗಲಿ.

**ಶ್ರೀನಿವಾಸ್ ಚಕ್ರವರ್ತಿ**, ಹೊಳಲು

### ಆಯುಕ್ತರ ನೇಮಕಾತಿಗೆ ವಿಳಂಬವೇಕೆ?

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತರ ಅವಧಿ ಮುಗಿದು ಸುಮಾರು ನಾಲ್ಕು ತಿಂಗಳುಗಳಾಗುತ್ತಾ ಬಂದಿದ್ದರೂ ನೂತನ ಆಯುಕ್ತರ ನೇಮಕಾತಿಗೆ ಸರ್ಕಾರ ಆಸಕ್ತಿ ತೋರದಿರುವುದು ವಿಪರ್ಯಾಸವೇ ಸರಿ. ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕರನ್ನೇ ಪ್ರಭಾರ ಆಯುಕ್ತರನ್ನಾಗಿ ನೇಮಿಸಲಾಗಿದೆ. ನಿರ್ದೇಶಕರು ಆಯುಕ್ತರಾಗಿ ಅತ್ಯುತ್ತಮ ಕಾರ್ಯ ಮಾಡುತ್ತಿದ್ದಾರೆ. ಆದರೆ ಆಯುಕ್ತಾಲಯಕ್ಕೆ ಅದರದೇ ಆದ ಪೂರ್ಣಪ್ರಮಾಣದ ಆಯುಕ್ತರ ಅವಶ್ಯಕತೆಯ ಜರೂರು ಇದೆ.

ಆಯುಕ್ತರ ನೇಮಕಾತಿಗಾಗಿ ಕಳೆದ ಡಿಸೆಂಬರ್‌ನಲ್ಲಿ ಅರ್ಜಿ ಆಹ್ವಾನಿಸಿದ್ದು, ಹಲವಾರು ಆಕಾಂಕ್ಷಿಗಳು ಅರ್ಜಿ ಸಲ್ಲಿಸಿ ಜಾತಕಪಕ್ಷಿಗಳಂತೆ ನೇಮಕಾತಿಯ ಸಂದರ್ಶನಕ್ಕಾಗಿ ಕಾದು ಕುಳಿತಿದ್ದಾರೆ. ಅಂಗವಿಕಲರ ಬಗ್ಗೆ ಅಪಾರ ಕಾಳಜಿ ಮತ್ತು ಬದ್ಧತೆ ಇದ್ದು, ಈ ಕ್ಷೇತ್ರದಲ್ಲಿ ಅನುಭವ, ನಿಯಮಾನುಸಾರ ಅರ್ಹತೆ ಹೊಂದಿರುವ, ಸಚ್ಚಾರಿತ್ರ್ಯವಿರುವ ಸಮರ್ಥ ವ್ಯಕ್ತಿಯನ್ನು ಆಯುಕ್ತರನ್ನಾಗಿ ನೇಮಕ ಮಾಡಬೇಕಾಗಿದೆ. ಆದರೆ ಸರ್ಕಾರವು ಇದ್ಯಾವುದರ ಪರಿವೆಯೇ ಇಲ್ಲದಂತೆ ಇರುವುದು ಅಂಗವಿಕಲ ಸಮೂಹವನ್ನು ಇನ್ನಷ್ಟು ದುರ್ಬಲಗೊಳಿಸುತ್ತಿದೆ.

ಈ ತಳ ಸಮುದಾಯದ ಉಳಿವಿಗಾಗಿ ಕೋವಿಡ್‌ನ ಈ ಸಂದರ್ಭದಲ್ಲಿ ಆಯುಕ್ತರ ಪಾತ್ರ ಬಹುಮುಖ್ಯವಾದುದು. ಸರ್ಕಾರ ಈ ವಿಷಯದಲ್ಲಿ ಆದಷ್ಟು ಬೇಗ ನಿರ್ಧಾರ ಕೈಗೊಂಡು ಆಯುಕ್ತರ ನೇಮಕಕ್ಕೆ ಮುಂದಾಗಲಿ.

**ಚಂದ್ರಶೇಖರ ಪುಟ್ಟಪ್ಪ**, ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

## ಕೋವಿಡ್ ಲಸಿಕೆ ಡೋಸ್‌ಗಳ ನಡುವೆ ಅಂತರ ಹೆಚ್ಚಳ

# ‘ಗಿಮಿಕ್’ ಅಲ್ಲ ತಜ್ಞರ ಶಿಫಾರಸು

• ಡಾ. ಸಿ.ಎನ್. ಅಶ್ವತ್ಥನಾರಾಯಣ



**ಯಾವುದೇ ಕಾಯಿಲೆಗೆ** ಲಸಿಕೆ ಅಭಿವೃದ್ಧಿಪಡಿಸುವುದು ಒಂದುಸಂಕೀರ್ಣ ಪ್ರಕ್ರಿಯೆ. ಇದಕ್ಕೆ ದಶಕ ಅಥವಾ ಅದಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯದ ಸಹಭಾಗಿತ್ವದಲ್ಲಿ ಇದು ನಡೆಯಬೇಕಾಗುತ್ತದೆ. ಅಭಿವೃದ್ಧಿ ಪಡಿಸಿದ ಲಸಿಕೆಯು ಬಳಕೆಗೆ ಸುರಕ್ಷಿತ ಎಂದು ಘೋಷಿಸಬೇಕಾದರೆ ಹಲವು ಹಂತಗಳ ಪರೀಕ್ಷೆಗೆ ಒಳಪಡಬೇಕಾಗುತ್ತದೆ. ಸಂಶೋಧನಾ ಹಂತದಿಂದ ಚಿಕಿತ್ಸಾಪೂರ್ವ ಹಂತದವರೆಗೆ ನಡೆಯುವ ಹಲವಾರು ಪರೀಕ್ಷೆಗಳಿಗೆ ವರ್ಷಗಳೇ ಬೇಕಾಗುತ್ತವೆ. ಇತರ ಸಾಮಾನ್ಯ ಔಷಧಗಳಿಗಿಂತ ವಿಸ್ತೃತ ಹಾಗೂ ಸಮಗ್ರ ಪರೀಕ್ಷೆಗೆ ಲಸಿಕೆಯನ್ನು ಒಳಪಡಿಸಲಾಗುತ್ತದೆ.

ಕೊರೊನಾ ವೈರಾಣು ತಡೆಗೆ ನಡೆದ ಲಸಿಕೆಯ ಆವಿಷ್ಕಾರವು 2020ರಲ್ಲಿ ಜಗತ್ತಿನ ಗಮನ ಸೆಳೆಯಿತು. ಕೊರೊನಾ ಲಸಿಕೆಯು ಅತ್ಯಂತ ತ್ವರಿತವಾಗಿ ಅಭಿವೃದ್ಧಿಗೊಂಡ ಲಸಿಕೆ ಎಂದು ವೈದ್ಯಕೀಯ ಇತಿಹಾಸದಲ್ಲಿ ದಾಖಲಾಗಲಿದೆ. ಸಂಬಂಧಪಟ್ಟ ನಿಯಂತ್ರಕ ಸಂಸ್ಥೆಗಳು ಕ್ಷಿಪ್ರವಾಗಿ ಅನುಮತಿಗಳನ್ನು ನೀಡಿದ್ದು ಹಾಗೂ ವಿಳಂಬಕ್ಕೆ ಆಸ್ಪದವಾಗದಂತೆ ಪ್ರತಿ ಹಂತದಲ್ಲೂ ಕಾರ್ಯನಿರ್ವಹಿಸಿದ್ದು ಇದಕ್ಕೆ ಕಾರಣ. ಹಾಗೆಂದಮಾತ್ರಕ್ಕೆ ವೈದ್ಯಕೀಯ ಸಂಹಿತೆಯ ಪಾಲನೆಯಲ್ಲಿ ರಾಜಿ ಮಾಡಿಕೊಳ್ಳಲಾಗಿದೆ ಎಂದಾಗಲಿ, ಲಸಿಕೆಯ ಅಪೇಕ್ಷಿತ ಫಲಿತಾಂಶವನ್ನು ಕಡೆಗಣಿಸಲಾಗಿದೆ ಎಂದಾಗಲಿ ಭಾವಿಸಬೇಕಾಗಿಲ್ಲ. ಸಿಡುಬನ್ನು ಹೇಗೆ ನಿರ್ಮೂಲನೆ ಮಾಡಲಾಯಿತು ಎಂಬುದನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಸಿಡುಬಿನಿಂದ ಸೋಂಕಿತರಾಗಿದ್ದ ಪ್ರತಿಯೊಬ್ಬರನ್ನೂ ಗುರುತಿಸಿ, ತಡಮಾಡದೆ ಅಂಥವರಿಗೆ ಲಸಿಕೆ ಹಾಕಲಾಯಿತು. ಈ ಕಾರ್ಯತಂತ್ರವು ಸೋಂಕಿನ ವಿರುದ್ಧದ ಹೋರಾಟದಲ್ಲಿ ಯಶಸ್ಸನ್ನು ತಂದುಕೊಟ್ಟಿತು. ಪ್ರತಿಯೊಂದು ವೈಜ್ಞಾನಿಕ ಆವಿಷ್ಕಾರವನ್ನೂ ಆರಂಭದಲ್ಲಿ ಅನುಮಾನದ ಕಣ್ಣುಗಳಿಂದಲೇ ನೋಡಲಾಗುತ್ತದೆ. ಆದರೆ, ಕಾಲಾಂತರದಲ್ಲಿ ಇಂಥ ಅನುಮಾನಗಳು ಅರ್ಥಹೀನ ಎಂಬುದು ಸಾಬೀತಾಗುತ್ತಲೇ ಬಂದಿದೆ.

ರೋಗದ ವಿರುದ್ಧ ಗರಿಷ್ಠ ರಕ್ಷಣೆ ಲಭಿಸಬೇಕೆಂದಾದರೆ ಕೆಲವು ಲಸಿಕೆಗಳನ್ನು ಕೆಲವು ವಾರಗಳ ಅಥವಾ ತಿಂಗಳುಗಳ ಅಂತರದಲ್ಲಿ ಹಲವು ಡೋಸ್‌ಗಳಲ್ಲಿ ಕೊಡಬೇಕಾಗುತ್ತದೆ. ಲಸಿಕೆಯನ್ನು ಹಾಕಿಸಿಕೊಂಡ ವ್ಯಕ್ತಿಯ ದೇಹದೊಳಗೆ ಪ್ರತಿಕಾಯಗಳು ಬೆಳೆಯಲು ಡೋಸ್‌ಗಳ ನಡುವೆ ನಿಗದಿತ ಅಂತರ ಪಾಲಿಸುವುದು ಅಗತ್ಯ.

ಅದೇ ರೀತಿ, ಕೋವಿಡ್‌ಗೆ ಕೊಡಲಾಗುತ್ತಿರುವ ಕೋವಿಷೀಲ್ಡ್ ಲಸಿಕೆಯ ಡೋಸ್‌ಗಳ ನಡುವೆ ಹೆಚ್ಚಿನ ಅಂತರವಿದ್ದರೆ ಫಲಿತಾಂಶವು ಶೇ 90ರಷ್ಟು ಇರುತ್ತದೆ ಎಂಬ ಅಧ್ಯಯನ ವರದಿಯು ವೈದ್ಯಕೀಯ ನಿಯತಕಾಲಿಕ ‘ಲ್ಯಾನ್ಸೆಟ್’ನಲ್ಲಿ ಈಚೆಗೆ ಪ್ರಕಟವಾಗಿದೆ. ‘ಕೋವಿಷೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವೆ 4ರಿಂದ 6 ವಾರಗಳ ಅಂತರ ಇರಬೇಕು’ ಎಂದು ಈ ಹಿಂದೆ ಶಿಫಾರಸು ಮಾಡಲಾಗಿತ್ತು. ಆದರೆ, ‘ಎರಡು ಡೋಸ್‌ಗಳ ನಡುವಿನ ಅಂತರವು 6ರಿಂದ 12 ವಾರಗಳಷ್ಟು ಇದ್ದರೆ ಉತ್ತಮ’ ಎಂದು ಇತ್ತೀಚೆಗೆ ನಡೆಸಿದ ಅಧ್ಯಯನದ ವರದಿಗಳು ಹೇಳಿವೆ.

ಲಸಿಕೆಯ ಡೋಸ್‌ಗಳ ನಡುವೆ ಇಂತಿಷ್ಟೇ ಅಂತರ ಇರಬೇಕು ಎಂಬ ನಿಯಮವೇನೂ ಇಲ್ಲ. ಆದರೂ, ದೇಹದಲ್ಲಿ ಪ್ರತಿರೋಧ ಶಕ್ತಿ ಬೆಳೆಯಬೇಕೆಂದರೆ ಕನಿಷ್ಠ 3 ವಾರಗಳ ಸಮಯ ಬೇಕಾಗುತ್ತದೆ ಎಂಬುದು ತಜ್ಞರ ಅಭಿಮತ. ಇದೇ ವೇಳೆ, ಲಸಿಕೆ ಹಾಕಿಸಿಕೊಂಡ ಮೇಲೆ, ದೇಹದಲ್ಲಿ ಪ್ರತಿಕಾಯಗಳು ಪೂರ್ಣ ಪ್ರಮಾಣದಲ್ಲಿ ಸಕ್ರಿಯವಾಗಲು ಎಂಟು ವಾರಗಳು ಬೇಕಾಗುತ್ತವೆ ಎಂಬುದು ಪರಿಣತರ ಅಭಿಪ್ರಾಯವಾಗಿದೆ.

ಲಸಿಕೆಯ ಡೋಸ್‌ಗಳ ನಡುವೆ ಅವಧಿ ಹೆಚ್ಚಿದ್ದಷ್ಟೂ ಅದರ ಪರಿಣಾಮ ಹಾಗೂ ಸುರಕ್ಷತೆ ಹೆಚ್ಚು ಎಂಬುದನ್ನು ನಾವು ಮರೆತುಬಿಡುತ್ತೇವೆ. ಇದೀಗ ಕೋವಿಷೀಲ್ಡ್ ಡೋಸ್‌ಗಳ ನಡುವೆ ಅಂತರವನ್ನು ಹೆಚ್ಚಿಸಿರುವುದಕ್ಕೆ ಕೆಲವರು ತಮ್ಮದೇ ರೀತಿಯಲ್ಲಿ ಟೀಕೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಹೌದು, ಕೇಂದ್ರ ಸರ್ಕಾರವು ಕಳೆದ ಮೂರು ತಿಂಗಳ ಅವಧಿಯಲ್ಲಿ ಈ ಲಸಿಕೆಯ ಡೋಸ್‌ಗಳ ನಡುವಿನ ಅಂತರವನ್ನು ಎರಡು ಸಲ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಡೋಸ್‌ಗಳ ನಡುವೆ 28 ದಿನಗಳ ಅಂತರವಿರಬೇಕು ಎಂದು ಆರಂಭದಲ್ಲಿ ತೀರ್ಮಾನಿಸಲಾಗಿತ್ತು. ಆ ಅವಧಿಯನ್ನು 6ರಿಂದ 8 ವಾರಗಳಿಗೆ ಹೆಚ್ಚಿಸಿ ಮಾರ್ಚ್‌ನಲ್ಲಿ ಆದೇಶ ನೀಡಲಾಯಿತು. ಇದೀಗ ಆ ಅಂತರವನ್ನು 12ರಿಂದ 16 ವಾರಗಳಿಗೆ ಹೆಚ್ಚಿಸಲಾಗಿದೆ. ರೋಗ ನಿರೋಧಕತೆ ಸಂಬಂಧವಾಗಿ ಕಾರ್ಯನಿರ್ವಹಿಸುವ ‘ರಾಷ್ಟ್ರೀಯ ತಾಂತ್ರಿಕ ಸಲಹಾ ತಂಡ’ವು ನೀಡಿದ ಸಲಹೆಗೆ ಅನುಸಾರವಾಗಿ ಈ ಪರಿಷ್ಕರಣೆಗಳನ್ನು ಮಾಡಲಾಗಿದೆ.

ಈ ಸಲಹೆ ಹಾಗೂ ನಿರ್ಧಾರವನ್ನು ಸಮರ್ಥಿಸುವಂತಹ ಕೆಲವು ಉದಾಹರಣೆಗಳನ್ನು ನಾವು ಗಮನಿಸಬೇಕಾಗಿದೆ. ಕೋವಿಷೀಲ್ಡ್ ಲಸಿಕಾ ಅಭಿಯಾನವನ್ನು ನಡೆಸುತ್ತಿರುವ ಬ್ರಿಟನ್ ಮತ್ತು ಕೆನಡಾ ದೇಶಗಳು, ಡೋಸ್‌ಗಳ ನಡುವಿನ ಅಂತರವನ್ನು ಈಗಾಗಲೇ 4 ತಿಂಗಳಿಗೆ ಹೆಚ್ಚಿಸಿವೆ. ಕೆನಡಾದಲ್ಲಿ ಕೋವಿಡ್‌ನ ಎಲ್ಲಾ ಲಸಿಕೆಗಳ ಎರಡು ಡೋಸ್‌ಗಳ ನಡುವಿನ ಅಂತರವನ್ನು 4 ತಿಂಗಳಿಗೆ ನಿಗದಿಗೊಳಿಸುವ ನೀತಿಯನ್ನು ಜಾರಿಗೆ ತರಲಾಗಿದೆ. ಬ್ರಿಟನ್‌ನಲ್ಲಿ ಎರಡನೇ ಡೋಸ್ ನೀಡುವ ಪ್ರಕ್ರಿಯೆ ಈಗಷ್ಟೇ ಆರಂಭವಾಗಿದೆ. ಅಲ್ಲಿ ಮೊದಲ ಡೋಸ್ ನೀಡಿದ ನಂತರ ಮರಣ ಪ್ರಮಾಣ ಇಳಿಮುಖವಾಗಿರುವುದು ಅಂಕಿ-ಅಂಶಗಳಿಂದ ಕಂಡುಬಂದಿದೆ. ಡೋಸ್‌ಗಳ ನಡುವಿನ ಅಂತರವನ್ನು ಹೆಚ್ಚಿಸಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯೂ (ಡಬ್ಲ್ಯುಎಚ್‌ಒ) ಶಿಫಾರಸು ಮಾಡಿದೆ. ಇದರ ಹೊರತಾಗಿಯೂ, ಭಾರತದಲ್ಲಿ ಅಂತಹ ನಿರ್ಧಾರ ತೆಗೆದುಕೊಂಡರೆ ಅದನ್ನು ‘ರಾಜಕೀಯ ಗಿಮಿಕ್’ ಎಂದು ಮೂದಲಿಸಲಾಗುತ್ತದೆ ಎಂಬುದು ವಿಪರ್ಯಾಸ.

ಲಸಿಕೆ ಎಂಬುದು ರೋಗದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಇರುವ ಮಾರ್ಗಗಳಲ್ಲಿ ಒಂದು. ಇದನ್ನೇ ಮಾಸ್ಕ್ ಧರಿಸದೇ ಇರಲು, ವ್ಯಕ್ತಿ-ವ್ಯಕ್ತಿಗಳ ನಡುವೆ ಭೌತಿಕ ಅಂತರ ಪಾಲಿಸದೇ ಇರಲು ಅಥವಾ ಸ್ವಚ್ಛತೆಯನ್ನು ನಿರ್ಲಕ್ಷಿಸಲು ನೀಡುವ ಪರವಾನಗಿ ಎಂದು ಭಾವಿಸಬಾರದು. ಲಸಿಕೆ ಹಾಕಿಸಿದರೂ ಕೊರೊನಾ ಸಂಪೂರ್ಣ ನಿರ್ಮೂಲನೆಯಾಗುವವರೆಗೆ ಈ ಅಭ್ಯಾಸಗಳನ್ನು ಪಾಲಿಸಲೇಬೇಕಾಗುತ್ತದೆ.

ಕೊರೊನಾ ತೊಡೆದುಹಾಕಲು ಸರ್ಕಾರವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಕೋವಿಡ್ ಲಸಿಕೆ ಹಾಕಿಸಿಕೊಂಡ ಮೇಲೆ ಸೋಂಕಿನ ಬಾಧೆಗೆ ಒಳಗಾಗುವ ಸಾಧ್ಯತೆ ಶೇ 5ರಷ್ಟು ಮಾತ್ರ ಇರುತ್ತದೆ ಎಂಬುದು ದೃಢಪಟ್ಟಿದೆ. ಲಸಿಕೆಗೆ ಸಂಬಂಧಿಸಿದಂತೆ ನಾಗರಿಕರಿಗೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವುದು ಕಷ್ಟದ ಸಂಗತಿ ಎಂಬ ಅರಿವು ಸರ್ಕಾರಕ್ಕಿದೆ. ಈ ವಿಷಯವಾಗಿ ಪರಿಣತರು, ವಿಜ್ಞಾನಿಗಳು ಹಾಗೂ ಸರ್ಕಾರದ ಮೇಲೆ ವಿಶ್ವಾಸ ಇಡಬೇಕು. ‘ಸೋಂಕನ್ನು ಭೂಮಿಯ ಮೇಲಿನಿಂದ ನಿರ್ಮೂಲನೆ ಮಾಡುವ ಶಕ್ತಿ- ಸಾಮರ್ಥ್ಯ ಮನುಷ್ಯನಿಗೆ ಇದೆ’ ಎಂದು ಲೂಯಿಸ್ ಪಾಶ್ಚರ್ ಹೇಳಿದ್ದರು. ಅದರಂತೆ, ಕೋವಿಡ್-19 ನಿರ್ಮೂಲನೆಗೆ ನಾವೆಲ್ಲರೂ ಪಣತೊಡಬೇಕಾಗಿದೆ. ಒಗ್ಗಟ್ಟಿನಿಂದ ಹೋರಾಡಿದರೆ ಇದು ಸಾಧ್ಯ.

(ಲೇಖಕರು ಉಪ ಮುಖ್ಯಮಂತ್ರಿ, ಕೋವಿಡ್ ಕಾರ್ಯಪಡೆ ಅಧ್ಯಕ್ಷರು, ಕಸ್ತೂರಬಾ ಮೆಡಿಕಲ್ ಕಾಲೇಜಿನ ಹಳೆ ವಿದ್ಯಾರ್ಥಿ)



### ಡಬ್ಲ್ಯುಎಚ್‌ಒ ಹೇಳುವುದೇನು?

ಲಸಿಕೆ ನೀಡಿಕೆ ಕುರಿತ ಪ್ರಶ್ನೆಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಪ್ರಧಾನ ವಿಜ್ಞಾನಿ ಡಾ. ಸೌಮ್ಯಾ ಸ್ವಾಮಿನಾಥನ್ ಅವರು ಉತ್ತರಿಸಿದ್ದಾರೆ. ‘ಜಗತ್ತಿನಲ್ಲಿ ಹಲವು ಲಸಿಕೆಗಳು ಅಭಿವೃದ್ಧಿಯ ಹಂತದಲ್ಲಿವೆ. ಡೋಸ್ ನೀಡಿಕೆಯಲ್ಲಿ ಎಲ್ಲವೂ ಭಿನ್ನ ಮಾದರಿ ಹೊಂದಿವೆ. ಬಹುತೇಕ ಲಸಿಕೆಗಳನ್ನು ಎರಡು ಡೋಸ್‌ಗಳಲ್ಲಿ ನೀಡಬೇಕು. ಒಂದೇ ಡೋಸ್‌ನ ಲಸಿಕೆಗಳೂ ಇವೆ. ಎರಡು ಲಸಿಕೆಗಳ ನಡುವಿನ ಅಂತರವನ್ನು ಆಯಾ ಲಸಿಕೆ ತಯಾರಿಕಾ ಕಂಪನಿಗಳು ಮತ್ತು ಸರ್ಕಾರಗಳು ನಿರ್ಣಯಿಸಬೇಕು’ ಎನ್ನುತ್ತಾರೆ ಅವರು.

‘ಪ್ರಸ್ತುತ ಎರಡು ಲಸಿಕೆಗಳ ನಡುವಿನ ಅಂತರ 3–4 ವಾರ ಇದೆ. ಆದರೆ ಎರಡನೇ ಲಸಿಕೆಯನ್ನು 12 ವಾರದ ಬಳಿಕ ನೀಡುವುದರಿಂದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ ಎಂದು ಆಸ್ಟ್ರಾಜೆನಿಕ ಕಂಪನಿ ಹೇಳಿಕೊಂಡಿದೆ. ಎರಡನೇ ಡೋಸ್ ಪಡೆಯುವುದು ತಪ್ಪಿಹೋಗಿದ್ದರೂ ಅಥವಾ ವಿಳಂಬವಾಗಿದ್ದರೂ ಅದನ್ನು ಪಡೆಯುವುದು ಸೂಕ್ತ. ನಿಗದಿತ ದಿನಾಂಕಕ್ಕಿಂತ ಮೊದಲು ಅಥವಾ ಕೆಲವು ದಿನ ಅಥವಾ ಒಂದೆರಡು ವಾರ ತಡವಾಗಿದ್ದರೂ ಪರವಾಗಿಲ್ಲ ಡೋಸ್ ಹಾಕಿಸಿಕೊಳ್ಳಬೇಕು’ ಎನ್ನುತ್ತಾರೆ ಡಾ. ಸೌಮ್ಯಾ.

‘ಮೊದಲ ಡೋಸ್ ನಮ್ಮ ದೇಹದ ಪ್ರತಿರಕ್ಷಣಾ ವ್ಯವಸ್ಥೆಗೆ ಪ್ರತಿಕಾಯಗಳನ್ನು ಒದಗಿಸಿದರೆ, ಎರಡನೇ ಡೋಸ್ ರೋಗನಿರೋಧಕ ಶಕ್ತಿಯನ್ನು ಇನ್ನಷ್ಟು ಉತ್ತೇಜಿಸುತ್ತದೆ. ಆದರೆ, ಯಾವ ಕಂಪನಿಯ ಮೊದಲ ಡೋಸ್ ಪಡೆಯಲಾಗುತ್ತದೆಯೋ, ಎರಡನೇ ಬಾರಿಯೂ ಅದೇ ಕಂಪನಿಯ ಡೋಸ್ ಪಡೆದುಕೊಳ್ಳಬೇಕು. ಎರಡು ಬೇರೆ ಬೇರೆ ಕಂಪನಿಗಳ ಡೋಸ್‌ಗಳನ್ನು ಪಡೆದುಕೊಳ್ಳಬಹುದು ಎಂದು ಶಿಫಾರಸು ಮಾಡುವ ದಾಖಲೆಗಳು ಲಭ್ಯವಿಲ್ಲ’ ಎಂದು ಸ್ವಾಮಿನಾಥನ್ ತಿಳಿಸಿದ್ದಾರೆ.

ಪ್ರತ್ಯೇಕ ಕಂಪನಿಗಳ ಡೋಸ್‌ಗಳನ್ನು ಪಡೆದುಕೊಳ್ಳುವ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಆದರೆ ಸದ್ಯದ ಪ್ರಕಾರ ಅದನ್ನು ಶಿಫಾರಸು ಮಾಡುವುದಿಲ್ಲ ಎಂದಿದ್ದಾರೆ.

## ಕೋವಿಶೀಲ್ಡ್: ಭಿನ್ನ ಕಾಲಮಿತಿ




ಆಸ್ಟ್ರಾಜೆನಿಕಾ ಕಂಪನಿಯ ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ನೀಡಲು ವಿವಿಧ ದೇಶಗಳು ನಿಗದಿಪಡಿಸಿರುವ ಕಾಲಮಿತಿಯಲ್ಲಿ ಭಾರಿ ವ್ಯತ್ಯಾಸವಿದೆ. ವಿಶ್ವದ 90ಕ್ಕೂ ಹೆಚ್ಚು ದೇಶಗಳು ಈ ಲಸಿಕೆಯನ್ನು ಬಳಸುತ್ತಿದ್ದವು. ಆದರೆ, ಲಸಿಕೆ ಪಡೆದವರಲ್ಲಿ ರಕ್ತಹೆಪ್ಪುಗಟ್ಟುವ ಸಮಸ್ಯೆ ಕಾಣಿಸಿಕೊಂಡ ನಂತರ ಬಹುತೇಕ ರಾಷ್ಟ್ರಗಳು ಈ ಲಸಿಕೆ ಬಳಕೆಯನ್ನು ನಿಲ್ಲಿಸಿವೆ. ಭಾರತ, ಬ್ರಿಟನ್ ಮತ್ತು ಕೆಲವು ಐರೋಪ್ಯ ರಾಷ್ಟ್ರಗಳು ಮಾತ್ರವೇ ಈ ಲಸಿಕೆಯನ್ನು ಬಳಸುತ್ತಿವೆ. ಆದರೆ ಎರಡನೇ ಡೋಸ್ ಪಡೆಯಲು ಭಿನ್ನ ಕಾಲಮಿತಿಯನ್ನು ನಿಗದಿ ಮಾಡಿವೆ.

ಆರಂಭದಲ್ಲಿ ಎಲ್ಲಾ ದೇಶಗಳು ಮೊದಲ ಮತ್ತು ಎರಡನೇ ಡೋಸ್ ಮಧ್ಯೆ ನಾಲ್ಕು ವಾರಗಳ (28 ದಿನಗಳು) ಅಂತರ ನಿಗದಿ ಮಾಡಲಾಗಿತ್ತು. ಲಸಿಕೆ ಪಡೆದುಕೊಂಡವರಲ್ಲಿ ರಕ್ತಹೆಪ್ಪುಗಟ್ಟುವ ಸಮಸ್ಯೆ ಕಾಣಿಸಿಕೊಂಡ ನಂತರ ಈ ಅಂತರವನ್ನು 6ರಿಂದ 8 ವಾರಕ್ಕೆ ವಿಸ್ತರಿಸಿದ್ದವು. ಭಾರತದಲ್ಲೂ ಇದೇ ಅಂತರವನ್ನು ಅನುಸರಿಸಲಾಯಿತು. ಲಸಿಕೆ ಕೊರತೆ ಆದ ಕಾರಣ ಮೇ ಮೊದಲ ವಾರದಿಂದ ಎರಡನೇ ಡೊಸ್ ಪಡೆಯುವವರಿಗೆ ಆದ್ಯತೆ ನೀಡಿ ಎಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿತ್ತು. ಆದರೆ ಮೇ ಎರಡನೇ ವಾರದಲ್ಲಿ ಈ ಅವಧಿಯನ್ನು 12ರಿಂದ 16 ವಾರಗಳಿಗೆ ವಿಸ್ತರಿಸಿದೆ.

ಆದರೆ, ಇದೇ ಅವಧಿಯಲ್ಲಿ ಬ್ರಿಟನ್ ಸರ್ಕಾರವು ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಪಡೆಯಲು 12-16 ವಾರಗಳ ಅಂತರವನ್ನು ನಿಗದಿ ಮಾಡಿತ್ತು. ಭಾರತದಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ತೀವ್ರಗತಿ ಪಡೆದ ಕಾರಣ ಬ್ರಿಟನ್ ತನ್ನ ಲಸಿಕೆ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಿಕೊಂಡಿತು. ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿರುವ ಬಿ.1.617.2 ರೂಪಾಂತರ ತಳಿಯು ಬ್ರಿಟನ್‌ನಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಯಿತು. ಇದರಿಂದಾಗಿ ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಪಡೆಯುವ ಅಂತರವನ್ನು 8 ವಾರಕ್ಕೆ ಇಳಿಸಲಾಗಿದೆ.

ಐರೋಪ್ಯ ಒಕ್ಕೂಟವು ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಪಡೆಯುವ ಅಂತರವನ್ನು 4ರಿಂದ 12 ವಾರಗಳಿಗೆ ನಿಗದಿ ಮಾಡಿದೆ. ಈ ನಿಗದಿತ ಅಂತರದಲ್ಲೇ ಒಕ್ಕೂಟದ ಸದಸ್ಯ ರಾಷ್ಟ್ರಗಳು ಲಸಿಕೆಯ ಎರಡನೇ ಡೋಸ್ ನೀಡುತ್ತಿವೆ. ಆದರೆ ಸ್ಪೇನ್ ಮಾತ್ರ ಈ ಅಂತರದ ಕಾಲಮಿತಿಯನ್ನು ಮೀರಿದೆ. ಎರಡನೇ ಡೋಸ್ ಪಡೆಯುವ ಅಂತರವನ್ನು 16 ವಾರಕ್ಕೆ ನಿಗದಿ ಮಾಡಿದೆ. ‘ಅವಧಿ ವಿಸ್ತರಣೆ ಮಾಡಿರುವುದರಿಂದ ಲಸಿಕೆ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗಲಿದೆ’ ಎಂದು ಸ್ಪೇನ್ ಹೇಳಿದೆ.

## ಕೋವಿಡ್ ಔಷಧಿ ದಾಸ್ತಾನು ಮರಳಿಸಿ: ರಾಜಕಾರಣಿಗಳಿಗೆ ಹೈಕೋರ್ಟ್ ಸೂಚನೆ



ನವದೆಹಲಿ: ‘ದೇಶದಲ್ಲಿ ಈಗಾಗಲೇ ಕೋವಿಡ್ ಔಷಧಿಯ ಕೊರತೆಯಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ನಾಯಕರು ಔಷಧಿ ಹಾಗೂ ಆಮ್ಲಜನಕದ ಸಿಲಿಂಡರ್‌ಗಳನ್ನು ಸಂಗ್ರಹಿಸಬಾರದು. ಆದಷ್ಟು ಬೇಗ ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹಿಂತಿರುಗಿಸಿ’ ಎಂದು ದೆಹಲಿ ಹೈಕೋರ್ಟ್ ಸೋಮವಾರ ಸೂಚನೆ ನೀಡಿದೆ.

ದೆಹಲಿಯಲ್ಲಿ ರಾಜಕಾರಣಿಗಳೇ ಕೋವಿಡ್ ಔಷಧಗಳನ್ನು ಸಂಗ್ರಹಿಸಿ ವಿತರಿಸುತ್ತಿದ್ದಾರೆ ಎಂಬ ಆರೋಪಗಳ ಬಗ್ಗೆ ದೆಹಲಿ ಪೊಲೀಸರು ನೀಡಿರುವ ವರದಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಮೂರ್ತಿ ವಿಪಿನ್ ಸಂಘಿ ಹಾಗೂ ಜಸ್ಮೀತ್ ಸಿಂಗ್ ಅವರ ಪೀಠವು ‘ರಾಜಕಾರಣಿಗಳು ಪಿಡುಗನ್ನು ಲಾಭಕ್ಕೆ ಬಳಸಿಕೊಳ್ಳಬಾರದು. ವೈದ್ಯರ ಸಲಹೆ ಇಲ್ಲದೆಯೇ ಅವರು ಔಷಧಗಳನ್ನು ಖರೀದಿಸುವುದಾದರೂ ಹೇಗೆ’ ಎಂದು ದೆಹಲಿ ಪೊಲೀಸರನ್ನು ಪ್ರಶ್ನಿಸಿದೆ.

ಈ ಬಗ್ಗೆ ದೆಹಲಿ ಪೊಲೀಸರು ನಡೆಸಿದ್ದ ಪ್ರಾಥಮಿಕ ತನಿಖೆಯಲ್ಲಿ ಮಾಜಿ ಕ್ರಿಕೆಟಿಗ, ಬಿಜೆಪಿಯ ಹಾಲಿ ಸಂಸದ ಗೌತಮ್ ಗಂಭೀರ್, ಕಾಂಗ್ರೆಸ್‌ನ ದೆಹಲಿ ಘಟಕದ ಅಧ್ಯಕ್ಷ ಅನಿಲ್‌ಕುಮಾರ್ ಚೌಧುರಿ, ಮಾಜಿ ಶಾಸಕ ಮುಕೇಶ್ ಶರ್ಮಾ, ಬಿಜೆಪಿ ಮುಖಂಡ ಹರೀಶ್ ಖುರಾನಾ, ಎಎಪಿ ಶಾಸಕ ದಿಲೀಪ್ ಪಾಂಡೆ, ಯುವ ಕಾಂಗ್ರೆಸ್ ಮುಖಂಡ ಶ್ರೀನಿವಾಸ್ ಮುಂತಾದವರಿಗೆ ಕ್ಲೀನ್‌ಚಿಟ್ ನೀಡಲಾಗಿತ್ತು. ಅಧಿಕಾರಿಗಳು ಶ್ರೀನಿವಾಸ್ ಅವರ ವಿಚಾರಣೆ ನಡೆಸಿದ್ದು ರಾಜಕೀಯವಾಗಿ ಭಾರಿ ವಿವಾದ ಸೃಷ್ಟಿಸಿತ್ತು.

‘ನಿಮ್ಮ ಈ ನಿಲುವನ್ನು ನಾವು ಸ್ವೀಕರಿಸುವುದಿಲ್ಲ. ನಾವು ನಮ್ಮ ಕೆಲಸವನ್ನು ಮಾಡಬೇಕಾಗಿದೆ. ನೀವು ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಜನರ ಪ್ರೀತಿ-ವಿಶ್ವಾಸ ಗಳಿಸಲು ಔಷಧಗಳನ್ನು ಖರೀದಿಸುವುದು ಮತ್ತು ಸಂಗ್ರಹಿಸಿಡಲು ರಾಜಕಾರಣಿಗಳಿಗೆ ಅಧಿಕಾರ ಇಲ್ಲ. ಜನರಿಗೆ ಒಳ್ಳೆಯದನ್ನೇ ಮಾಡಲು ಅವರು ಬಯಸುವುದಾದರೆ ತಾವು ಸಂಗ್ರಹಿಸಿಟ್ಟಿರುವ ಔಷಧವನ್ನು ಆರೋಗ್ಯ ಸೇವೆಗಳ ಮಹಾನಿರ್ದೇಶಕರಿಗೆ ಒಪ್ಪಿಸಬೇಕು. ಅವರು ಅದನ್ನು ಸರ್ಕಾರಿ ಆಸ್ಪತ್ರೆಗಳಿಗೆ ನೀಡಬೇಕು. ಸತ್ಯವನ್ನು ಹೊರಗೆಳೆಯುವುದರಲ್ಲಿ ನಿಮಗೆ ಆಸಕ್ತಿ ಇಲ್ಲ ಎಂದು ಕಾಣಿಸುತ್ತಿದೆ’ ಎಂದು ಪೀಠವು ದೆಹಲಿ ಪೊಲೀಸರ ಕ್ರಮವನ್ನು ಟೀಕಿಸಿದೆ.

ಇದಾದ ಬಳಿಕ, ‘ರಾಜಕಾರಣಿಗಳು ಸಂಗ್ರಹಿಸಿಟ್ಟಿರುವ ಎಲ್ಲಾ ಔಷಧವನ್ನು ವಶಪಡಿಸಿಕೊಳ್ಳಲಾಗುವುದು ಮತ್ತು ಆರು ವಾರದೊಳಗೆ ತನಿಖೆ ನಡೆಸಿ ವರದಿ ಸಲ್ಲಿಸಲಾಗುವುದು’ ಎಂದು ಪೊಲೀಸ್ ಪರ ವಕೀಲರು ತಿಳಿಸಿದರು.

ಇದಕ್ಕೂ ಅಸಮಾಧಾನ ವ್ಯಕ್ತಪಡಿಸಿದ ಕೋರ್ಟ್, ‘ಆರು ವಾರದಲ್ಲಿ ಈ ಪ್ರಕರಣವೇ ಮುಗಿದುಹೋಗುತ್ತದೆ. ರಾಜಕೀಯ ಪಕ್ಷಗಳಲ್ಲಿರು ಔಷಧವನ್ನು ಸಂಬಂಧಪಟ್ಟವರಿಗೆ ಹಸ್ತಾಂತರಿಸಲಾಯಿತೇ ಇಲ್ಲವೇ ಎಂಬ ಬಗ್ಗೆ ಅತಿ ಶೀಘ್ರದಲ್ಲೇ ವರದಿಯನ್ನು ನೀಡಬೇಕು’ ಎಂದ ಸೂಚಿಸಿ, ವಿಚಾರಣೆಯನ್ನು ಮೇ 24ಕ್ಕೆ ಮುಂದೂಡಿದೆ.

ಕೋವಿಡ್ ರೋಗಿಗಳು ಔಷಧಿಯಿಲ್ಲದೆ ನರಳುತ್ತಿದ್ದಾರೆ. ಆದರೆ ದೆಹಲಿಯಲ್ಲಿ ರಾಜಕೀಯ ನಾಯಕರು ದೊಡ್ಡ ಪ್ರಮಾಣದಲ್ಲಿ ಔಷಧಿಯನ್ನು ಶೇಖರಣೆ ಮಾಡುತ್ತಿದ್ದಾರೆ ಮತ್ತು ವಿತರಣೆ ಮಾಡುತ್ತಿದ್ದಾರೆ. ಈ ಸಂಬಂಧ ಎಫ್‌ಐಆರ್ ದಾಖಲಿಸುವಂತೆ ನ್ಯಾಯಾಲಯವು ಪೊಲೀಸರಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಈ ಸಂಬಂಧ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಹೈಕೋರ್ಟ್, ದೆಹಲಿ ಪೊಲೀಸರಿಗೆ ಸೂಚಿಸಿತ್ತು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಇಸ್ರೇಲ್–ಪ್ಯಾಲೆಸ್ಟೀನ್ ಸಂಘರ್ಷದಲ್ಲಿ ಭಾರತ ಮೂಲದ ನರ್ಸ್ ಸೇರಿ ನೂರಾರು ಮಂದಿ ಮೃತಪಟ್ಟಿದ್ದಾರೆ. ಮೃತ ಸೌಮ್ಯ ಸಂತೋಷ್ ಅವರಿಗೆ ಗೌರವ ಸಲ್ಲಿಸುವ ಸಲುವಾಗಿ ಇಸ್ರೇಲ್ ದೇಶವು ತನ್ನ ಸೇನೆಯಲ್ಲಿರುವ ಯುದ್ಧವಿಮಾನಕ್ಕೆ ಸೌಮ್ಯ ಅವರ ಹೆಸರು ಇಟ್ಟಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಮಾನದ ಮೇಲೆ ಸೌಮ್ಯ ಅವರ ಹೆಸರನ್ನು ಬರೆದಿರುವ ಚಿತ್ರ ವೈರಲ್ ಆಗಿದೆ.




ರಿವರ್ಸ್ ಇಮೇಜ್ ತಂತ್ರಜ್ಞಾನದ ಮೂಲಕ ಪರಿಶೀಲಿಸಿದಾಗ, ಚಿತ್ರವನ್ನು ತಿರುಚಿರುವುದು ಕಂಡುಬಂದಿದೆ ಎಂದು ಆಲ್ಟ್ ನ್ಯೂಸ್ ವರದಿಮಾಡಿದೆ. ವೈರಲ್ ಆಗಿರುವ ಚಿತ್ರದಲ್ಲಿ ವಿಮಾನದ ಮೇಲೆ ಸೌಮ್ಯ ಅವರ ಹೆಸರನ್ನು ಕೃತಕವಾಗಿ ಸೇರಿಸಲಾಗಿದೆ ಎಂಬುದು ಕಂಡುಬಂದಿದೆ. ಚಿತ್ರದಲ್ಲಿರುವುದು ಚೀನಾ ಸೇನೆಯ ಚಂಗ್ದು ಜೆ10 ಯುದ್ಧವಿಮಾನ. ಮೂಲ ಚಿತ್ರವನ್ನು 2020ರಲ್ಲಿ ಚೀನಾದ ಟೆನ್‌ಸೆಂಟ್ ಹಾಗೂ ಡೆಡೆ ನ್ಯೂಸ್ ಪ್ರಕಟಿಸಿದ್ದವು.

## ಬೆರಗಿನ ಬೆಳಕು
ಗುರುರಾಜ ಕರಜಗಿ



### ಮಾತ್ಸರ್ಯ, ಸೃಷ್ಟಿಯ ಉಪಾಯ

**ಕೈಕೇಯಿ ಸತ್ಯಭಾಮೆಯರಂಶವಿರದ ಪೆಣ್ |**
**ಲೋಕದೊಳಗಿರಳು; ಬೆಳೆವುದು ಲೋಕವವರಿಂ ||**
**ಸಾಕಿ ಸಲಹುವ ಮತ್ಸರವದು ಸೃಷ್ಟಿಯುಪಾಯ |**
**ಬೇಕದಕೆ ನಗು ಸಹನೆ – ಮಂಕುತಿಮ್ಮ || 418 ||**

**ಪದ-ಅರ್ಥ:** ಸತ್ಯಭಾಮೆಯರಂಶವಿರದ = ಸತ್ಯಭಾಮೆಯರ + ಅಂಶ + ಇರದ, ಲೋಕವವರಿಂ- = ಲೋಕವು + ಅವರಿಂ(ಅವರಿಂದ), ಸೃಷ್ಟಿಯುಪಾಯ = ಸೃಷ್ಟಿಯ + ಉಪಾಯ.


**ವಾಚ್ಯಾರ್ಥ:** ಕೈಕೇಯಿ, ಸತ್ಯಭಾಮೆಯರ ಅಂಶವಿರದ ಹೆಣ್ಣು ಲೋಕದಲ್ಲಿ ಇರಲಾರಳು. ಲೋಕ ಬೆಳೆಯುವುದೇ ಅವರಿಂದ. ಸಾಕಿ, ಸಲಹುವ ಈ ಮತ್ಸರ, ಸೃಷ್ಟಿಯ ಉಪಾಯ. ಇಂಥ ಗುಣಗಳನ್ನು ಕಂಡಾಗ ನಗು, ಸಹನೆ ಬೇಕು.

**ವಿವರಣೆ:** ಪ್ರಪಂಚದಲ್ಲಿ ಇದೊಂದು ಅದ್ಭುತ. ಹುಡುಗಿಯಾಗಿದ್ದವಳು, ತನಗಾಗಿ ಏನೆಲ್ಲ ಕನಸುಗಳನ್ನು ಕಟ್ಟಿಕೊಂಡವಳು, ಅವುಗಳನ್ನು ಸಾಕಾರಗೊಳಿಸಿಕೊಳ್ಳಲು ಹೋರಾಡಿದವಳು, ಮದುವೆಯಾಗಿ ಒಂದು ಮಗುವಾದೊಡನೆ ಬದಲಾಗಿ ಬಿಡುತ್ತಾಳೆ. ಈಗ ಆಕೆಯ ಕನಸುಗಳು ಮಗುವಿನ ಬೆಳವಣಿಗೆಯೊಂದಿಗೆ ಬೆಸೆದುಕೊಂಡಿವೆ! ಆಕೆಯ ಜಗತ್ತು ಈಗ ಅವಳ ಮಗು. ಮಗುವಿನೊಂದಿಗೆ ನಗುತ್ತಾಳೆ, ಅಳುತ್ತಾಳೆ. ಮಗು ಏನನ್ನಾದರೂ ಸಾಧಿಸಿದರೆ, ಅದಕ್ಕಿಂತ ಹೆಚ್ಚು ಸಂತೋಷ ಪಡುತ್ತಾಳೆ, ತನ್ನ ಕುಡಿಗೆ ಸ್ವಲ್ಪ ನೋವಾದರೂ ಅದಕ್ಕಿಂತ ನೂರು ಪಟ್ಟು ನೋವಿನಲ್ಲಿ ಬೇಯುತ್ತಾಳೆ. ತನ್ನ ಅಪೇಕ್ಷೆಗಳನ್ನು ನಗುನಗುತ್ತ ದೂರಕ್ಕೆ ತಳ್ಳಿ, ಮಗುವಿನ ಅಪೇಕ್ಷೆಗಳನ್ನು ಪೂರೈಸಲು ಧಾವಿಸುತ್ತಾಳೆ. ಮಗುವಿಗೋಸ್ಕರ ಏನನ್ನಾದರೂ ಮಾಡಲು ಸಿದ್ಧಳಾಗುತ್ತಾಳೆ.

ಹಾಗಾದರೆ ತಾಯಂದಿರು ಸ್ವಾರ್ಥಿಗಳೇ? ತನ್ನ ಕುಡಿಯನ್ನು ಸಾಕುವ, ರಕ್ಷಿಸುವ, ಅದರ ಬೆಳವಣಿಗೆಯನ್ನು ಕಾಣುವ ಮಮಕಾರವನ್ನು ಸ್ವಾರ್ಥ ಎನ್ನಲಾದೀತೇ? ಕಗ್ಗದಲ್ಲಿ ಇಬ್ಬರು ಮಹಿಳೆಯರ ಪ್ರಸ್ತಾಪವಿದೆ. ಮೊದಲನೆಯದು ಕೈಕೇಯಿ. ನಾವು ಆಕೆಯನ್ನು ಖಳನಾಯಕಿಯ ಸ್ಥಳದಲ್ಲಿ ನಿಲ್ಲಿಸಿದ್ದೇವೆ. ನಾವು ಆಕೆಯ ದೃಷ್ಟಿಯಲ್ಲಿ, ಆಕೆಯ ಮನಸ್ಸಿನಲ್ಲಿ ಹೊಕ್ಕು ನೋಡಿದರೆ, ಆಕೆಯ ಸಂಕಟ, ತಳಮಳ ಅರ್ಥವಾದೀತು. ತಮ್ಮ ಮಕ್ಕಳು ತರಗತಿಯಲ್ಲಿ ಮೊದಲ ಸ್ಥಾನ ಪಡೆಯಲಿ ಎಂತಲೋ, ಒಳ್ಳೆಯ ಕೆಲಸ ಸಿಗಲಿ ಎಂತಲೋ ತಾಯಂದಿರು ಒದ್ದಾಡುವುದಿಲ್ಲವೆ? ಹಾಗೆಂದ ಮಾತ್ರಕ್ಕೆ ಅವರಿಗೆ ಉಳಿದ ಮಕ್ಕಳ ಬಗ್ಗೆ ದ್ವೇಷವಿದೆ ಎಂದಲ್ಲ. ಅತ್ಯಂತ ಉತ್ತಮವಾದದ್ದು ತನ್ನ ಮಗುವಿಗೆ ದೊರಕಲಿ ಎಂಬ ತಟವಟ. ಈ ಸಣ್ಣಸಣ್ಣ ಅವಕಾಶಗಳಿಗೇ ಇಷ್ಟು ಸ್ವಾರ್ಥ ಇರುವುದಾದರೆ ಕೈಕೇಯಿಯ ಮುಂದಿರುವ ಅವಕಾಶ ಯಾವುದು? ಅದು ಯಾವುದೋ ನೌಕರಿಯಲ್ಲ, ಅಯೋಧ್ಯೆಯ ಚಕ್ರವರ್ತಿ ಪದವಿ! ಪಣ ತುಂಬ ದೊಡ್ಡದು. ಅದು ಜೀವನಮಾನದಲ್ಲೇ ಅತ್ಯಂತ ದೊಡ್ಡ ಅವಕಾಶ. ಅಂದು ತಪ್ಪಿದರೆ ಭರತ ಮಾತ್ರವಲ್ಲ, ಅವನ ವಂಶಕ್ಕೇ ರಾಜಪದವಿ ತಪ್ಪಿ ಹೋಗುತ್ತದೆ. ಪಣ ದೊಡ್ಡದಾದಷ್ಟೂ, ಆಕರ್ಷಣೆಯ ಒತ್ತಡ ಹೆಚ್ಚು. ಕೈಕೇಯಿಯನ್ನು ಅಸಹಾಯಳನ್ನಾಗಿ ಮಾಡಿದ್ದು ಮಗನ ಮೇಲಿನ ಮಮತೆ. ಸತ್ಯಭಾಮೆಗೂ, ಕೃಷ್ಣ ಕೇವಲ ತನ್ನವನಾಗಿರಬೇಕು ಎಂಬ ಅಪೇಕ್ಷೆ. ಆಕೆಯ ಸವತಿ ಮಾತ್ಸರ್ಯ ಈ ಹಂಬಲಿಕೆಯ ಫಲಶೃತಿ.

ಕಗ್ಗ, ಈ ಮಾತ್ಸರ್ಯವೆಂಬ ಗುಣವನ್ನು ಸಹನೆಯಿಂದ ಗಮನಿಸಲು ಹೇಳುತ್ತದೆ. ಇಂದು ಪ್ರಪಂಚ ನಡೆಯುತ್ತಿರುವುದು ಈ ಪರಿಯ ಒಲುಮೆಯ ಸ್ವಾರ್ಥದಿಂದಲೇ. ಯಾರು, ಯಾರಿಗೂ ಸಂಬಂಧವಿಲ್ಲದಂತೆ, ಬದುಕಿದರೆ ಪ್ರಪಂಚ ಬೆಳೆಯಲಾರದು. ಈ ಮತ್ಸರವನ್ನು ಸೃಷ್ಟಿ, ಉಪಾಯವಾಗಿ ಮನುಷ್ಯರ ಹೃದಯದಲ್ಲಿಟ್ಟಿದೆ. ಅದನ್ನು ನಗೆಯೊಂದಿಗೆ, ಸಹಾನುಭೂತಿಯಿಂದ ನೋಡೋಣ.

## ಗುಂಡಣ್ಣ




## ದಿನ ಭವಿಷ್ಯ

ಮಂಗಳವಾರ ಮೇ 18, 2021

**ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಷಷ್ಠೀ ಗಂ. 3-43 (ಬೆ. 7-30) ಮಂಗಳವಾರ ನಿತ್ಯ ನಕ್ಷತ್ರ ಪುಷ್ಯ ಗಂ. 11-4(ಹ. 10-26) ವೃದ್ಧಿ ನಾಮ ಯೋಗ ಗಂ 40-14 ತೈತಲ ಕರಣ ಗಂ. 3-43 ವಿಷ ಗಂ. 43-44 ಅಮೃತಾಭಾವಃ :** ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 5-57 ಸೂರ್ಯಾಸ್ತ: 6-35 ಅದೃಷ್ಟ ಸಂಖ್ಯೆ 1, 8

**ಮೇಷ:** ಆರೋಗ್ಯದಲ್ಲಿನ ವ್ಯತ್ಯಯದಿಂದಾಗಿ ದುಗುಡಕ್ಕೆ ಒಳಗಾಗುವ ಸಾಧ್ಯತೆ. ಇತರರೊಂದಿಗಿನ ಮಾತಿನ ಮೇಲೆ ಹಿಡಿತವಿರಲಿ. ನಿಷ್ಕಲ್ಮಷ ಮನಸ್ಸಿನಿಂದ ವ್ಯವಹರಿಸಿದಲ್ಲಿ ಜನಮನ್ನಣೆಗೆ ಪಾತ್ರರಾಗುವಿರಿ. ಗಣೇಶನ ಆರಾಧನೆ ಮಾಡಿ.

**ವೃಷಭ:** ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆ ಇರಲಿ. ಹಮ್ಮಿಕೊಂಡಿರುವ ಕೆಲಸ ಕಾರ್ಯಗಳು ಅಡೆತಡೆಗಳ ನಡುವೆಯೂ ಬಂಧುಗಳ ಸಹಕಾರದಿಂದಾಗಿ ಯಶಸ್ವಿಯಾಗಲಿದೆ. ದೂರದ ಬಂಧುಗಳ ಆಗಮನ ಸಾಧ್ಯತೆ.

**ಮಿಥುನ:** ಮಹಿಳಾ ರಾಜಕಾರಣಿಗಳು ಶ್ರೇಯಸ್ಸನ್ನು ನಿರೀಕ್ಷಿಸಬಹುದು. ಉತ್ತಮ ಹುದ್ದೆ ದೊರಕುವ ಸಾಧ್ಯತೆ. ವಿರೋಧಿಗಳ ಪಿತೂರಿಯ ಬಗ್ಗೆ ಎಚ್ಚರಿಕೆ ಅಗತ್ಯ. ಲೇವಾದೇವಿ-ಹಣಕಾಸು ವ್ಯವಹಾರಗಳಲ್ಲಿರುವವರಿಗೆ ಪ್ರಗತಿ.

**ಕರ್ಕಾಟಕ:** ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯವಿದ್ದು ಪ್ರಶಸ್ತಿ ಪುರಸ್ಕಾರಗಳು ನಿಮ್ಮದಾಗಲಿವೆ. ಉತ್ತಮ ಅವಕಾಶಗಳು ಒದಗಿ ಬರಲಿದೆ. ಆಹಾರ ದೋಷದಿಂದಾಗಿ ಉದರ ನೋವಿನ ಸಮಸ್ಯೆ ತಲೆದೋರಬಹುದು.

**ಸಿಂಹ:** ವಿವಾಹಾಕಾಂಕ್ಷಿಗಳು ವಿವಾಹದ ನಿಮಿತ್ತ ಮಾತುಕತೆ ನಡೆಸಲಿದ್ದೀರಿ. ಹಿರಿಯರಿಂದ ಎಲ್ಲ ಅನುಕೂಲತೆಗಳು ಒದಗಿಬರಲಿವೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ ದೊರೆತು ಆತ್ಮವಿಶ್ವಾಸಕ್ಕೆ ನಾಂದಿಯಾಗಲಿದೆ.

**ಕನ್ಯಾ:** ದೂರ ಪ್ರಯಾಣದ ಅನುಭವ ಸುಖಕರವಾಗಿರುವುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಸಲಿದ್ದೀರಿ. ಉದ್ವೇಗಕ್ಕೊಳಗಾಗದೆ ಶಾಂತ ಮನಸ್ಸಿನಿಂದ ಎಲ್ಲದಕ್ಕೂ ಪರಿಹಾರ ದೊರಕಲಿದೆ.

**ತುಲಾ:** ನಿಮ್ಮ ದೃಢ ಸಂಕಲ್ಪದಿಂದ ಯಶಸ್ಸನ್ನು ಸಾಧಿಸುವಿರಿ. ವಾಹನ ಖರೀದಿಯ ಸಾಧ್ಯತೆ. ಹೊಸ ಮನೆಯೊಂದರ ನಿರ್ಮಾಣದ ಬಗ್ಗೆ ಚಿಂತನೆ ನಡೆಸುವಿರಿ. ತಡವಾಗಿಯಾದರೂ ಜನಮನ್ನಣೆಗೆ ಪಾತ್ರರಾಗುವಿರಿ.

**ವೃಶ್ಚಿಕ:** ಎಲ್ಲ ವರ್ಗದವರಿಂದಲೂ ಪ್ರಶಂಸೆಯ ಜೊತೆಗೆ ಗೌರವಾದರಗಳನ್ನು ಗಳಿಸಲಿದ್ದೀರಿ. ಕೌಟುಂಬಿಕ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಿ. ಹಿರಿಯರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಿ.

**ಧನು:** ಚಿನ್ನ, ಬೆಳ್ಳಿ ವ್ಯಾಪಾರಸ್ಥರಿಗೆ ಉತ್ತಮ ವ್ಯವಹಾರ. ಹೊಸದಾಗಿ ಸೇರಿದ ನೌಕರರಿಗೆ ಹಿರಿಯ ಅಧಿಕಾರಿಗಳಿಂದ ಸೂಕ್ತ ಮಾರ್ಗದರ್ಶನ. ಕೆಲಸ ಕಾರ್ಯಗಳಲ್ಲಿ ಅಸಡ್ಡೆ ತೋರುವುದು ಸಲ್ಲ.

**ಮಕರ:** ವ್ಯಾಪಾರ ವಹಿವಾಟಿನಲ್ಲಿ ವಿಶೇಷ ಲಾಭದ ಜೊತೆಗೆ ಹೊಸ ಉದ್ಯಮದ ವಿಚಾರವಾಗಿ ಚಿಂತನೆ ನಡೆಸಲಿದ್ದೀರಿ. ಅನುಕರಣೀಯ ನಡವಳಿಕೆಯಿಂದಾಗಿ ಜನ ಮನ ಗೆಲ್ಲಲು ಯಶಸ್ವಿಯಾಗುವಿರಿ.

**ಕುಂಭ:** ಹಣಕಾಸಿನ ವ್ಯವಹಾರದಲ್ಲಿ ಹಾನಿಯ ಸಾಧ್ಯತೆ ಇದ್ದು ದಿನದ ಮಟ್ಟಿಗೆ ವ್ಯವಹಾರವನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಉತ್ತಮ ಮಾರ್ಗದರ್ಶನ ದೊರೆತು ಉತ್ತಮ ಫಲಿತಾಂಶ.


**ಮೀನ:** ಎಂಜಿನಿಯರ್ ಮತ್ತು ಗೃಹ, ವಸ್ತ್ರ ವಿನ್ಯಾಸಕಾರರಿಗೆ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲದ ನಿರೀಕ್ಷೆ. ಗೃಹಾಲಂಕಾರ ವಸ್ತುಗಳ ಖರೀದಿ ಸಾಧ್ಯತೆ. ಅನಗತ್ಯ ವೆಚ್ಚದ ಮೇಲೆ ಹಿಡಿತವಿರಲಿ.

**ನಿಮ್ಮ ಜನ್ಮದಿನ 18-ಮೇ** ಈ ದಿನ ಅತ್ಯಂತ ಶುಭಕರ. ಸ್ವಯಂ ಉದ್ಯೋಗಿಗಳಿಗೆ ಅತ್ಯಂತ ಯಶಸ್ವೀ ವರ್ಷವಾಗಲಿದೆ. ವಾಣಿಜ್ಯ ಬೆಳೆಯ ರೈತಾಪಿ ವರ್ಗದವರಿಗೆ ಮಧ್ಯವರ್ತಿಗಳಿಂದ ಮೋಸಕ್ಕೊಳಗಾಗುವ ಸಾಧ್ಯತೆಯ ಜೊತೆಗೆ ಸರ್ಕಾರದಿಂದಲೂ ಸಂಕಟಗಳ ಸರಮಾಲೆ ಎದುರಾದೀತು. ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿ.

## ಪದಬಂಧ 4600 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಹಾರವನ್ನು ಹಿಡಿದಿರುವ ಬ್ರಾಹ್ಮಣ! (3)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
6.ನೂರು ವರ್ಷಗಳ ಕಾಲ ಬದುಕುವವನು (4)
8.ತಿರುಗಿಸಿ ನೋಡಿದರೂ ಇದು ಹೊಸತು (3)
11.ಬಣ್ಣದ ದಾರಗಳಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
13.ಹಸುವಿನ ಹತ್ತಿರವಿರುವ ಎಳೆಮಗು (4)
17.ಇದು ಕೊಬ್ಬಿದ ಆನೆ (4)
18.ಲೀಲಾಜಾಲವಾಗಿ ಹಾಕಿದ ಹರಾಜು! (3)

**ಮೇಲಿಂದ ಕೆಳಕ್ಕೆ**
1.ಹಾರಿ ಬಂದು ಉಪಸ್ಥಿತಿಯಾಗಿರುವಿಕೆ! (3)
2.ಮಾವನ ಆದಾಯ (4)
3.ಕಡಿಮೆ ಆಯುಸ್ಸುಳ್ಳವನು (3)
5.ಪರವಶನಾಗಿರುವಾಗ ಆಧೀನತೆ! (2)
7.ಕಾರಿನಲ್ಲಿ ಕುಳಿತು ಆಡಿದ ಬೇಟೆ (3)
9.ನಡುವೆಯೇ ಆರಂಭವಾಗಿರುವ ಕಂಪನ! (3)
10.ವಿವಾದವಿಲ್ಲದೇ ನಡೆದ ಮದುವೆ (3)
12.ಎಳ್ಳು ನೀರು ಬಿಡುವಿಕೆ (4)
14.ಮಷ್ಠಿಯಲ್ಲಿದ್ದಾಗ ಆವರಿಸಿದ ಗಾಢನಿದ್ರೆ! (3)
15.ಸುಗಮವಾಗಿ ಕಿತ್ತು ತಂದಿರುವ ಹೂ (2)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



### 4599ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಅರ್ಥ 3.ಜ್ಞಾನಿ 5.ಹಣೆಬರಹ 6.ಸದ್ಭಾವ 7.ಜಳಕ 8.ದಕ್ಷಾಳಿತನ 9.ವಿಧಾನ 10.ನಾಸ್ತಿಕ 13.ಪಾರಿತೋಷಕ 14.ನೆಪ 15.ಮಚ್ಚು

**ಮೇಲಿಂದ ಕೆಳಕ್ಕೆ:** 1.ಅವಿಶ್ವಾಸ 2.ಸಿಂಬಳ 4.ನಿರರ್ಥಕ 5.ಹಯವದನ 7.ಜನನಾಯಕ 9.ವಿಜ್ಞಾಪನೆ 11.ಕಲಗಚ್ಚು 12.ಸಂತೋಷ

## ಸುಡೊಕು 4986

| | | | | | | | | |
|---|---|---|---|---|---|---|---|---|
| | | | | 6 | 7 | 4 | | |
| 3 | | 4 | | | | | 7 | 2 |
| | 7 | 1 | | 4 | 8 | | 6 | 3 |
| | 4 | | | 3 | | | 8 | |
| 8 | | 9 | | 7 | | | | |
| | 5 | | 8 | | 4 | | 9 | 7 |
| 2 | | | | 9 | | 7 | 3 | |
| | | 3 | | | | | | |
| 6 | | | 4 | | | 5 | | 9 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4985 ಸುಡೊಕು

| | | | | | | | | |
|---|---|---|---|---|---|---|---|---|
| 9 | 6 | 5 | 8 | 7 | 3 | 4 | 1 | 2 |
| 2 | 8 | 3 | 1 | 4 | 6 | 9 | 7 | 5 |
| 7 | 1 | 4 | 9 | 5 | 2 | 8 | 3 | 6 |
| 3 | 4 | 6 | 7 | 1 | 8 | 5 | 2 | 9 |
| 5 | 7 | 9 | 3 | 2 | 4 | 6 | 8 | 1 |
| 8 | 2 | 1 | 5 | 6 | 9 | 3 | 4 | 7 |
| 4 | 5 | 7 | 6 | 8 | 1 | 2 | 9 | 3 |
| 1 | 3 | 2 | 4 | 9 | 5 | 7 | 6 | 8 |
| 6 | 9 | 8 | 2 | 3 | 7 | 1 | 5 | 4 |

# ಏಳು ವಾರಗಳ ಗರಿಷ್ಠ ಏರಿಕೆ ಕಂಡ ಷೇರುಪೇಟೆ



ಮುಂಬೈ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ಇಳಿಕೆ ಆಗುತ್ತಿರುವುದು ಹೂಡಿಕೆದಾರರಲ್ಲಿ ಆಶಾವಾದ ಮೂಡಿಸಿದೆ. ಇದರಿಂದಾಗಿ ದೇಶದ ಷೇರುಪೇಟೆ ಸಂವೇದಿ ಸೂಚ್ಯಂಕಗಳು ದಿನದ ವಹಿವಾಟಿನಲ್ಲಿ ಏಳು ವಾರಗಳ ಗರಿಷ್ಠ ಏರಿಕೆಯನ್ನು ಸೋಮವಾರ ದಾಖಲಿಸಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 848 ಅಂಶ ಏರಿಕೆ ಕಂಡು 49,581 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 245 ಅಂಶ ಹೆಚ್ಚಾಗಿ 14,923 ಅಂಶಗಳಿಗೆ ತಲುಪಿತು. ಮಾರ್ಚ್ 30ರ ಬಳಿಕ ದಿನದ ವಹಿವಾಟೊಂದರಲ್ಲಿ ಸೂಚ್ಯಂಕಗಳ ಗರಿಷ್ಠ ಏರಿಕೆ ಇದಾಗಿದೆ.

'ಸೋಂಕು ಪ್ರಕರಣಗಳ ಸಂಖ್ಯೆ ಇಳಿಕೆ ಆಗುತ್ತಿದೆ. ಇದರಿಂದಾಗಿ ಬ್ಯಾಂಕ್, ಲೋಹ ಮತ್ತು ವಾಹನ ವಲಯಗಳ ಷೇರುಗಳು ಉತ್ತಮ ಗಳಿಕೆ ಕಂಡವು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಗಳ ಉತ್ತಮ ಹಣಕಾಸು ಸಾಧನೆ ಮತ್ತು ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಆಗುವ ಮುನ್ಸೂಚನೆಯು ಹೂಡಿಕೆದಾರರ ವಿಶ್ವಾಸವನ್ನು ಹೆಚ್ಚಿಸಿತುಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ತಿಳಿಸಿದ್ದಾರೆ.

**ಸಂಪತ್ತು ವೃದ್ಧಿ:** ಹೂಡಿಕೆದಾರರ ಸಂಪತ್ತು ಒಂದೇ ದಿನ ₹ 3 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ.



'ಕಾಂಗ್ರೆಸ್ ಪಕ್ಷ ಮತ್ತೆ ರಾಷ್ಟ್ರಮಟ್ಟದಲ್ಲಿ ಮೇಲೆದ್ದು ಬರಬಹುದೇ?' ವಿಷಯ ಕುರಿತು ಚರ್ಚೆ

# ಆತ್ಮಾವಲೋಕನ, ಕಾರ್ಯತಂತ್ರ ಗೆಲುವಿನ ಮಂತ್ರ


ಬೆಂಗಳೂರು: 'ನಮ್ಮದು ಜಾತ್ಯತೀತ ಪಕ್ಷ. ಅಭಿವೃದ್ಧಿ ಮಾನದಂಡ. ಚುನಾವಣೆಗಳಲ್ಲಿನ ಸೋಲಿನ ಆತ್ಮಾವಲೋಕನ ಮಾಡಿಕೊಂಡು ತಳಮಟ್ಟದಿಂದ ಪಕ್ಷ ಕಟ್ಟುತ್ತೇವೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ವಿಶ್ವಾಸ ವ್ಯಕ್ತಪಡಿಸಿದರೆ, 'ಕಾಂಗ್ರೆಸ್ ದುರ್ಬಲವಾದ ಕಡೆಗಳಲ್ಲಿ ಬಿಜೆಪಿ ಅಥವಾ ಪರ್ಯಾಯ ರಾಜಕೀಯ ಪಕ್ಷ ಬಂದಿದೆ. ಸೋತರೂ ನಾವು ಮತ್ತೆ ಉತ್ಸಾಹದಲ್ಲಿ ಕೆಲಸ ಮಾಡುತ್ತೇವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಪಾದಿಸಿದರು.

'ಗೆಲ್ಲಲೇ ಬೇಕೆಂಬ ಕಾರ್ಯತಂತ್ರ, ಛಲ ಕಾಂಗ್ರೆಸ್ಸಿನಲ್ಲಿಲ್ಲ. ಬಿಜೆಪಿಯ ಕಾರ್ಯಸೂಚಿ ಎದುರಿಸುವುದಕ್ಕಷ್ಟೆ ಸೀಮಿತ. ಆದರೆ, ಧರ್ಮ, ಜಾತಿ ಆಧಾರಿತ ಗೆಲುವಿಗೆ ಮಿತಿಯಿದೆ' ಎಂದರು ರಾಜಕೀಯ ವಿಶ್ಲೇಷಕ ಸಂದೀಪ್ ಶಾಸ್ತ್ರಿ.

'ಕಾಂಗ್ರೆಸ್ ಪಕ್ಷ ಮತ್ತೆ ರಾಷ್ಟ್ರಮಟ್ಟದಲ್ಲಿ ಮೇಲೆದ್ದು ಬರಬಹುದೇ?' ಎಂಬ ವಿಷಯದ ಕುರಿತು 'ಪ್ರಜಾವಾಣಿ' ಸೋಮವಾರ ಏರ್ಪಡಿಸಿದ್ದ ಫೇಸ್‌ಬುಕ್ ಸಂವಾದದಲ್ಲಿ ಈ ಮೂವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಆಯ್ದ ಅಂಶ ಇಲ್ಲಿದೆ.

ಪ್ರಜಾವಾಣಿ ಸಂವಾದ

## ಪಕ್ಷ ಪುನಃಶ್ಚೇತನ ಆಗಿಯೇ ಆಗುತ್ತದೆ



ಇತ್ತೀಚಿನ ಚುನಾವಣೆಗಳಲ್ಲಿ ಕಾಂಗ್ರೆಸ್ ನಿರೀಕ್ಷಿತ ಮಟ್ಟದಲ್ಲಿ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ ನಿಜ. ಆದರೆ, ನಾವು (ಕಾಂಗ್ರೆಸ್) ಮತ್ತು ಬಿಜೆಪಿ ಪಡೆದ ಮತಗಳ ಅಂತರ ಕೇವಲ ಶೇ 2. ಅಸ್ಸಾಂನಲ್ಲಿ ನಮ್ಮ ನಾಯಕರು ಬಿಜೆಪಿಗೆ ಹೋಗಿದ್ದರಿಂದ ಸಮಸ್ಯೆ ಆಯಿತು. ತಮಿಳುನಾಡಿನಲ್ಲಿ ಡಿಎಂಕೆ ಜೊತೆ ಹೊಂದಾಣಿಕೆಯಲ್ಲಿ 25 ಕ್ಷೇತ್ರಗಳಲ್ಲಿ 17 ಗೆದ್ದಿದ್ದೇವೆ. ಕೇರಳದಲ್ಲಿ ಹೆಚ್ಚಿನ ಸ್ಥಾನ ಗೆಲ್ಲಲು ಸಾಧ್ಯ ಆಗದಿರಲು ನಾನಾ ಕಾರಣಗಳಿವೆ. ಸೋಲನ್ನು ಆತ್ಮಾವಲೋಕನ ಮಾಡಿಕೊಂಡು, ಮತ್ತೆ ಪಕ್ಷ ಸಂಘಟಿಸಲು ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಎಐಸಿಸಿ ಅಧ್ಯಕ್ಷೆ ತಂಡ ರಚಿಸಿದ್ದಾರೆ. ಕಾಂಗ್ರೆಸ್ ಮುಂದೆ ಅಧಿಕಾರಕ್ಕೆ ಬರುವುದಿಲ್ಲವೇನೊ ಎಂಬ ಸಂದರ್ಭದಲ್ಲಿಯೂ (80ರ ದಶಕ) ಮತ್ತೆ ಅಧಿಕಾರಕ್ಕೆ ಬಂದಿದೆ. ಪಕ್ಷ ಪುನಶ್ಚೇತನ ಆಗಿಯೇ ಆಗುತ್ತದೆ. ಧರ್ಮಕ್ಕೋ, ಭಾಷೆಗೊ ಕಾಂಗ್ರೆಸ್ ಸೀಮಿತವಲ್ಲ. ಭಾವನಾತ್ಮಕ ವಿಷಯ ಮುಂದಿಟ್ಟು ಬಿಜೆಪಿಯವರು ಗೆಲ್ಲುತ್ತಾರೆ. ರಾಷ್ಟ್ರೀಯತೆ ವಿಷಯದಲ್ಲಿ ಸುಳ್ಳು ಪ್ರಚಾರ ಮಾಡುತ್ತಾರೆ. ಜನರಿಗೆ ಅವರ ಮೇಲಿದ್ದ ನಂಬಿಕೆ, ವಿಶ್ವಾಸ ನಕಾರಾತ್ಮವಾಗುತ್ತಿದೆ. ಜಾತ್ಯತೀತ ನಿಲುವು, ಅಭಿವೃದ್ಧಿ ಇಟ್ಟುಕೊಂಡೇ ಚುನಾವಣೆ ಎದುರಿಸುತ್ತೇವೆ. ಬಿಜೆಪಿಯ ವೈಫಲ್ಯಗಳು ನಮಗೆ ಅನುಕೂಲವಾಗಲಿದೆ. ಬಿಜೆಪಿಯ ಹಿರಿಯ ಸದಸ್ಯರೇ ಆ ಪಕ್ಷದೊಳಗಿನ ಭ್ರಷ್ಟಾಚಾರ, ಆಡಳಿತ ಕುಸಿತ ಬಗ್ಗೆ ಬೆರಳು ತೋರಿಸುತ್ತಿದ್ದಾರೆ.

**ಆರ್. ಧ್ರುವನಾರಾಯಣ**, ಕಾರ್ಯಾಧ್ಯಕ್ಷ, ಕೆಪಿಸಿಸಿ

## ಪ್ರತಿಕ್ರಿಯೆಯ ಆಚೆಗೆ ನಿಲ್ಲದೇ ಇರುವುದು ಕಾಂಗ್ರೆಸ್ ದೌರ್ಬಲ್ಯ



ಮತ್ತೆ ಎದ್ದು ನಿಲ್ಲಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಆದರೆ, ಆ ಕಾರ್ಯತಂತ್ರ ಇಲ್ಲ. ಪಶ್ಚಿಮ ಬಂಗಾಳವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಬಿಜೆಪಿ ರಂಗಕ್ಕಿಳಿದು ತೋರಿದ ಛಲ ನಮ್ಮ ಮುಂದಿದೆ. ರಾಷ್ಟ್ರೀಯ ಪಕ್ಷದಲ್ಲಿರಬೇಕಾದ ಗೆಲ್ಲಲೇಬೇಕೆಂಬ ಛಲ ಕಾಂಗ್ರೆಸ್‌ನಲ್ಲಿ ಕಾಣುತ್ತಿಲ್ಲ. ಹಿಂದೆ ಇದ್ದ ಕಾಂಗ್ರೆಸ್ ಇವತ್ತೂ ಇದೆಯೇ ಎಂಬ ಅನುಮಾನ ಮೂಡುತ್ತದೆ. ಆ ಪಕ್ಷದಲ್ಲಿ ರಾಜಕೀಯ ಜೀವನ ಆರಂಭಿಸಿದ್ದ ನಾಯಕರು ಈಗ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ. ಕಾಂಗ್ರೆಸ್ ಬಿಟ್ಟು ಬೇರೆ ಪಕ್ಷಕ್ಕೆ ಹೋಗಿ, ಆ ಪಕ್ಷ ಬೆಳೆಸಿ, ತಾವೂ ಬೆಳೆದಿದ್ದಾರೆ. ಈ ಚರ್ಚೆ ಕಾಂಗ್ರೆಸ್‌ನಲ್ಲಿ ನಡೆಯುತ್ತಿದೆಯೇ ಎನ್ನುವುದು ಮುಖ್ಯ. ಕಾಂಗ್ರೆಸ್ ತಳಮಟ್ಟದ ವಾಸ್ತವ ಅರ್ಥ ಮಾಡಿಕೊಳ್ಳಬೇಕು. ಬಿಜೆಪಿಯ ಕಾರ್ಯಸೂಚಿಗೆ ಕಾಂಗ್ರೆಸ್ ಪ್ರತಿಕ್ರಿಯಿಸುವ ಕೆಲಸವನ್ನಷ್ಟೆ ಮಾಡುತ್ತಿದೆ. ಪಕ್ಷವೊಂದು ಯಾವ ಪರಿಕಲ್ಪನೆಯನ್ನು ಮತದಾರನ ಮುಂದಿಡುತ್ತದೆ, ಮತದಾರ ಯಾವುದನ್ನು ಒಪ್ಪಿಕೊಳ್ಳುತ್ತಾನೆ ಎನ್ನುವುದು ಮುಖ್ಯ. 2014ರಲ್ಲಿ ಅಭಿವೃದ್ಧಿ ಯೋಜನೆ ಮುಂದಿಟ್ಟದ್ದ ಮೋದಿ, 2019ರಲ್ಲಿ ಬಿಎಸ್‌ಎಫ್ ದಾಳಿ, ಪಾಕಿಸ್ತಾನ ಜೊತೆಗಿನ ಗಡಿ ಗಲಾಟೆ ಮುಂದೆ ತಂದರು. ಚಾಣಾಕ್ಷತನದಿಂದ ಬಿಜೆಪಿ ಜನರ ಬಳಿ ಹೋಗಿದೆ. ಈ ನಡೆಯನ್ನು ಎದುರಿಸಲು ಕಾಂಗ್ರೆಸ್ ವಿಫಲವಾಗಿದೆ. ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಧರ್ಮದಲ್ಲಿ ಹೆಸರಿನಲ್ಲಿ ಮತಗಳ ಧ್ರುವೀಕರಣ ನಡೆದಿದೆ. ರಾಜ್ಯದಲ್ಲಿ ಎರಡೂ ಪಕ್ಷಗಳಲ್ಲಿ (ಬಿಜೆಪಿ, ಕಾಂಗ್ರೆಸ್) ಆಂತರಿಕ ಸಮಸ್ಯೆಗಳಿವೆ. ಅದನ್ನು ಪರಿಹರಿಸಿಕೊಂಡು, ಸಂಘಟಿತವಾದರೆ ಮಾತ್ರ ಚುನಾವಣೆ ಗೆಲ್ಲಲು ಸಾಧ್ಯ.

**ಸಂದೀಪ್ ಶಾಸ್ತ್ರಿ**, ರಾಜಕೀಯ ವಿಶ್ಲೇಷಕ

## ವಂಶಪಾರಂಪರ್ಯಕ್ಕೆ ವಿರುದ್ಧವಾಗಿರುವ ಜನರ ಪಕ್ಷ



ಕಾಂಗ್ರೆಸ್ ಕೇಂದ್ರವಾಗಿ ಸುತ್ತುತ್ತಿದ್ದ ಪಕ್ಷಗಳೆಲ್ಲ ಇವತ್ತು ಬಿಜೆಪಿಯನ್ನು ಕೇಂದ್ರ ಬಿಂದುವಾಗಿಟ್ಟು ಸುತ್ತುತ್ತಿವೆ. ಕಾಂಗ್ರೆಸ್ ದುರ್ಬಲವಾದ ಕಡೆಗಳೆಲ್ಲ ಬಿಜೆಪಿ ಅಥವಾ ಸ್ಥಳೀಯ ರಾಜಕೀಯ ಪಕ್ಷ ಪರ್ಯಾಯವಾಗಿ ಮೇಲೆ ಬಂದಿರುವುದನ್ನು ಕಾಣಬಹುದು. ಯಾವುದೇ ಪಕ್ಷಕ್ಕೆ ಸಿದ್ಧಾಂತ, ನಾಯಕತ್ವ, ಕಾರ್ಯಪದ್ಧತಿ ಮುಖ್ಯ. ಅದನ್ನು ಆಧರಿಸಿ ಬೆಳೆದ ಕಾರ್ಯಕರ್ತರೂ ಅಗತ್ಯ. ನಮಗೆ (ಬಿಜೆಪಿ) ಪುನರ್ ನಿರ್ಮಾಣದಲ್ಲಿ ನಂಬಿಕೆ. ನಮ್ಮ ಸಿದ್ಧಾಂತದಲ್ಲಿ ಗೊಂದಲ ಇಲ್ಲ. ನಾಯಕರೆಲ್ಲ ಕಾರ್ಯಕರ್ತರ ಮೂಸೆಯಿಂದ, ಜನಮಾನಸದ ಮಧ್ಯದಿಂದ ಬಂದವರು. ಮೋದಿ ನಮ್ಮ ಪರಮೋಚ್ಚ ನಾಯಕ. ಆದರೆ, ಅವರೂ ಸೇರಿದಂತೆ ಎಲ್ಲರೂ ಪಕ್ಷದ ವೇದಿಕೆಯಲ್ಲಿ ಪ್ರಶ್ನೆಗೆ ಒಳಗಾಗುವವರೇ. ಯಾವುದೇ ವ್ಯಕ್ತಿಗತ ನಿರ್ಣಯ ಇಲ್ಲ. ಪಕ್ಷದ ಸಂಸದೀಯ ಮಂಡಳಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆ. ಸರ್ಕಾರದ ಕಾರ್ಯಯೋಜನೆ, ನೀತಿಯಲ್ಲಿ ಓಲೈಕೆ ಇಲ್ಲ. ಜನಧನ್, ಕಿಸಾನ್ ಸಮ್ಮಾನ್, ಮುದ್ರಾ ಸರ್ವಧರ್ಮದವರಿಗೂ ಸಂಬಂಧಿಸಿದ್ದು. ಕಾಂಗ್ರೆಸ್‌ನಂತೆ ಅನುಕೂಲ ರಾಜಕೀಯ ನಮ್ಮದಲ್ಲ. ನಮ್ಮ ಸರ್ಕಾರ ಯಾವುದೇ ಧರ್ಮ, ಜಾತಿಗೆ ತಾರತಮ್ಯ ಮಾಡಿಲ್ಲ. ಗೆಲ್ಲುವ ಅಭ್ಯರ್ಥಿ ಯಾರೇ ಆಗಿದ್ದರೂ, ಪಕ್ಷದ ಕಾರ್ಯಕರ್ತ ಆಗಿದ್ದರೆ ಟಿಕೆಟ್ ಕೊಟ್ಟಿದ್ದೇವೆ. ಜಾತ್ಯತೀತ ಎಂದು ಹೇಳಿಕೊಂಡು ಮುಸ್ಲಿಂ ಲೀಗ್, ಎಸ್‌ಡಿಪಿಐ ಜೊತೆ ಹೊಂದಾಣಿಕೆ ಮಾಡಿಕೊಂಡವರು ಯಾರು? ಶಾದಿಭಾಗ್ಯ ಯೋಜನೆ ಓಲೈಕೆ ಅಲ್ಲವೇ? 'ಕಾಂಗ್ರೆಸ್ ಮುಕ್ತ' ಎಂದರೆ ಭ್ರಷ್ಟಾಚಾರ, ವಂಶಪಾರಂಪರ್ಯ ಮುಕ್ತ ಎಂದರ್ಥ. ನಮ್ಮಲ್ಲಿ ವಂಶಪಾರಂಪರ್ಯಕ್ಕೆ ಅವಕಾಶವಿಲ್ಲ.

ಸಿ.ಟಿ. ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಪೂರ್ಣ ಸಂವಾದ ವೀಕ್ಷಣೆಗೆ:
https://www.facebook.com/prajavani.net



97 ಮಂದಿಯಲ್ಲಿ ರೋಗ ಪತ್ತೆ: ಸಚಿವ ಡಾ.ಕೆ. ಸುಧಾಕರ್

# ಕಪ್ಪು ಶಿಲೀಂಧ್ರ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ



ಸುಧಾಕರ್

ಬೆಂಗಳೂರು: 'ರಾಜ್ಯದಲ್ಲಿ ಭಾನುವಾರದವರೆಗೆ 97 ಜನರಲ್ಲಿ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ರೋಗ ಪತ್ತೆಯಾಗಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಈ ರೋಗ ಬಂದರೆ ಸರ್ಕಾರಕ್ಕೆ ಮಾಹಿತಿ ನೀಡಬೇಕು. ಮುಚ್ಚಿಟ್ಟರೆ ಕಾನೂನುಬಾಹಿರವಾಗುತ್ತದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕಪ್ಪು ಶಿಲೀಂಧ್ರ ರೋಗದ ಕುರಿತು ಸೋಮವಾರ ವಿವಿಧ ವಿಭಾಗಗಳ ತಜ್ಞರು ಹಾಗೂ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಕೋವಿಡ್‌ಗೆ ಉಚಿತ ಚಿಕಿತ್ಸೆ ನೀಡುತ್ತಿದ್ದು, ಕೋವಿಡ್ ಬಂದ ನಂತರ ಈ ರೋಗ ಬರುವುದರಿಂದ ಇದಕ್ಕೂ ಉಚಿತ ಚಿಕಿತ್ಸೆ ನೀಡಲಾಗುವುದು' ಎಂದರು.

'ಬೌರಿಂಗ್ ಆಸ್ಪತ್ರೆಯಲ್ಲಿ ಪ್ರಾಯೋಗಿಕವಾಗಿ ಚಿಕಿತ್ಸೆ ವ್ಯವಸ್ಥೆ ಮಾಡಲಾಗಿದೆ. ಮೈಸೂರು ಮತ್ತು ಶಿವಮೊಗ್ಗ ವೈದ್ಯಕೀಯ ಕಾಲೇಜು, ಕಲಬುರ್ಗಿ ಜಿಮ್ಸ್, ಹುಬ್ಬಳ್ಳಿಯ ಕಿಮ್ಸ್, ಮಂಗಳೂರಿನ ವೆನ್ಲಾಕ್, ಉಡುಪಿಯ ಕೆಎಂಸಿ ಆಸ್ಪತ್ರೆಗಳಲ್ಲಿಯೂ ಇದರ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು' ಎಂದರು.

'ಈ ರೋಗಕ್ಕೆ ಆಂಪೊಟೆರಿಸಿನ್ ಔಷಧಿ ನೀಡುತ್ತಿದ್ದು, ಒಬ್ಬ ರೋಗಿಗೆ 40-60 ವಯಲ್‌ಗಳು ಬೇಕಾಗುತ್ತವೆ. ರಾಜ್ಯಕ್ಕೆ ಕೇಂದ್ರ ಸರ್ಕಾರ 1,050 ವಯಲ್‌ಗಳಿಗೆ ಮಂಜೂರಾತಿ ನೀಡಿದ್ದು, 450 ವಯಲ್ ಬಂದಿವೆ. ಇನ್ನೂ 20 ಸಾವಿರ ವಯಲ್‌ಗೆ ಆದೇಶ ನೀಡಲಾಗಿದೆ' ಎಂದು ತಿಳಿಸಿದರು.

'ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಯಲ್ಲಿರುವ ಕಪ್ಪು ಶಿಲೀಂಧ್ರ ರೋಗ ಪೀಡಿತರ ಮಾಹಿತಿ ಸರ್ಕಾರದ ಬಳಿ ಇರುತ್ತದೆ. ಅದರಂತೆ ಔಷಧಿ ನೀಡಲಾಗುವುದು' ಎಂದೂ ವಿವರಿಸಿದರು.

### ವಿಜಯಪುರ: 26 ಪ್ರಕರಣ ಪತ್ತೆ

ವಿಜಯಪುರ: ಜಿಲ್ಲೆಯಲ್ಲಿ ಈವರೆಗೆ 26 ಜನರಿಗೆ ಕಪ್ಪು ಶಿಲೀಂಧ್ರ ರೋಗ (ಬ್ಲ್ಯಾಕ್ ಫಂಗಸ್) ಪ್ರಕರಣಗಳು ಪತ್ತೆಯಾಗಿವೆ ಎಂದು ಎಂದು ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಿದ್ದ ಬೆಂಗಳೂರು, ಚಿತ್ರದುರ್ಗದ ಒಬ್ಬರಿಗೆ ಕಪ್ಪು ಶಿಲೀಂಧ್ರ ರೋಗ ಬಾಧಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯ ಇಲಾಖೆ ತಿಳಿಸಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ 57 ವರ್ಷದ ಪುರುಷರೊಬ್ಬರಿಗೆ ಕಪ್ಪು ಶಿಲೀಂಧ್ರ ರೋಗದ ಲಕ್ಷಣಗಳು ಕಂಡುಬಂದಿವೆ.

## ಡಿ.ಸಿ. ಜತೆ ಪ್ರಧಾನಿ ಸಭೆ ಇಂದು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ನಡೆಸುವ ಜಿಲ್ಲಾಧಿಕಾರಿಗಳ ಸಭೆಯಲ್ಲಿ ರಾಜ್ಯದ 17 ಜಿಲ್ಲಾಧಿಕಾರಿಗಳು ಭಾಗವಹಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಪ್ರಧಾನಿಯವರು ವಿಡಿಯೊ ಸಂವಾದ ನಡೆಸಲಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಸಭೆಯಲ್ಲಿ ಇರಲಿದ್ದಾರೆ.

ಉತ್ತರಕನ್ನಡ, ಹಾಸನ, ಬಳ್ಳಾರಿ, ಮೈಸೂರು, ತುಮಕೂ`ರು, ಕೋಲಾರ, ಕೊಡಗು, ಬೆಂಗಳೂರುನಗರ, ಉಡುಪಿ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಧಾರವಾಡ, ದಕ್ಷಿಣಕನ್ನಡ, ರಾಯಚೂರು, ಕಲಬುರ್ಗಿ, ಮಂಡ್ಯ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳು ಭಾಗವಹಿಸುವರು.

# ಕೋವಿಡ್: ದೃಢ ಪ್ರಮಾಣ ಶೇಕಡ 40ರ ಸಮೀಪ

ಬೆಂಗಳೂರು: ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಕೋವಿಡ್ ಪರೀಕ್ಷೆಗಳ ದೃಢಪಡುವ ಪ್ರಮಾಣ(ಪಾಸಿಟಿವಿಟಿ) ದರ ಶೇ 39.70ಕ್ಕೆ ಹೆಚ್ಚಿದೆ. ಅಂದರೆ, ಕೋವಿಡ್ ಪರೀಕ್ಷೆಗೆ ಒಳಗಾದ ಪ್ರತಿ 100 ಮಂದಿಯಲ್ಲಿ 40 ಮಂದಿಗೆ ಸೋಂಕು ದೃಢಪಡುತ್ತಿದೆ.

ಸೋಂಕು ಪರೀಕ್ಷೆಗಳು ಕಡಿಮೆಯಾದರೂ, ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿಲ್ಲ. ರಾಜಧಾನಿಗಿಂತಲೂ ಗ್ರಾಮೀಣ ಭಾಗದಲ್ಲಿ ಸೋಂಕು ಪರೀಕ್ಷೆಗಳು ಹೆಚ್ಚು ನಡೆಯುತ್ತಿವೆ. ಹಳ್ಳಿಗಳಲ್ಲಿ ಪರೀಕ್ಷೆಗೊಳಪಟ್ಟ ಪ್ರತಿ ಇಬ್ಬರಲ್ಲಿ ಒಬ್ಬರಿಗೆ ಸೋಂಕು ದೃಢಪಡುತ್ತಿದೆ.

**ಲಕ್ಷಕ್ಕಿಂತಲೂ ಕಡಿಮೆ:** ರಾಜ್ಯದಲ್ಲಿ 40 ದಿನಗಳ ಬಳಿಕ ಇದೇ ಮೊದಲ ಬಾರಿಗೆ ಕೋವಿಡ್ ಪರೀಕ್ಷೆಗಳ ಸಂಖ್ಯೆ ಲಕ್ಷಕ್ಕಿಂತಲೂ ಕಡಿಮೆಯಾಗಿದೆ. ಎರಡು ಲಕ್ಷಕ್ಕೆ ಆಸುಪಾಸಿಗೆ ತಲುಪಿದ್ದ ಸೋಂಕು ಪರೀಕ್ಷೆಗಳು ಕಳೆದ 10 ದಿನಗಳಿಂದ ಇಳಿಕೆಯಾಗುತ್ತಿವೆ.

ಏ.8 ರ ಬಳಿಕ ಮೊದಲ ಬಾರಿ ಸೋಂಕು ಪರೀಕ್ಷೆಗಳು ಒಂದು ಲಕ್ಷಕ್ಕಿಂತಲೂ ಕೆಳಕ್ಕಿಳಿದಿವೆ. ಸೋಮವಾರ 97,236 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಭಾನುವಾರಕ್ಕಿಂತಲೂ 20 ಸಾವಿರ ಪರೀಕ್ಷೆಗಳು ಕಡಿಮೆಯಾಗಿವೆ.

**38 ಸಾವಿರ ಮಂದಿಗೆ ಸೋಂಕು:** ಸೋಮವಾರ ಹೊಸದಾಗಿ 38,603 ಮಂದಿಗೆ ಸೋಂಕು ತಗುಲಿದ್ದು, 476 ಸೋಂಕಿತರು ಮರಣ ಹೊಂದಿದ್ದಾರೆ. ಭಾನುವಾರ 31 ಸಾವಿರಕ್ಕೆ ತಗ್ಗಿದ್ದ ಹೊಸ ಪ್ರಕರಣಗಳು ಮತ್ತೆ ಏಳು ಸಾವಿರಷ್ಟು ಹೆಚ್ಚಳವಾಗಿವೆ. ಸಾವು 73 ಹೆಚ್ಚಳವಾಗಿದೆ.

ಗುಣಮುಖರ ಸಂಖ್ಯೆಯೂ ಎರಡು ಸಾವಿರಷ್ಟು ತಗ್ಗಿದೆ. 34,635 ಮಂದಿ ಗುಣಮುಖರಾಗಿದ್ದಾರೆ. ರಾಜ್ಯದ ಒಟ್ಟಾರೆ ಪ್ರಕರಣಗಳು 22.4 ಲಕ್ಷಕ್ಕೆ ಹೆಚ್ಚಿದ್ದು, ಈ ಪೈಕಿ 16.1 ಲಕ್ಷ ಮಂದಿ ಗುಣಮುಖರಾದ್ದಾರೆ. ಈವರೆಗೆ ಒಟ್ಟಾರೆ 22,313 ಮಂದಿ ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ. ಇಂದಿಗೂ 6.03 ಲಕ್ಷ ಮಂದಿ ಚಿಕಿತ್ಸೆ ಆರೈಕೆಯಲ್ಲಿದ್ದಾರೆ.

# ಹಾಲು ಪ್ರೋತ್ಸಾಹ ಧನ ₹ 400 ಕೋಟಿ ಬಾಕಿ

## ಲಾಕ್‌ಡೌನ್: ನೆರವಿಗಾಗಿ ಕೇಂದ್ರಕ್ಕೆ ಪತ್ರ ಬರೆದ ಕೆಎಂಎಫ್

• ಡಿ.ಎಂ.ಕುರ್ಕೆ ಪ್ರಶಾಂತ್




ಚಿಕ್ಕಬಳ್ಳಾಪುರ: ರಾಜ್ಯ ಸರ್ಕಾರ ಕಳೆದ ನಾಲ್ಕು ತಿಂಗಳಿನಿಂದ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಬಿಡುಗಡೆ ಮಾಡಿಲ್ಲ. ಹೈನುಗಾರಿಕೆ ನಂಬಿ ಜೀವನ ನಡೆಸುತ್ತಿರುವ ಬಹಳಷ್ಟು ಕುಟುಂಬಗಳಿಗೆ ಪ್ರೋತ್ಸಾಹ ಧನ ಬಿಡುಗಡೆ ಆಗದಿರುವುದು ಪೆಟ್ಟುಕೊಟ್ಟಿದೆ.

ರಾಜ್ಯದಲ್ಲಿ 9 ಲಕ್ಷ ಉತ್ಪಾದಕರು ನಿತ್ಯ ಸರಾಸರಿ 84 ಲಕ್ಷ ಲೀಟರ್ ಹಾಲನ್ನು ಡೇರಿಗಳಿಗೆ ಪೂರೈಸುತ್ತಾರೆ. ಪ್ರತಿ ಲೀಟರ್ ಹಾಲಿಗೆ ಸರ್ಕಾರ ₹ 5 ಪ್ರೋತ್ಸಾಹ ಧನ ನೀಡುತ್ತಿದೆ. ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್)ದ ಮೂಲಗಳ ಪ್ರಕಾರ ₹ 400 ಕೋಟಿ ಪ್ರೋತ್ಸಾಹ ಧನವನ್ನು ರೈತರಿಗೆ ಸರ್ಕಾರ ಬಿಡುಗಡೆ ಮಾಡಬೇಕಾಗಿದೆ.

'ಡಿಸೆಂಬರ್‌ವರೆಗೆ ಪ್ರೋತ್ಸಾಹ ಧನ ಪೂರ್ಣ ಬಿಡುಗಡೆಯಾಗಿದೆ. ಜನವರಿಯಿಂದ ಏಪ್ರಿಲ್‌ವರೆಗಿನ ಪ್ರೋತ್ಸಾಹ ಧನದ ಬಿಲ್ ಅನ್ನು ಸರ್ಕಾರಕ್ಕೆ ನೀಡಿದ್ದೇವೆ. ಹಣ ಬಿಡುಗಡೆಗೆ ಪತ್ರ ಬರೆದಿದ್ದೇವೆ. ಶೀಘ್ರವೇ ಬಿಡುಗಡೆಯಾಗುವ ವಿಶ್ವಾಸವಿದೆ' ಎಂದು ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ತಿಳಿಸಿದರು.

ಮತ್ತೆ ನೆರವಿಗೆ ಮೊರೆ: ಕೋವಿಡ್ ಹೆಚ್ಚಳದಿಂದ ಘೋಷಿಸಿರುವ ಲಾಕ್‌ಡೌನ್ ಬಿಸಿ ಕೆಎಂಎಫ್‌ಗೆ ತೀವ್ರವಾಗಿ ತಟ್ಟುತ್ತಿದೆ. ಈ ಸಂಕಷ್ಟದಿಂದ ಪಾರಾಗಲು ಕಳೆದ ವರ್ಷ ಕೆಎಂಎಫ್ ಕೇಂದ್ರ ಸರ್ಕಾರದಿಂದ ₹ 850 ಕೋಟಿ ಸಾಲ ಪಡೆದಿತ್ತು. ಈ ಬಾರಿಯೂ ಮತ್ತೆ ಸಾಲಕ್ಕಾಗಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ನಿತ್ಯ ಸಂಗ್ರಹವಾಗುವ ಸರಾಸರಿ 84 ಲಕ್ಷ ಲೀಟರ್ ಹಾಲಿನ ಪೈಕಿ 40 ಲಕ್ಷ ಲೀಟರ್ ಹಾಲು ಹಾಗೂ 4 ಲಕ್ಷ ಲೀಟರ್ ಮೊಸರು ಮಾರಾಟವಾಗುತ್ತಿದೆ. 34 ಲಕ್ಷ ಲೀಟರ್ ಪೌಡರ್ ಆಗುತ್ತಿದೆ. ಉಳಿದ ಹಾಲು ಇತರೇ ಉತ್ಪನ್ನಗಳಿಗೆ ಬಳಕೆಯಾಗುತ್ತದೆ. ಕೋವಿಡ್ ಎರಡನೇ ಅಲೆಗೂ ಮುನ್ನ 8 ಲಕ್ಷದಿಂದ 10 ಲಕ್ಷ ಲೀಟರ್ ಹಾಲು ಪೌಡರ್‌ಗೆ ಬಳಕೆ ಆಗುತ್ತಿತ್ತು. ಸದ್ಯ 16 ಸಾವಿರ ಟನ್ ಪೌಡರ್ ಗೋದಾಮುಗಳಲ್ಲಿ ದಾಸ್ತಾನಿದೆ' ಎಂದು ಸತೀಶ್ ಮಾಹಿತಿ ನೀಡಿದರು.

'ಒಂದು ಕೆ.ಜಿ. ಹಾಲಿನ ಪೌಡರ್ ತಯಾರಿಸಲು ₹ 257 ವೆಚ್ಚವಾಗುತ್ತದೆ. ಎಲ್ಲಿಯವರೆಗೆ ಹಾಲಿನ ಪುಡಿ ಅವಶ್ಯಕತೆ ಇರುವುದಿಲ್ಲವೋ ಅಲ್ಲಿಯವರೆಗೆ ಹಣದ ಹರಿವು ಸ್ಥಗಿತವಾಗುತ್ತದೆ. ರೈತರಿಗೆ ಹಣ ಬಟವಾಡೆ ಮಾಡಲು ತೊಂದರೆಯಾಗಬಾರದು ಎಂದು ಕೇಂದ್ರದ ಬಳಿ ಈ ಬಾರಿಯೂ ಸಾಲ ಕೇಳಿದ್ದೇವೆ' ಎಂದು ಹೇಳಿದರು.

### ಹೊರರಾಜ್ಯ ಮಾರಾಟ ಕುಸಿತ

ಲಾಕ್‌ಡೌನ್‌ಗೂ ಪೂರ್ವದಲ್ಲಿ ನಿತ್ಯ 7 ಲಕ್ಷದಿಂದ 8 ಲಕ್ಷ ಲೀಟರ್ ಹಾಲನ್ನು ಹೊರರಾಜ್ಯಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು. ಈಗ ಕೇವಲ 70 ಸಾವಿರ ಲೀಟರ್ ಮಾರಾಟವಾಗುತ್ತಿದೆ ಎಂದು ಬಿ.ಸಿ.ಸತೀಶ್ ತಿಳಿಸಿದರು.

ರಾಜ್ಯದಲ್ಲಿನ 1,700 ಹಾಲಿನ ಬೂತ್‌ಗಳನ್ನು ಸಂಜೆವರೆಗೂ ತೆರೆಯಲು ಸರ್ಕಾರ ಅವಕಾಶ ನೀಡಿದೆ. ಇದು ಅನುಕೂಲವಾಗಿದೆ. ಕರ್ನಾಟಕದ ಒಳಗೆ ವಹಿವಾಟಿಗೆ ಸಮಸ್ಯೆ ಆಗಿಲ್ಲ. ಹೊರರಾಜ್ಯಗಳ ಮಾರುಕಟ್ಟೆ ಸ್ಥಗಿತವಾಗಿದೆ ಎಂದರು.

# ತನಿಖೆ ನಡೆಯುತ್ತಿದ್ದಾಗಲೇ ಹೊರಬಂದಿದ್ದ ಬಿಲ್ ಗೇಟ್ಸ್



ನ್ಯೂಯಾರ್ಕ್ (ಎಪಿ): ಮೈಕ್ರೊಸಾಫ್ಟ್ ಕಾರ್ಪೊರೇಷನ್‌ನ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಅವರು ಕಂಪನಿ ಉದ್ಯೋಗಿಯೊಬ್ಬಳ ಜೊತೆ ಹಿಂದೆ ಹೊಂದಿದ್ದ 'ಪ್ರಣಯ' ಸಂಬಂಧದ ಬಗ್ಗೆ ತನಿಖೆ ನಡೆಯುತ್ತಿರುವಾಗ, ಗೇಟ್ಸ್ ಅವರು ಕಂಪನಿಯ ಆಡಳಿತ ಮಂಡಳಿಯಲ್ಲಿ ಮುಂದುವರಿಯುವುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಮಂಡಳಿಯ ಸದಸ್ಯರೇ ಬಂದಿದ್ದರು!

ಗೇಟ್ಸ್ ಅವರು ಹೊಂದಿದ್ದ ಸಂಬಂಧವು 'ಅನುಚಿತವಾಗಿತ್ತು' ಎಂದು ಭಾವಿಸಲಾಗಿತ್ತು. ಈ ಸಂಬಂಧದ ಬಗ್ಗೆ ಆಡಳಿತ ಮಂಡಳಿಯೇ 2020ರಲ್ಲಿ ತನಿಖೆ ನಡೆಸಿತ್ತು.

'ನಾನು ಹಲವು ವರ್ಷಗಳವರೆಗೆ ಗೇಟ್ಸ್ ಅವರ ಜೊತೆ ಲೈಂಗಿಕ ಸಂಬಂಧ ಹೊಂದಿದ್ದೆ' ಎಂದು ಮೈಕ್ರೊಸಾಫ್ಟ್ ಕಂಪನಿಯಲ್ಲಿ ಎಂಜಿನಿಯರ್ ಆಗಿರುವ ಮಹಿಳೆಯೊಬ್ಬರು ಪತ್ರ ಬರೆದಿದ್ದರು. ಇದರ ಬಗ್ಗೆ ತನಿಖೆ ನಡೆಸಲು ಆಡಳಿತ ಮಂಡಳಿಯು ಕಾನೂನು ಸಂಸ್ಥೆಯೊಂದನ್ನು ನೇಮಕ ಮಾಡಿಕೊಂಡಿತ್ತು ಎಂದು ಅಮೆರಿಕದ 'ದಿ ವಾಲ್ ಸ್ಟ್ರೀಟ್ ಜರ್ನಲ್' ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.


ಆಡಳಿತ ಮಂಡಳಿ ಆರಂಭಿಸಿದ ತನಿಖೆ ಪೂರ್ಣಗೊಳ್ಳುವ ಮೊದಲೇ ಗೇಟ್ಸ್ ಅವರು ಮಂಡಳಿಗೆ ರಾಜೀನಾಮೆ ನೀಡಿದರು ಎಂದು ಪತ್ರಿಕೆಯ ವರದಿಯಲ್ಲಿ ಹೇಳಲಾಗಿದೆ. 'ಸರಿಸುಮಾರು 20 ವರ್ಷಗಳ ಹಿಂದೆ ಒಂದು ಸಂಬಂಧ ಇತ್ತು. ಆ ಸಂಬಂಧಕ್ಕೆ ಪರಸ್ಪರ ಮಾತುಕತೆ ಮೂಲಕ ಅಂತ್ಯ ಹೇಳಲಾಯಿತು' ಎಂದು ಗೇಟ್ಸ್ ಅವರ ವಕ್ತಾರರೊಬ್ಬರು ಪತ್ರಿಕೆಗೆ ತಿಳಿಸಿದ್ದಾರೆ.

ಆದರೆ, 'ಅವರು ರಾಜೀನಾಮೆ ನೀಡಿದ್ದಕ್ಕೂ, ಈ ಸಂಬಂಧಕ್ಕೂ ನಂಟು ಇಲ್ಲ' ಎಂದು ವಕ್ತಾರರು ಹೇಳಿದ್ದಾರೆ. ಗೇಟ್ಸ್ ಅವರು ಕಳೆದ ವರ್ಷ ಮೈಕ್ರೊಸಾಫ್ಟ್‌ನ ಆಡಳಿತ ಮಂಡಳಿಯಿಂದ ಹೊರಬಂದಾಗ, 'ಸಮಾಜ ಸೇವೆಗೆ ಹೆಚ್ಚಿನ ಗಮನ ನೀಡುವ ಉದ್ದೇಶವಿದೆ' ಎಂಬ ಕಾರಣ ನೀಡಿದ್ದರು.

'2019ರಲ್ಲಿ ಒಂದು ಪತ್ರ ಬಂತು. ಅದರಲ್ಲಿ, ಬಿಲ್ ಗೇಟ್ಸ್ ಅವರು ಕಂಪನಿಯ ಉದ್ಯೋಗಿಯೊಬ್ಬರ ಜೊತೆ ಸಂಬಂಧ ಹೊಂದಲು 2000ನೆಯ ಇಸವಿಯಲ್ಲಿ ಪ್ರಯತ್ನಿಸಿದ್ದರು ಎಂಬ ವಿವರ ಇತ್ತು. ಪತ್ರದಲ್ಲಿನ ವಿವರಗಳ ಬಗ್ಗೆ ಕಂಪನಿಯ ಆಡಳಿತ ಮಂಡಳಿ ಪರಿಶೀಲಿಸಿತು. ತನಿಖೆ ನಡೆಯುತ್ತಿದ್ದ ವೇಳೆ, ಆ ಮಹಿಳಾ ಉದ್ಯೋಗಿಗೆ ಕಂಪನಿಯು ಬೆಂಬಲವಾಗಿ ನಿಂತಿತ್ತು' ಎಂದು ಮೈಕ್ರೊಸಾಫ್ಟ್ ಹೇಳಿದೆ.

# ಗಣಿತಜ್ಞ ಎಂ.ಎಸ್. ನರಸಿಂಹನ್ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಖ್ಯಾತ ಗಣಿತಜ್ಞ ಪ್ರೊ.ಎಂ.ಎಸ್. ನರಸಿಂಹನ್ (88) ನಗರದಲ್ಲಿ ಶನಿವಾರ ನಿಧನರಾದರು. ಅವರು ಕೆಲವು ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಗಣಿತದ ಕ್ಷೇತ್ರಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಕೊಡುಗೆ ನೀಡಿದ್ದು, ವಿಶೇಷವಾಗಿ ಬೀಜ ಗಣಿತ, ಜಾಮಿತಿ, ಡಿಫರೆನ್ಷಿಯಲ್ ಜಾಮಿಟ್ರಿ, ರೆಪ್ರೆಸೆಂಟೇಷನ್ ಥಿಯರಿ ಮತ್ತು ಪಾರ್ಷಿಯಲ್ ಡಿಫರೆನ್ಷಿಯಲ್ ಈಕ್ವೇಷನ್ ಕ್ಷೇತ್ರದಲ್ಲಿ ಇವರು ಹೆಸರು ಮಾಡಿದ್ದರು.

ಪದ್ಮಭೂಷಣ, ಶಾಂತಿಸ್ವರೂಪ್ ಭಟ್ನಾಗರ್ ಸೇರಿ ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಲಂಡನ್‌ನ ರಾಯಲ್ ಸೊಸೈಟಿಯ ಫೆಲೋ ಆಗಿದ್ದರು. ಅವರ ಪುತ್ರಿ ಶೋಭನಾ ಜೆಎನ್‌ಎಆರ್‌ಸಿಯಲ್ಲಿ ಭೌತಶಾಸ್ತ್ರಜ್ಞೆಯಾಗಿದ್ದಾರೆ.

1932 ರಲ್ಲಿ ತಮಿಳುನಾಡಿನವರಾದ ಇವರು ಅಂದಿನ ಮದ್ರಾಸ್‌ನಲ್ಲಿ ಶಿಕ್ಷಣ ಪಡೆದರು. 1952 ರಲ್ಲಿ ಮುಂಬೈನಲ್ಲಿ ಆರಂಭಗೊಂಡ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಗೆ (ಟಿಐಎಫ್‌ಆರ್) ಸೇರಿದರು. 1992 ರವರೆಗೆ ಅಲ್ಲೇ ಕಾರ್ಯನಿರ್ವಹಿಸಿದ್ದರು. ಬಳಿಕ ಬೆಂಗಳೂರಿನ ಟಿಐಎಫ್‌ಆರ್‌ನ ಅನ್ವಯಿಕ ಗಣಿತ ವಿಭಾಗದ ಮುಖ್ಯಸ್ಥರಾಗಿದ್ದರು.





## ಧಾರವಾಡದಲ್ಲಿ ಸ್ಪುಟ್ನಿಕ್ ಲಸಿಕೆ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹುಬ್ಬಳ್ಳಿ: ರಷ್ಯಾದಲ್ಲಿ ಅಭಿವೃದ್ಧಿಪಡಿಸಲಾಗಿರುವ ಸ್ಪುಟ್ನಿಕ್–ವಿ ಲಸಿಕೆಗಳನ್ನು ಶಿಲ್ಪಾ ಮೆಡಿಕೇರ್ ಲಿಮಿಟೆಡ್ (ಎಸ್‌ಎಂಎಲ್) ಕಂಪನಿಯು ಧಾರವಾಡದಲ್ಲಿ ಉತ್ಪಾದಿಸಲಿದೆ. ಈ ವಿಚಾರವಾಗಿ ಕಂಪನಿಯು ಡಾ ರೆಡ್ಡೀಸ್ ಲ್ಯಾಬೊರೇಟರೀಸ್ ಜೊತೆ ಮೂರು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದೆ.

ರಾಯಚೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಶಿಲ್ಪಾ ಮೆಡಿಕೇರ್ ಲಿಮಿಟೆಡ್ ಕಂಪನಿಯು, ಧಾರವಾಡದಲ್ಲಿನ ತನ್ನ ಘಟಕದಲ್ಲಿ, ತನ್ನ ಅಂಗಸಂಸ್ಥೆಯಾದ ಶಿಲ್ಪಾ ಬಯಾಲಾಜಿಕಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮೂಲಕ ಲಸಿಕೆಯನ್ನು ಉತ್ಪಾದಿಸಲಿದೆ. ಡಾ ರೆಡ್ಡೀಸ್ ಕಂಪನಿಯು ಸ್ಪುಟ್ನಿಕ್ ಲಸಿಕೆ ತಯಾರಿಕೆಗೆ ಅಗತ್ಯವಿರುವ ತಂತ್ರಜ್ಞಾನವನ್ನು ಶಿಲ್ಪಾ ಬಯಾಲಾಜಿಕಲ್ ಕಂಪನಿಗೆ ವರ್ಗಾವಣೆ ಮಾಡಲಿದೆ.

ಕಂಪನಿಗಳ ನಡುವೆ ಆಗಿರುವ ಒಪ್ಪಂದದ ಅನ್ವಯ, ಲಸಿಕೆಯನ್ನು ತಯಾರಿಸಿ ಕೊಡುವ ಹೊಣೆ ಶಿಲ್ಪಾ ಬಯಾಲಾಜಿಕಲ್‌ನದ್ದು. ಲಸಿಕೆಯ ವಿತರಣೆ ಹಾಗೂ ಮಾರಾಟದ ಹೊಣೆ ಡಾ ರೆಡ್ಡೀಸ್ ಕಂಪನಿಯದ್ದು. ಮುಂದಿನ ದಿನಗಳಲ್ಲಿ ಎರಡೂ ಕಂಪನಿಗಳು ಒಟ್ಟಾಗಿ 'ಸ್ಪುಟ್ನಿಕ್ ಲೈಟ್' ಲಸಿಕೆಯನ್ನು ತಯಾರಿಸುವ ಸಾಧ್ಯತೆಗಳ ಬಗ್ಗೆಯೂ ಪರಿಶೀಲನೆ ನಡೆದಿದೆ ಎಂದು ಶಿಲ್ಪಾ ಮೆಡಿಕೇರ್ ಕಂಪನಿಯು ಷೇರು ಮಾರುಕಟ್ಟೆಗೆ ಸೋಮವಾರ ಮಾಹಿತಿ ನೀಡಿದೆ. ಸ್ಪುಟ್ನಿಕ್ ಲೈಟ್ ಕೋವಿಡ್–19 ವಿರುದ್ಧ ನೀಡುವ ಒಂದೇ ಡೋಸ್‌ನ ಲಸಿಕೆ.

'ಲಸಿಕೆ ಉತ್ಪಾದನೆಗೆ ಬೇಕಾದ ಯಂತ್ರೋಪಕರಣಗಳ ಅಳವಡಿಕೆ ಕಾರ್ಯ ನಡೆದಿದೆ. ಮುಂದಿನ ಎರಡು ತಿಂಗಳಲ್ಲಿ ಧಾರವಾಡದ ಬೇಲೂರು ಕೈಗಾರಿಕಾ ಪ್ರದೇಶದಲ್ಲಿರುವ ಘಟಕದಲ್ಲಿ ಲಸಿಕೆ ಉತ್ಪಾದನೆ ಆರಂಭವಾಗಲಿದೆ' ಎಂದು ಮೂಲಗಳು ತಿಳಿಸಿವೆ.

## ಎಂಆರ್‌ಪಿಎಲ್‌ಗೆ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಕಂಪನಿಯು 2020–21ರ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ತೆರಿಗೆ ನಂತರ ₹ 328 ಕೋಟಿ ಲಾಭ ಗಳಿಸಿದೆ. ಆದರೆ, ವಾರ್ಷಿಕವಾಗಿ ₹ 240 ಕೋಟಿ ನಷ್ಟ ಅನುಭವಿಸಿದೆ.

ನಾಲ್ಕನೇ ತ್ರೈಮಾಸಿಕದಲ್ಲಿ ಒಟ್ಟು ₹ 20,788 ಕೋಟಿ ವಹಿವಾಟು ನಡೆದಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ₹ 60,752 ಕೋಟಿ ವಹಿವಾಟು ನಡೆಸಿದ್ದ ಕಂಪನಿ, 2020–21ರಲ್ಲಿ ₹ 51,019 ಕೋಟಿ ವಹಿವಾಟು ನಡೆಸಿದೆ ಎಂದು ಎಂಆರ್‌ಪಿಎಲ್ ಪ್ರಕಟಣೆ ತಿಳಿಸಿದೆ.

ರಕ್ತಸ್ರಾವ ಹಾಗೂ ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆ– ಸರ್ಕಾರ ರಚಿಸಿದ ಸಮಿತಿಯ ಅಧ್ಯಯನದಿಂದ ದೃಢ

# ಕೋವಿಶೀಲ್ಡ್: ಕೆಲವರಿಗಷ್ಟೇ ಅಡ್ಡ ಪರಿಣಾಮ

ನವದೆಹಲಿ (ಪಿಟಿಐ): ಭಾರತದಲ್ಲಿ 'ಕೋವಿಶೀಲ್ಡ್' ಲಸಿಕೆ ಪಡೆದವರಲ್ಲಿ 26 ಮಂದಿ ರಕ್ತಸ್ರಾವ ಹಾಗೂ ರಕ್ತ ಹೆಪ್ಪುಗಟ್ಟುವಿಕೆಯ ಸಮಸ್ಯೆಗೆ ಒಳಗಾಗಿರುವುದು ಕಂಡುಬಂದಿದೆ ಎಂದು ಲಸಿಕೆಯ ಪ್ರತಿಕೂಲ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲು ಸರ್ಕಾರವು ರಚಿಸಿದ್ದ ಸಮಿತಿ (ಎಇಎಫ್‌ಐ) ತಿಳಿಸಿದೆ.

ದೇಶದಲ್ಲಿ ಲಸಿಕಾ ಅಭಿಯಾನ ಆರಂಭಿಸಿದ ನಂತರ ಈವರೆಗೆ 23,000 ಜನರಲ್ಲಿ ಪ್ರತಿಕೂಲ ಪರಿಣಾಮಗಳಾಗಿರುವುದು ಕಂಡುಬಂದಿದೆ. ಅದರಲ್ಲಿ 700 ಮಂದಿಯಲ್ಲಿ ಗಂಭೀರ ಸ್ವರೂಪದ ಸಮಸ್ಯೆಗಳು ಕಾಣಿಸಿವೆ ಎಂದು ಕೇಂದ್ರದ ಆರೋಗ್ಯ ಸಚಿವಾಲಯ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ.

**ಮುಖ್ಯಾಂಶಗಳು**

- ರಕ್ತ ಹೆಪ್ಪುಗಟ್ಟುವ ಪ್ರಕರಣ
- 10 ಲಕ್ಷ ಡೋಸ್‌ಗಳಲ್ಲಿ 0.16ಜನರಲ್ಲಿ ಮಾತ್ರ ಸಮಸ್ಯೆ
- ಕೋವ್ಯಾಕ್ಸಿನ್ ಪಡೆದವರಲ್ಲಿ ಸಮಸ್ಯೆ ಕಾಣಿಸಿಲ್ಲ

ಭಾರತದಲ್ಲಿ ಅತಿ ಕಡಿಮೆ ಎನಿಸುವಷ್ಟು ಆದರೆ, ಅಪಾಯಕಾರಿಯಾದ ಥ್ರಂಬೊಎಂಬಾಲಿಕ್ ಪ್ರಕರಣಗಳು ವರದಿಯಾಗಿವೆ ಎಂದು ಎಇಎಫ್‌ಐ ದಾಖಲೆಗಳು ಹೇಳಿವೆ. ಬ್ರಿಟನ್‌ನಲ್ಲಿ ಇದರ ಪ್ರಮಾಣ ಭಾರತಕ್ಕಿಂತ ಹೆಚ್ಚಾಗಿದೆ. ಅಲ್ಲಿ 10 ಲಕ್ಷ ಡೋಸ್‌ಗಳಲ್ಲಿ



ನಾಲ್ಕು ಜನರಲ್ಲಿ ಈ ಸಮಸ್ಯೆ ಕಾಣಿಸಿಕೊಂಡಿದೆ. ಜರ್ಮನಿಯಲ್ಲಿ ಇದರ ಪ್ರಮಾಣ 10 ಲಕ್ಷದಲ್ಲಿ 10ರಷ್ಟಿದೆ ಎಂದು ಸಚಿವಾಲಯ ತಿಳಿಸಿದೆ.

'ಗಂಭೀರ ಸ್ವರೂಪದ 498 ಪ್ರಕರಣಗಳ ವಿಸ್ತೃತ ಅಧ್ಯಯನವನ್ನು ಎಇಎಫ್‌ಐ ಪೂರ್ಣಗೊಳಿಸಿದೆ. ಅದರಲ್ಲಿ 26 ಪ್ರಕರಣಗಳು ರಕ್ತ ಹೆಪ್ಪುಗಟ್ಟುವಿಕೆಗೆ ಸಂಬಂಧಿಸಿದವುಗಳಾಗಿವೆ. ರಕ್ತನಾಳದಲ್ಲಿ ಹೆಪ್ಪುಗಟ್ಟಿದ ರಕ್ತವು ಆನಂತರ ಸಡಿಲಗೊಂಡು ರಕ್ತದ ಮೂಲಕ ಹರಿದುಹೋಗಿ ಇನ್ನೊಂದು ನಾಳವನ್ನು ಗಾಸಿಗೊಳಿಸುವ ಸಾಧ್ಯತೆ ಇರುವಂಥ (ಥ್ರಂಬೊಎಂಬಾಲಿಕ್) ಪ್ರಕರಣಗಳು ಇವು. ಇಂಥ ಪ್ರಕರಣಗಳ ಪ್ರಮಾಣವು ಭಾರತದಲ್ಲಿ 10 ಲಕ್ಷ ಡೋಸ್‌ಗಳಲ್ಲಿ 0.61ರಷ್ಟಿದೆ. ಕೋವ್ಯಾಕ್ಸಿನ್ ಲಸಿಕೆ ಪಡೆದವರಲ್ಲಿ ಇಂಥ ಪ್ರಕರಣ ಕಂಡುಬಂದಿಲ್ಲ' ಎಂದು ಸಚಿವಾಲಯ ತಿಳಿಸಿದೆ.

ಕೆಲವು ದೇಶಗಳಲ್ಲಿ ಲಸಿಕೆ ನೀಡಿದ ಬಳಿಕ, ವಿಶೇಷವಾಗಿ ಕೋವಿಶೀಲ್ಡ್ ಲಸಿಕೆ ಪಡೆದ ಕೆಲವರಲ್ಲಿ ಸಮಸ್ಯೆಗಳು ಕಾಣಿಸಿಕೊಂಡ ಕಾರಣಕ್ಕೆ ಈ ವಿಚಾರವಾಗಿ ಸಮಗ್ರ ಅಧ್ಯಯನ ನಡೆಸಲು ಮಾರ್ಚ್ 11ರಂದು ಸರ್ಕಾರವು ತೀರ್ಮಾನಿಸಿತ್ತು.

ಏ.3ರವರೆಗಿನ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ 7.54 ಕೋಟಿ ಜನರಿಗೆ ಲಸಿಕೆ ಹಾಕಲಾಗಿದೆ. ಅದರಲ್ಲಿ 6.86 ಕೋಟಿ ಜನರು ಕೋವಿಶೀಲ್ಡ್ ಲಸಿಕೆ ಪಡೆದಿದ್ದಾರೆ. ಇವರಲ್ಲಿ 684 ಜಿಲ್ಲೆಗಳ 23,000 ಮಂದಿಯ ಮೇಲೆ ವ್ಯತಿರಿಕ್ತ ಪರಿಣಾಮ ಆಗಿರುವುದು ಕೊ-ವಿನ್ ವೇದಿಕೆಯಲ್ಲೇ ದಾಖಲಾಗಿದೆ.

ಥ್ರಾಂಬೊಎಂಬಾಲಿಕ್ ಪ್ರಕರಣಗಳು ಸಾಮಾನ್ಯವಾಗಿ ವರದಿಯಾಗುತ್ತಲೇ ಇರುತ್ತವೆ. ಆದರೆ ಯುರೋಪ್‌ಗೆ ಹೋಲಿಸಿದರೆ ದಕ್ಷಿಣ ಹಾಗೂ ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿ ಇದರ ಪ್ರಮಾಣ ಶೇ 70ರಷ್ಟು ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಲಸಿಕೆ ಪಡೆದ 20 ದಿನದೊಳಗೆ ಥ್ರಂಬೊಎಂಬಾಲಿಕ್‌ನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಉಸಿರಾಟದ ಸಮಸ್ಯೆ, ಎದೆಯಲ್ಲಿ ನೋವು, ಕೈ-ಕಾಲುಗಳಲ್ಲಿ ನೋವು, ಅಲ್ಲಲ್ಲಿ ಕೆಂಪು ಕಲೆಗಳು ಕಾಣಿಸುವುದು, ಲಸಿಕೆ ನೀಡಿದ ಜಾಗದಲ್ಲಿ ರಕ್ತ ಹೆಪ್ಪುಗಟ್ಟಿದಂತೆ ಕಾಣಿಸುವುದು, ನಿರಂತರ ಹೊಟ್ಟೆನೋವು ಇವೆಲ್ಲವೂ ಈ ಕಾಯಿಲೆಯ ಲಕ್ಷಣಗಳಾಗಿವೆ. ಈ ವಿಚಾರವಾಗಿ ಲಸಿಕೆ ಪಡೆಯುವವರಲ್ಲಿ ಜಾಗೃತಿ ಮೂಡಿಸುವಂತೆ ಆರೋಗ್ಯ ಕಾರ್ಯಕರ್ತರಿಗೆ ಪ್ರತ್ಯೇಕ ಸಲಹೆಗಳನ್ನು ಜಾರಿ ಮಾಡುವುದಾಗಿ ಆರೋಗ್ಯ ಸಚಿವಾಲಯ ಹೇಳಿದೆ.

## 'ಕೋವಿಡ್ ಬಿಕ್ಕಟ್ಟು ನಿರ್ವಹಿಸುವಲ್ಲಿ ಕೇಂದ್ರ ವಿಫಲ'



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಕೋವಿಡ್–19 ಬಿಕ್ಕಟ್ಟು ನಿರ್ವಹಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಮತ್ತು ಅಗತ್ಯವಿದ್ದಾಗಲೇ ಪ್ರಧಾನಿಯವರು ಕಾಣಿಸಿಕೊಳ್ಳುತ್ತಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

'ಕೇಂದ್ರ ಸರ್ಕಾರ ಜನಪರವಾಗಿಲ್ಲ. ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿಲ್ಲ' ಎಂದು ಅವರು ದೂರಿದ್ದಾರೆ.

ಪಿಎಂ ಕೇರ್ಸ್ ನಿಧಿ ಮೂಲಕ ನೀಡಿರುವ ವೆಂಟಿಲೇಟರ್‌ಗಳ ಕಾರ್ಯನಿರ್ವಹಣೆ ಮತ್ತು ಪ್ರಧಾನಿ ಅವರ ಕಾರ್ಯವೈಖರಿಯನ್ನು ಹೋಲಿಕೆ ಮಾಡಿ ಅವರು ವ್ಯಂಗ್ಯವಾಡಿದ್ದಾರೆ.

ಪಿಎಂ ಕೇರ್ಸ್ ನಿಧಿ ಮೂಲಕ ನೀಡಲಾದ ವೆಂಟಿಲೇಟರ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಪಂಜಾಬ್, ರಾಜಸ್ಥಾನ ಮತ್ತು ಮಹಾರಾಷ್ಟ್ರ ರಾಜ್ಯಗಳು ದೂರಿವೆ.

# ಮೆಕ್ಸಿಕೊದ ಆ್ಯಂಡ್ರಿಯಾ 'ಭುವನ ಸುಂದರಿ'

ಫ್ಲಾರಿಡಾ (ಪಿಟಿಐ): ಅಮೆರಿಕದ ಫ್ಲಾರಿಡಾದಲ್ಲಿ ನಡೆದ ಸೌಂದರ್ಯಸ್ಪರ್ಧೆಯಲ್ಲಿ ಮೆಕ್ಸಿಕೊದ ಆ್ಯಂಡ್ರಿಯಾ ಮೆಜಾ ಅವರು ಭುವನ ಸುಂದರಿಯಾಗಿ ಆಯ್ಕೆಯಾಗಿದ್ದಾರೆ.

ಸ್ಪರ್ಧೆಯಲ್ಲಿ ಭಾರತದ ಆ್ಯಡ್ಲಿನ್ ಕ್ಯಾಸ್ಟಲಿನೊ ಅವರು ಮೂರನೇ ಸ್ಥಾನ ಪಡೆದಿದ್ದಾರೆ. ಬ್ರೆಜಿಲ್‌ನ ಜೂಲಿಯ ಗಾಮಾ ಮೊದಲನೇ ರನ್ನರ್ ಅಪ್ ಆಗಿ, ಪೆರುವಿನ ಜಾನಿಕ್ ಮೆಸಿಟಾ ಅವರು ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾದರು.

ಹಾಲಿವುಡ್‌ನ ಸೆಮಿನೋಲ್ ಹಾರ್ಡ್ ರಾಕ್ ಹೋಟೆಲ್ ಮತ್ತು ಕ್ಯಾಸಿನೊದಲ್ಲಿ ಭಾನುವಾರ ರಾತ್ರಿ ನಡೆದ ಸ್ಪರ್ಧೆಯ 69ನೇ ಆವೃತ್ತಿಯಲ್ಲಿ ಒಟ್ಟು 73 ದೇಶಗಳ ಸ್ಪರ್ಧಿಗಳು ಭಾಗವಹಿಸಿದ್ದರು. ಕಳೆದ ವರ್ಷದ ಅಂತ್ಯದಲ್ಲಿ ನಡೆಯಬೇಕಾಗಿದ್ದ ಸ್ಪರ್ಧೆಯನ್ನು ಕೋವಿಡ್–19 ಕಾರಣಕ್ಕಾಗಿ 2021ರ ಮೇ ತಿಂಗಳಿಗೆ ಮುಂದೂಡಲಾಗಿತ್ತು.

'ಮಿಸ್ ಯೂನಿವರ್ಸ್' ವೆಬ್‌ಸೈಟ್ ಪ್ರಕಾರ, ಮೆಕ್ಸಿಕೊದ ಆ್ಯಂಡ್ರಿಯಾ ಮೆಜಾ ಅವರಿಗೆ ಹಿಂದಿನ ಭುವನ ಸುಂದರಿ ದಕ್ಷಿಣ ಆಫ್ರಿಕಾದ ಜೊಜಿಬಿನಿ ತುನ್ಜಿ ಅವರು ಭುವನ ಸುಂದರಿ ಕಿರೀಟವನ್ನು ತೊಡಿಸಿದರು.

'ಒಂದು ವೇಳೆ ಮೆಕ್ಸಿಕೊದ ನಾಯಕಿ ನೀವಾದರೆ ಈ ಸಾಂಕ್ರಾಮಿಕ ರೋಗದ ಸ್ಥಿತಿಯನ್ನು ಹೇಗೆ ನಿರ್ವಹಿಸುತ್ತೀರಿ' ಎಂದು ಕೇಳಲಾದ ಪ್ರಶ್ನೆಗೆ



ಆ್ಯಂಡ್ರಿಯಾ ಮೆಜಾ

ಆ್ಯಂಡ್ರಿಯಾ, 'ಈ ಸ್ಥಿತಿಯನ್ನು ನಿಭಾಯಿಸಲು ಯಾವುದೇ ಪರಿಪೂರ್ಣ ಮಾರ್ಗವಿಲ್ಲ. ಆದರೆ, ಪರಿಸ್ಥಿತಿ ಇಷ್ಟು ದೊಡ್ಡ ಸ್ವರೂಪ ಪಡೆಯುವ ಮುನ್ನವೇ ಲಾಕ್‌ಡೌನ್ ಜಾರಿಗೆ ತರುತ್ತಿದ್ದೆ. ಏಕೆಂದರೆ ಈಗಾಗಲೇ ನಾವು ಹಲವರನ್ನು ಕಳೆದುಕೊಂಡಿದ್ದೇವೆ. ಆ ಜೀವಗಳನ್ನು ಮರಳಿ ಪಡೆಯಲಾಗದು. ಹಾಗಾಗಿ, ನಮ್ಮ ಜನರ ಸುರಕ್ಷತೆಯನ್ನು ನಾವೇ ಕೈಗೊಳ್ಳಬೇಕು. ಆರಂಭಿಕ ಹಂತದಲ್ಲೇ ಕಾಳಜಿ ವಹಿಸುತ್ತಿದ್ದೆ' ಎಂದು ಉತ್ತರಿಸಿದರು.

ಸೌಂದರ್ಯದ ವ್ಯಾಖ್ಯಾನವೇನು ಎನ್ನುವ ಪ್ರಶ್ನೆಗೆ, 'ನನ್ನ ದೃಷ್ಟಿಯಲ್ಲಿ ಸೌಂದರ್ಯ ಎನ್ನುವುದು ಬರೀ ನೋಡುವ ದೃಷ್ಟಿಕೋನ ಮಾತ್ರವಲ್ಲ, ಅದು ನಮ್ಮ ಹೃದಯದಲ್ಲಿ ಮತ್ತು ನಮ್ಮನ್ನು ನಾವು ನಡೆಸಿಕೊಳ್ಳುವ ರೀತಿಯಲ್ಲಿ ಹೊರಹೊಮ್ಮುವಂಥದ್ದು' ಎಂದು ಆ್ಯಂಡ್ರಿಯಾ ಉತ್ತರಿಸಿದರು.

ಮೂರನೇ ರನ್ನರ್ ಅಪ್ ಆದ ಭಾರತದ ಸುಂದರಿ ಆ್ಯಡ್ಲಿನ್ ಕ್ಯಾಸ್ಟಲಿನೊ ಅವರು, 'ಕೋವಿಡ್ ಎರಡನೇ ಅಲೆಯ ಕಷ್ಟದ ಸಮಯದಲ್ಲಿಯೂ ದೇಶವು ನೀಡಿದ ಬೆಂಬಲ ಮತ್ತು ತೋರಿರುವ ಪ್ರೀತಿಗಾಗಿ ನಾನು ಕೃತಜ್ಞಳಾಗಿರುವೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಮಿಸ್ ದಿವಾ ಯೂನಿವರ್ಸ್ ಇಂಡಿಯಾ' ತನ್ನ ಟ್ವಿಟ್ಟರ್ ಪುಟದಲ್ಲಿ ಆ್ಯಡ್ಲಿನ್ ಅವರಿಗೆ ಅಭಿನಂದನೆ ಸಲ್ಲಿಸಿದೆ.

### ಉಡುಪಿಯ ಆ್ಯಡ್ಲಿನ್ ಮೂರನೇ ರನ್ನರ್‌ಅಪ್

ಉಡುಪಿ: ಭುವನ ಸುಂದರಿ ಸ್ಪರ್ಧೆಯಲ್ಲಿ ಉಡುಪಿಯ ಉದ್ಯಾವರದ ಆ್ಯಡ್ಲಿನ್ ಕ್ಯಾಸ್ಟಲಿನೊ ಮೂರನೇ ರನ್ನರ್‌ಅಪ್ ಪ್ರಶಸ್ತಿ ಪಡೆದರು.

ಮುಂಬೈನಲ್ಲಿ ಈಚೆಗೆ ನಡೆದ ಲಿವಾ ಮಿಸ್ ದಿವಾ ಯೂನಿವರ್ಸ್–2020 ಸ್ಪರ್ಧೆಯಲ್ಲಿ ಆ್ಯಡ್ಲಿನ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದರು. ಉದ್ಯಾವರದ ಕೊರಂಗ್ರಪಾಡಿಯ ಅಲ್ಫೋನ್ಸಸ್ ಕ್ಯಾಸ್ಟಲಿನೊ ಹಾಗೂ ಮೀರಾ ಕ್ಯಾಸ್ಟಲಿನೊ ದಂಪತಿ ಪುತ್ರಿಯಾಗಿರುವ ಆ್ಯಡ್ಲಿನ್ ಮಂಬೈನಲ್ಲಿ ಶಿಕ್ಷಣ ಪಡೆದಿದ್ದು, ನಟನೆ, ಕೊರಿಯೊಗ್ರಫಿಯಲ್ಲಿ ತೊಡಗಿಸಿಕೊಂಡಿದ್ದಾರೆ.





**ಸಂಕ್ಷಿಪ್ತ ಸುದ್ದಿ**

## 'ಗೋ ಮೂತ್ರ ಜೀವ ಉಳಿಸುವ ಔಷಧಿ'



ಭೋಪಾಲ್: 'ದೇಸಿ ಗೋ ಮೂತ್ರದ ಉತ್ಪನ್ನಗಳಿಗೆ ಶ್ವಾಸಕೋಶದ ಸೋಂಕು ಮತ್ತು ಕೊರೊನಾ ವೈರಸ್ ವಿರುದ್ಧ ರಕ್ಷಣೆ ನೀಡುವ ಸಾಮರ್ಥ್ಯವಿದೆ' ಎಂದು ಭೋಪಾಲ್ ಕ್ಷೇತ್ರದ ಬಿಜೆಪಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ಹೇಳಿದ್ದಾರೆ.

ಬೈರಾಗಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕ ಬಳಕೆಗೆ ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ನೀಡಿದ ಬಳಿಕ ಮಾತನಾಡಿದ ಅವರು, 'ನಾನು ಗೋ ಮೂತ್ರವನ್ನು ಸೇವಿಸುತ್ತಿರುವುದರಿಂದ ದೇವರು ನನ್ನನ್ನು ರಕ್ಷಿಸುತ್ತಾನೆ ಎಂದು ನಂಬಿದ್ದೇನೆ. ಗೋ ಮೂತ್ರ ಜೀವವನ್ನು ಉಳಿಸುವ ಔಷಧಿ' ಎಂದರು.

'ನನಗೆ ಹಲವು ಆರೋಗ್ಯ ಸಮಸ್ಯೆಗಳಿವೆ. ಹಾಗಾಗಿ, ಪ್ರತಿದಿನ ಗೋ ಮೂತ್ರ ಸೇವಿಸುತ್ತಿದ್ದು, ಕೊರೊನಾ ವೈರಸ್‌ಗೆ ಬೇರೆ ಯಾವುದೇ ಔಷಧಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ' ಎಂದು ಹೇಳಿದರು.

## ವೃದ್ಧರಿಗೆ ಸಹಾಯವಾಣಿ

ನವದೆಹಲಿ: ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಪರಿಹರಿಸಲು ಕರ್ನಾಟಕ ಸೇರಿದಂತೆ ಐದು ರಾಜ್ಯಗಳಲ್ಲಿ ಕೇಂದ್ರ ಸರ್ಕಾರವು ವೃದ್ಧರಿಗಾಗಿ ಸಹಾಯವಾಣಿಯನ್ನು ಆರಂಭಿಸಿದೆ.

ಸಾಂಕ್ರಾಮಿಕ ರೋಗದ ಸಮಯದಲ್ಲಿ ಹಿರಿಯ ನಾಗರಿಕರ ವಿರುದ್ಧ ನಡೆಯುವ ದೌರ್ಜನ್ಯ ತಡೆಯಲು ಹಾಗೂ ಅವರಿಗೆ ಭಾವನಾತ್ಮಕ ಬೆಂಬಲ ನೀಡುವ ಕೆಲಸವನ್ನೂ ಸಹಾಯವಾಣಿ ಮಾಡಲಿದೆ.

'14567'– ಇದು ಸಹಾಯವಾಣಿಯ ದೂರವಾಣಿ ಸಂಖ್ಯೆಯಾಗಿದ್ದು, ಸಹಾಯವಾಣಿಗೆ 'ಎಲ್ಡರ್‌ಲೈನ್' ಎಂದೂ ಹೆಸರಿಸಲಾಗಿದೆ. 2019ರಲ್ಲಿ ತೆಲಂಗಾಣದಲ್ಲಿ ವೃದ್ಧರಿಗೆ ಸಹಾಯವಾಣಿ ಆರಂಭಿಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ 'ಎಲ್ಡರ್‌ಲೈನ್' ಕಾರ್ಯ ನಿರ್ವಹಿಸಲಿದೆ.

## ಕೇದಾರನಾಥ ಕ್ಷೇತ್ರ: ತೆರೆದ ಬಾಗಿಲು

ಡೆಹ್ರಾಡೂನ್: ಆರು ತಿಂಗಳ ಚಳಿಗಾಲದ ವಿರಾಮದ ಬಳಿಕ ಉತ್ತರಾಖಂಡದ ಕೇದಾರನಾಥ ದೇವಾಲಯದ ಪ್ರವೇಶ ದ್ವಾರವನ್ನು ಸೋಮವಾರ ತೆರೆಯಲಾಗಿದೆ.

ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಕಾರ್ಯಕ್ರಮದಲ್ಲಿ ಸೀಮಿತ ಸಂಖ್ಯೆಯಲ್ಲಿ ಜನರು ಭಾಗಿಯಾಗಿದ್ದರು.

ಈ ವೇಳೆ ಎಲ್ಲಾ ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಲಾಗಿತ್ತು.

# ದೆಹಲಿ ಪೊಲೀಸರ ವಿರುದ್ಧ ಹೈಕೋರ್ಟ್ ಅಸಮಾಧಾನ

## ಕೋವಿಡ್ ಪೀಡಿತರಿಗೆ ನೆರವು: ರಾಜಕಾರಣಿಗಳಿಗೆ ಕ್ಲೀನ್‌ಚಿಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಔಷಧಿ, ವೈದ್ಯಕೀಯ ಆಮ್ಲಜನಕ ಖರೀದಿಸಿ ಕೊರೊನಾ ಪೀಡಿತರಿಗೆ ವಿತರಿಸಲು ರಾಜಕಾರಣಿಗಳಿಗೆ ಯಾವುದೇ ಅಧಿಕಾರವಿಲ್ಲ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತಿತರ ರಾಜಕಾರಣಿಗಳು ಕೊರೊನಾ ಪೀಡಿತರಿಗೆ ನೆರವು ನೀಡುವ ನೆಪದಲ್ಲಿ ಜನಸಾಮಾನ್ಯರಿಗೆ ಔಷಧಿ ದೊರೆಯದ ಸ್ಥಿತಿ ನಿರ್ಮಾಣ ಮಾಡಿದ್ದಾರೆ' ಎಂದು ಆರೋಪಿಸಿ ಡಾ.ದೀಪಕ್ ಸಿಂಗ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ದ್ವಿಸದಸ್ಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಶ್ರೀನಿವಾಸ್ ಮತ್ತಿತರರಿಗೆ ಕ್ಲೀನ್ ಚಿಟ್ ನೀಡಿ ದೆಹಲಿ ಪೊಲೀಸರು ವರದಿ ಸಲ್ಲಿಸಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದೆ.

'ರಾಜಕೀಯ ಪಕ್ಷಗಳು ಸಾಂಕ್ರಾಮಿಕದಿಂದ ತಲೆದೋರಿರುವ ದುಃಸ್ಥಿತಿಯ ಲಾಭ ಪಡೆಯುವಂತಾಗಬಾರದು. ವೈದ್ಯರ ಚೀಟಿ ಇಲ್ಲದೆ ರಾಜಕಾರಣಿಗಳು ಈ ಔಷಧಿ ಖರೀದಿಸಿದ್ದಾದರೂ ಹೇಗೆ' ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ಜಸ್ಮೀತ್ ಸಿಂಗ್ ಅವರಿದ್ದ ಪೀಠವು ಸೋಮವಾರ ನಡೆದ ವಿಚಾರಣೆ ವೇಳೆ ದೆಹಲಿ ಪೊಲೀಸರನ್ನು ಪ್ರಶ್ನಿಸಿತು.

ರಾಜಧಾನಿಯಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದು ಸೇರಿದಂತೆ ಕೋವಿಡ್ ರೋಗಿಗಳಿಗೆ ನೀಡಲಾಗುವ ಔಷಧಿಗಳ ಅಭಾವ ಉಂಟಾಗಿದೆ. ಆದರೂ ಅವುಗಳನ್ನು ಸಂಗ್ರಹಿಸಿ ವಿತರಿಸಿರುವ ರಾಜಕಾರಣಿಗಳ ಬಗ್ಗೆ ಪೊಲೀಸರು ಸಹಾನುಭೂತಿ ವ್ಯಕ್ತಪಡಿಸಿರುವುದು ಸರಿಯಲ್ಲ ಎಂದು ಪೀಠ ಆಕ್ರೋಶ ವ್ಯಕ್ತಪಡಿಸಿದೆ.

'ಇಂಥ ಸೇವೆ ಮಾನವೀಯ ನೆಲೆಗಟ್ಟಿನಲ್ಲಿ ಸಾರ್ವಜನಿಕರಿಗೆ ಒಳ್ಳೆಯದನ್ನು ಮಾಡುವುದು' ಎಂಬುದು ರಾಜಕಾರಣಿಗಳ ಉದ್ದೇಶವಾಗಿದ್ದಲ್ಲಿ, ತಮ್ಮ ಬಳಿ ಇರುವ ಔಷಧಿಯನ್ನು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿ, ಸರ್ಕಾರಿ ಆಸ್ಪತ್ರೆಗಳ ಮೂಲಕ ಜನತೆಗೆ ವಿತರಿಸುವಂತೆ ಕೋರಲಿ ಎಂದು ನ್ಯಾಯಮೂರ್ತಿಗಳು ಹೇಳಿದರು.

ಪೊಲೀಸರು ಮತ್ತೊಮ್ಮೆ ವಿಚಾರಣೆ ನಡೆಸಿ ವಾರದೊಳಗೆ ವರದಿ ಸಲ್ಲಿಸಬೇಕು ಎಂದು ಪೀಠ ಸೂಚಿಸಿತು.

'ಸಮಗ್ರ ವಿಚಾರಣೆ ನಡೆಸಿ ವರದಿ ಸಲ್ಲಿಸಲು 6 ವಾರಗಳ ಸಮಯಾವಕಾಶ ಬೇಕು' ಎಂಬ ಪೊಲೀಸರ ಮನವಿಯನ್ನು ಪೀಠ ತಿರಸ್ಕರಿಸಿತು.

ರಾಜಕಾರಣಿಗಳು ಸಂಗ್ರಹಿಸಿರುವ ಔಷಧಿಯನ್ನು ವಶಕ್ಕೆ ಪಡೆದು ಆರೋಗ್ಯ ಸೇವೆಗಳ ನಿರ್ದೇಶನಾಲಯಕ್ಕೆ ಒಪ್ಪಿಸಬೇಕು ಎಂದೂ ಪೊಲೀಸರಿಗೆ ಸೂಚಿಸಿದ ನ್ಯಾಯಪೀಠ, ಮುಂದಿನ ವಿಚಾರಣೆಯನ್ನು ಮೇ 24ಕ್ಕೆ ನಿಗದಿಪಡಿಸಿತು.

ಆಮ್ ಆದ್ಮಿ ಪಕ್ಷ (ಎಎಪಿ)ದ ಶಾಸಕ ದಿಲೀಪ್ ಪಾಂಡೆ, ಬಿಜೆಪಿಯ ದೆಹಲಿ ಘಟಕದ ವಕ್ತಾರ ಹರೀಶ್ ಖುರಾನಾ, ಬಿಜೆಪಿ ಸಂಸದ ಗೌತಮ್ ಗಂಭೀರ್, ಬಹುಜನ ಸಮಾಜ ಪಕ್ಷ (ಬಿಎಸ್‌ಪಿ)ದ ಮಾಜಿ ಸಂಸದ ಶಾಹಿದ್ ಸಿದ್ದಿಕ್, ಕಾಂಗ್ರೆಸ್ ಮುಖಂಡ ಅನಿಲ್‌ಕುಮಾರ್ ಚೌಧರಿ ಮತ್ತಿತರರನ್ನು ವಿಚಾರಣೆಗೆ ಒಳಪಡಿಸಿದ್ದ ಪೊಲೀಸರು, 'ರಾಜಕಾರಣಿಗಳು ಯಾವುದೇ ರೀತಿಯ ಲಾಭದ ಉದ್ದೇಶದಿಂದ ಔಷಧಿ ವಿತರಿಸಿಲ್ಲ' ಎಂಬ ವರದಿ ಸಲ್ಲಿಸಿದ್ದರು.

ಕಾಂಗ್ರೆಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ದೆಹಲಿಯ ಮಾಜಿ ಶಾಸಕ ಮುಖೇಶ್ ಶರ್ಮಾ ವಿರುದ್ಧವೂ ಸಿಂಗ್ ಆರೋಪ ಹೊರಿಸಲಾಗಿತ್ತು.

## ಮೋದಿ ವಿರುದ್ಧ ಟೀಕೆ: ಎಫ್‌ಐಆರ್ ಕೈಬಿಡಲು ಮನವಿ

ನವದೆಹಲಿ(ಪಿಟಿಐ): ಕೋವಿಡ್–19 ವಿರುದ್ಧ ಲಸಿಕಾ ಅಭಿಯಾನಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಹಾಕಿದ್ದವರ ವಿರುದ್ಧ ಹಾಕಿರುವ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್ ಅರ್ಜಿ ಸಲ್ಲಿಸಲಾಗಿದೆ.

ವಕೀಲ ಪ್ರದೀಪ್ ಕುಮಾರ್ ಯಾದವ್ ಎಂಬುವರು ಈ ಅರ್ಜಿ ಸಲ್ಲಿಸಿದ್ದು, ಕೋವಿಡ್–19 ಪೋಸ್ಟರ್‌ಗಳು, ಜಾಹೀರಾತು, ಕರಪತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳಲ್ಲೂ ಎಫ್‌ಐಆರ್ ದಾಖಲಿಸದಂತೆ ದೆಹಲಿ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಬೇಕೆಂದೂ ಅರ್ಜಿಯಲ್ಲಿ ಕೋರಲಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಕೋವಿಡ್‌ಗೆ ಸಂಬಂಧಿಸಿದಂತೆ ಮಾಡಲಾದ ಪೋಸ್ಟ್‌ಗಳಿಗೆ ಸಂಬಂಧಿಸಿ ದೆಹಲಿಯಲ್ಲೇ 25 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಅರ್ಜಿದಾರರಿಗೆ ಒದಗಿಸುವಂತೆ ದೆಹಲಿ ಪೊಲೀಸರಿಗೆ ನಿರ್ದೇಶನ ನೀಡುವಂತೆ ಕೋರಿದ್ದಾರೆ.

# ಭೀಮಾ ಕೋರೆಗಾಂವ್ ಪ್ರಕರಣ ಆರೋಪಿಗಳ ಬಿಡುಗಡೆಗೆ ಆಗ್ರಹ

## ಬಂಧಿತ ಪ್ರೊ.ಹನಿ ಬಾಬು ಕುಟುಂಬದವರಿಂದ ಬಹಿರಂಗ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೀಮಾ ಕೋರೆಗಾಂವ್- ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಬಂಧಿತರಾಗಿರುವ 16 ಜನರನ್ನು ಕೂಡಲೇ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು' ಎಂದು ಈ ಪ್ರಕರಣದಲ್ಲಿ ಬಂಧಿತರಾಗಿರುವ ಪ್ರೊ. ಹನಿ ಬಾಬು ಅವರ ಕುಟುಂಬದವರು ಮನವಿ ಮಾಡಿದ್ದಾರೆ.

ಈ ಬಗ್ಗೆ ಬಹಿರಂಗ ಪತ್ರ ಬರೆದಿರುವ ಕುಟುಂಬದವರು, '2018ರಿಂದ ಈ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಬಂಧಿತರಲ್ಲಿ ಒಬ್ಬರ ವಿರುದ್ಧವೂ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಆರೋಪಪಟ್ಟಿ ಸಲ್ಲಿಸಿಲ್ಲ. ಆರೋಪಿಗಳಿಂದ ಕಲೆಹಾಕಿರುವ ಭೌತಿಕ ಸಾಕ್ಷ್ಯಗಳು, ಕಂಪ್ಯೂಟರ್- ಲ್ಯಾಪ್‌ಟಾಪ್- ಹಾರ್ಡ್‌ಡಿಸ್ಕ್‌ಗಳ ನಕಲು ಪ್ರತಿಯನ್ನು, ಆರೋಪಿಗಳ ವಕೀಲರಿಗೆ ನೀಡುತ್ತಿಲ್ಲ. ಇದು ಆರೋಪಿಗಳ ಮೂಲಭೂತ ಹಕ್ಕಿನ ಉಲ್ಲಂಘನೆ' ಎಂದು ಆರೋಪಿಸಿದ್ದಾರೆ.

'ಬಂಧಿತರಿಂದ ಸಂಗ್ರಹಿಸಿರುವ ಭೌತಿಕ ಸಾಕ್ಷ್ಯಗಳ ಪ್ರತಿಗಳನ್ನು ವಕೀಲರಿಗೆ ನೀಡಲು ನ್ಯಾಯಾಲಯವು ಸೂಚಿಸಬೇಕು. ಆಗ ಆ ಸಾಕ್ಷ್ಯಗಳು ಸಾಚಾ ಆಗಿವೆಯೇ ಅಥವಾ ಅವುಗಳನ್ನು ತಿರುಚಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ತಕ್ಷಣವೇ ನ್ಯಾಯಾಲಯವು ಈ ಸಂಬಂಧ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಮನವಿ ಮಾಡಿದ್ದಾರೆ.

'ಯಾವುದೇ ನಿಯಮ ಪಾಲಿಸದೆ ಹನಿ ಬಾಬು ಅವರನ್ನು ಬಂಧಿಸಲಾಗಿದೆ. ಅವರ ಕಂಪ್ಯೂರ್ ಹಾಗೂ ಪುಸ್ತಕಗಳನ್ನು ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಅವೆಲ್ಲವನ್ನೂ ತನಿಖಾಧಿಕಾರಿಗಳು ತಿರುಚಿರುವ ಸಾಧ್ಯತೆ ಇದೆ. ಹೀಗಾಗಿಯೇ ಈ ಸಾಕ್ಷ್ಯಗಳನ್ನು ನ್ಯಾಯಲಾಯಕ್ಕೆ ಸಲ್ಲಿಸುತ್ತಿಲ್ಲ. ಅವುಗಳ ಪ್ರತಿಯನ್ನು ನಮಗೆ ನೀಡುತ್ತಲೂ ಇಲ್ಲ. ಬಂಧಿತರ ವಿರುದ್ಧ ಸಾಕ್ಷ್ಯಗಳನ್ನು ಹೇಳಿ ಎಂದು ತನ್ನ ಮೇಲೆ ತನಿಖಾಧಿಕಾರಿಗಳು ಒತ್ತಡ ಹೇರಿದ್ದರು ಎಂದು ಸ್ವತಃ ಹನಿ ಬಾಬು ಅವರೇ ನಮಗೆ ತಿಳಿಸಿದ್ದಾರೆ. ಎಲ್ಲಾ ಬಂಧಿತರ ಮೇಲೂ ಈ ರೀತಿ ಒತ್ತಡ ಹೇರಲಾಗಿದೆ ಎಂದಿದ್ದಾರೆ.

'ಜೈಲುಗಳಲ್ಲೂ ಕೋವಿಡ್ ಪ್ರಕರಣಗಳು ತೀವ್ರವಾಗುತ್ತಿವೆ. ಹಲವು ದೇಶಗಳು ತಮ್ಮ ರಾಜಕೀಯ ಕೈದಿಗಳನ್ನು ಕೋವಿಡ್‌ನ ಕಾರಣಕ್ಕೆ ಬಿಡುಗಡೆ ಮಾಡಿವೆ. ಈ ಪ್ರಕರಣದಲ್ಲೂ ಬಂಧಿತರನ್ನು ಅವರ ಆರೋಗ್ಯದ ದೃಷ್ಟಿಯಿಂದ ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯವನ್ನು ಕೇಳಿಕೊಳ್ಳುತ್ತೇವೆ' ಎಂದು ಮನವಿ ಮಾಡಿಕೊಳ್ಳಲಾಗಿದೆ.

## 'ಖಾಸಗಿತನ: ವಾಟ್ಸ್‌ಆ್ಯಪ್ ನೀತಿ ಕಾಯ್ದೆಯ ಉಲ್ಲಂಘನೆ'

ನವದೆಹಲಿ (ಪಿಟಿಐ): 'ಖಾಸಗಿತನ ಕುರಿತ ವಾಟ್ಸ್‌ಆ್ಯಪ್‌ನ ನೂತನ ನೀತಿಯು ಭಾರತದ ಮಾಹಿತಿ ತಂತ್ರಜ್ಞಾನ (ಐ.ಟಿ) ಕಾಯ್ದೆ ಮತ್ತು ನಿಯಮಗಳ ಉಲ್ಲಂಘನೆಯಾಗಿದೆ. ಈ ಬಗ್ಗೆ ಸ್ಪಷ್ಟನೆ ನೀಡುವಂತೆ ವಾಟ್ಸ್‌ಆ್ಯಪ್ ಜಾಲತಾಣ ಸಂಸ್ಥೆಗೆ ನಿರ್ದೇಶನ ನೀಡಬೇಕು' ಎಂದು ಕೇಂದ್ರ ಸರ್ಕಾರ ದೆಹಲಿ ಕೋರ್ಟ್‌ಗೆ ಕೋರಿದೆ.

ಮುಖ್ಯನ್ಯಾಯಮೂರ್ತಿ ಡಿ.ಎನ್.ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರಿದ್ದ ಪೀಠದೆದುರು ಈ ನಿಲುವು ತಿಳಿಸಿದ ಕೇಂದ್ರ ಸರ್ಕಾರ, ಖಾಸಗಿತನ ನೀತಿಯು ಮೇ 15ರಿಂದ ಜಾರಿಗೆ ಬಂದಿದೆ ಎಂದು ಹೇಳಿದೆ. ವಾಟ್ಸ್‌ಆ್ಯಪ್‌ನ ನೂತನ ನೀತಿಯನ್ನು ಪ್ರಶ್ನಿಸಿರುವ ವಿವಿಧ ಅರ್ಜಿಗಳ ವಿಚಾರಣೆಯನ್ನು ಈ ಪೀಠ ನಡೆಸುತ್ತಿದೆ.

ಪೀಠಕ್ಕೆ ತನ್ನ ಅಭಿಪ್ರಾಯ ತಿಳಿಸಿದ ವಾಟ್ಸ್‌ಆ್ಯಪ್, ನೂತನ ನೀತಿಯು ಮೇ 15ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿದೆ. ಆದರೆ, ನೀತಿಯನ್ನು ಒಪ್ಪದ ಯಾವುದೇ ಬಳಕೆದಾರರ ಖಾತೆಗಳನ್ನು ನಾವು ತೆಗೆದುಹಾಕಿಲ್ಲ ಎಂದು ಸ್ಪಷ್ಟಪಡಿಸಿತು. ಇದಕ್ಕಾಗಿ ಏಕರೂಪದ ಸಮಯ ನಿಗದಿಪಡಿಸಿ. ಪ್ರತಿ ಖಾತೆಯನ್ನು ಪ್ರತ್ಯೇಕವಾಗಿ ಪರಿಗಣಿಸಿ ಕೈಬಿಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ತಿಳಿಸಿತು.

## ರೈಲ್ವೆಯಿಂದ 10 ಸಾವಿರ ಟನ್ ದ್ರವೀಕೃತ ಆಮ್ಲಜನಕ ಸಾಗಣೆ

ನವದೆಹಲಿ: ಭಾರತೀಯ ರೈಲ್ವೆಯು ಒಟ್ಟು ಹತ್ತು ಸಾವಿರ ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕವನ್ನು (ಎಲ್‌ಎಂಒ) ವಿವಿಧ ರಾಜ್ಯಗಳಿಗೆ ತಲುಪಿಸುವ ಮೂಲಕ ಮೈಲಿಗಲ್ಲು ಸಾಧಿಸಿದೆ ಎಂದು ರೈಲ್ವೆ ಮಂಡಳಿ ಅಧ್ಯಕ್ಷ ಸುನೀತ್ ಶರ್ಮಾ ಹೇಳಿದರು.

ದೇಶದಲ್ಲಿ ಕೊರೊನಾ ಸೋಂಕಿನ ಎರಡನೇ ಅಲೆ ತೀವ್ರಗೊಂಡ ನಂತರ ಏ.19ರಿಂದ ಈವರೆಗೆ 13 ರಾಜ್ಯಗಳಿಗೆ 600ಕ್ಕೂ ಹೆಚ್ಚು ಟ್ಯಾಂಕರ್‌ಗಳಲ್ಲಿ 10,300 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕ ತಲುಪಿಸಲಾಗಿದೆ ಎಂದರು.

ಕಳೆದ ಕೆಲವು ದಿನಗಳಿಂದ 'ಆಕ್ಸಿಜನ್ ಎಕ್ಸ್‌ಪ್ರೆಸ್' ರೈಲುಗಳು ಪ್ರತಿದಿನ ಸುಮಾರು 800 ಟನ್ ವೈದ್ಯಕೀಯ ಆಮ್ಲಜನಕ ಸಾಗಿಸುತ್ತಿವೆ ಎಂದು ಮಾಹಿತಿ ನೀಡಿದರು.

ಕರ್ನಾಟಕಕ್ಕೆ 361, ದೆಹಲಿಗೆ 3,734, ಉತ್ತರ ಪ್ರದೇಶಕ್ಕೆ 2,652, ಮಹಾರಾಷ್ಟ್ರಕ್ಕೆ 521 ಟನ್, ಮಧ್ಯಪ್ರದೇಶಕ್ಕೆ 431, ಹರಿಯಾಣಕ್ಕೆ 1,290, ತೆಲಂಗಾಣಕ್ಕೆ 564, ಟನ್ ಆಮ್ಲಜನಕ ತಲುಪಿಸಲಾಗಿದೆ ಎಂದರು.

**4.32 ಲಕ್ಷ ಸಿಬ್ಬಂದಿಗೆ ಲಸಿಕೆ:** ಈವರೆಗೆ 4.32 ಲಕ್ಷ ರೈಲ್ವೆ ಸಿಬ್ಬಂದಿಗೆ ಲಸಿಕೆ ಹಾಕಲಾಗಿದ್ದು, ಬಾಕಿ ಸಿಬ್ಬಂದಿಗೆ ತ್ವರಿತವಾಗಿ ಲಸಿಕೆ ಒದಗಿಸುವ ಸಲುವಾಗಿ ನಾವು ರಾಜ್ಯ ಸರ್ಕಾರಗಳೊಂದಿಗೆ ಸಂಪರ್ಕದಲ್ಲಿದ್ದೇವೆ ಎಂದು ಸುನೀತ್ ಶರ್ಮಾ ತಿಳಿಸಿದ್ದಾರೆ.

## 'ಸ್ಪುಟ್ನಿಕ್ ವಿ' ಲಸಿಕೆ ಅಭಿಯಾನ ಆರಂಭ

ನವದೆಹಲಿ (ಪಿಟಿಐ): ದೇಶದಲ್ಲಿ 'ಸ್ಪುಟ್ನಿಕ್ ವಿ' ಲಸಿಕೆ ಅಭಿಯಾನ ಆರಂಭಿಸಲು ಡಾ.ರೆಡ್ಡೀಸ್ ಲ್ಯಾಬೊರೇಟರಿಸ್ ಮತ್ತು ಅಪೊಲೊ ಹಾಸ್ಪಿಟಲ್ಸ್ ಸೋಮವಾರ ಸಹಭಾಗಿತ್ವವನ್ನು ಪ್ರಕಟಿಸಿವೆ.

ಲಸಿಕೆಯ ಅಭಿಯಾನದ ಮೊದಲ ಹಂತವು ಹೈದರಾಬಾದ್‌ನಲ್ಲಿ ಸೋಮವಾರ ಆರಂಭವಾಗಿದ್ದು, ವಿಶಾಖಪಟ್ಟಣಂನಲ್ಲಿ ಮಂಗಳವಾರ (ಮೇ 18) ಆರಂಭವಾಗಲಿದೆ. ಕೋ-ವಿನ್ ಆ್ಯಪ್‌ನಲ್ಲಿ ನೋಂದಣಿ ಸೇರಿದಂತೆ ಸರ್ಕಾರ ಪ್ರಕಟಿಸಿರುವ ಮಾರ್ಗದರ್ಶಿ ನಿಯಮಗಳ ಅನುಸಾರವೇ ಅಭಿಯಾನ ನಡೆಯಲಿದೆ.

ಅಪೊಲೊ ಹಾಸ್ಪಿಟಲ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಸಂಗೀತಾ ರೆಡ್ಡಿ ಅವರು, ಆಸ್ಪತ್ರೆ ಸಮೂಹಕ್ಕೆ ಮುಂದಿನ ಒಂದು ತಿಂಗಳಲ್ಲಿ 10 ಲಕ್ಷ ಡೋಸ್ ಲಸಿಕೆ ಲಭ್ಯವಾಗಲಿದೆ ಎಂದು ತಿಳಿಸಿದರು.

# ಟಿಎಂಸಿ ಮುಖಂಡರ ಬಂಧನ

ಒಂದನೇ ಪುಟದಿಂದ..

ಸುದ್ದಿ ತಿಳಿಯುತ್ತಿದ್ದಂತೆ ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿ ಟಿಎಂಸಿಯ ನೂರಾರು ಕಾರ್ಯಕರ್ತರು ಸಿಬಿಐ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ. ಸಿಬಿಐ ಕಚೇರಿಯ ಮೇಲೆ ಕಲ್ಲು ತೂರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೂಗ್ಲಿ, ಉತ್ತರ 24ಪರಗಣ, ದಕ್ಷಿಣ 24ಪರಗಣ ಜಿಲ್ಲೆಗಳಲ್ಲಿ ಹಲವೆಡೆ ರಸ್ತೆಗಳಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಸಂಚಾರವನ್ನು ತಡೆದಿದ್ದಾರೆ.

'ಬೆಳಿಗ್ಗೆ 11 ಗಂಟೆಯ ವೇಳೆಗೆ ಸಿಬಿಐ ಕಚೇರಿಗೆ ಬಂದ ಮಮತಾ ಅವರು, ನಾನು ಈ ಕಚೇರಿಯನ್ನು ಬಿಟ್ಟು ಹೋಗಬೇಕು ಎಂದು ನೀವು ಬಯಸುವುದಾದರೆ, ನನ್ನನ್ನು ಬಂಧಿಸಲೇಬೇಕು ಎಂದು ಅಧಿಕಾರಿಗಳನ್ನು ಒತ್ತಾಯಿಸಿದ್ದರು' ಎಂದು ಸಿಬಿಐ ಮೂಲಗಳು ತಿಳಿಸಿವೆ. 'ಹೈಕೋರ್ಟ್ ಈ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಸಿಬಿಐಗೆ ವಹಿಸಿದೆ. ಮಮತಾ ಅವರ ಕ್ರಮವು ನಮ್ಮ ಕೆಲಸದಲ್ಲಿ ನಡೆಸಿದ ಹಸ್ತಕ್ಷೇಪವಾಗಿದೆ' ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ಸಿಬಿಐ ಕಚೇರಿಯಿಂದ ಹೊರ ಹೋದ ನಂತರವೂ ಕೆಲವು ಗಂಟೆಗಳ ಕಾಲ ಮಮತಾ ಅವರು ಧರಣಿ ನಡೆಸಿದ್ದಾರೆ. ಪಕ್ಷದ ಕೆಲವು ಶಾಸಕರು, ಮುಖಂಡರು ಅವರ ಜೊತೆಗಿದ್ದರು.

**ಜಾಮೀನು:** ಬಂಧನಕ್ಕೊಳಗಾದ ನಾಲ್ವರು ನಾಯಕರಿಗೆ ಸಿಬಿಐ ವಿಶೇಷ ನ್ಯಾಯಾಲಯವು ಸಂಜೆ ಜಾಮೀನು ನೀಡಿದೆ. ಈ ಜಾಮೀನಿಗೆ ಕೋಲ್ಕತ್ತ ಹೈಕೋರ್ಟ್ ವಿಭಾಗೀಯ ಪೀಠ ಸೋಮವಾರ ರಾತ್ರಿ ತಡೆಯಾಜ್ಞೆ ನೀಡಿದೆ.

**ಕಾನೂನು ಪರಿಹಾರ ಕಂಡುಕೊಳ್ಳಿ:** 'ಸಿಬಿಐಯ ಕೆಲಸಗಳಿಗೆ ಅಡ್ಡಿಪಡಿಸುವ ಬದಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಮಸ್ಯೆಗೆ ಕಾನೂನು ಮಾರ್ಗದಲ್ಲಿ ಪರಿಹಾರ ಕಂಡುಕೊಳ್ಳಬೇಕು' ಎಂದು ಬಿಜೆಪಿ ಸಲಹೆ ನೀಡಿದೆ.

ಸಚಿವರು ಮತ್ತು ಶಾಸಕರ ಬಂಧನವನ್ನು ವಿರೋಧಿಸಿ ವಿವಿಧೆಡೆ ಪ್ರತಿಭಟನೆ ನಡೆಸಿದ ಟಿಎಂಸಿ ಕಾರ್ಯಕರ್ತರ ಕ್ರಮವನ್ನು ಬಿಜೆಪಿ ಖಂಡಿಸಿದೆ. 'ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡುವುದಾಗಿ ಪ್ರಮಾಣ ವಚನ ಸ್ವೀಕರಿಸಿರುವ ಮುಖ್ಯಮಂತ್ರಿಯೇ ಕಾನೂನು ಜಾರಿ ಸಂಸ್ಥೆಯ ಅಧಿಕಾರಿಗಳಿಗೆ ಬೆದರಿಕೆ ಹಾಕುತ್ತಿರುವುದು ಮತ್ತು ತನಿಖೆಗೆ ಅಡ್ಡಿಪಡಿಸುತ್ತಿರುವುದು ಬೇಸರದ ವಿಚಾರ' ಎಂದು ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಟ್ವೀಟ್ ಮಾಡಿದ್ದಾರೆ.

**ಹಿನ್ನೆಲೆ:** ನಾರದ ಟಿ.ವಿ ವಾಹಿನಿಯ ಪತ್ರಕರ್ತ ಮ್ಯಾಥ್ಯು ಸಾಮ್ಯುಯಲ್ 2014ರಲ್ಲಿ ಮಾರುವೇಷದ ಕಾರ್ಯಾಚರಣೆ ನಡೆಸಿ, ಟಿಎಂಸಿ ಮುಖಂಡರನ್ನು ಹೋಲುವ ನಾಲ್ವರು ಲಂಚ ಪಡೆಯುತ್ತಿರುವ ವಿಡಿಯೊ ಸೆರೆಹಿಡಿದಿದ್ದರು. 2016ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ವೇಳೆ ಇದು ಬಹಿರಂಗವಾಗಿತ್ತು. ವಿಡಿಯೊದಲ್ಲಿ ಇರುವವರು ಟಿಎಂಸಿ ಸಚಿವರಾದ ಫಿರ್ಹಾದ್ ಹಕೀಮ್, ಸುಬ್ರತ ಮುಖರ್ಜಿ, ಶಾಸಕ ಮದನ್ ಮಿತ್ರ ಮತ್ತು ಸೋವನ್ ಮುಖರ್ಜಿ ಎಂದು ಪರಿಗಣಿಸಿ, ಅವರ ವಿರುದ್ಧ ಆರೋಪ ಹೊರಿಸಲಾಗಿತ್ತು.

# 'ವಿಶೇಷ ಪ್ಯಾಕೇಜ್ ಚರ್ಚಿಸಿ ತೀರ್ಮಾನ'

ಒಂದನೇ ಪುಟದಿಂದ...

'ಸಕಾಲಕ್ಕೆ ತಲುಪುವಂತೆ ನೋಡಿಕೊಳ್ಳಬೇಕು. ತುರ್ತು ಸಂದರ್ಭಗಳಲ್ಲಿ ಪಕ್ಕದ ಜಿಲ್ಲೆಗಳ ಜತೆ ಸಮನ್ವಯ ಸಾಧಿಸಿ ಕೆಲಸ ಮಾಡಬೇಕು ಎಂದೂ ಸಲಹೆ ನೀಡಿದರು.

ಪರಿಸ್ಥಿತಿಯ ಗಂಭೀರತೆಗೆ ಅನುಗುಣವಾಗಿ ನಿರ್ಬಂಧಗಳನ್ನು ಇನ್ನಷ್ಟು ಕಠಿಣಗೊಳಿಸಬಹುದು. ಅದಕ್ಕೆ ಮುನ್ನ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಹೋಂ ಐಸೊಲೇಷನ್‌ಗೆ ಸೂಕ್ತ ಸೌಲಭ್ಯ ಇಲ್ಲದಿದ್ದರೆ, ಪಿಎಚ್‌ಸಿಗಳು, ವಸತಿ ಶಾಲೆಗಳು ಮತ್ತು ಸಮುದಾಯ ಭವನಗಳನ್ನು ಕೋವಿಡ್ ಕೇರ್ ಸೆಂಟರ್ ಆಗಿ ಪರಿವರ್ತಿಸಬೇಕು ಎಂದು ಹೇಳಿದರು.

**ಲಾಕ್‌ಡೌನ್ ವಿಸ್ತರಣೆಗೆ ಒತ್ತಡ:** ಸಭೆಯಲ್ಲಿ ಹಲವು ಸಚಿವರು ತಮ್ಮ ಜಿಲ್ಲೆಗಳ ಸಮಸ್ಯೆಯನ್ನು ಮುಖ್ಯಮಂತ್ರಿ ಗಮನಕ್ಕೆ ತಂದರಲ್ಲದೆ, ಲಾಕ್‌ಡೌನ್ ವಿಸ್ತರಣೆ ಮಾಡುವುದು ಸೂಕ್ತ. ಇದರಿಂದ ಕೋವಿಡ್ ನಿಯಂತ್ರಣಕ್ಕೆ ತರಬಹುದು ಎಂದು ಪ್ರತಿಪಾದಿಸಿದರು.

ಬಿಬಿಎಂಪಿ ಅಧಿಕಾರಿಗಳೂ ಲಾಕ್‌ಡೌನ್ ವಿಸ್ತರಣೆಗೆ ಮುಖ್ಯಮಂತ್ರಿಯವರಿಗೆ ಸಲಹೆ ನೀಡಿದ್ದು, ಲಾಕ್‌ಡೌನ್ ವಿಸ್ತರಿಸುವ ಬಗ್ಗೆ ಅವರು ಒಲವು ಹೊಂದಿದ್ದಾರೆ. ಇನ್ನೂ ಕಠಿಣ ನಿಯಮಗಳನ್ನು ಹೇರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಗಾಜಾ ಪಟ್ಟಿಯ ಹಲವಡೆ ಇಸ್ರೇಲ್ ವೈಮಾನಿಕ ದಾಳಿ: 15 ಕಿ.ಮೀ. ಉದ್ದದ ಸುರಂಗ ನಾಶ

# ಉಗ್ರಗಾಮಿ ಸಂಘಟನೆ ಕಮಾಂಡರ್ ಹತ್ಯೆ

ಗಾಜಾ ನಗರ(ಎಪಿ, ರಾಯಿಟರ್ಸ್): ಇಸ್ರೇಲ್ ಸೇನೆ ಸೋಮವಾರ ಬೆಳಿಗ್ಗೆ ಗಾಜಾ ಪಟ್ಟಿಯ ವಿವಿಧೆಡೆ ಭಾರಿ ವೈಮಾನಿಕ ದಾಳಿ ನಡೆಸಿದ್ದು, ಉಗ್ರರ ರಕ್ಷಣೆಗೆ ನಿರ್ಮಿಸಿದ್ದ 15 ಕಿಲೋ ಮೀಟರ್ ಉದ್ದದ ಸುರಂಗ ಮತ್ತು ಹಮಸ್‌ನ ಒಂಬತ್ತು ಕಮಾಂಡರ್‌ಗಳ ಮನೆಗಳನ್ನು ನಾಶಪಡಿಸಿದೆ.

ಈ ವೈಮಾನಿಕ ದಾಳಿಯಲ್ಲಿ ಇಸ್ಲಾಮಿಕ್ ಜಿಹಾದ್ ಉಗ್ರಗಾಮಿ ಸಂಘಟನೆಯ ಕಮಾಂಡರ್ ಹಸ್ಸಾಮ್ ಅಬು ಹರ್‌ಬೀದ್ ಹತ್ಯೆಯಾಗಿದ್ದಾನೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಇಸ್ರೇಲ್ ನಾಗರಿಕರ ಮೇಲೆ ನಡೆಸಿದ ಕ್ಷಿಪಣಿ ದಾಳಿಗಳಲ್ಲಿ ಈತನ ಕೈವಾಡವಿತ್ತು. ಈತ ಕಳೆದ 15 ವರ್ಷಗಳಿಂದ ಇಸ್ಲಾಮಿಕ್ ಜಿಹಾದ್ ಸಂಘಟನೆಯ ಕಮಾಂಡರ್ ಆಗಿದ್ದ ಎಂದು ತಿಳಿಸಿದೆ.

ಈ ಹತ್ಯೆಗೆ ಪ್ರತೀಕಾರ ತೀರಿಸಿಕೊಳ್ಳಲು ಉಗ್ರಗಾಮಿ ಸಂಘಟನೆಯು ಪ್ರತಿದಾಳಿ ನಡೆಸಿದೆ. ಇಸ್ರೇಲ್‌ನ ಅಶ್ದೋದ್ ನಗರದ ಮೇಲೆ ರಾಕೆಟ್ ದಾಳಿ ನಡೆಸಿದ್ದು, ಹಲವರು ಗಾಯಗೊಂಡಿದ್ದಾರೆ.

ಉಗ್ರರ 35 ಸ್ಥಳಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸಲಾಗಿದೆ. 'ಮೆಟ್ರೊ' ಎಂದು ಕರೆಯಲಾಗುವ ಸುರಂಗಗಳನ್ನು ವಾಯು ದಾಳಿಯಿಂದ ರಕ್ಷಿಸಿಕೊಳ್ಳಲು ನಿರ್ಮಿಸಿಕೊಳ್ಳಲಾಗಿತ್ತು ಎಂದು ಇಸ್ರೇಲ್ ತಿಳಿಸಿದೆ.



ಗಾಜಾ ನಗರದಲ್ಲಿ ಇಸ್ರೇಲ್ ನಡೆಸಿದ ವಾಯು ದಾಳಿಗೆ ಹಾನಿಗೊಳಗಾಗಿರುವ ಕಟ್ಟಡಗಳ ಅವಶೇಷಗಳು ರಾಯಿಟರ್ಸ್ ಚಿತ್ರ

ಸಂಘರ್ಷ ಆರಂಭವಾದ ತಕ್ಷಣ ಹಮಸ್ ಸಂಘಟನೆಯ ನಾಯಕರು ಭೂಗತರಾಗುತ್ತಾರೆ. ಹೀಗಾಗಿ, ದಾಳಿ ನಡೆದ ಸಂದರ್ಭದಲ್ಲಿ ಇವರು ಮನೆಗಳಲ್ಲಿ ಇರುವ ಸಾಧ್ಯತೆಗಳು ಕಡಿಮೆ ಎಂದು ಹೇಳಲಾಗಿದೆ.

ಈ ದಾಳಿಯಲ್ಲಿ ತನ್ನ ಸಂಘಟನೆಯ ಕನಿಷ್ಠ 20 ಮಂದಿ ಸಾವಿಗೀಡಾಗಿದ್ದಾರೆ ಎಂದು ಹಮಸ್ ತಿಳಿಸಿದೆ.

ಗಾಜಾ ನಗರದಲ್ಲಿ ಮೂರು ಅಂತಸ್ತಿನ ಕಟ್ಟಡಕ್ಕೆ ಅಪಾರ ಹಾನಿಯಾಗಿದೆ. ಈ ಕಟ್ಟಡದ ಮೇಲೆ ದಾಳಿ ಮಾಡುವ 10 ನಿಮಿಷಕ್ಕೆ ಮೊದಲು ಸೇನೆ ಎಚ್ಚರಿಕೆ ನೀಡಿತ್ತು. ಹೀಗಾಗಿ, ಎಲ್ಲರೂ ಕಟ್ಟಡದಿಂದ ಹೊರಗೆ ಬಂದಿದ್ದರು ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.

'ದಾಳಿಯಿಂದ ರಸ್ತೆಗಳು ಮತ್ತು ಹಲವು ಕಟ್ಟಡಗಳಿಗೆ ಅಪಾರ ಹಾನಿಯಾಗಿದೆ. ಇದೇ ರೀತಿ ಸಂಘರ್ಷ ಮುಂದುವರಿದರೆ ಪರಿಸ್ಥಿತಿ ತೀವ್ರ ಹದಗೆಡಲಿದೆ' ಎಂದು ಗಾಜಾ ಮೇಯರ್ ಯಾಹ್ಯಾ ಸರ್ರಾಜ್ ಕಳವಳ ವ್ಯಕ್ತಪಡಿಸಿದ್ದಾರೆ.

ದಾಳಿಯಿಂದಾಗಿ ವಿದ್ಯುತ್ ಮತ್ತು ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ದಕ್ಷಿಣ ಗಾಜಾ ನಗರಕ್ಕೆ ವಿದ್ಯುತ್ ಪೂರೈಕೆ ಮಾಡುವ ಏಕೈಕ ವಿದ್ಯುತ್ ಸ್ಥಾವರಕ್ಕೆ ಹಾನಿಯಾಗಿದೆ ಎಂದು ವಿದ್ಯುತ್ ವಿತರಣಾ ಕಂಪನಿ ತಿಳಿಸಿದೆ.

ಉಗ್ರರು ಸಹ ಭಾನುವಾರ ರಾತ್ರಿ ರಾಕೆಟ್ ದಾಳಿ ನಡೆಸಿದರು ಎಂದು ಇಸ್ರೇಲ್ ತಿಳಿಸಿದೆ.

**ಸಂಘರ್ಷ ಅಂತ್ಯಗೊಳಿಸಲು ಪ್ರಯತ್ನ:** ಹಿಂಸಾಚಾರವನ್ನು ಅಂತ್ಯಗೊಳಿಸಲು ಎಲ್ಲ ರೀತಿಯ ಪ್ರಯತ್ನ ನಡೆಸುತ್ತಿರುವುದಾಗಿ ಈಜಿಪ್ಟ್ ಹಾಗೂ ಅಮೆರಿಕ ಹೇಳಿವೆ.

## ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ದಾಸ್ ಬ್ಯಾಟಿಂಗ್ ಕೋಚ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆರಂಭಿಕ ಆಟಗಾರ ಶಿವ ಸುಂದರ್ ದಾಸ್ ಅವರು ಭಾರತ ಮಹಿಳಾ ತಂಡದ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ. ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಅವರು ತಂಡಕ್ಕೆ ತರಬೇತಿ ನೀಡಲಿದ್ದಾರೆ.

2000–2002ರ ಅವಧಿಯಲ್ಲಿ ದಾಸ್ ಅವರು ಭಾರತ ತಂಡದ ಪರ 23 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಎರಡು ಶತಕ ಹಾಗೂ ಒಂಬತ್ತು ಅರ್ಧಶತಕಗಳನ್ನು ಒಳಗೊಂಡ 1300ಕ್ಕಿಂತ ಹೆಚ್ಚು ರನ್ ಕಲೆಹಾಕಿದ್ದಾರೆ.

**ದ್ರಾವಿಡ್ ಮೇಲ್ವಿಚಾರಣೆ:** ಜುಲೈನಲ್ಲಿ ಶ್ರೀಲಂಕಾದಲ್ಲಿ ಬಿಳಿ ಚೆಂಡಿನೊಂದಿಗೆ ಆರು ಪಂದ್ಯಗಳನ್ನು ಆಡಲಿರುವ ಭಾರತದ ಪ್ರತ್ಯೇಕ ತಂಡಕ್ಕೆ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥ ರಾಹುಲ್ ದ್ರಾವಿಡ್ ಮೇಲ್ವಿಚಾರಣೆ ನಡೆಸಬೇಕೆಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬಯಸಿದೆ.

ದ್ರಾವಿಡ್ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ, ಎ ತಂಡ ಅಥವಾ ಪ್ರತ್ಯೇಕ ತಂಡಗಳು ಎನ್‌ಸಿಎಯಿಂದ ತರಬೇತುದಾರರನ್ನು ಹೊಂದಿವೆ.

### ಆತಿಥೇಯರ ಎದುರಿನ ಟೆಸ್ಟ್ ಸರಣಿ; ಭಾರತ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್

# ಇಂಗ್ಲೆಂಡ್ ತಲುಪಿದ ನ್ಯೂಜಿಲೆಂಡ್ ತಂಡ

ಲಂಡನ್ (ಪಿಟಿಐ): ಆತಿಥೇಯ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಮತ್ತು ಭಾರತದ ಎದುರಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಲಿರುವ ನ್ಯೂಜಿಲೆಂಡ್ ತಂಡದ ಆಟಗಾರರು ಮೂರು ತಂಡಗಳಲ್ಲಿ ಭಾನುವಾರ ಮತ್ತು ಸೋಮವಾರ ಇಂಗ್ಲೆಂಡ್‌ಗೆ ತಲುಪಿದ್ದಾರೆ.

ಆಕ್ಲೆಂಡ್‌ನಿಂದ ಸಿಂಗಪುರದ ಮೂಲಕ ಭಾನುವಾರ ಇಲ್ಲಿಗೆ ಬಂದ ಆಟಗಾರರನ್ನು ಸೌತಾಂಪ್ಟನ್‌ನಲ್ಲಿರುವ ಏಜೀಸ್ ಬೌಲ್ ಕ್ರೀಡಾಂಗಣಕ್ಕೆ ಕರೆದುಕೊಂಡು ಹೋಗಲಾಯಿತು. ಪ್ರವಾಸದ ಮೊದಲ ಎರಡು ವಾರ ತಂಡ ಅಲ್ಲಿ ಉಳಿಯಲಿದೆ. ಜೂನ್ ಎರಡರಂದು ಲಂಡನ್‌ನಲ್ಲಿ ಮೊದಲ ಟೆಸ್ಟ್ ಪಂದ್ಯ ಆರಂಭವಾಗಲಿದ್ದು ಎರಡನೇ ಟೆಸ್ಟ್ ಬರ್ಮಿಂಗ್‌ಹ್ಯಾಂನಲ್ಲಿ ಜೂನ್ 10ರಿಂದ ನಡೆಯಲಿದೆ. ಜೂನ್ 18ರಿಂದ ಸೌತಾಂಪ್ಟನ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯ ನಡೆಯಲಿದೆ.

'ದಿ ಬ್ಲ್ಯಾಕ್ ಕ್ಯಾಪ್ಸ್' ತಂಡದವರು ಕಠಿಣ ಆರೋಗ್ಯ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ಇಲ್ಲಿಗೆ ಬಂದಿಳಿದಿದೆ. ಲಸಿಕೆ ಪಡೆದುಕೊಳ್ಳಲಾಗಿದ್ದು ಹೊರಡುವ ಮೊದಲು ಕೋವಿಡ್ ಪರೀಕ್ಷೆಯನ್ನೂ ಮಾಡಿಸಿಕೊಳ್ಳಲಾಗಿದೆ. ಮಾಸ್ಕ್ ಮತ್ತು ಸ್ಯಾನಿಟೈಜರ್ ಇರುವಂಥ ಕಿಟ್ ಜೊತೆಯಲ್ಲಿ ಇರಿಸಿಕೊಂಡಿದ್ದಾರೆ ಎಂದು 'ನ್ಯೂಜಿಲೆಂಡ್ ಕ್ರಿಕೆಟ್'ನ ಪ್ರಕಟಣೆ ತಿಳಿಸಿದೆ.


ಟಿಮ್ ಸೌಥಿ (ಎಡ) ಮತ್ತು ರಾಸ್ ಟೇಲರ್– ಪಿಟಿಐ ಸಂಗ್ರಹ ಚಿತ್ರ

ಆಟಗಾರರು ಮೊದಲ ಮೂರು ದಿನ ಹೋಟೆಲ್ ಕೊಠಡಿಗಳಲ್ಲಿ ಪ್ರತ್ಯೇಕವಾಸದಲ್ಲಿರುವರು. ನಾಲ್ಕು ಮತ್ತು ಆರನೇ ದಿನಗಳಲ್ಲಿ ಆರು ಮಂದಿಯ ತಂಡಗಳಲ್ಲಿ ಸಣ್ಣ ಪ್ರಮಾಣದ ತರಬೇತಿ ನಡೆಸುವರು. ಈ ಸಂದರ್ಭದಲ್ಲಿ ಕೋವಿಡ್ ಪರೀಕ್ಷೆ ನಡೆಸಿ ನೆಗೆಟಿವ್ ವರದಿ ಬಂದಿರಬೇಕು. ಮೇ 26ರಿಂದ 28ರ ವರೆಗೆ ತಂಡಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿ ಪಂದ್ಯಗಳನ್ನು ಆಡಲಾಗುವುದು. ಈಗಾಗಲೇ ಪ್ರತ್ಯೇಕವಾಸದಲ್ಲಿರುವ ಸ್ಥಳೀಯ ಆರು ಮಂದಿ ಬೌಲರ್‌ಗಳು ವೇಳೆ ತಂಡಕ್ಕೆ ನೆರವಾಗಲಿದ್ದಾರೆ.

ಟಿಮ್ ಸೌಥಿ, ಬಿ.ಜೆ.ವಾಟ್ಲಿಂಗ್, ರಾಸ್ ಟೇಲರ್ ಮತ್ತು ನೀಲ್ ವ್ಯಾಗ್ನರ್ ಎರಡನೇ ತಂಡದಲ್ಲಿ ಸೋಮವಾರ ಸೌತಾಂಪ್ಟನ್‌ಗೆ ಬಂದಿದ್ದಾರೆ. ಐಪಿಎಲ್‌ನಲ್ಲಿದ್ದು ಮಾಲ್ಡೀವ್ಸ್‌ಗೆ ತೆರಳಿದ್ದ ನಾಯಕ ಕೇನ್ ವಿಲಿಯಮ್ಸನ್, ವೇಗಿ ಕೈಲಿ ಜೆಮೀಸನ್, ಮಿಚೆಲ್ ಸ್ಯಾಂಟ್ನರ್, ಫಿಸಿಯೊ ಟಾಮಿ ಸಿಮ್ಸೆಕ್ ಮತ್ತು ಟ್ರೇನರ್ ಕ್ರಿಸ್ ಡೊನಾಲ್ಡ್ಸನ್ ಕೂಡ ಸೋಮವಾರ ಬಂದಿದ್ದಾರೆ. ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಆಡಿದ್ದ ಬ್ಯಾಟ್ಸ್‌ಮನ್ ವಿಲ್ ಯಂಗ್ ಕೂಡ ರಾಷ್ಟ್ರೀಯ ತಂಡವನ್ನು ಸೇರಿಕೊಂಡಿದ್ದಾರೆ.

### ಜೊಫ್ರಾ ಆರ್ಚರ್‌ಗೆ ಗಾಯ

ಮೊಣಕೈ ನೋವು ಹೆಚ್ಚಾಗಿರುವ ಕಾರಣ ವೇಗಿ ಜೊಫ್ರಾ ಆರ್ಚರ್ ಅವರನ್ನು ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಯ ತಂಡದಿಂದ ಕೈಬಿಡಲಾಗಿದೆ. ಐಪಿಎಲ್‌ನಲ್ಲಿ ಆಡಿದ್ದ 26 ವರ್ಷದ ಆರ್ಚರ್ ನೋವಿನಿಂದಾಗಿ ಅರ್ಧದಲ್ಲೇ ತವರಿಗೆ ವಾಪಸಾಗಿದ್ದರು. ಕೌಂಟಿ ಟೂರ್ನಿಯಲ್ಲಿ ಸಸೆಕ್ಸ್ ಪರವಾಗಿ ಕೆಂಟ್ ಎದುರು ಒಂದು ಪಂದ್ಯ ಆಡಿದ್ದರು. ಐದು ಓವರ್ ಬೌಲಿಂಗ್ ಮಾಡಿದಾಗ ಮತ್ತೆ ನೋವು ಕಾಣಿಸಿಕೊಂಡ ಕಾರಣ ಪಂದ್ಯದಿಂದ ಹೊರಬಿದ್ದಿದ್ದರು.

ನಂತರ ಟೆಸ್ಟ್ ಸರಣಿಗೆ ಸಜ್ಜಾಗಿರುವುದಾಗಿ ಅವರು ತಿಳಿಸಿದ್ದರು. ಆದರೆ ನೋವು ಉಲ್ಬಣಿಸಿದ್ದರಿಂದ ಯೋಜನೆಗಳು ಬುಡಮೇಲಾಗಿವೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ತಿಳಿಸಿದೆ. ಭಾರತದ ಎದುರು ನಡೆಯಲಿರುವ ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯ ಕೊನೆಯ ಎರಡು ಪಂದ್ಯಗಳಿಗೆ ಅವರು ಲಭ್ಯ ಇರುತ್ತಾರೆ ಎಂದು ಮಂಡಳಿ ವಿವರಿಸಿದೆ.

## ಸುದ್ದಿ 2 ನಿಮಿಷ

### ಭಾರತದ ಟೆಸ್ಟ್ 'ಫಿಕ್ಸ್' ಆಗಿರಲಿಲ್ಲ: ಐಸಿಸಿ

ದುಬೈ (ಪಿಟಿಐ): ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಎದುರು ಕ್ರಮವಾಗಿ 2016 ಮತ್ತು 2017ರಲ್ಲಿ ನಡೆದಿದ್ದ ಭಾರತದ ಟೆಸ್ಟ್ ಪಂದ್ಯಗಳು 'ಫಿಕ್ಸ್' ಆಗಿರಲಿಲ್ಲ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಸೋಮವಾರ ಸ್ಪಷ್ಟಪಡಿಸಿದೆ. ಆ ಪಂದ್ಯಗಳಲ್ಲಿ ಮೋಸದಾಟ ನಡೆದಿದ್ದು ಪಂದ್ಯದ ಗತಿ ನೋಡಿದರೆ ಫಲಿತಾಂಶ ಏನಾಗುತ್ತದೆ ಎಂದು ಮೊದಲೇ ಹೇಳಬಹುದಾಗಿತ್ತು ಎಂದು ಅಲ್ ಜಝೀರಾ ಸುದ್ದಿ ವಾಹಿನಿಯಲ್ಲಿ ವರದಿ ಪ್ರಕಟವಾಗಿತ್ತು.

2016ರಲ್ಲಿ ಚೆನ್ನೈನಲ್ಲಿ ನಡೆದ ಇಂಗ್ಲೆಂಡ್ ಎದುರಿನ ಪಂದ್ಯ ಮತ್ತು 2017ರಲ್ಲಿ ರಾಂಚಿಯಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಪಂದ್ಯಗಳನ್ನು 2018ರಲ್ಲಿ ಬಿಡುಗಡೆಗೊಂಡ 'ಕ್ರಿಕೆಟ್ ಮ್ಯಾಚ್ ಫಿಕ್ಸರ್ಸ್' ಎಂಬ ಸಾಕ್ಷ್ಯಚಿತ್ರದಲ್ಲಿ ಅಲ್ ಜಝೀರಾ ಪ್ರಸ್ತಾಪಿಸಿತ್ತು.

ಸಾಕ್ಷ್ಯಚಿತ್ರದಲ್ಲಿ ಐದು ವ್ಯಕ್ತಿಗಳನ್ನು ತೋರಿಸಲಾಗಿದ್ದು ಅವರ ವರ್ತನೆ ಸಂದೇಹಾಸ್ಪದವಾಗಿತ್ತು ಎಂದು ಹೇಳಲಾಗಿದೆ. ಬುಕ್ಕಿ ಎಂದು ಹೇಳಲಾಗುವ ಅನಿಲ್ ಮುನಾವರ್ ಎಂಬ ವ್ಯಕ್ತಿ ಮೋಸದಾಟದ ಕುರಿತು ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ. ಇದನ್ನು ಐಸಿಸಿ ನಿರಾಕರಿಸಿದೆ. ಐವರ ವರ್ತನೆ ಸಂದೇಹಾಸ್ಪದವಾಗಿರಬಹುದು. ಆದರೆ ಅವರು ಪಂದ್ಯ ಫಿಕ್ಸ್ ಮಾಡಿದ್ದರು ಎಂಬುದನ್ನು ಸಾಬೀತು ಮಾಡಲು ಸಾಕ್ಷ್ಯಗಳಿಲ್ಲ ಎಂದು ಅಭಿಪ್ರಾಯಪಟ್ಟಿದೆ. ತನಿಖೆಗೂ ಆದೇಶ ನೀಡಿದೆ.

### ರ್‍ಯಾಂಕಿಂಗ್: ಅಗ್ರ 10ರ ಪಟ್ಟಿಯಲ್ಲಿ ಇಗಾ



ರೋಮ್ (ರಾಯಿಟರ್ಸ್): ಫ್ರೆಂಚ್ ಓಪನ್ ಚಾಂಪಿಯನ್ ಇಗಾ ಸ್ವಾಟೆಕ್ ಅವರು ಡಬ್ಲ್ಯುಟಿಎ ಟೆನಿಸ್ ರ್‍ಯಾಂಕಿಂಗ್‌ನಲ್ಲಿ ಅಗ್ರ 10 ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ಕಳೆದ ವರ್ಷ ಫ್ರೆಂಚ್ ಓಪನ್ ಟ್ರೋಫಿ ಮುಡಿಗೇರಿಸಿಕೊಂಡ ಬಳಿಕ ಇಗಾ ಅವರು ಸಾಕಷ್ಟು ಏಳು ಬೀಳು ಕಂಡಿದ್ದರು.

ಈ ತಿಂಗಳ ಅಂತ್ಯದಲ್ಲಿ 20ರ ಹರೆಯಕ್ಕೆ ಕಾಲಿಡಲಿರುವ ಪೋಲೆಂಡ್ ಆಟಗಾರ್ತಿ, ವಿಶ್ವದ ಮಾಜಿ ಅಗ್ರಕ್ರಮಾಂಕದ ಕರೋಲಿನಾ ಪ್ಲಿಸ್ಕೊವಾ ಅವರನ್ನು 6–0, 6–0ಯಿಂದ ಮಣಿಸಿ ರೋಮ್ ಮಾಸ್ಟರ್ಸ್‌ನಲ್ಲಿ ಭಾನುವಾರ ಪ್ರಶಸ್ತಿ ಜಯಿಸಿದ್ದರು. ಇದು ಅವರ ಮೊದಲ 'ಡಬ್ಲ್ಯುಟಿಎ 1000' ಟ್ರೋಫಿಯಾಗಿತ್ತು. ಇದರೊಂದಿಗೆ ರ್‍ಯಾಂಕಿಂಗ್‌ನಲ್ಲಿ ಆರು ಸ್ಥಾನಗಳ ಏರಿಕೆ ಕಂಡು ಒಂಬತ್ತನೇ ಸ್ಥಾನಕ್ಕೆ ತಲುಪಿದ್ದಾರೆ.

### ವೆಸ್ಟ್ ಇಂಡೀಸ್ ಪ್ರವಾಸ: ಫಿಂಚ್ ನಾಯಕತ್ವದಲ್ಲಿ ನಾಲ್ವರು ಸ್ಪಿನ್ನರ್‌ಗಳಿಗೆ ಸ್ಥಾನ

# ಆಸ್ಟ್ರೇಲಿಯಾ ತಂಡದಲ್ಲಿ ಸ್ಮಿತ್, ವಾರ್ನರ್

ಸಿಡ್ನಿ(ಎಎಫ್‌ಪಿ): ವೆಸ್ಟ್ ಇಂಡೀಸ್ ಎದುರಿನ ಏಕದಿನ ಮತ್ತು ಟಿ20 ಕ್ರಿಕೆಟ್ ಸರಣಿಗಳಿಗೆ ಆಸ್ಟ್ರೇಲಿಯಾವು 23 ಮಂದಿಯ ತಂಡವನ್ನು ಸೋಮವಾರ ಪ್ರಕಟಿಸಿದ್ದು ಪ್ರಮುಖ ಸ್ಟೀವ್ ಸ್ಮಿತ್ ಸೇರಿದಂತೆ ಆಟಗಾರರಿಗೆ ಸ್ಥಾನ ನೀಡಲಾಗಿದೆ. ನಾಲ್ವರು ಸ್ಪಿನ್ನರ್‌ಗಳನ್ನೂ ಸೇರಿಸಿಕೊಳ್ಳಲಾಗಿದೆ.

ಆ್ಯರನ್ ಫಿಂಚ್ ನಾಯಕತ್ವದ ತಂಡದಲ್ಲಿ ಸ್ಟೀವ್ ಸ್ಮಿತ್, ಮಿಷೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್‌ವುಡ್, ಡೇವಿಡ್ ವಾರ್ನರ್ ಮತ್ತು ಪ್ಯಾಟ್ ಕಮಿನ್ಸ್ ಇದ್ದಾರೆ. ಇವರೆಲ್ಲರೂ ಈಚೆಗೆ ನಡೆದ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಆಡಿರಲಿಲ್ಲ.

ಐದು ಟಿ20 ಪಂದ್ಯಗಳ ಸರಣಿ ಜುಲೈ ಒಂಬತ್ತರಂದು ಸೇಂಟ್ ಲೂಸಿಯಾದಲ್ಲಿ ಆರಂಭವಾಗಲಿದ್ದು ನಂತರ ಮೂರು ಏಕದಿನ ಪಂದ್ಯಗಳ ಸರಣಿ ನಡೆಯಲಿದೆ. ಇದು ಜುಲೈ 24ರಂದು ಬಾರ್ಬಡೀಸ್‌ನಲ್ಲಿ ಆರಂಭವಾಗಲಿದೆ.

ಇಂಗ್ಲೆಂಡ್‌ನಲ್ಲಿರುವ ಮಾರ್ನಸ್ ಲಾಬುಶೇನ್ ಅವರು ಪ್ರಯಾಣದ 'ಸಮಸ್ಯೆ'ಗಳಿಂದಾಗಿ ತಂಡವನ್ನು ಸೇರಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದ ಅವರನ್ನು ಕೈಬಿಡಲಾಗಿದೆ. ಮಿಚ್ ಸ್ವೆಪ್ಸನ್, ಆ್ಯಡಂ ಜಂಪಾ ಮತ್ತು 19 ವರ್ಷದ ತನ್ವೀರ್ ಸಂಗಾ ತಂಡಕ್ಕೆ ಆಯ್ಕೆಯಾಗಿರುವ ಮೂವರು ಲೆಗ್ ಸ್ಪಿನ್ನರ್‌ಗಳು. ಸಿಡ್ನಿ ಥಂಡರ್ ತಂಡದಲ್ಲಿ ಆಡಿರುವ ತನ್ವೀರ್ ದೇಶಿ ಕ್ರಿಕೆಟ್‌ನಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.


ಆ್ಯರನ್ ಫಿಂಚ್ –ಪಿಟಿಐ ಚಿತ್ರ

**ತಂಡ:** ಆ್ಯರನ್ ಫಿಂಚ್ (ನಾಯಕ), ಆ್ಯಷ್ಟನ್ ಅಗರ್, ಜೇಸನ್ ಬೆಹ್ರೆಂಡಾರ್ಫ್, ಅಲೆಕ್ಸ್ ಕ್ಯಾರಿ, ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್, ಮೊಯಿಸಸ್ ಹೆನ್ರಿಕ್ಸ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ರಿಲಿ ಮಿರೆಡಿತ್, ಜೋಶ್ ಫಿಲಿಪ್, ಜೇ ರಿಚರ್ಡ್ಸನ್, ಕೇನ್ ರಿಚರ್ಡ್ಸನ್, ತನ್ವೀರ್ ಸಂಗಾ, ಡಿ'ಆರ್ಚಿ ಶಾರ್ಟ್, ಸ್ಟೀವನ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೋಯಿನಿಸ್, ಮಿಚೆಲ್ ಸ್ವೆಪ್ಸನ್, ಆ್ಯಂಡ್ರ್ಯೂ ಟೈ, ಮ್ಯಾಥ್ಯೂ ವೇಡ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ.

**ತವರಿಗೆ ತಲುಪಿದ 'ಐಪಿಎಲ್' ಆಟಗಾರರು:** ಪ್ಯಾಟ್ ಕಮಿನ್ಸ್ ಮತ್ತು ಸ್ಟೀವ್ ಸ್ಮಿತ್ ಒಳಗೊಂಡಂತೆ ಐಪಿಎಲ್‌ನಲ್ಲಿ ಆಡಿದ್ದ ಆಸ್ಟ್ರೇಲಿಯಾದ ಆಟಗಾರರು ಸೋಮವಾರ ಸಿಡ್ನಿ ತಲುಪಿದರು. ಭಾರತದಲ್ಲಿ ಕೋವಿಡ್ ಏರುಗತಿಯಲ್ಲಿ ಇದ್ದ ಕಾರಣ ಭಾರತಕ್ಕೆ ಹೋಗುವ ಮತ್ತು ಭಾರತದಿಂದ ಬರುವ ವಿಮಾನಯಾನವನ್ನು ಆಸ್ಟ್ರೇಲಿಯಾ ಸರ್ಕಾರ ಸ್ಥಗಿತಗೊಳಿಸಿತ್ತು. ಹೀಗಾಗಿ ಆಟಗಾರರು ಮಾಲ್ಡೀವ್ಸ್‌ಗೆ ತೆರಳಿ ಪ್ರತ್ಯೇಕವಾಸದಲ್ಲಿದ್ದರು.

### ಚೆಂಡು ವಿರೂಪ: ಹೊಸ ತಿರುವು

ಮೆಲ್ಬರ್ನ್ (ಪಿಟಿಐ): 2018ರಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯಲ್ಲಿ ನಡೆದ ಚೆಂಡು ವಿರೂಪ ಪ್ರಕರಣಕ್ಕೆ ಹೊಸ ತಿರುವು ಲಭಿಸಿದ್ದು ಅಂದು ನಿಷೇಧಕ್ಕೆ ಒಳಗಾಗಿದ್ದ ಕ್ಯಾಮರಾನ್ ಬ್ಯಾಂಕ್ರಾಫ್ಟ್ ತಂಡದಲ್ಲಿದ್ದ ಅನೇಕ ಬೌಲರ್‌ಗಳಿಗೆ ಆ ಪಿತೂರಿಯ ಬಗ್ಗೆ ಮಾಹಿತಿ ಇತ್ತು ಎಂದಿದ್ದಾರೆ.

ಬ್ಯಾಂಕ್ರಾಫ್ಟ್ ಅವರ ಹೇಳಿಕೆ ಹೊರಬಿದ್ದ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್‌ನ ಇಂಟೆಗ್ರಿಟಿ ಘಟಕ ವಿಚಾರಣೆಗೆ ಮುಂದಾಗಿದೆ.

ಕೇಪ್‌ಟೌನ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಬ್ಯಾಂಕ್ರಾಫ್ಟ್ ಚೆಂಡು ವಿರೂಪಗೊಳಿಸಿದ್ದು ಕ್ಯಾಮರಾಗಳಲ್ಲಿ ಸೆರೆಯಾಗಿತ್ತು. ಇದಕ್ಕೆ ಪ್ರಚೋದನೆ ನೀಡಿದ್ದರು ಎಂಬ ಆರೋಪದಡಿ ಅಂದಿನ ನಾಯಕ ಸ್ಟೀವ್ ಸ್ಮಿತ್ ಮತ್ತು ಉಪನಾಯಕ ಡೇವಿಡ್ ವಾರ್ನರ್ ಅವರನ್ನು ತಲಾ ಒಂದು ವರ್ಷ ನಿಷೇಧಿಸಲಾಗಿತ್ತು. ಬ್ಯಾಂಕ್ರಾಫ್ಟ್ ಮೇಲೆ ಒಂಬತ್ತು ತಿಂಗಳ ನಿಷೇಧ ಹೇರಲಾಗಿತ್ತು.

# 'ಮ್ಯಾರಥಾನ್ ರಾಜ' ಬಿರಾದಾರ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡಾ ವಲಯದಲ್ಲಿ 'ಮ್ಯಾರಥಾನ್ ರಾಜ' ಎಂದೇ ಖ್ಯಾತಿ ಗಳಿಸಿದ್ದ ಮಾಜಿ ರಾಷ್ಟ್ರೀಯ ಚಾಂಪಿಯನ್ ಧರ್ಮರಾಯ ಯಶವಂತರಾಯ ಬಿರಾದಾರ (81) ಅವರು ಸೋಮವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ ಪತ್ನಿ, ನಾಲ್ವರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ.

'ನಾಲ್ಕು ದಿನಗಳ ಹಿಂದೆ ಅವರಿಗೆ ಕೋವಿಡ್–19 ಸೋಂಕು ತಗುಲಿತ್ತು. ಆಸ್ಪತ್ರೆಗೆ ದಾಖಲಿಸಿದೆವು. ಆದರೆ ಉಳಿಸಿಕೊಳ್ಳಲು ಆಗಲಿಲ್ಲ' ಎಂದು ಪುತ್ರಿ ಮಾಜಿ ಅಥ್ಲೀಟ್, ಪೊಲೀಸ್ ಇಲಾಖೆಯಲ್ಲಿರುವ ಪುಷ್ಪಲತಾ 'ಪ್ರಜಾವಾಣಿ'ಗೆ ತಿಳಿಸಿದರು. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ತೆಗ್ಗಿಹಳ್ಳಿಯಲ್ಲಿ ಜನಿಸಿದ್ದ ಡಿ.ವೈ. ಬಿರಾದಾರ ಮೊದಲು ರಾಜ್ಯ ಮೀಸಲು ಪೊಲೀಸ್ ಪಡೆಯಲ್ಲಿದ್ದರು. ಬೆಳಗಾವಿ ಖಾನಾಪುರದಲ್ಲಿ ಸೇವೆ ಸಲ್ಲಿಸಿದ ನಂತರ ಬೆಂಗಳೂರಿಗೆ ವರ್ಗವಾಯಿತು. ನಂತರ ರೈಲ್ವೆ ಇಲಾಖೆ ಸೇರಿದರು. ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿ ವಾಸವಾಗಿದ್ದರು.

1970ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪಾಲ್ಗೊಂಡಿದ್ದ ಅವರು ಐದು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. 'ದ್ರೋಣಾಚಾರ್ಯ' ಎನ್.ಲಿಂಗಪ್ಪ ಅವರ ಗರಡಿಯಲ್ಲಿ ಪಳಗಿದ ಬಿರಾದಾರ 5 ಸಾವಿರ ಮೀಟರ್ಸ್ ಮತ್ತು 10 ಸಾವಿರ ಮೀಟರ್ಸ್ ಓಟದಲ್ಲಿ ಅಪೂರ್ವ ಸಾಧನೆ ಮಾಡಿದ್ದರು.


ಡಿ.ವೈ.ಬಿರಾದಾರ

ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಮಧ್ಯಮ ದೂರ ಅಂತರದ ಓಟಗಾರನಾಗಿದ್ದ ಬಿರಾದಾರ 1963ರಲ್ಲಿ ದೂರ ಅಂತರದ ಓಟದತ್ತ ಗಮನಹರಿಸಿದರು.

ಮೈಸೂರಿನಲ್ಲಿ ನಡೆದ ಪೊಲೀಸ್ ಕ್ರೀಡಾಕೂಟದ ಮ್ಯಾರಥಾನ್‌ನಲ್ಲಿ ದಾಖಲೆಯೊಂದಿಗೆ (2 ತಾಸು 34 ನಿಮಿಷ) ಮೊದಲಿಗರಾಗಿದ್ದರು. ಅಖಿಲ ಭಾರತ ಪೊಲೀಸ್ ಕ್ರೀಡಾಕೂಟದಲ್ಲಿ 2 ತಾಸು 33 ನಿಮಿಷದಲ್ಲಿ ಗುರಿ ಮುಟ್ಟಿದ್ದರು. ಮ್ಯಾರಥಾನ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು.


1996–97ರಲ್ಲಿ ಬೆಂಗಳೂರು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಟಾರ್ಚ್‌ಬೇರರ್ ಗೌರವ ಪಡೆದಿದ್ದರು.

# ಟೆನಿಸ್: ಸೆರೆನಾಗೆ ಜಯ

ಪಾರ್ಮಾ, ಇಟಲಿ (ಎಎಫ್‌ಪಿ): ಅಮೆರಿಕದ ಸೆರೆನಾ ವಿಲಿಯಮ್ಸ್ ಅವರು ಸ್ಥಳೀಯ ಆಟಗಾರ್ತಿ ಲಿಸಾ ಪಿಗಾಟೊ ಅವರನ್ನು ಸೋಲಿಸಿ ಇಲ್ಲಿ ನಡೆಯುತ್ತಿರುವ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದರು.

ಸೋಮವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನದಲ್ಲಿರುವ ಸೆರೆನಾ 6-3, 6-2ರಿಂದ ಲಿಸಾ ಅವರನ್ನು ಮಣಿಸಿದರು. ಇಬ್ಬರೂ ಮೊದಲ ಬಾರಿ ಮುಖಾಮುಖಿಯಾಗಿದ್ದರು.

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 14,678 |
| ಇಂದಿನ ಅಂತ್ಯ | 14,923 |
| ▲ | 245 |
| ದಿನದ ಗರಿಷ್ಠ | 14,938 |

### ವಿನಿಮಯ ದರ

| | |
|---|---|
| $ ಡಾಲರ್ | 73.22 |
| £ ಪೌಂಡ್ | 103.27 |
| € ಯುರೊ | 89.01 |
| ¥ ಯೆನ್ (100ಕ್ಕೆ) | 67 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹480 |
| 12 ಮೊಟ್ಟೆಗೆ | ₹65 |
| **ಮೈಸೂರು** | |
| 100 ಮೊಟ್ಟೆಗೆ | ₹480 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1590 (1590) |
| ಸೋಯಾ (ರಿಫೈನ್ಡ್) | ₹1493 (1490) |
| ಸೂರ್ಯಕಾಂತಿ (ರಿಫೈನ್ಡ್) | ₹1710 (1710) |
| ಪಾಮೋಲಿನ್ | ₹1390(1400) |

# ಯೂನಿಕಾರ್ನ್ ಪಟ್ಟಿಗೆ ಮೋಗ್ಲಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ದಿಮೆಯಿಂದ ಉದ್ದಿಮೆಗೆ (ಬಿ2ಬಿ) ಇ–ಕಾಮರ್ಸ್ ಸೇವೆ ಒದಗಿಸುವ ಮೋಗ್ಲಿಕ್ಸ್ ನವೋದ್ಯಮವು 100 ಕೋಟಿ ಡಾಲರ್ ಮಾರುಕಟ್ಟೆ ಮೌಲ್ಯ ಹೊಂದಿರುವ ಭಾರತೀಯ ಯೂನಿಕಾರ್ನ್‌ಗಳ ಪಟ್ಟಿಗೆ ಸೇರಿದೆ.

₹ 7,400 ಕೋಟಿಗಿಂತ ಹೆಚ್ಚಿನ ಮಾರುಕಟ್ಟೆ ಮೌಲ್ಯದ ನವೋದ್ಯಮಗಳನ್ನು ಯೂನಿಕಾರ್ನ್‌ಗಳು ಎನ್ನಲಾಗುತ್ತದೆ. ಕಂಪನಿಯು ತನ್ನ ಈಚಿನ 'ಸರಣಿ–ಇ'ಯಲ್ಲಿ ₹ 878 ಕೋಟಿ ಬಂಡವಾಳ ಸಂಗ್ರಹಿಸಿದ್ದು, ಇದರಿಂದ ಒಟ್ಟಾರೆ ಮಾರುಕಟ್ಟೆ ಮೌಲ್ಯವು 100 ಕೋಟಿ ಡಾಲರ್‌ಗೆ ತಲುಪಿದೆ.

ಕಂಪನಿಯು ಈಚೆಗೆ ಸಂಗ್ರಹಿಸಿರುವ ಬಂಡವಾಳದಲ್ಲಿ ಫಾಲ್ಕನ್ ಎಡ್ಜ್ ಕ್ಯಾಪಿಟಲ್, ಹಾರ್ವರ್ಡ್ ಮ್ಯಾನೇಜ್‌ಮೆಂಟ್ ಕಂಪನಿಯಿಂದ ಬಂದಿರುವ ಹೂಡಿಕೆಯೂ ಸೇರಿದೆ. ಮೋಗ್ಲಿಕ್ಸ್‌ನಲ್ಲಿ ಈಗಾಗಲೇ ಹೂಡಿಕೆ ಮಾಡಿರುವ ಟೈಗರ್ ಗ್ಲೋಬಲ್, ಸೀಕ್ವಿಯಾ ಕ್ಯಾಪಿಟಲ್ ಇಂಡಿಯಾ ಮತ್ತು ವೆಂಚರ್ ಹೈವೆ ಕಂಪನಿಗಳೂ ಸಹ ಬಂಡವಾಳ ಸಂಗ್ರಹದ 'ಸರಣಿ–ಇ' ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದವು.

# ಷೇರು ವಹಿವಾಟಿನಲ್ಲಿ ಸ್ಟಾಕ್ ಬ್ರೋಕರ್ ಪಾತ್ರ

**ಷೇರು ಮಾತು**
ಶರತ್ ಎಂ.ಎಸ್.



ಷೇರು ಮಾರುಕಟ್ಟೆಯಲ್ಲಿ ವಹಿವಾಟು ನಡೆಸಬೇಕಾದರೆ ಷೇರು ದಲ್ಲಾಳಿಗಳ (Stock Broker) ನೆರವು ಬೇಕು. ಸರಳವಾಗಿ ಹೇಳುವುದಾದರೆ, ಷೇರು ಹೂಡಿಕೆಗೆ ಸಂಬಂಧಿಸಿದ ಅಗತ್ಯ ಸೇವೆಗಳನ್ನು ಒದಗಿಸುವವರೇ ಷೇರು ದಲ್ಲಾಳಿಗಳು. ಸ್ಟಾಕ್ ಬ್ರೋಕರ್ ನೆರವು ಪಡೆದು ಟ್ರೇಡಿಂಗ್ ಮತ್ತು ಡಿ-ಮ್ಯಾಟ್ ಖಾತೆ ಪಡೆದುಕೊಳ್ಳುವುದು ಷೇರು ಹೂಡಿಕೆಯಲ್ಲಿ ಪ್ರಥಮ ಹೆಜ್ಜೆ.

ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸುವವರಿಗೆ ಬೇಕಿರುವ ಟ್ರೇಡಿಂಗ್ ಮತ್ತು ಡಿ-ಮ್ಯಾಟ್ ಖಾತೆ ಸೇವೆಯನ್ನು ಒದಗಿಸುವವರೂ ಸ್ಟಾಕ್ ಬ್ರೋಕರ್‌ಗಳೇ. ಏನಿದು ಟ್ರೇಡಿಂಗ್ ಖಾತೆ ಅಂದಿರಾ? ಷೇರುಗಳ ಖರೀದಿ ಮತ್ತು ಮಾರಾಟಕ್ಕೆ ಟ್ರೇಡಿಂಗ್ ಖಾತೆ ನೆರವಾಗುತ್ತದೆ. ಷೇರುಗಳನ್ನು ಕೊಂಡಾಗ ನಿಮ್ಮ ಟ್ರೇಡಿಂಗ್ ಖಾತೆಯಿಂದ ಹಣ ಕಡಿತಗೊಳ್ಳುತ್ತದೆ. ಷೇರು ಮಾರಾಟ ಮಾಡಿದಾಗ ನಿಮ್ಮ ಟ್ರೇಡಿಂಗ್ ಖಾತೆಗೆ ಹಣ ಸಂದಾಯವಾಗುತ್ತದೆ.

ಷೇರುಗಳನ್ನು ಖರೀದಿಸಿದ ನಂತರ ಅವುಗಳನ್ನು ಸುರಕ್ಷಿತವಾಗಿಡಲು ಒಂದು ಜಾಗ ಬೇಕು. ಅದೇ ಡಿ-ಮ್ಯಾಟ್ ಖಾತೆ. ತಂತ್ರಜ್ಞಾನದ ಸಹಾಯದಿಂದ ಡಿಜಿಟಲ್ ರೂಪದಲ್ಲಿ ಷೇರುಗಳನ್ನು ಇರಿಸುವ ವ್ಯವಸ್ಥೆಯೇ ಡಿ-ಮ್ಯಾಟ್. 1996ರಲ್ಲಿ ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಮೊದಲ ಬಾರಿಗೆ ಈ ವ್ಯವಸ್ಥೆ ಪರಿಚಯಿಸಿತು. ಮೊದಲು ಕಾಗದದ ರೂಪದಲ್ಲಿ ಷೇರುಗಳನ್ನು ಪಡೆದುಕೊಳ್ಳಬೇಕಾಗುತ್ತಿತ್ತು. ಆದರೆ ಡಿ-ಮ್ಯಾಟ್ ವ್ಯವಸ್ಥೆ ಷೇರು ಮಾರುಕಟ್ಟೆ ವ್ಯವಸ್ಥೆಗೆ ಬಲತುಂಬಿ ಷೇರುಗಳ ವಹಿವಾಟನ್ನು ಸರಾಗಗೊಳಿಸಿತು. ಲಭ್ಯ ಅಂಕಿ-ಅಂಶಗಳ ಪ್ರಕಾರ ದೇಶದಲ್ಲಿ ಈಗ 5.15ಕೋಟಿ ಡಿ-ಮ್ಯಾಟ್ ಖಾತೆಗಳಿವೆ.

**ಸ್ಟಾಕ್ ಬ್ರೋಕರ್ ಪಾತ್ರ:** ಟ್ರೇಡಿಂಗ್ ಮತ್ತು ಡಿ-ಮ್ಯಾಟ್ ಖಾತೆ ಪಡೆದ ನಂತರ ಷೇರು ವಹಿವಾಟು ನಡೆಸಲು ಒಂದು ವ್ಯವಸ್ಥೆ ಬೇಕು. ಅದನ್ನು ಟ್ರೇಡಿಂಗ್ ಟರ್ಮಿನಲ್ ಎಂದು ಕರೆಯುತ್ತಾರೆ. ವೆಬ್‌ಸೈಟ್ ಅಥವಾ ಆ್ಯಪ್‌ಗಳ ಮೂಲಕ ಟರ್ಮಿನಲ್ ವ್ಯವಸ್ಥೆಯನ್ನು ಬ್ರೋಕರ್‌ಗಳು ಒದಗಿಸುತ್ತಾರೆ. ಇದರಿಂದ ಮಾರುಕಟ್ಟೆಯಲ್ಲಿ ಏನಾಗುತ್ತಿದೆ ಎಂದು ತಿಳಿದು ಷೇರುಗಳ ಖರೀದಿ, ಮಾರಾಟ ಮಾಡಬಹುದು. ಜಿರೋಧಾ, ಗ್ರೋ, ಐಸಿಐಸಿಐ ಸೆಕ್ಯೂರಿಟಿಸ್, ಎಚ್‌ಡಿಎಫ್‌ಸಿ ಸೆಕ್ಯೂರಿಟೀಸ್... ಇವೆಲ್ಲ ಸ್ಟಾಕ್ ಬ್ರೋಕರ್‌ಗಳಿಗೆ ಕೆಲವು ಉದಾಹರಣೆಗಳು.

ಬ್ರೋಕರ್‌ಗಳು ವಿವಿಧ ಷೇರುಗಳ ಅಂಕಿ-ಅಂಶ, ವಿಶ್ಲೇಷಣೆ, ಹೂಡಿಕೆ ಸಲಹೆ, ಷೇರುಗಳ ಅಧ್ಯಯನಕ್ಕೆ ಅಗತ್ಯ ಪರಿಕರಗಳನ್ನು ಒದಗಿಸುತ್ತಾರೆ. ಎಲ್ಲ ಬ್ರೋಕರ್‌ಗಳು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ.

### ಒಳ್ಳೆಯ ಸ್ಟಾಕ್ ಬ್ರೋಕರ್ ಆಯ್ಕೆ ಹೇಗೆ?

ನಿಮ್ಮ ಊರಿನಲ್ಲಿ ಹತ್ತಾರು ಕಾಲೇಜುಗಳಿರುತ್ತವೆ. ಎಲ್ಲಾ ಕಾಲೇಜುಗಳು ಒಂದೇ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಹೀಗಿದ್ದರೂ, ಯಾವುದೇ ಆಲೋಚನೆ ಮಾಡದೆ ನೀವು ಯಾವುದಾದರೊಂದು ಕಾಲೇಜಿಗೆ ಸೇರಿಕೊಳ್ಳುತ್ತೀರಾ? ಯಾವ ಕಾಲೇಜಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆ, ಒಳ್ಳೆಯ ಶಿಕ್ಷಕರಿದ್ದಾರೋ, ಸೌಲಭ್ಯಗಳಿವೆಯೋ, ಕಡಿಮೆ ಶುಲ್ಕ ಇದೆಯೋ, ಯಾವ ಕಾಲೇಜಿಗೆ ಹೆಚ್ಚು ಕಂಪನಿಗಳು ಕ್ಯಾಂಪಸ್ ಆಯ್ಕೆಗೆ ಬರುತ್ತವೆ... ಇವುಗಳ ಬಗ್ಗೆಯೆಲ್ಲ ಪರಿಶೀಲಿಸಿ ಕಾಲೇಜು ಆಯ್ಕೆ ಮಾಡುತ್ತೀರಿ, ಅಲ್ಲವೇ?

ಇಲ್ಲೂ ಹಾಗೆಯೇ, ಯಾವ ಬ್ರೋಕರ್ ಸೇವೆಯನ್ನು ಹೆಚ್ಚು ಜನರು ಪಡೆಯುತ್ತಿದ್ದಾರೆ, ಯಾವ ಬ್ರೋಕರ್ ಕಡಿಮೆ ಬ್ರೋಕರೇಜ್ ಶುಲ್ಕ ಪಡೆಯುತ್ತಾರೆ, ಒಳ್ಳೆಯ ಟ್ರೇಡಿಂಗ್ ಟರ್ಮಿನಲ್ ಕೊಡುತ್ತಾರೆಯೇ, ವಿಶ್ವಾಸಕ್ಕೆ ಅರ್ಹರೇ ಎಂಬುದನ್ನೆಲ್ಲ ಗಮನಿಸಿ ಬ್ರೋಕರ್‌ಅನ್ನು ಆಯ್ಕೆ ಮಾಡಿಕೊಳ್ಳಬೇಕು.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಅಡಿಕೆ** | |
| **ಬಂಟ್ವಾಳ** | |
| ಹೊಸತು | 23000-39000 |
| ಹಳತು | 42500-49000 |
| **ಕಾರ್ಕಳ** | |
| ಹೊಸತು | 36000-40000 |
| ಹಳತು | 46000-50000 |
| **ಪುತ್ತೂರು** | |
| ಹೊಸತು | 28000-39500 |
| **ಯಲ್ಲಾಪುರ** | |
| ಬಿಳಿಗೋಟು | 30010-30010 |
| ಚಾಲಿ | 35090-36120 |
| ರಾಶಿ | 41390-41390 |
| ತಟ್ಟಿಬೆಟ್ಟೆ | 36090-39410 |
| **ರಾಮನಗರ ರೇಷ್ಮೆ ಧಾರಣೆ** | |
| ಮಿಶ್ರತಳಿ (ಸಿ.ಬಿ) | 212-310 |
| ದ್ವಿತಳಿ (ಬಿ.ವಿ) | 228-350 |

**ಮೂಡಿಗೆರೆ ಕಾಫಿ**

| | ಮುದ್ರೆಮನೆ |
|---|---|
| ಎಪಿ | 10350 |
| ಎಸಿ | 4145 |
| ಆರ್‌ಪಿ | 5000 |
| ಆರ್‌ಸಿ | 3000 |

# ದಾಖಲೆಯ ಮಟ್ಟದಲ್ಲಿ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ಮಾರಾಟ ದರ ಆಧರಿಸಿದ ಹಣದುಬ್ಬರ ಸೂಚ್ಯಂಕವು (ಡಬ್ಲ್ಯುಪಿಐ) ಏಪ್ರಿಲ್ ತಿಂಗಳಿನಲ್ಲಿ ಸಾರ್ವಕಾಲಿಕ ದಾಖಲೆಯ ಮಟ್ಟವಾದ ಶೇಕಡ 10.49ಕ್ಕೆ ತಲುಪಿದೆ. ತಯಾರಾದ ಉತ್ಪನ್ನಗಳು ಹಾಗೂ ತೈಲ ಬೆಲೆಯಲ್ಲಿ ಆದ ಹೆಚ್ಚಳ ಹಣದುಬ್ಬರ ಏರಿಕೆ ಕಾಣಲು ಪ್ರಮುಖ ಕಾರಣ.

ಈ ವರ್ಷದ ಮಾರ್ಚ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 7.39ರಷ್ಟಿತ್ತು. ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ಇದು ಶೇ (–)1.57ರಷ್ಟಾಗಿತ್ತು. ಸಗಟು ಹಣದುಬ್ಬರ ಪ್ರಮಾಣವು ಸತತ ನಾಲ್ಕು ತಿಂಗಳುಗಳಿಂದ ಹೆಚ್ಚಳ ಆಗುತ್ತಿದೆ. 'ಪೆಟ್ರೋಲ್, ಡೀಸೆಲ್ ಮತ್ತು ತಯಾರಾದ ಉತ್ಪನ್ನಗಳ ಬೆಲೆಯು ಹಿಂದಿನ ವರ್ಷದ ಏಪ್ರಿಲ್‌ನ ಮಟ್ಟಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚಾಗಿದೆ. ಹೀಗಾಗಿ ಈ ವರ್ಷದ ಏಪ್ರಿಲ್‌ನಲ್ಲಿ ಹಣದುಬ್ಬರ ಜಾಸ್ತಿ ಆಗಿದೆ' ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ.

ಪ್ರೊಟೀನ್‌ಯುಕ್ತ ಆಹಾರ ವಸ್ತುಗಳಾದ ಮೊಟ್ಟೆ, ಮಾಂಸ ಮತ್ತು ಮೀನಿನ ಬೆಲೆ ಜಾಸ್ತಿ ಆದ ಪರಿಣಾಮವಾಗಿ ಏಪ್ರಿಲ್‌ನಲ್ಲಿ ಆಹಾರ ವಸ್ತುಗಳ ಹಣದುಬ್ಬರವು ಶೇ 4.92ಕ್ಕೆ ತಲುಪಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್ ತಿಂಗಳಿನಲ್ಲಿ ಶೇ 4.29ಕ್ಕೆ ಇಳಿಕೆ ಕಂಡಿದೆ.

'ವರ್ಷದ ಮುಂದಿನ ದಿನಗಳಲ್ಲಿ ಹಣದುಬ್ಬರವು ಯಾವ ಪ್ರಮಾಣದಲ್ಲಿ ಇರಲಿದೆ ಎಂಬುದು ಕೋವಿಡ್–19 ಹರಡುವಿಕೆ ಹೇಗಿರಲಿದೆ ಎನ್ನುವುದನ್ನು ಆಧರಿಸಿರುತ್ತದೆ. ಅಲ್ಲದೆ, ಸೋಂಕು ಹರಡುವುದನ್ನು ತಡೆಯುವ ಉದ್ದೇಶದಿಂದ ಸ್ಥಳೀಯ ಮಟ್ಟದಲ್ಲಿ ಜಾರಿಗೆ ಬರುವ ನಿಯಂತ್ರಣ ಕ್ರಮಗಳು ಪೂರೈಕೆ ವ್ಯವಸ್ಥೆ ಮತ್ತು ಸರಕು ಸಾಗಣೆ ವ್ಯವಸ್ಥೆ ಮೇಲೆ ಯಾವ ಪರಿಣಾಮ ಬೀರಲಿದೆ ಎಂಬುದು ಕೂಡ ಹಣದುಬ್ಬರದ ಮೇಲೆ ಪ್ರಭಾವ ಬೀರಲಿದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಈ ಹಿಂದೆ ಹೇಳಿದ್ದರು.

**ಹಣದುಬ್ಬರ: ಎಷ್ಟು ಜಾಸ್ತಿ?**

| | |
|---|---|
| ಮೀನು, ಮಾಂಸ, ಮೊಟ್ಟೆ | ಶೇ 10.88 |
| ತರಕಾರಿ | ಶೇ (–)9.03 |
| ಧಾನ್ಯಗಳು | ಶೇ 10.74 |
| ಹಣ್ಣುಗಳು | ಶೇ 27.43 |
| ಇಂಧನ, ತೈಲ | ಶೇ 20.94 |
| ತಯಾರಾದ ಉತ್ಪನ್ನಗಳು | ಶೇ 9.01 |

### ಮುಂಬೈ ಧಾರಣೆ

**ಶೇಂಗಾ**
17-5-2021

| | |
|---|---|
| ಜಾವಾ 70/80(ಹೊಸ) | 9850-9900 |
| ಜಾವಾ 80/90(ಹೊಸ) | 9350-9100 |
| ದಪ್ಪ ಮಧ್ಯಪ್ರದೇಶ(ಹೊಸ) | 10150-10200 |
| ದಪ್ಪ ಗುಜರಾತ್(ಹೊಸ) | 9400-9500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1600 (1600) |
| ಒಂದು ವಾರದ ಡೆಲಿವರಿ | 1595 (1595) |
| ಸೋಯಾ ಕಚ್ಚಾ | 1450 (1450) |
| ಪಾಮ್ ವಾರದ ಡೆಲಿವರಿ | 1385 (1390) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1650 (1650) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ
48,050 (47,700)
ಬೆಳ್ಳಿ ಕೆ.ಜಿ 71,750 (70,600)

ಆವರಣದಲ್ಲಿ ಶನಿವಾರದ ಧಾರಣೆ

### ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ದರ ಏರಿಕೆ ಆಗಿದೆ. ದೆಹಲಿಯಲ್ಲಿ 10 ಗ್ರಾಂ ಚಿನ್ನಕ್ಕೆ ₹ 348ರಷ್ಟು ಹೆಚ್ಚಾಗಿ ₹ 47,547ಕ್ಕೆ ತಲುಪಿದೆ. ಬೆಳ್ಳಿ ಕೆ.ಜಿಗೆ ₹ 936ರಷ್ಟು ಹೆಚ್ಚಾಗಿ ₹ 71,310ಕ್ಕೆ ಏರಿಕೆಯಾಗಿದೆ.

ಅಮೆರಿಕದ ಬಾಂಡ್ ಗಳಿಕೆ ಕಡಿಮೆ ಆಗಿರುವುದರಿಂದ ಚಿನ್ನದ ದರ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ತಿಳಿಸಿದ್ದಾರೆ.

# ಎನ್‌ಇಎಫ್‌ಟಿ ಸೌಲಭ್ಯ: ಭಾನುವಾರ 14 ತಾಸು ಸ್ಥಗಿತ

ಮುಂಬೈ (ಪಿಟಿಐ): ಶನಿವಾರ ಮಧ್ಯರಾತ್ರಿಯಿಂದ ಭಾನುವಾರ ಮಧ್ಯಾಹ್ನದವರೆಗೆ ಒಟ್ಟು 14 ತಾಸುಗಳು ಎನ್‌ಇಎಫ್‌ಟಿ ಸೌಲಭ್ಯ ಇರುವುದಿಲ್ಲ ಎಂದು ಆರ್‌ಬಿಐ ಸೋಮವಾರ ತಿಳಿಸಿದೆ.

ತಾಂತ್ರಿಕ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ನಡೆಸಬೇಕಿರುವುದರಿಂದ ಅದು ಕೆಲಸ ಮಾಡುವುದಿಲ್ಲ. ಭಾನುವಾರ ಮಧ್ಯಾಹ್ನ 2 ಗಂಟೆಯ ನಂತರ ಎನ್‌ಇಎಫ್‌ಟಿ ಸೇವೆ ಬಳಕೆಗೆ ಲಭ್ಯವಾಗಲಿದೆ ಎಂದು ತಿಳಿಸಿದೆ. ಈ ಅವಧಿಯಲ್ಲಿ ಆರ್‌ಟಿಜಿಎಸ್ ವ್ಯವಸ್ಥೆಯು ಎಂದಿನಂತೆ ಕಾರ್ಯನಿರ್ವಹಿಸಲಿದೆ ಎಂದು ಆರ್‌ಬಿಐ ಹೇಳಿದೆ.

